ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ ಮಹಿಳಾ ಸಮುದಾಯದ ಭಾಗವಹಿಸುವಿಕೆ-ಬನ್ನೂರು ಹೋಬಳಿಯ ಗ್ರಾಮ ಪಂಚಾಯಿತಿ ಕ್ಷೇತ್ರಗಳು

(ಕನ್ನಡ ವಿಶ್ವವಿದ್ಯಾಲಯ ಮಹಿಳಾ ಅಧ್ಯಯನ ವಿಭಾಗಕ್ಕೆ
ಎಂಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕಿ

ಅನಿತ ಟಿ.ಎನ್.

ಮಾರ್ಗದರ್ಶಕರು

ಡಾ. ಎಚ್.ಎಸ್. ಶ್ರೀಮತಿ

ಪ್ರಾಧ್ಯಾಪಕರು

ಮಹಿಳಾ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ-583276

2007-08

ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ ಮಹಿಳಾ ಸಮುದಾಯದ ಭಾಗವಹಿಸುವಿಕೆ-ಬನ್ನೂರು ಹೋಬಳಿಯ ಗ್ರಾಮ ಪಂಚಾಯಿತಿ ಕ್ಷೇತ್ರಗಳು

(ಕನ್ನಡ ವಿಶ್ವವಿದ್ಯಾಲಯ ಮಹಿಳಾ ಅಧ್ಯಯನ ವಿಭಾಗಕ್ಕೆ
ಎಂಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕಿ
ಅನಿತ ಟಿ.ಎನ್.

ಮಾರ್ಗದರ್ಶಕರು
ಡಾ. ಎಚ್.ಎಸ್. ಶ್ರೀಮತಿ
ಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹಿಳಾ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ-583276

2007-08

ಸಂಶೋಧಕಿಯ ಪ್ರಮಾಣ ಪತ್ರ

ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ ಮಹಿಳಾ ಸಮುದಾಯದ ಭಾಗವಹಿಸುವಿಕೆ-ಬನ್ನೂರು ಹೋಬಳಿಯ ಗ್ರಾಮ ಪಂಚಾಯಿತಿ ಕ್ಷೇತ್ರಗಳು ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಮಹಿಳಾ ಅಧ್ಯಯನ ವಿಭಾಗದಲ್ಲಿ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ. ಎಚ್. ಎಸ್. ಶ್ರೀಮತಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 06-10-2008

Anita T.N

ಅನಿತ. ಟಿ.ಎನ್
ಸಂಶೋಧನಾ ವಿದ್ಯಾರ್ಥಿನಿ,
ಮಹಿಳಾ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ -583276

ಮಾರ್ಗದರ್ಶಕರ ದೃಢೀಕರಣ ಪತ್ರ

ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ ಮಹಿಳಾ ಸಮುದಾಯದ ಭಾಗವಹಿಸುವಿಕೆ-ಬನ್ನೂರು ಹೋಬಳಿಯ ಗ್ರಾಮ ಪಂಚಾಯಿತಿ ಕ್ಷೇತ್ರಗಳು ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಅನಿತ ಟಿ.ಎನ್‌ರವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಮಹಿಳಾ ಅಧ್ಯಯನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ :ವಿದ್ಯಾರಣ್ಯ

ದಿನಾಂಕ: 3|10|08

ಡಾ. ಎಚ್.ಎಸ್. ಶ್ರೀಮತಿ
ಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ-583276

ಪರಿವಿಡಿ:

ಅಧ್ಯಾಯ ೧

ಪ್ರಸ್ತಾವನೆ

೧

ಪ್ರಸ್ತಾವನೆ

ಭಾರತವು ಹಳ್ಳಿಗಳ ನಾಡು. ಗ್ರಾಮಗಳ ಭೌತಿಕ ರಚನೆ, ಜನಜೀವನ ಕ್ರಮ, ಗ್ರಾಮೀಣ ಪರಿಸರ ಮತ್ತು ಸಮಸ್ಯೆಗಳು ನಗರ ಸಮಸ್ಯೆಗಳಿಗಿಂತ ಭಿನ್ನವಾದವು. ಬಡತನ, ಅನಾರೋಗ್ಯ, ಆರ್ಥಿಕ ಸಮಸ್ಯೆಗಳೊಂದಿಗೆ ಅಜ್ಞಾನ, ಮೂಢನಂಬಿಕೆಗಳೂ ಸೇರುವುದರಿಂದ ಗ್ರಾಮೀಣ ಪ್ರದೇಶಗಳು ಇನ್ನಷ್ಟು ಹಿಂದುಳಿಯುವಂತಾಗಿದೆ. ಭಾರತವನ್ನರಿಯಬೇಕಾದರೆ ಅಲ್ಲಿನ ಗ್ರಾಮಗಳನ್ನು ಅರಿಯಬೇಕೆಂಬ ಧ್ಯೇಯ ವಾಕ್ಯ ಸತ್ಯವಾದುದು. ಗ್ರಾಮೀಣ ಸಮುದಾಯಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಮುಂದುವರಿಯಲು ರಾಜಕೀಯವಾಗಿ ಪಾಲ್ಗೊಳ್ಳುವಿಕೆ ಅಗತ್ಯ. ಪ್ರಾಚೀನ ಕಾಲದಲ್ಲೂ ಗ್ರಾಮಗಳು ಉತ್ತಮ ಆಡಳಿತಾತ್ಮಕ ವ್ಯವಸ್ಥೆಯನ್ನು ಹೊಂದಿದ್ದವು. ಈಗ ಈ ವ್ಯವಸ್ಥೆಯನ್ನು ಗ್ರಾಮ ಪಂಚಾಯಿತಿ ಎಂದು ಕರೆಯಲಾಗಿದೆ.

"ಭಾರತೀಯ ಗ್ರಾಮಗಳನ್ನು ಪರಿಭಾವಿಸಿಕೊಂಡು ಬಂದಿರುವ ಪರಿಯು ಸರ್ ಚಾರ್ಲ್ಸ್ ಮೆಟ್ ಕಾಫನ್ ರ 'ಲಿಟಲ್ ರಿಪಬ್ಲಿಕ್ 'ನಿಂದ ಪ್ರಾರಂಭವಾಗಿ ಗಾಂಧಿಯ 'ಗ್ರಾಮ ಸ್ವರಾಜ್ಯ'ವೆಂಬ ರೂಪ ತಳೆದು, ಸ್ವಾತಂತ್ರ್ಯಾ ನಂತರ ನೆಹರೂ ಯುಗದಲ್ಲಿ 'ಸಮುದಾಯ ಘಟಕವಾಗಿ ಹರಿದು ಬಂದು ಇಂದು ಅದು ಅಶೋಕ ಮೆಹ್ತಾ, ನಾಜಿರ್ ಸಾಬ್ , ಬಲವಂತರಾಯ್ ಮೆಹ್ತಾ, ರಾಜೀವ್ ಗಾಂಧಿ ಮುಂತಾದವರ ಶ್ರಮದ ಫಲವಾಗಿ 'ವಿಕೇಂದ್ರೀಕರಣದ' ಕೇಂದ್ರವೆಂಬಲ್ಲಿಗೆ ಬಂದು ನಿಂತಿದೆ."[೧] ವಿಕೇಂದ್ರೀಕರಣ ಮತ್ತು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರು ಗ್ರಾಮ ಪಂಚಾಯಿತಿಯಡಿಯಲ್ಲಿ ನೆಲೆಗೊಂಡು ಸಾಧನೆಗೈಯುತ್ತಿರುವ ಹಾಗೂ ಸಮಸ್ಯೆಗೊಳಗಾಗಿರುವ ಸಂಗತಿಗಳನ್ನು ಈ ಅಧ್ಯಯನದ ಮುಂದಿನ ಘಟಕಗಳಲ್ಲಿ ಚರ್ಚಿಸಲಾಗಿದೆ.

ಗಾಂಧೀಜಿಯವರ ಕನಸಾಗಿದ್ದ 'ಗ್ರಾಮ ಸ್ವರಾಜ್ಯ' ಎಂಬ ಚಿಂತನೆಯಡಿಯಲ್ಲೇ ಪಂಚಾಯತ್ ರಾಜ್ ವ್ಯವಸ್ಥೆ ಹುಟ್ಟಿಕೊಂಡಿತೆನ್ನಬಹುದು. ಗ್ರಾಮ ಸ್ವರಾಜ್ಯದ ಮೂಲ ಉದ್ದೇಶಗಳು ಸ್ವಾವಲಂಬನೆ, ವೈಯಕ್ತಿಕತೆ ಹಾಗೂ ಸಾಮಾಜಿಕತೆಗೆ ಹೆಚ್ಚು ಪ್ರಾಮುಖ್ಯತೆ ನೀಡುವುದಾಗಿದೆ. ಹಾಗೆಯೇ ರಾಷ್ಟ್ರದ ಅಭಿವೃದ್ಧಿಯಾದರೆ ಮಾತ್ರ ಸಾಲದು, ಸರ್ಕಾರದ ಮೂಲಕ ಅಧಿಕಾರವೆಂಬುದು ಸಮುದಾಯಕ್ಕೆ ವಿಕೇಂದ್ರೀಕರಣಗೊಳ್ಳಬೇಕು. ಆಗ ಮಾತ್ರ ಗ್ರಾಮಗಳ ಅಭಿವೃದ್ಧಿ ಸಾಧ್ಯ ಎಂಬುವಲ್ಲಿ ಗ್ರಾಮ ಪಂಚಾಯಿತಿ ವ್ಯವಸ್ಥೆ ಉದ್ಭವಗೊಂಡಿತೆನ್ನಬಹುದು.

ಗ್ರಾಮಾಡಳಿತ ವ್ಯವಸ್ಥೆಯು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದು, ಭಾರತೀಯರ ರಾಜಕೀಯ ಜೀವನದಲ್ಲಿ ಹಾಸು ಹೊಕ್ಕಾಗಿದೆ. ಆದರೆ ಕಾಲಾ ನಂತರದಲ್ಲಿ ಈ ವ್ಯವಸ್ಥೆ

ಬೆಳವಣಿಗೆಯಾಗತೊಡಗಿತು. ಸ್ವಾತಂತ್ರ್ಯಾನಂತರ ಭಾರತ ಸಂವಿಧಾನದ ೪೦ನೇ ವಿಧಿಯ ೮೦ನೇ ಭಾಗವು ರಾಜ್ಯ ನಿರ್ದೇಶಕ ತತ್ವಗಳನ್ನು ಒಳಗೊಂಡಿದೆ. ಈ ತತ್ವಗಳನುಸಾರ ಗ್ರಾಮ ಪಂಚಾಯಿತಿಗಳನ್ನು ಸಂಘಟಿಸಿ ಸ್ವಯಂ ಸರ್ಕಾರ ಘಟಕಗಳಾಗಿ ಕಾರ್ಯ ನಿರ್ವಹಿಸುವಂತೆ ಮಾಡುವ ಜವಾಬ್ದಾರಿಯನ್ನು ರಾಜ್ಯ ಸರ್ಕಾರಗಳಿಗೆ ನಿಗದಿಗೊಳಿಸಲಾಯಿತು. ತದನಂತರ ಗ್ರಾಮ ಪಂಚಾಯಿತಿಗಳು ಪ್ರತೀ ಹಳ್ಳಿಯಲ್ಲಿ ರಚಿತವಾಗಿ ಅಭಿವೃದ್ಧಿ ಕಾರ್ಯಾಚರಣೆಯ ಸಂಪೂರ್ಣ ಹೊರೆಯನ್ನು ಹೊರಬೇಕಾಯಿತು.

೧೯೯೩ರಲ್ಲಿ ಸಂವಿಧಾನ ೭೩ನೇ ತಿದ್ದುಪಡಿ ಮೇರೆಗೆ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಶಾಸನಾತ್ಮಕ ಸ್ಥಾನಮಾನ ನೀಡಲಾಯಿತು. ನಂತರ ಮೂರು ಹಂತಗಳಲ್ಲಿ ಗ್ರಾಮ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದವು. ಪಂಚಾಯಿತಿ ರಾಜ್ಯ ವ್ಯವಸ್ಥೆಯ ಮೊದಲ ಹಂತವೇ ಗ್ರಾಮ ಪಂಚಾಯಿತಿಯಾಗಿದೆ. ಐದು ಸಾವಿರದಿಂದ ಏಳು ಸಾವಿರ ಜನಸಂಖ್ಯೆಯ ಗ್ರಾಮ, ಅಥವಾ ಗ್ರಾಮಗಳ ಗುಂಪನ್ನು ಪಂಚಾಯಿತಿ ಎಂದು ಪರಿಗಣಿಸಲಾಗಿದೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ೩೩.೩ ರಷ್ಟು ಮೀಸಲಾತಿ ಕಲ್ಪಿಸಿ ಅವರು ಈ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಕರ್ನಾಟಕ ರಾಜ್ಯ ಸರ್ಕಾರ ಅವಕಾಶ ಮಾಡಿಕೊಟ್ಟಿದೆ.

ವಿಕೇಂದ್ರೀಕರಣ - ಪಂಚಾಯತ್ ರಾಜ್ ಸಂಸ್ಥೆಗಳು ಗ್ರಾಮೀಣ ಪ್ರದೇಶವನ್ನು ಮಹಿಳೆಯರನ್ನು ಹೇಗೆ ತೊಡಗಿಸಿಕೊಂಡಿವೆ, ಮಹಿಳೆಯರನ್ನು ಹೇಗೆ ಪರಿಭಾವಿಸಿಕೊಂಡಿವೆ, ಮಹಿಳೆಯರ ಸ್ಥಿತಿಗತಿ-ಸ್ಥಾನಮಾನಗಳಿಗೆ ಸಂಬಂಧಿಸಿದಂತೆ ಯಾವ ಬಗೆಯ ಬದಲಾವಣೆಗಳನ್ನು ಅವು ತಂದಿವೆಯೆಂಬುದರ ಚರ್ಚೆಯು ತುಂಬಾ ಕುತೂಹಲಕಾರಿಯಾದುದಾಗಿದೆ. ಸ್ವಾತಂತ್ರ್ಯ ನಂತರ ಮೊದಲ ಎರಡು-ಮೂರು ದಶಕಗಳ ಕಾಲಾವಧಿಯಲ್ಲಿ ಅಭಿವೃದ್ಧಿ-ವಿಕೇಂದ್ರೀಕರಣ-ರಾಜಕಾರಣ ಇವುಗಳಿಗೆ ಸಂಬಂಧಿಸಿದಂತೆ ಮಹಿಳೆಯರನ್ನು ಸ್ವತಂತ್ರ ಘಟಕವಾಗಿ ಪರಿಭಾವಿಸಿಕೊಳ್ಳುವ ಪದ್ಧತಿಯಿರಲಿಲ್ಲ. ಅವರನ್ನು ಜನಸಂಖ್ಯಾ ಘಟಕವಾಗಿ ನೋಡಲಾಗುತ್ತಿತ್ತೇ ವಿನಃ ಸಾಮಾಜಿಕ ಘಟಕವಾಗಿ ನೋಡುವ ಪದ್ಧತಿ ರೂಢಿಯಲ್ಲಿರಲಿಲ್ಲ. ಮೊದಲನೆಯ ತಲೆಮಾರಿನ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಒಟ್ಟಾರೆ ಮಹಿಳೆ ಗೈರು ಹಾಜರಾಗಿದ್ದಳು. ಮುಂದೆ ೧೯೭೦ರ ದಶಕದಲ್ಲಿ ಮಹಿಳೆಯರನ್ನು ಅಭಿವೃದ್ಧಿ ರಾಜಕಾರಣದ ನೆಲೆಗಳಲ್ಲಿ ಪರಿಭಾವಿಸಿಕೊಳ್ಳುವ ಪರಿ ಬದಲಾಯಿತು. ಎಸ್ತರ್ ಬೊಸರಪ್‌ರ ಸಂಶೋಧನೆಗಳು, ಟುವರ್ಡ್ಸ್ ಈಕ್ವಾಲಿಟಿಯ ವರದಿ, ಅಮರ್ತ್ಯಸೇನ್‌ರ ಬರಹಗಳು ಮುಂತಾದವು ಮಹಿಳೆಯರನ್ನು ಪರಿಭಾವಿಸಿಕೊಳ್ಳುವ ಪರಿಯನ್ನು ಕುರಿತಂತೆ ಮೂಲಭೂತ ಬದಲಾವಣೆಗೆ ಕಾರಣವಾದವು. ಮಹಿಳೆಯರಿಗೆ ತಮ್ಮದೇ ಆದ ಹಿತಾಸಕ್ತಿಗಳಿರುತ್ತವೆ ಎಂಬ ಮೂಲಭೂತ ಸಂಗತಿಯನ್ನೇ ಹಿಂದೆ ತಿರಸ್ಕರಿಸಲಾಗಿತ್ತು. ಅವರ ಕಾರ್ಯಕ್ಷೇತ್ರವೇನಿದ್ದರೂ ಕುಟುಂಬದ ಚೌಕಟ್ಟಿನಲ್ಲಿ ಎಂದು ಪರಿಭಾವಿಸಿಕೊಂಡು ಅವರಿಗೆ ಸಾರ್ವಜನಿಕತೆಯನ್ನು ತಿರಸ್ಕರಿಸಲಾಗಿತ್ತು.

ಗ್ರಾಮ ಪಂಚಾಯತಿ ಮಟ್ಟದಲ್ಲೂ ಮಹಿಳೆಯರಿಗೆ ಶೇ.೩೩.೩ ಮೀಸಲಾತಿ ಇದ್ದು ಅಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ, ಪಾಲ್ಗೊಳ್ಳುವಿಕೆಯಲ್ಲಿ ಇರುವ ಸಮಸ್ಯೆಗಳು, ಪಾಲ್ಗೊಂಡ ಮಹಿಳೆಯರ ಬಗ್ಗೆ ಇರುವ ಪುರುಷ ಸಮುದಾಯದ ಅಭಿಪ್ರಾಯಗಳು, ಮಹಿಳಾ ಜನಪ್ರತಿನಿಧಿಗಳ ಕಾರ್ಯ ವೈಖರಿ,

ಮಹಿಳೆಯರ ಸಮಸ್ಯೆಗಳಿಗೆ ಅವರು ಸ್ಪಂದಿಸುವ ಬಗೆ ಹಾಗೂ ನಿರ್ಧಾರ ಕೈಗೊಳ್ಳುವಿಕೆಯ ವಿಚಾರವಾಗಿ ಕೂಲಂಕುಷವಾಗಿ ಮಹಿಳಾ ದೃಷ್ಟಿಕೋನದ ಅಧ್ಯಯನವನ್ನು ಇಲ್ಲಿ ನಡೆಸಲಾಗಿದೆ.

ಸ್ಥಳೀಯ ಸರ್ಕಾರದ ಅರ್ಥ ಮತ್ತು ವ್ಯಾಖ್ಯೆ

ಡಬ್ಲ್ಯೂ.ಟಿ.ಎರಿಕ್ ಜಾನ್ಸ್‌ನ್ ರವರ ಅಭಿಪ್ರಾಯದಲ್ಲಿ "ಸ್ಥಳೀಯ ಸಮುದಾಯಗಳಿಗೆ ಸಂಬಂಧಿಸಿದ ವ್ಯವಹಾರ ಹಾಗೂ ಕಾರ್ಯಗಳನ್ನು ಸ್ಥಳೀಯ ಸಂಸ್ಥೆಯೇ ನಿರ್ವಹಿಸಿದರೆ ಅದೇ ಸ್ಥಳೀಯ ಸರ್ಕಾರ".

ಡಾ. ರಾಧಾಕೃಷ್ಣನ್ ರವರ ಪ್ರಕಾರ ಸ್ಥಳೀಯ ಜನತೆಯ ಆಶೋತ್ತರ ಹಾಗೂ ಕಲ್ಯಾಣವನ್ನು ಸಾಧಿಸುವ ಸಲುವಾಗಿ ಸ್ಥಾಪಿಸಲಾಗುವ ಸರ್ಕಾರವೇ ಸ್ಥಳೀಯ ಸರ್ಕಾರ.

ಸ್ಥಳೀಯ ಸರ್ಕಾರವು ನಾಗರೀಕತೆಯನ್ನು ರಕ್ಷಿಸಲು ಹಾಗೂ ರಾಷ್ಟ್ರದ ಏಕತೆಯನ್ನು ಕಾಪಾಡಲು ಅತ್ಯವಶ್ಯಕವಾಗಿದೆ ಎಂತಲೇ ಮೋರ್ಗ್‌ನ್ ಅವರು ಹೀಗೆ ಹೇಳಿದ್ದಾರೆ : ಸ್ಥಳೀಯ ಸರ್ಕಾರಗಳು ಪ್ರಜಾಪ್ರಭುತ್ವದ ತಳಹದಿಯ ಮೇಲೆ ರಚಿಸಲ್ಪಟ್ಟಿರುವುದರಿಂದ ಸ್ಥಳೀಯ ಜನರ ಕಲ್ಯಾಣವನ್ನು ಸಾಧಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಬಲ್ಲವು. "ಒಂದು ರಾಷ್ಟ್ರವು ಸ್ವತಂತ್ರ ಸರ್ಕಾರವನ್ನು ರಚಿಸಬಹುದು. ಆದರೆ ಸ್ಥಳೀಯ ಸರ್ಕಾರದ ವ್ಯವಸ್ಥೆಯಿಲ್ಲದೆ ಸ್ವತಂತ್ರ ಮನೋಭಾವನೆಗಳು ಜನರಲ್ಲಿ ಬೆಳೆಯಲಾರವು" ಎಂದು ಡಾ.ಚೋಕ್ ವೆಲ್ ತತ್ವಜ್ಞಾನಿ ಹೇಳಿದ ಹಾಗೆ ಸ್ಥಳೀಯ ಸರ್ಕಾರಗಳು ರಾಷ್ಟ್ರದ ಹಾಗೂ ವ್ಯಕ್ತಿಯ ಪ್ರಗತಿಗೆ ಪೂರಕ ಹಾಗೂ ಪರಿಪೂರ್ಣವಾಗಿ ಕೆಲಸ ನಿರ್ವಹಿಸಬಲ್ಲವು.

ಯಾವುದೇ ಆಡಳಿತ ವ್ಯವಸ್ಥೆಯಲ್ಲಿ ಅಧಿಕಾರ ವಿವಿಧ ಹಂತಗಳಲ್ಲಿ ಹಲವು ವ್ಯಕ್ತಿಗಳಲ್ಲಿ ಹಂಚಲ್ಪಟ್ಟಿದ್ದರೆ ಅದನ್ನು ವಿಕೇಂದ್ರೀಕೃತ ವ್ಯವಸ್ಥೆಯೆಂದು ಕರೆಯಲಾಗುತ್ತದೆ. ವಿಕೇಂದ್ರೀಕರಣ ವ್ಯವಸ್ಥೆಯಿಂದಾಗಿ ಮಹಿಳೆಯರು ಆಡಳಿತ ವ್ಯವಸ್ಥೆಯಲ್ಲಿ ಭಾಗವಹಿಸಲು ಅವಕಾಶವನ್ನು ಪಡೆದಿದ್ದಾರೆ.

೧.೧. ಅಧ್ಯಯನಕ್ಕೆ ಪ್ರೇರಣೆ

ಪ್ರಸ್ತುತ ೨೦೦೮ ಮೇ ಮಾಹೆಯಲ್ಲಿ ಕರ್ನಾಟಕ ರಾಜ್ಯ ವಿಧಾನ ಸಭಾ ಕ್ಷೇತ್ರಕ್ಕೆ ಚುನಾವಣೆ ನಡೆದಾಗ ಪ್ರತೀ ಪಕ್ಷ ಪ್ರನಾಳಿಕೆಗಳಲ್ಲೂ ಮಹಿಳೆಯರು ಬೆರಳೆಣಿಕೆಯಷ್ಟಿರುವುದು ಗಮನಕ್ಕೆ ಬಂದಿತು. ರಾಜ್ಯ-ಕೇಂದ್ರ ಮಟ್ಟದ ರಾಜಕೀಯ ಪಕ್ಷಗಳಲ್ಲಿ ಪುರುಷ ಸಮುದಾಯ ಮಹಿಳೆಯರನ್ನು ಮುಂದೆ ಹೋಗಲು ಅವಕಾಶ ಕೊಡುತ್ತಿಲ್ಲವಾದ್ದರಿಂದ ಗ್ರಾಮ ಪಂಚಾಯಿತಿಗಳಲ್ಲಿ ಶೇ.೩೩.೩ ಮೀಸಲಾತಿಯನ್ನು ಮಹಿಳೆಯರು ಪಡೆದುಕೊಂಡಿದ್ದು, ಅಲ್ಲಿನ ಪುರುಷ ಸಮುದಾಯ ಮಹಿಳೆಯರನ್ನು ಯಾವ ರೀತಿ ಪರಿಭಾವಿಸುತ್ತಿದೆ? ಮಹಿಳೆಯರು ರಾಜಕೀಯವಾಗಿ ಸಬಲರಾಗಲು ಅವಕಾಶ ನೀಡಲಾಗುತ್ತಿದೆಯೇ? ಜನಪ್ರತಿನಿಧಿಗಳನ್ನು ನಿಜವಾಗಿಯೂ ರಾಜಕೀಯವಾಗಿ ಮುಂದೆ ಹೋಗಲು ಸಹಕರಿಸುತ್ತಿದ್ದಾರೆಯೇ ಎನ್ನುವ ಪ್ರಶ್ನೆಯ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಳ್ಳಲು ಆಸಕ್ತಿ ಮೂಡಿತು.

ರಾಜಕೀಯ ವಿಚಾರ ಗಂಡಸರದ್ದು. ಅದರ ಉಸಾಬರಿ ಮಹಿಳೆಗ್ಯಾಕೆ? ಅವಳು ಕುಟುಂಬ, ಗಂಡ ಮಕ್ಕಳನ್ನು ನೋಡಿಕೊಂಡಿದ್ದರೆ ಸಾಕು ಎಂದು ಶಿಕ್ಷಿತ ಸಮುದಾಯವೂ ಹೇಳುವಾಗ ಇನ್ನು ಗ್ರಾಮೀಣ ಪುರುಷ ಸಮುದಾಯ ಹೇಗೆ ತಾನೆ ಮಹಿಳೆಗೆ ರಾಜಕೀಯ ಸ್ಥಾನ ಕೊಡಲು ಸಿದ್ಧ ಎಂಬ ಪ್ರಶ್ನೆ ಎದುರಾಯಿತು. ಇಷ್ಟಾದರೂ ಗ್ರಾಮ ಪಂಚಾಯಿತಿಗಳಲ್ಲಿ ಮಹಿಳಾ ಸದಸ್ಯರು ಕಂಡುಬರುತ್ತಿದ್ದು ಇದಕ್ಕೆ ಕಾರಣಗಳೇನು ಎಂಬುದನ್ನು ತಿಳಿಯಬೇಕೆಂಬ ಕುತೂಹಲ ಮೂಡಿತು. ಹಾಗೆಯೇ ಕುಟುಂಬದ ಮಹಿಳೆಯನ್ನು ಚುನಾಯಿತರನ್ನಾಗಿಸಿ ಹಿಂದಣ ಅಧಿಕಾರವನ್ನು ಕುಟುಂಬದ ಪುರುಷ ನಡೆಸುವ ಹುನ್ನಾರವೇ ಎಂಬುದನ್ನು ತಿಳಿಯಲು ಹಾಗೂ ಅಲ್ಲಿನ ಮಹಿಳೆಯರ ತೊಡಕುಗಳನ್ನು ಅಧ್ಯಯನಕ್ಕೆ ಒಳಪಡಿಸಲು ಈ ವಸ್ತುವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಯಿತು.

ಅಸಕ್ತಿಯ ವಿಷಯಗಳು ಹಲವಾರಿದ್ದರೂ ಸಹ ಕೆಲವು ಸನ್ನಿವೇಶಗಳು ಯಾವುದೋ ಒಂದು ವಿಷಯದ ಬಗೆಗೆ ಚಿಂತಿಸುವಂತೆ ಮಾಡುತ್ತವೆ. ಆ ಕ್ಷಣದಲ್ಲಿ ಅದೇ ಹೆಚ್ಚು ಆಸಕ್ತಿಯ ವಿಷಯವಾಗಿ ಹೋಗುತ್ತದೆ. ಇದರ ಪರಿಣಾಮವೇ ಗ್ರಾಮ ಪಂಚಾಯಿತಿಯಲ್ಲಿ ಜನಪ್ರತಿನಿಧಿಗಳಾಗಿ ಕಾರ್ಯ ನಿರ್ವಹಿಸುತ್ತಿರುವ ಮಹಿಳೆಯರ ಭಾಗವಹಿಸುವಿಕೆ ವಿಷಯದ ಆಯ್ಕೆಯಾಗಿದೆ. ರಾಜಕೀಯ ಎಂಬುದು ಕೇವಲ ಒಬ್ಬ ವ್ಯಕ್ತಿಯ, ಒಂದು ಸಮುದಾಯದ ಸ್ವತ್ತಲ್ಲ. ಅದು ಸೇವೆ ಮಾಡುವ ಮನೋಭಾವವುಳ್ಳವರ ಸ್ವತ್ತಾಗಿದೆ ಆದ ಕಾರಣ ಸೇವಾ ಮನೋಭಾವ ಒಬ್ಬ ವ್ಯಕ್ತಿಯಲ್ಲೇ ಅಥವಾ ಒಂದು ವರ್ಗದವರಲ್ಲೇ, ಸಮುದಾಯದವರಲ್ಲೇ, ಇರುತ್ತದೆಂದು ಹೇಳಲು ಬರುವುದಿಲ್ಲ. ಆದ್ದರಿಂದ ರಾಜಕೀಯಕ್ಕೆ ಮಹಿಳೆಯರು, ವಿವಿಧ ಜಾತಿಯವರು, ವಿವಿಧ ಯೋಚನೆಯುಳ್ಳವರು, ವಿವಿಧ ಮನೋಭಾವದರು ಬರಬೇಕು. ಆಗ ಮಾತ್ರ ಸೇವೆಗೆ ನಿಜವಾದ ಅರ್ಥಬರುತ್ತದೆ. ಹೀಗೆ ಸೇವೆ ಮಾಡಲು ಮಹಿಳೆಯರಿಗೆ ಸರ್ಕಾರ ಅವಕಾಶವನ್ನು ನೀಡಿದೆ. ಅದರೆ ಸದ್ಬಳಕೆ ಹಾಗೂ ಪುರುಷ ಸಮಾಜದ ಕಡೆಯಿಂದ ಮಹಿಳಾ ಜನಪ್ರತಿನಿಧಿಗಳ ಮೇಲೆ ಪ್ರಭಾವ ಬೀರುತ್ತಿರುವ ಅಂಶಗಳು ಮತ್ತು ಅವರ ಸಮಸ್ಯೆಗಳನ್ನು ಸ್ತ್ರೀವಾದಿ ಪರಿಭಾಷೆಯ ದೃಷ್ಟಿಕೋನದಿಂದ ನೋಡಬೇಕೆಂಬ ಕುತೂಹಲವೇ ಈ ಅಧ್ಯಯನ ಮಾಡಲು ನನಗೆ ಪ್ರೇರಣೆಯಾಗಿದೆ.

೧.೨. ಅಧ್ಯಯನದ ಪ್ರಾಕ್‌ಕಲ್ಪನೆಗಳು

ಒಂದು ವಸ್ತುವನ್ನು ನೋಡಿದ ತಕ್ಷಣ ಯಾವುದೇ ವ್ಯಕ್ತಿಗೂ ಮನಸ್ಸಿನಲ್ಲೇ ಕಲ್ಪನೆ ಮೂಡಲಾರಂಭಿಸುತ್ತದೆ ಆದರೆ ಯಾರು ಕಲ್ಪನೆಗೆ ಬಂದದ್ದನ್ನು ಸತ್ಯವೋ ಮಿಥ್ಯೆಯೋ ಎಂದು ಸಂಶೋಧನೆಗೆ ಒಳಪಡಿಸುತ್ತಾರೋ ಅವರು ಸಂಶೋಧಕರೆನಿಸುತ್ತಾರೆ. ಇದನ್ನು ಕಂಡುಹಿಡಿಯುವಲ್ಲಿ ಅವಲೋಕನ, ಸಂದರ್ಶನ, ಪ್ರಶ್ನಾವಳಿ, ವಿಶ್ಲೇಷಣೆ ಮುಂತಾದ ಸ್ತ್ರೀವಾದಿ ಸಂಶೋಧನಾ ವಿಧಾನಗಳು ಪ್ರಮುಖ ಪಾತ್ರವಹಿಸುತ್ತವೆ. ನಂತರ ವಿಷಯದ ಬಗೆಗೆ ನಿರ್ಧಾರಕ್ಕೆ ಬರಲು ಸಾಧ್ಯವಾಗುತ್ತದೆ. ಆದ್ದರಿಂದ ಕಲ್ಪನೆಗಳು ಸಂಶೋಧನೆಗೆ ಬಹಳ ಮುಖ್ಯ. ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಕ್ಷೇತ್ರ ಅಧ್ಯಯನ ಕೈಗೊಳ್ಳುವ ಮುಂಚಿತವಾಗಿ ಮೇಲ್ನೋಟಕ್ಕೆ ಕಾಣಸಿಗುವ ಹಲವು ಅಂಶಗಳನ್ನು

ಆಧಾರವಾಗಿಟ್ಟುಕೊಂಡು ಊಹಾಕಲ್ಪನೆಗಳನ್ನು ಇಟ್ಟುಕೊಳ್ಳಲಾಗಿರುತ್ತದೆ. ಈ ಊಹಾಕಲ್ಪನೆಗಳು ಕ್ಷೇತ್ರ ಅಧ್ಯಯನದ ನಂತರ ಸತ್ಯವೂ ಆಗಿರಬಹುದು ಅಥವಾ ಭ್ರಮೆಯಾಗಿರಬಹುದು. ನನ್ನ ಅಧ್ಯಯನ ವಿಷಯವಾದ ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ ಜನಪ್ರತಿನಿಧಿಯಾಗಿ ಮಹಿಳಾ ಸಮುದಾಯದ ಭಾಗವಹಿಸುವಿಕೆಯ ಪ್ರಾಕ್ ಕಲ್ಪನೆಗಳೆಂದರೆ

೧. ಗ್ರಾಮ ಪಂಚಾಯಿತಿಗಳಲ್ಲಿ ಮಹಿಳೆಯರು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳಲು ಸಾಮಾಜಿಕ-ಸಾಂಸ್ಕೃತಿಕ ಅಂಶಗಳು ಹಾಗೂ ಪುರುಷ ಪ್ರಧಾನ ಧೋರಣೆಗಳು ಅಡ್ಡಿಯಾಗಿರಬಹುದು.

೨. ಈ ಕ್ಷೇತ್ರದಲ್ಲಿ ಮಹಿಳೆಯರು ೧/೩ ಭಾಗ ಮೀಸಲಾತಿ ಪಡೆದು ಸಾಧನೆಯ ಹೆಜ್ಜೆ ಹಾಕುವುದರ ಜೊತೆಗೆ ಹಲವು ರಾಜಕೀಯ ಸಮಸ್ಯೆಗಳನ್ನು ಎದುರಿಸುತ್ತಿರಬಹುದು.

೩. ಮಹಿಳಾ ಜನಪ್ರತಿನಿಧಿಗಳು ಪುರುಷ ಸದಸ್ಯರಿಂದ ಸಮಸ್ಯೆಗಳಿಗೊಳಗಾಗುತ್ತಿರಬಹುದು.

೪. ಸಾರ್ವಜನಿಕರು, ಕುಟುಂಬದ ಸದಸ್ಯರು ಮಹಿಳಾ ಜನಪ್ರತಿನಿಧಿಗಳಿಗೆ ಮಾನಸಿಕವಾಗಿ ಒತ್ತಡ ನೀಡುತ್ತಿರಬಹುದು.

೫. ಮಹಿಳಾ ಜನಪ್ರತಿನಿಧಿಗಳು ಕಾರ್ಯನಿರ್ವಹಿಸುವಲ್ಲಿ ಅವರ ಕುಟುಂಬದ ಪುರುಷ ಸಮುದಾಯ ಅಧಿಕಾರ ಚಲಾಯಿಸುತ್ತಿರಬಹುದು.

೬. ಅಭಿವೃದ್ಧಿ ಕೆಲಸಗಳಿಗೆ ಸಂಬಂಧಿಸಿದಂತೆ ಮಹಿಳಾ ಸದಸ್ಯರು ನಿರ್ಧಾರ ಕೈಗೊಳ್ಳುವಲ್ಲಿ ಹಲವು ಸಮಸ್ಯೆಗಳು ಎದುರಾಗಬಹುದು.

೭. ಪುರುಷ ಜನಪ್ರತಿನಿಧಿಗಳಿಗಿಂತ ಭಿನ್ನವಾದ ಸಮಸ್ಯೆಗಳನ್ನು ಮಹಿಳಾ ಜನ ಪ್ರತಿನಿಧಿಗಳು ಅನುಭವಿಸುತ್ತಿದ್ದಾರೆನ್ನಬಹುದು.

೮. ಮೀಸಲಾತಿ ಇದ್ದರೂ ಮಹಿಳೆಯರು ಚುನಾವಣೆಗೆ ಅಭ್ಯರ್ಥಿಗಳಾಗುವಲ್ಲಿ ಪುರುಷರೇ ಹೆಚ್ಚು ಪಾತ್ರವಹಿಸುತ್ತಿರಬಹುದು.

೧.೩. ಅಧ್ಯಯನದ ಉದ್ದೇಶಗಳು

ಉದ್ದೇಶವಿಲ್ಲದ ಯಾವುದೇ ಕೆಲಸವೂ ಸಹ ವ್ಯರ್ಥವಾಗುತ್ತದೆ. ಓದು, ಬದುಕು, ಆಟ, ಕೂಟ, ಸ್ನೇಹ, ಪ್ರೀತಿ ಎಲ್ಲದಕ್ಕೂ ಒಂದೊಂದು ಉದ್ದೇಶವಿರಲೇಬೇಕು. ಇಲ್ಲದಿದ್ದಲ್ಲಿ ಯಾವುದೇ ಗುರಿ ತಲುಪಲು ಸಾಧ್ಯವಿಲ್ಲ. ಉದ್ದೇಶ ಎಂಬುದು ಕಾಲ, ಪರಿಸ್ಥಿತಿ, ಮನೋಭಾವ, ಧೈರ್ಯ, ಆಶಯಗಳ ವ್ಯಾಪ್ತಿಗೆ ಸಿಲುಕಿರುತ್ತದೆ. ಹಾಗೆಯೇ ಸಂಶೋಧನಾ ಕಾರ್ಯಕ್ಕೆ ಉದ್ದೇಶವಿಲ್ಲದೆ ಹೆಜ್ಜೆ ಇಡಬಾರದು. ಉದ್ದೇಶಗಳ ಅರಿವಿನ ಮೇಲೆಯೇ ಸಂಶೋಧನೆ ಮುಂದುವರಿಯಬೇಕು. ಪ್ರಸ್ತುತ ಅಧ್ಯಯನದ ವಸ್ತುವಿಷಯವಾದ ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ ಮಹಿಳಾ ಸಮುದಾಯದ ಭಾಗವಹಿಸುವಿಕೆ-

ಬನ್ನೂರು ಹೋಬಳಿಯ ಗ್ರಾಮ ಪಂಚಾಯಿತಿ ಕ್ಷೇತ್ರಗಳು ಹಲವಾರು ಉದ್ದೇಶಗಳನ್ನು ಒಳಗೊಂಡಿದೆ.

೧. ಮಹಿಳೆಯರಿಗೆ ಸಮಸ್ಯೆ ಎಂಬುದು ಅನಾದಿ ಕಾಲದಿಂದಲೂ ತಪ್ಪಿದ್ದಲ್ಲ. ಯಾವುದೇ ಕ್ಷೇತ್ರದಲ್ಲಾದರೂ ಮಹಿಳೆಯರನ್ನು ಬಹುಬೇಗನೆ ಒತ್ತಡಕ್ಕೆ ಸಿಲುಕಿಸುವ, ಸಮಸ್ಯೆಗೆ ಒಳಪಡಿಸುವ, ಹಿಂಸೆಯನ್ನು ಹೇರುವ, ನೋವನ್ನನುಭವಿಸುವಂತೆ ಮಾಡುವ ಹಲವು ಅಂಶಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿರುತ್ತವೆ. ಎಷ್ಟೋ ಮಹಿಳೆಯರಿಗೆ ತಾವು ಏತಕ್ಕಾಗಿ ಇವುಗಳನ್ನು ಅನುಭವಿಸುತ್ತಿದ್ದೇವೆ? ಇದರಲ್ಲಿ ತನ್ನ ಪಾಲೇನಾದರೂ ಇರಬಹುದು ಅಥವಾ ಇದಕ್ಕೆ ಹೊಣೆ ಯಾರು ಎಂಬುದನ್ನು ಅರ್ಥಮಾಡಿಕೊಳ್ಳಲಾಗದೆ ಬದುಕುತ್ತಿದ್ದಾರೆ. ಹಾಗೆಯೇ ರಾಜಕೀಯದ ವಿಷಯದಲ್ಲೂ ಸಹಜವಾಗಿ ಈ ಎಲ್ಲಾ ಅಂಶಗಳು ತಲೆದೋರಿವೆ. ಆದರೆ ನನ್ನ ಅಧ್ಯಯನವು ಗ್ರಾಮ ಪಂಚಾಯಿತಿಗಳಿಗೆ ಚುನಾಯಿತಗೊಂಡ ಮಹಿಳೆಯರ ರಾಜಕೀಯ ಸಮಸ್ಯೆಗಳನ್ನು ತಿಳಿಯುವ ಉದ್ದೇಶವನ್ನು ಒಳಗೊಂಡಿದೆ.

೨. ಚುನಾಯಿತಗೊಂಡ ಮಹಿಳೆಯರು ಹೇಗೆ ಸಮಸ್ಯೆಯ ಸುಳಿಗೆ ಸಿಲುಕುತ್ತಾರೆ? ಅದಕ್ಕೆ ಕಾರಣಗಳೇನು? ಕಾರಣಗಳಿದ್ದರೂ ಅವು ಮಹಿಳೆಯರನ್ನೇ ಏಕೆ ಬೆಂಬತ್ತಿವೆ? ಪುರುಷರು ಇವುಗಳಿಂದ ಹೊರತಾಗಿದ್ದಾರೆಯೇ? ಎಂಬ ಹಲವು ಪ್ರಶ್ನೆಗಳು ಕಾಡುವುದು ಸಹಜ. ಆದ್ದರಿಂದ ಚುನಾಯಿತಗೊಂಡ ಮಹಿಳೆಯರ ಮೇಲೆ ಪ್ರಭಾವ ಬೀರುವ ಸಾಮಾಜಿಕ, ಆರ್ಥಿಕ ಶೈಕ್ಷಣಿಕ ಅಂಶಗಳ ಸಕಾರಾತ್ಮಕ ಹಾಗೂ ನಕಾರಾತ್ಮಕ ಸಂಗತಿಗಳನ್ನು ಅಧ್ಯಯನಕ್ಕೊಳಪಡಿಸುವ ಉದ್ದೇಶವನ್ನು ಹೊಂದಲಾಗಿದೆ.

೩. ಸಮಸ್ಯೆಗಳಿವೆ ಎಂಬ ಕಾರಣಕ್ಕಾಗಿ ಯಾವ ವ್ಯಕ್ತಿಯೂ ಕೆಲಸವನ್ನು ಬಿಡುವುದಿಲ್ಲ. ಸಹಜವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಮಾನಸಿಕ-ದೈಹಿಕ ಸಮಸ್ಯೆಗಳು ಇದ್ದೇ ಇರುತ್ತವೆ. ಹಾಗೆಂದ ಮಾತ್ರಕ್ಕೆ ಯಾವುದೇ ಕೆಲಸ ಕಾರ್ಯಗಳನ್ನೂ ಹಮ್ಮಿಕೊಳ್ಳದೆ ಸುಮ್ಮನಿರಲೂ ಸಾಧ್ಯವಿಲ್ಲ. ಗ್ರಾಮ ಪಂಚಾಯಿತಿ ಕ್ಷೇತ್ರದಲ್ಲೂ ಸಹ ಮಹಿಳೆಯರು ಜನಪ್ರತಿನಿಧಿಗಳಾಗಿ ಅಭಿವೃದ್ಧಿ ಕಾರ್ಯಚಟುವಟಿಕೆಗಳನ್ನು ಮಾಡುತ್ತಿದ್ದು, ಅವುಗಳ ಸಮಗ್ರ ಅಧ್ಯಯನದ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ.

೪. ಮಹಿಳೆಯರ ವಸ್ತುವಿಷಯದ ಅಧ್ಯಯನಕ್ಕೆ ಹೊರಟಾಗ ಮಹಿಳಾ ಪರ ಚಿಂತನೆಗಳು, ಸಾಂಪ್ರದಾಯಿಕತೆಯ ಅಸ್ತಿತ್ವದ ಬಗೆಗೆ ಅರಿತು ವಿಶ್ಲೇಷಣೆ ಮಾಡುವುದು ಒಳಿತು. ಇಲ್ಲದಿದ್ದಲ್ಲಿ ಪಿತೃಪ್ರಾಧಾನ್ಯ ಮೌಲ್ಯಗಳನ್ನೇ ಪುನರ್ನವೀಕರಿಸಿದಂತೆ ಆಗುತ್ತದೆ. ಗ್ರಾಮ ಪಂಚಾಯಿತಿಗಳಲ್ಲಿ ಮಹಿಳಾ ಸದಸ್ಯರಿಗೆ ನೀಡಲಾಗಿರುವ ಸ್ಥಾನಮಾನ, ಪುರುಷ ಸದಸ್ಯರು ಮಹಿಳೆಯರಿಗೆ ಹೇಗೆ ಬೆಂಬಲವನ್ನು ನೀಡುತ್ತಿದ್ದಾರೆ, ಮಹಿಳಾಭಿವೃದ್ಧಿಗೆ ನಿರ್ಣಯ ತೆಗೆದುಕೊಳ್ಳುವವರ ಮೇಲೆ ಹತೋಟಿ. ಗ್ರಾಮಸ್ಥ ಮಹಿಳೆಯರ ಬೇಡಿಕೆಗಳಿಗೆ ಚುನಾಯಿತಗೊಂಡ ಮಹಿಳೆಯರ ಸ್ಪಂದನೆಯ ಬಗ್ಗೆ ಅಧ್ಯಯನ ಮಾಡುವುದು.

೫. ಪುರುಷರು ಯಾವ ಕ್ಷೇತ್ರದಲ್ಲೇ ಕೆಲಸ ಮಾಡುತ್ತಿದ್ದರೂ ಅಲ್ಲಿ ಅವರು ಅಧಿಕಾರವನ್ನು ಚಲಾಯಿಸುತ್ತಾರೆ. ಆದರೆ ಇದೇ ವಿಷಯ ಮಹಿಳೆಯರಿಗೆ ಅನ್ವಯವಾಗುತ್ತಿದೆಯೇ ಎಂಬ ಪ್ರಶ್ನೆ ಮೂಡುತ್ತದೆ. ಹಾಗೆಯೇ ಗ್ರಾಮ ಪಂಚಾಯಿತಿಗೆ ಚುನಾಯಿತರಾದ ಮಹಿಳೆಯರು ನಿರ್ಧಾರ ಕೈಗೊಳ್ಳುವಲ್ಲಿ ಇರುವ ಅಡೆತಡೆಗಳಾವುವು? ಇದರಲ್ಲಿ ಕುಟುಂಬದ ಸದಸ್ಯರ ಪಾತ್ರವೇನು ಎಂಬುದನ್ನು ತಿಳಿಯುವ ಉದ್ದೇಶವನ್ನಿಟ್ಟುಕೊಳ್ಳಲಾಗಿದೆ.

೬. ಕುಟುಂಬದ ಕೆಲಸಗಳು ಹೆಣ್ಣಿಗೇ ಸೀಮಿತವಾಗಿದ್ದು, ಅದನ್ನು ಪುರುಷ ಮಾಡಿದಲ್ಲಿ ಹೆಣ್ಣಿಗ, ಅಮ್ಮಾವ್ರ ಗಂಡ ಎಂದೆಲ್ಲಾ ಹಣೆಪಟ್ಟಿ ಹಚ್ಚಿ ಆ ಕೆಲಸಗಳನ್ನು ಮಾಡದಿದ್ದ ಹಾಗೆ ಪರಿಸರವನ್ನು ನಿರ್ಮಾಣ ಮಾಡಿಬಿಟ್ಟಿದ್ದಾರೆ. ಮಹಿಳೆಯರು ಉದ್ಯೋಗಸ್ಥೆಯಾಗಿದ್ದಲ್ಲಿ ಕುಟುಂಬ, ಮಕ್ಕಳು, ವೃದ್ಧರನ್ನು ನೋಡಿಕೊಂಡು, ಕೃಷಿ ಕೆಲಸದ ಜೊತೆಗೆ ಹೊರಗಿನ ಉದ್ಯೋಗವನ್ನು ನಿಭಾಯಿಸಬೇಕಾಗಿದೆ. ಹಾಗೆಯೇ ರಾಜಕೀಯವಾಗಿ ಮಹಿಳೆಯರು ತಮ್ಮನ್ನು ತೊಡಗಿಸಿಕೊಳ್ಳಲು ಮೇಲಿನ ಕೆಲಸದ ಒತ್ತಡಗಳು ತೊಡಕಾಗಿರಬಹುದು. ಆದ್ದರಿಂದ ಚುನಾಯಿತಗೊಂಡ ಮಹಿಳಾ ಪ್ರತಿನಿಧಿಗಳು ಅನುಭವಿಸುತ್ತಿರುವ ರಾಜಕೀಯ ಹಾಗೂ ಕುಟುಂಬದ ಕೆಲಸಗಳ ನಡುವಿನ ಒತ್ತಡಗಳನ್ನು ಹಾಗು ಅವುಗಳಿಗೆ ಕಾರಣಗಳನ್ನು ಸಂಶೋಧಿಸುವ ಉದ್ದೇಶವನ್ನು ಈ ಅಧ್ಯಯನ ಒಳಗೊಂಡಿದೆ.

೭. ಸಾಮಾಜಿಕವಾಗಿ ಮನ್ನಣೆ ಪಡೆದಿರುವ ಪುರುಷ ಪ್ರಾಧಾನ್ಯತೆ, ಪಿತೃ ಪ್ರಧಾನ ಮೌಲ್ಯಗಳು, ಸಾಮಜೀಕರಣದ ರೀತಿ ಮಹಿಳೆಯರು ಸಬಲರಾಗುವಲ್ಲಿ ನೇತ್ಯಾತ್ಮಕ ಪರಿಣಾಮವನ್ನು ಬೀರುತ್ತಿವೆ. ಗ್ರಾಮ ಪಂಚಾಯಿತಿ ಕ್ಷೇತ್ರದಲ್ಲಿರುವ ಮಹಿಳೆಯರು ರಾಜಕೀಯವಾಗಿ ಸಬಲರಾಗಲು ತೊಡಕಾಗಿರುವ ಅಂಶಗಳನ್ನು ವಿಶ್ಲೇಷಿಸುವ ಉದ್ದೇಶ ಈ ಅಧ್ಯಯನದ್ದಾಗಿದೆ.

೮. ಪುರುಷರಿಗೆ ಸಮಸ್ಯೆ ಎನಿಸದ ಎಷ್ಟೋ ಸಮಸ್ಯೆಗಳು ಮಹಿಳೆಯರನ್ನು ಕಾಡುತ್ತವೆ. ಇದಕ್ಕೆ ಕಾರಣಗಳನ್ನು ಹುಡುಕುವಾಗ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಸಾಂಸ್ಕೃತಿಕ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಹೀಗೆ ಪುರುಷ ಜನಪ್ರತಿನಿಧಿಗಳಿಗೆ ರಾಜಕೀಯ ವ್ಯವಸ್ಥೆಯಲ್ಲಿ ವಿಶೇಷವೆನಿಸಿದ ಸಮಸ್ಯೆಗಳೇನೂ ಇರುವುದಿಲ್ಲ. ಇವರಿಗಿಲ್ಲದ ಸಮಸ್ಯೆ ಮಹಿಳಾ ಜನಪ್ರತಿನಿಧಿಗಳಿಗೇಕೆ ಇದೆ ಹಾಗೂ ಇದಕ್ಕೆ ಕಾರಣವಾಗಿರುವ ಅಂಶಗಳನ್ನು ಪ್ರಕಟಿಸುವ ಉದ್ದೇಶವನ್ನು ಹೊಂದಲಾಗಿದೆ.

೯. ಪುರುಷರಿಗಿಂತ ಮಹಿಳೆಯರು ಹೆಚ್ಚು ಸಮಸ್ಯೆಯಲ್ಲಿ ಸಿಲುಕಿಕೊಂಡಿದ್ದಾರೆ. ಅಲ್ಲಿಯೂ ಎರಡು ವಿಭಾಗಗಳನ್ನು ಗುರುತಿಸಬಹುದು. ವಿವಿಧ ಜಾತಿ, ಗುಂಪಿನ ಮಹಿಳೆಯರು ವಿವಿಧ ರೀತಿಯ ಸಮಸ್ಯೆಗಳಿಗೆ ಒಳಗಾಗುತ್ತಿರುತ್ತಾರೆ. ಸಮಸ್ಯೆಗಳನ್ನು ಜಾತಿಯೂ ಸಹ ನಿರ್ಧರಿಸುತ್ತದೆ ಎನ್ನಬಹುದು.

೧೦. ಯಾವುದಾದರೊಂದು ವಿಷಯವನ್ನು ಮಹಿಳಾ ದೃಷ್ಟಿಕೋನದಿಂದ, ಸ್ತ್ರೀವಾದಿ ಪರಿಕಲ್ಪನೆಯಿಂದ ಸಂಶೋಧನೆಗೆ ಒಳಪಡಿಸಬೇಕೆಂದು ಹೊರಟಾಗ ರಾಜಕೀಯ ಕ್ಷೇತ್ರದಲ್ಲಿ ಹಲವು ಚರ್ಚಾಸ್ಪದ ಸಂಗತಿಗಳಿರುವುದು ಕಂಡುಬಂದಿತು. ಆದ ಕಾರಣ ಗ್ರಾಮ ಪಂಚಾಯಿತಿಯಲ್ಲಿ ಜನಪ್ರತಿನಿಧಿಗಳಾಗಿ

ಕಾರ್ಯನಿರ್ವಹಿಸುತ್ತಿರುವ ಮಹಿಳೆಯರ ಸಾಧನೆಗಳೇನು? ಸಾಧನೆಗೆ ಅಡ್ಡಿಯಾಗಿರುವ ಅಂಶಗಳಾವುವು? ಸಮಾಜದ ಕಡೆಯಿಂದ ಕುಟುಂಬದ ಕಡೆಯಿಂದ, ಪತಿಯ ಕಡೆಯಿಂದ, ಸಹೋದ್ಯೋಗಿಗಳ ಕಡೆಯಿಂದ ಉಂಟಾಗುವ ತೊಂದರೆಗಳೇನು ಎಂಬುದನ್ನು ಅಧ್ಯಯನಕ್ಕೆ ಒಳಪಡಿಸುವುದಾಗಿದೆ.

೧೧. ಗ್ರಾಮ ಪಂಚಾಯಿತಿಗೆ ಮಹಿಳೆಯರ ಪ್ರವೇಶ, ಸಹಭಾಗಿತ್ವ, ಮೀಸಲಾತಿ ಮುಂತಾದವು ಅಧ್ಯಯನದ ಸಂಗತಿಗಳಾದರೂ ಸಹ ಪಂಚಾಯಿತಿ ವ್ಯವಸ್ಥೆಯಲ್ಲಿ ಮಹಿಳಾ ಜನಪ್ರತಿನಿಧಿಗಳ ಭಾಗವಹಿಸುವಿಕೆ, ಕಾರ್ಯವೈಖರಿ, ಅಲ್ಲಿನ ಸಮಸ್ಯೆಗಳು ಮುಂತಾದ ವಿಚಾರಗಳಿಗೆ ಹೆಚ್ಚು ಒತ್ತು ಕೊಡಲಾಗಿದೆ.

೧೨. ಪುರುಷ ಜನ ಪ್ರತಿನಿಧಿಗಳಿಗೆ ರಾಜಕೀಯ ವ್ಯವಸ್ಥೆಯಲ್ಲಿ ವಿಶೇಷವೆನಿಸಿದ ಸಮಸ್ಯೆಗಳೇನೂ ಇರುವುದಿಲ್ಲ. ಇವರಿಗಿಲ್ಲದ ಸಮಸ್ಯೆ ಮಹಿಳಾ ಜನಪ್ರತಿನಿಧಿಗಳಿಗೇ ಇದೆ ಹಾಗೂ ಇದಕ್ಕೆ ಕಾರಣವಾಗಿರುವ ಅಂಶಗಳನ್ನು ಪ್ರಕಟಪಡಿಸುವ ಉದ್ದೇಶವನ್ನು ಹೊಂದಿದೆ.

೧೩. ಜಾತಿ, ಧರ್ಮ, ಅಂತಸ್ತು, ವೈವಾಹಿಕ ಸ್ಥಾನಮಾನಗಳಿಗೆ ಸಂಬಂಧಿಸಿದಂತೆ ಮಹಿಳೆಯರ ಪಾಲ್ಗೊಳ್ಳುವಿಕೆ ಹೇಗಿದೆ ಎಂಬುದರ ಅಧ್ಯಯನದ ಉದ್ದೇಶ ಇಟ್ಟುಕೊಳ್ಳಲಾಗಿದೆ.

೧.೪. ಅಧ್ಯಯನದ ವ್ಯಾಪ್ತಿ

- ತಿರುಮಕೂಡಲು ನರಸೀಪುರ ತಾಲ್ಲೂಕಿನ ಬನ್ನೂರು ಹೋಬಳಿಯಲ್ಲಿ ಬರುವ ಗ್ರಾಮಪಂಚಾಯಿತಿ ಕ್ಷೇತ್ರಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.
- ಗ್ರಾಮ ಪಂಚಾಯಿತಿಗೆ ಚುನಾಯಿತಗೊಂಡ ಮಹಿಳೆಯರನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗುತ್ತದೆ. ಹಾಗೂ ಈ ಅಧ್ಯಯನಕ್ಕೆ ಪೂರಕವಾಗಿ ಪುರುಷ ಸದಸ್ಯರನ್ನು ಅಧ್ಯಯನಕ್ಕೆ ಒಳಪಡಿಸಲಾಗುತ್ತದೆ.
- ಮಹಿಳಾ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳನ್ನು ಅಧ್ಯಯನದ ವ್ಯಾಪ್ತಿಗೆ ಸೇರಿಸಲಾಗಿದೆ.
- ಅಧ್ಯಯನವು ಗ್ರಾಮ ಪಂಚಾಯಿತಿಗಳಲ್ಲಿ ಪ್ರಸ್ತುತ ಇರುವ ಮಹಿಳಾ ಪ್ರತಿನಿಧಿಗಳನ್ನು ಮಾತ್ರ ಒಳಗೊಂಡಿದೆ.
- ಅಧ್ಯಯನವು ಸಂದರ್ಶಿಸಿದ ಮಹಿಳಾ ಜನಪ್ರತಿನಿಧಿಗಳು ಸಮಾಜ ಕಾರ್ಯಕರ್ತರು, ಜನ ಸಾಮಾನ್ಯರು ಹಾಗೂ ಅಧಿಕಾರಿಗಳು ನೀಡುವ ವಿಚಾರಗಳ ವಿಶ್ಲೇಷಣೆಯ ಮೇಲೆ ಅವಲಂಬಿತವಾಗಿರುತ್ತದೆ.
- ಅಧ್ಯಯನವು ಜನಾಂಗ, ಜಾತಿ, ಧರ್ಮ, ವೈವಾಹಿಕ ಸ್ಥಾನಮಾನ ಅಂತಸ್ತುಗಳಿಗೂ ಮಾತ್ರ ಸಂಬಂಧಿಸಿರುತ್ತದೆ.
- ಲಿಂಗ ಸಂಬಂಧಿ ನೆಲೆಯಲ್ಲಿ ಹಾಗೂ ಮಹಿಳಾ ಅಧ್ಯಯನದ ವೈಧಾನಿಕತೆಯ ನೆಲೆಯಲ್ಲಿ ವಿಶ್ಲೇಷಣೆ ಮಾಡಲಾಗುತ್ತದೆ.

೧.೫. ಅಧ್ಯಯನದ ಮಹತ್ವ

ಮಹಿಳೆಯರು ರಾಜಕೀಯವಾಗಿ ಗ್ರಾಮ ಪಂಚಾಯಿತಿ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳಾಗಿ ನಿಂತು ಚುನಾಯಿತಗೊಂಡು ಸದಸ್ಯರಾಗಿ, ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿಯಷ್ಟೇ ಅಲ್ಲದೆ ಹಲವು ಸರ್ಕಾರಿ ಕೆಲಸಗಳನ್ನು ನಿರ್ವಹಿಸುತ್ತಿದ್ದು, ಅಲ್ಲಿಯೂ ಸಹ ಹಲವು ಸಮಸ್ಯೆಗಳಿಗೆ ಒಳಗಾಗುತ್ತಲೇ ಬಂದಿದ್ದಾರೆ. ಆದರೆ ಅವು ಮೇಲ್ನೋಟಕ್ಕೆ ಸೂಕ್ಷ್ಮ ಸಮಸ್ಯೆಯಂತೆ ಕಂಡುಬಂದರೂ ಲಿಂಗಸಂಬಂಧಿ ನೆಲೆಯಿಂದ ಗ್ರಹಿಸಿದಾಗ ಅದರ ಆಳ ಎಷ್ಟಿದೆ ಎಂಬುದು ಅರಿವಿಗೆ ಬರುತ್ತದೆ. ಅಂತಹ ಸೂಕ್ಷ್ಮ ಸಮಸ್ಯೆಗಳನ್ನು ಮಹಿಳಾ ಅಧ್ಯಯನ ವೈಧಾನಿಕತೆಯ ನೆಲೆಯಲ್ಲಿ ಸಂಶೋಧಿಸಿ ಅವುಗಳನ್ನು ಪರಿಚಯಿಸುವಲ್ಲಿ ಈ ಅಧ್ಯಯನ ಮಹತ್ವವನ್ನು ಪಡೆದಿದೆ. ಅಂತಹ ಸಮಸ್ಯೆಗಳಿಗೆ ಒಳಗಾದವರಿಗೆ ಕೆಲವು ಉಪಯುಕ್ತ ಸಲಹೆಗಳನ್ನು ನೀಡಲಾಗುತ್ತದೆ.

ಮಹಿಳೆಯರು ಗ್ರಾಮ ಪಂಚಾಯಿತಿ ಕ್ಷೇತ್ರಗಳಲ್ಲಿ ಚುನಾಯಿತಗೊಂಡು ರಾಜಕೀಯವಾಗಿ ಎಷ್ಟು ಸಬಲರಾಗುತ್ತಿದ್ದಾರೆ ಎನ್ನುವ ಸಂಗತಿಗಳನ್ನು ಈ ಅಧ್ಯಯನದಿಂದ ತಿಳಿಯಬಹುದು. ಗ್ರಾಮಗಳಲ್ಲಿ ಮಹಿಳೆಯರಿಗೆ ಊಟ ಮಾಡಲೂ ಸಮಯ ಸಿಗದಷ್ಟು ಕೆಲಸ ಇರುವಾಗ ರಾಜಕೀಯಕ್ಕೆ ಸಮಯ ಮೀಸಲಿಟ್ಟು ಹೇಗೆ ಸಮಯದ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ಈ ಅಧ್ಯಯನದಿಂದ ತಿಳಿಯಬಹುದು. ಅಲ್ಲದೇ ಮಹಿಳೆಯರಿಗೆ ರಾಜಕೀಯವಾಗಿ ಸದೃಢರಾಗಲು ತೊಡಕಾಗಿರುವ ಅಂಶಗಳನ್ನು ನಾವಿಲ್ಲಿ ಚರ್ಚೆಗೊಳಪಡಿಸಬಹುದಾಗಿದೆ. ಚುನಾಯಿತ ಮಹಿಳೆಯರು ನಿರ್ಧಾರ ಕೈಗೊಳ್ಳುವಲ್ಲಿ ಪುರುಷ ವರ್ಗ ಅವರನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿದ್ದಾರೆಯೇ ಎಂಬುದನ್ನು ಈ ಅಧ್ಯಯನ ಒಳಗೊಂಡಿರುತ್ತದೆ.

ಜೊತೆಗೆ ಚುನಾಯಿತ ಮಹಿಳೆಯರು ಸಾಮಾನ್ಯ ಮಹಿಳೆಯರ ಅಭಿವೃದ್ಧಿಗೆ ಗಮನ ಹರಿಸುವಲ್ಲಿ ಅವರ ಬೇಡಿಕೆಗಳಿಗೆ ಮನ್ನಣೆ ಕೊಡುವಲ್ಲಿ ಗ್ರಾಮಗಳ ಸ್ವಸಹಾಯ ಗುಂಪುಗಳಿಗೆ ನೆರವು ಮಾಡುವಲ್ಲಿ ಹಾಗೂ ಆ ಮೂಲಕ ಗ್ರಾಮೀಣ ಮಹಿಳೆಯರ ಅಮೂಲಾಗ್ರ ಅಭಿವೃದ್ಧಿಗೆ ಎಷ್ಟು ಪೂರಕವಾಗಿ ಸ್ಪಂದಿಸುತ್ತಿದ್ದಾರೆ, ಎಂಬುದರ ಪರಿಚಯವನ್ನು ಈ ಅಧ್ಯಯನ ಕೈಗೊಳ್ಳುವುದರಿಂದ ಹೆಚ್ಚು ಮಹತ್ವವಿದೆ ಎನ್ನಬಹುದು.

ಗ್ರಾಮ ಪಂಚಾಯಿತಿಗಳಿಗೆ ಚುನಾಯಿತಗೊಂಡ ಮಹಿಳೆಯರು ರಾಜಕೀಯವಾಗಿ ಎದುರಿಸುತ್ತಿರುವ ಬಿಕ್ಕಟ್ಟುಗಳನ್ನು ಈ ಅಧ್ಯಯನವು ಪ್ರಸ್ತುತಪಡಿಸುವುದರಿಂದ ಅವುಗಳ ನಿವಾರಣೆಗೆ ಅವಶ್ಯಕವಾದ ಕಾರ್ಯತಂತ್ರಗಳನ್ನು ರೂಪಿಸುವ ಅವಕಾಶ ದೊರೆಯುತ್ತದೆ. ಹಾಗೂ ಅಲ್ಲಿನ ಮಹಿಳಾ ಜನಪ್ರತಿನಿಧಿಗಳ ಸಾಧನೆ, ರಾಜಕೀಯ ಸಾಕ್ಷರತೆಯ ಸಂಗತಿಗಳನ್ನೂ ನಾವಿಲ್ಲಿ ತಿಳಿಯಬಹುದು. ಸಮಸ್ಯೆ - ಸಾಧನೆ ಇವೆರಡರ ನಡುವೆ ಮಹಿಳೆಯರು ರಾಜಕೀಯವಾಗಿ ಯಾವ ಸ್ಥಿತಿ ತಲುಪಿದ್ದಾರೆ ಎಂಬುದನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಧ್ಯಯನಕ್ಕೊಳಪಡಿಸಲಾಗುತ್ತದೆ.

೧.೬. ಅಧ್ಯಯನ ವಿಧಾನ ಶಾಸ್ತ್ರ

ವಸ್ತು ವಿಷಯ : ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ ಮಹಿಳಾ ಸಮುದಾಯದ ಭಾಗವಹಿಸುವಿಕೆ - ಬನ್ನೂರು ಹೋಬಳಿಯ ಗ್ರಾಮ ಪಂಚಾಯಿತಿ ಕ್ಷೇತ್ರಗಳು.

ಗುರಿ : ಗ್ರಾಮ ಪಂಚಾಯಿತಿಗೆ ಚುನಾಯಿತರಾದ ಮಹಿಳೆಯರ ರಾಜಕೀಯ ಬೆಳವಣಿಗೆಗೆ ತೊಡಕಾಗಿರುವ ಅಂಶಗಳನ್ನು ಅಧ್ಯಯನಕ್ಕೆ ಒಳಪಡಿಸುವುದು. ಹಾಗೂ ಅವರ ಸಾಧನೆಗಳನ್ನು ರಾಜಕೀಯದ ಹಿನ್ನೆಲೆಯಲ್ಲಿ ಪರಿಭಾವಿಸುವುದು.

ಅರ್ಥ ವಿವರಣೆ : ಪಂಚಾಯಿತಿ ರಾಜ್ಯ ವ್ಯವಸ್ಥೆಯ ಮೊದಲನೆ ಹಂತವೆ ಗ್ರಾಮ ಪಂಚಾಯಿತಿಯಾಗಿದ್ದು, ೫೦೦೦-೭೦೦೦ ಜನಸಂಖ್ಯೆಯುಳ್ಳ ಗ್ರಾಮಗಳ ಗುಂಪನ್ನು ಗ್ರಾಮ ಪಂಚಾಯಿತಿ ರಚನೆಗೆ ಪರಿಗಣಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿನ ಗ್ರಾಮಪಂಚಾಯತಿ ಸದಸ್ಯರ ಒಟ್ಟು ಸಂಖ್ಯೆ ಆ ಗ್ರಾಮದ ಒಟ್ಟು ಜನಸಂಖ್ಯೆಗೆ ಅನುಗುಣವಾಗಿರುತ್ತದೆ. ಪ್ರತಿ ४೦೦ ಜನಸಂಖ್ಯೆಗೆ ಒಬ್ಬರು ಸದಸ್ಯರಿರುತ್ತಾರೆ.

ಮಾದರಿ ಅಥವಾ ನಮೂನೆ : ನಮೂನೆಯು ಒಂದು ದೊಡ್ಡ ವಸ್ತುವಿನ ಸಣ್ಣ ಪ್ರತಿರೂಪವಾಗಿದ್ದು, ವಿಶಾಲ ಕ್ಷೇತ್ರದ ಪ್ರಾತಿನಿಧಿಕ ಘಟಕ ಎಂದು ಗೂಡ್ ಅಂಡ್ ಹ್ಯಾಟ್ ಹೇಳಿದ್ದಾರೆ. ಸಂಶೋಧಕರು ಇಡೀ ವಿಶ್ವ ಅಥವಾ ದೇಶವನ್ನು ಅಧ್ಯಯನದ ವ್ಯಾಪ್ತಿಗೆ ತರುವುದು ಕಷ್ಟವಾದ್ದರಿಂದ ಯಾವುದೇ ಸಮಸ್ಯೆಯ ಬಗ್ಗೆ ಸಂಶೋಧಿಸಲು ಒಂದು ಕ್ಷೇತ್ರವನ್ನು ಪ್ರತಿನಿಧಿಯಾಗಿ ಭಾವಿಸಿ ಅಧ್ಯಯನ ನಡೆಸಲಾಗುತ್ತದೆ. ನನ್ನ ಅಧ್ಯಯನದ ಮಾದರಿ ವಿಧಾನ ಹೀಗಿದೆ.

ಗ್ರಾಮ ಪಂಚಾಯತಿ ವ್ಯವಸ್ಥೆಯಲ್ಲಿ ಮಹಿಳಾ ಸಮುದಾಯದ ಭಾಗವಹಿಸುವಿಕೆ.

ಬನ್ನೂರು ಹೋಬಳಿಯ ಗ್ರಾಮ ಪಂಚಾಯತಿ ಕ್ಷೇತ್ರಗಳ ಅಧ್ಯಯನ

೧. ಸೀಹಳ್ಳಿ,	४. ಮಲಿಯೂರು,	೭. ಹೆಗ್ಗೂರು,
೨. ಹತ್ತಳ್ಳಿ,	೫. ತುರಗನೂರು,	೮. ಬೀಡನಹಳ್ಳಿ,
೩. ಅಂಕನಹಳ್ಳಿ,	೬. ಹನುಮನಾಳು,	೯. ಕೊಡಗಹಳ್ಳಿ

ಸಂದರ್ಶನ : ನೇರ ಸಂಪರ್ಕ ಮಾತ್ರವಲ್ಲದೇ ಆತ್ಮೀಯ ಸಂಗತಿಗಳನ್ನು ಅರಿಯಲು ಸಂದರ್ಶನ ಸಹಾಯವಾಗುತ್ತದೆ. ಈ ಹಂತದಲ್ಲಿ ಔಪಚಾರಿಕ ಹಾಗೂ ವೈಯಕ್ತಿಕ ಸಂದರ್ಶನಗಳಷ್ಟೇ ಅಲ್ಲದೆ ರಚಿತ ಹಾಗೂ ಅರಚಿತ ಪ್ರಶ್ನಾವಳಿಗಳನ್ನು ರೂಪಿಸಿಕೊಂಡು ಸಂದರ್ಶನ ಕೈಗೊಳ್ಳಲಾಗುತ್ತದೆ. ಸಂದರ್ಶನದ ಅವಧಿ ಪರಿಸ್ಥಿತಿಗೆ ಅನುಗುಣವಾಗಿದ್ದು, ಕೇಂದ್ರಿತ ಹಾಗೂ ಸಮೂಹ ಸಂದರ್ಶನಕ್ಕೂ ಹೆಚ್ಚು ಒತ್ತು ಕೊಡಲಾಗುತ್ತದೆ. ಗ್ರಾಮ ಪಂಚಾಯಿತಿಗೆ ಚುನಾಯಿತರಾದ ಮಹಿಳೆಯರನ್ನು, ಅಲ್ಲಿನ ಪುರುಷ ಸದಸ್ಯರನ್ನು, ಗ್ರಾಮದ ಜನರನ್ನು, ಚುನಾಯಿತ ಮಹಿಳೆಯರ ಕುಟುಂಬಗಳನ್ನು ಸಂದರ್ಶನಕ್ಕೆ ಒಳಪಡಿಸಲಾಗುತ್ತದೆ.

ಭೌಗೋಳಿಕ ದತ್ತಾಂಶ ಸಂಗ್ರಹಣೆ : ಗ್ರಾಮದ ಜನಸಂಖ್ಯೆ, ಚುನಾಯಿತಗೊಂಡ ಮಹಿಳೆಯರ ಹೆಸರು, ಸ್ಥಳ, ವಯಸ್ಸು, ವೈವಾಹಿಕ ಸ್ಥಾನಮಾನ, ಉದ್ಯೋಗ, ಶೈಕ್ಷಣಿಕ ಅರ್ಹತೆ, ಜಾತಿ, ಧರ್ಮಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಪಡೆಯಲಾಗುತ್ತದೆ.

ಕಾರ್ಯ ವಿಧಾನ : ಅಧ್ಯಯನಕ್ಕೆಂದು ಗ್ರಾಮ ಪಂಚಾಯತಿ ವ್ಯವಸ್ಥೆಯಲ್ಲಿ ಮಹಿಳಾ ಸಮುದಾಯದ ಭಾಗವಹಿಸುವಿಕೆ - ಬನ್ನೂರು ಹೋಬಳಿಯ ಗ್ರಾಮ ಪಂಚಾಯತಿ ಕ್ಷೇತ್ರಗಳು ಎಂಬ ವಸ್ತು ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದು, ವಯಸ್ಸಿನ ಮಿತಿಯನ್ನು ಪರಿಗಣಿಸಲಾಗಿಲ್ಲ. ರಚಿತ ಹಾಗೂ ಅರಚಿತ ಪ್ರಶ್ನಾವಳಿ ವಿಧಾನಗಳನ್ನಿಟ್ಟುಕೊಂಡು ವೈಯಕ್ತಿಕ, ಸಮೂಹ, ಕೇಂದ್ರಿತ, ಸಂದರ್ಶನಗಳಿಗೆ ಹೆಚ್ಚು ಒತ್ತು ಕೊಡಲಾಗಿದೆ. ಈ ಸಂಶೋಧನೆಯಲ್ಲಿ ವ್ಯಕ್ತಿನಿಷ್ಠ ಮಾದರಿಗೆ ಹೆಚ್ಚು ಪ್ರಾಮುಖ್ಯತೆ ಇದ್ದು, ಮಹಿಳಾ ಅಧ್ಯಯನದ ವೈಧಾನಿಕತೆಯನ್ನು ಬಳಸಿಕೊಂಡು ವಿಶ್ಲೇಷಿಸಲಾಗುತ್ತದೆ.

ಮಾಹಿತಿ ವಿಶ್ಲೇಷಣೆ

"ಸಂಶೋಧನೆ ಎಂದರೆ ಜ್ಞಾನ ವಲಯವು ಹೊಸ ದಿಕ್ಕುಗಳತ್ತ ವಿಸ್ತರಿಸಿಕೊಳ್ಳುವ ಚಿಂತನಾ ವಿಧಾನವಾಗಿದೆ. ಶಿಸ್ತಿನ ಅಧ್ಯಯನವಾಗಿದೆ. ಇಂತಹ ಆವಿಷ್ಕಾರದ ಫಲಿತಗಳು ಮಾನವಿಕಗಳಲ್ಲಿ ಅಮೂರ್ತವಾಗಿರುತ್ತವೆ. ಹಾಗಾಗಿ ಇವುಗಳಿಗೆ ಅನುಭವ ಪ್ರಮಾಣಗಳೆ ಅಂತಿಮ ಸಾಕ್ಷಿ ಪುರಾವೆಗಳಾಗಿವೆ." ಮಹಿಳಾ ಅಧ್ಯಯನ ಕೇಂದ್ರಿತ ಸಂಶೋಧನೆಗಳು ಬದುಕನ್ನು ಗ್ರಹಿಸುವ ಚಿಂತನೆಗಳಾಗಬೇಕು. ವ್ಯಕ್ತಿನಿಷ್ಠತೆಗೆ ಒಂದು ಹಂತದವರೆಗೆ ಹೆಚ್ಚು ಪ್ರಾಮುಖ್ಯತೆ ನೀಡಿ ಅನುಭವಗಳ ಮಾಹಿತಿ ಸಂಗ್ರಹ ಮಾಡುವ ವೈಧಾನಿಕತೆಯನ್ನು ಮಹಿಳಾ ಅಧ್ಯಯನದ ಸಂಶೋಧಕರು ಅಳವಡಿಸಿಕೊಳ್ಳಬೇಕಾಗಿದೆ. ಇವೆಲ್ಲವುಗಳ ಚಿಂತೆಗಳಡಿಯಲ್ಲಿ ನನ್ನ ಅಧ್ಯಯನ ಮುಂದುವರಿಯುತ್ತದೆ. ಪ್ರತಿಯೊಂದು ಮಾದರಿಯನ್ನು ಮಹಿಳಾ ಬದುಕಿನ ವಾಸ್ತವದ ವಿವರಗಳ ಹಿನ್ನೆಲೆಗಳಲ್ಲೇ ಗ್ರಹಿಸುವ, ಅಧ್ಯಯಿಸುವ ವಿಧಾನವನ್ನು ನನ್ನ ಸಂಶೋಧನೆ ಒಳಗೊಂಡಿದೆ.

ಮಹಿಳಾ ಬದುಕಿಗೆ ಸಂಬಂಧಿಸಿದಂತೆ ಪ್ರಚಲಿತ ಜ್ಞಾನ ವಲಯಗಳು ಚಿಂತನೆಗಳನ್ನು ಮಂಡಿಸುತ್ತಾ ಬಂದಿವೆ. ಈ ಎಲ್ಲಾ ಚಿಂತನೆಗಳು ಪುರುಷ ಕೇಂದ್ರಿತವಾಗಿದ್ದು, ಮಹಿಳೆಯನ್ನು ಪೂರಕವಾಗುವಲ್ಲಿ ಬಳಸಿಕೊಂಡು, ಉಳಿದೆಡೆ ಅನ್ಯವಾಗಿ ಪರಿಗಣಿಸಿವೆ. ಪುರುಷ ಚಿಂತನೆ ಸ್ತ್ರೀ ಬದುಕನ್ನು ವ್ಯಾಖ್ಯಾನಿಸಲಾರದೆಂಬ ಮಾತು ಸತ್ಯವಾಗಿದೆ. ಆದ ಕಾರಣ ಸಂಗ್ರಹಿಸಿದ ಮಾಹಿತಿಯನ್ನು ಸ್ತ್ರೀ ವಾದಿ ಸಂಶೋಧನೆಯ ವಿಶ್ಲೇಷಣಾ ವಿಧಾನಗಳಾದ ಪರೀಕ್ಷಾತ್ಮಕ ವಿಶ್ಲೇಷಣೆ, ಅನುಭವಾತ್ಮಕ ವಿಶ್ಲೇಷಣೆ, ಸಾಂಸ್ಕೃತಿಕ ಸಂದರ್ಭ, ಮೌಖಿಕ ದಾಖಲೆಗಳು, ಗುಣಾತ್ಮಕ ವಿಶ್ಲೇಷಣೆ, ಸಹಭಾಗಿತ್ವ ಸಂಶೋಧನಾ ವಿಧಾನ, ಬಹುವೈವಿಧ್ಯದ ವಿಶ್ಲೇಷಣೆಗಳ ಹಿನ್ನೆಲೆಯಲ್ಲಿ ವಿವರಿಸುವ ಉದ್ದೇಶವನ್ನು ನನ್ನ ಅಧ್ಯಯನ ಒಳಗೊಂಡಿದೆ.

ಪ್ರಖ್ಯಾತ ಸಮಾಜ ವಿಜ್ಞಾನಿ ವಿಲ್ ಹೆಲ್ಮ್ ಡಿಲ್ಥೆ ಹೇಳುವಂತೆ ಅಧ್ಯಯನ ನಡೆಸುವ ವಿದ್ವಾಂಸರು ತಾವು ಅಧ್ಯಯನ ನಡೆಸುತ್ತಿರುವ ವಿಷಯದ ಬಗ್ಗೆ ಎಷ್ಟೇ ವಸ್ತುನಿಷ್ಠವಾಗಿದ್ದೇವೆಂದು

ಹೇಳಿಕೊಂಡರೂ ಅವರು ಬದುಕನ್ನು, ಸಮಾಜವನ್ನು ನೋಡುವ, ಪರಿಭಾವಿಸಿಕೊಳ್ಳುವ ದೃಷ್ಟಿಕೋನವು ಅವರ ಅಧ್ಯಯನವನ್ನು ಪ್ರಭಾವಿಸುತ್ತಿರುತ್ತದೆ. ಅಧ್ಯಯನ ಮತ್ತು ಅನುಭವ ಎರಡನ್ನೂ ಸಂಯೋಜಿಸಿ ಇಲ್ಲಿ ಅಧ್ಯಯನ ವಿಷಯದ ಜೊತೆ ಅನುಸಂಧಾನ ನಡೆಸಲು ಪ್ರಯತ್ನಿಸಲಾಗಿದೆ. ಸಂಗ್ರಹಿಸಿದ ಮಾಹಿತಿಯನ್ನು ವಸ್ತು ನಿಷ್ಠವಾಗಿ ಮತ್ತು ಮೌಲ್ಯದ ನಿರಪೇಕ್ಷವಾಗಿ ಇಲ್ಲಿ ಬಳಸಿಲ್ಲ. ಅವುಗಳ ಮೂಲದಲ್ಲಿರುವ ಮೌಲ್ಯಗಳನ್ನು, ಅವುಗಳ ಅರ್ಥವ್ಯಾಪ್ತಿಯನ್ನು ಅವು ಪ್ರತಿನಿಧಿಸುವ ಹಿತಾಸಕ್ತಿಗಳನ್ನು .ಇಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ. ಉದಾಹರಣೆಗೆ : "ಗ್ರಾಮ ಸಭೆಗೆ ಸಾವು ಬಂದರೆ ಮಹಿಳೆಯರು ಯಾರೂ ಬರುವುದಿಲ್ಲ" ಎಂಬ ಗ್ರಾಮ ಪಂಚಾಯಿತಿ ಸದಸ್ಯರ ಅಭಿಪ್ರಾಯವನ್ನು ಕೇವಲ ಅಭಿಪ್ರಾಯವೆಂದು ಪರಿಗಣಿಸುವ ಬದಲಾಗಿ ಸದರಿ ಅಭಿಪ್ರಾಯ ರೂಪುಗೊಳ್ಳಲು ಕಾರಣವಾದ ಸಾಮಾಜಿಕ-ಸಾಂಸ್ಕೃತಿಕ ಸನ್ನಿವೇಶಗಳನ್ನು, ಆ ಅಭಿಪ್ರಾಯದ ಬಹುಮುಖಿ ಅರ್ಥವನ್ನು ಹಿಡಿದಿಡಲು ಇಲ್ಲಿ ಪ್ರಯತ್ನಿಸಲಾಗುತ್ತದೆ. ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯದ ಸಮಯದಲ್ಲಿ ಮಾಹಿತಿ ಸಂಗ್ರಹದ ಸಂದರ್ಭದಲ್ಲಿ, ಅನೌಪಚಾರಿಕವಾಗಿ ನಡೆದ ಸಂಭಾಷಣೆ - ಸಂವಾದ - ಚರ್ಚೆಗಳಲ್ಲಿ ಅಧ್ಯಯನ ನಡೆಸುವಾಗ ಪಡೆದ ಅನುಭವಗಳನ್ನು ವಿಶ್ಲೇಷಣೆಗೆ ಒಳಪಡಿಲಾಗುತ್ತದೆ.

ಉಪಸಂಹಾರ : ರಾಜಕೀಯವಾಗಿ ಗ್ರಾಮ ಪಂಚಾಯಿತಿಗಳಲ್ಲಿ ಮಹಿಳಾ ಜನಪ್ರತಿನಿಧಿಗಳು ಅಭಿವೃದ್ಧಿಗಳಲ್ಲೂ, ಸ್ವ ನಿರ್ಧಾರ ಅಂಶಗಳನ್ನು ಮಹಿಳಾ ಜನಪ್ರತಿನಿಧಿಗಳಿಂದಲೇ ಮೌಖಿಕವಾಗಿ ಸಂಗ್ರಹಿಸುವ ಹಾಗೂ ಅವುಗಳನ್ನು ಮಹಿಳಾ ಅಧ್ಯಯನದ ವೈಧಾನಿಕತೆಯಲ್ಲಿ ವಿಶ್ಲೇಷಿಸುವ ವಿಧಾನವನ್ನೊಳಗೊಂಡು ಈ ಅಧ್ಯಯನ ಮಹಿಳಾ ಜನಪ್ರತಿನಿಧಿಗಳ ಸಾಧನೆಯ ಕಡೆಗೂ ದೃಷ್ಟಿ ಹಾಯಿಸುತ್ತದೆ. ಈ ಅಧ್ಯಯನವು ರಾಜಕೀಯವಾಗಿ ಗ್ರಾಮ ಪಂಚಾಯಿತಿಗೆ ಚುನಾಯಿತಗೊಂಡ ಮಹಿಳೆಯರ ಸಮಸ್ಯೆಗಳ ನಿವಾರಣೆಗೆ ಕೆಲವು ಸಲಹೆಗಳನ್ನು ಒದಗಿಸಿಕೊಡುತ್ತದೆ ಹಾಗೂ ಅದರ ಸಾಧನೆಗೆ ಉತ್ತೇಜನ - ಪ್ರೋತ್ಸಾಹ ನೀಡುವ ಅಂಶಗಳನ್ನು ತೆರೆದಿಡಲಾಗುತ್ತದೆ.

೧. ಡಾ. ಬಿ.ಆರ್. ಚಂದ್ರಶೇಖರ್, ಗ್ರಾಮೀಣ ಅಭಿವೃದ್ಧಿ ಮತ್ತು ವಿಕೇಂದ್ರೀಕರಣ, ರಾಜಕೀಯ ವೈಫಲ್ಯದ ಒಂದು ಸಂಕಥನ: ಪ್ರಸಾರಾಂಗ ಪ್ರಕಾಶನ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦4 ಪು.ಸಂ. ೦೧

೨. ಡಾ. ಎಚ್. ಎಸ್. ಶ್ರೀಮತಿ, ಸಂಪಾದಕರು ಡಾ. ಕೆ. ರವೀಂದ್ರನಾಥ್: ಅಧ್ಯಯನದ ವಿಧಿ ವಿಧಾನಗಳು, ಪ್ರಸಾರಾಂಗ ಪ್ರಕಾಶನ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦8 ಪು.ಸಂ. ೪೧

ಅಧ್ಯಾಯ ೨

ರಾಜಕಾರಣದಲ್ಲಿ ಮಹಿಳೆಯರು

ಮಹಿಳೆಯರ ರಾಜಕೀಯ ಪ್ರವೇಶ

"ಸ್ತ್ರೀ, ಪುರುಷರಿಗೆ ಸಮಾನ ಸ್ಥಾನಮಾನವನ್ನು ನಮ್ಮ ಸಂವಿಧಾನದಲ್ಲಿ ನೀಡುವ ಮೂಲಕ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸಲು ಮಹಿಳೆಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ಮುಸಲ್ಮಾನರ ಆಕ್ರಮಣದ ಕಾಲದಲ್ಲಿ ತನ್ನ ವೈಯಕ್ತಿಕ ಸ್ವಾತಂತ್ರ್ಯವನ್ನು ಬಹುಮಟ್ಟಿಗೆ ಕಳೆದುಕೊಂಡ ಮಹಿಳೆ ಮತ್ತೆ ಸಾರ್ವಜನಿಕ ಜೀವನಕ್ಕೆ ಕಾಲಿಟ್ಟುದುದು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ.

ಒಂದು ದೇಶದಲ್ಲಿ ಮಹಿಳೆಗಿರುವ ಸ್ಥಾನಮಾನ ಆ ದೇಶದ ಆಧುನಿಕತೆಯ ಅಳತೆಗೋಲು ಎನ್ನಬಹುದು. ಮಹಿಳೆಯ ಸ್ಥಾನಮಾನ ಸುಧಾರಣೆಯ ಕಾರ್ಯ ಪ್ರಾರಂಭವಾದದ್ದು ಬ್ರಿಟಿಷರು ನಮ್ಮ ದೇಶದಲ್ಲಿ ನೆಲೆಯೂರಿ ಆಡಳಿತ ಸೂತ್ರಗಳನ್ನು ಕೈಗೆತ್ತಿಕೊಂಡಾಗ.

ಬ್ರಿಟಿಷ್ ಚಿಂತನಕಾರರು ಹಾಗೂ ಆಡಳಿತಗಾರರು, ಭಾರತದಲ್ಲಿ ಮಹಿಳೆಗಿರುವ ಸ್ಥಾನಮಾನವನ್ನು ನಿರ್ಧರಿಸಲು ಯುರೋಪಿಯನ್ ಮಾನದಂಡಗಳನ್ನೇ ಅನ್ವಯಿಸಿದರು. ಭಾರತೀಯ ಮಹಿಳೆಯನ್ನು ಅವರು ಸಂಪ್ರದಾಯ ಶರಣ ಧಾರ್ಮಿಕ ಮನೋಭಾವದ ಹಾಗೂ ವಿಧೇಯಳಾದ, ಸೀಮಿತ ಹಾಗೂ ಶೋಷಿತ ಪರಿಸರದಲ್ಲಿ ಬಾಳುವ ಹೆಣ್ಣಾನ್ನಾಗಿಯೇ ಕಂಡರು. ಹಿಂದೂ ಸಮಾಜದ ಸಾಂಪ್ರದಾಯಿಕ ಆಚರಣೆಗಳನ್ನು ಅದರಲ್ಲೂ ಹಿಂದೂ ಮಹಿಳೆಗೆ ಸಂಬಂಧಿಸಿದ ಆಚರಣೆಗಳನ್ನು ಹಳೆಯ ಕಂದಾಚಾರದ ಆಚರಣೆಗಳೆಂದೂ ಅಮಾನವೀಯವಾದವುಗಳೆಂದೂ ಟೀಕಿಸಿದರು. ಹಿಂದೂ ವಿಧವೆಯರ ಶೋಚನೀಯ ಬಾಳು, ಬಾಲ್ಯ ವಿವಾಹ, ವಿಧವಾ ಪುನರ್ವಿವಾಹಕ್ಕೆ ಇದ್ದ ನಿಷೇಧ, ಹಿಂದೂ ಮಹಿಳೆಯ ಅನಕ್ಷರತೆ ಇವುಗಳು ಅವರ ಗಮನವನ್ನು ವಿಶೇಷವಾಗಿ ಸೆಳೆದವು. ಬ್ರಿಟಿಷರ ಹೇಳಿಕೆಯಲ್ಲಿ ಬಹುಮಟ್ಟಿಗೆ ನಿಜಾಂಶವಿದೆಯೆಂಬ ಅರಿವು ಹಿಂದೂ ಸಮಾಜ ಸುಧಾರಕರಿಗಿದ್ದರೂ ಹಿಂದೂ ಸಮಾಜದ ಸಾಂಪ್ರದಾಯಿಕ ಆಚರಣೆಗಳನ್ನು ಸಮರ್ಥಿಸಿಕೊಳ್ಳಲು ಅವರು ಪ್ರಯತ್ನಿಸಿದರು. ಆ ಆಚರಣೆಗಳ ಬಗ್ಗೆ ಹಾಗೂ ಮಹಿಳೆಯ ಸ್ಥಾನಮಾನದ ಬಗ್ಗೆ ಬ್ರಿಟಿಷ್ ಚಿಂತಕರು, ಆಡಳಿತಗಾರರು ಹಾಗೂ ಧರ್ಮ ಪ್ರಚಾರಕರು ವ್ಯಕ್ತಪಡಿಸಿದ ಅಭಿಪ್ರಾಯಗಳೆಲ್ಲವೂ ಉತ್ಪ್ರೇಕ್ಷೆಯಿಂದ ಕೂಡಿದೆಯೆಂಬ ಹೇಳಿಕೆ ನೀಡಿದರು.

೧೯ನೆಯ ಶತಮಾನದ ಪ್ರಾರಂಭದಲ್ಲಿ ಸಮಾಜ ಸುಧಾರಕರು ಹಿಂದೂ ಸಮಾಜದಲ್ಲಿ ಮಹಿಳೆಯ ಸ್ಥಾನಮಾನ ತೀರಾ ಕೆಳಗಿಳಿದಿದೆ ಎಂಬುದನ್ನು ಒಪ್ಪಿಕೊಂಡು ಮಹಿಳಾ ಚಳವಳಿಯ ನಾಯಕತ್ವ ವಹಿಸಲು ಮುಂದೆ ಬಂದರು. ರಾಜಾರಾಂ ಮೋಹನ್‌ರಾಯ್‌ರಂತಹ ಸಮಾಜಸುಧಾರಕರು ಹಿಂದೂ ಮಹಿಳೆಯ ಸ್ಥಾನಮಾನವನ್ನು ಬ್ರಿಟಿಷ್ ಮಹಿಳೆಯ ಸ್ಥಾನಮಾನದೊಂದಿಗೆ ಹೋಲಿಸಿ ಅದು ಮೇಲ್ಪಂಕ್ತಿಯಾಗಬೇಕೆಂದು ಆಶಿಸಿದರು.

ಇನ್ನೂ ಕೆಲವು ಸಮಾಜಸುಧಾರಕರು ಬಾಲ್ಯ ವಿವಾಹಗಳಂತಹ ಕೆಲವು ಪದ್ಧತಿಗಳು ಮಹಿಳೆಗೆ ತೀರಾ ಅನ್ಯಾಯವೆಸಗುತ್ತಿವೆ ಎಂಬುದನ್ನು ಒಪ್ಪಿಕೊಂಡರೂ, ಪುರಾಣ ಸಾಹಿತ್ಯ ಹಾಗೂ ಚರಿತ್ರೆಗಳನ್ನು ಆಧರಿಸಿ

ಹಿಂದೂ ಮಹಿಳೆಯ ಚಿತ್ರವನ್ನು ಬಿಡಿಸಲೆತ್ನಿಸಿದರು. ಮಹಿಳೆಯನ್ನು ಹಿಂದೂ ಸಮಾಜ ನಡೆಸಿಕೊಂಡಿರುವ ರೀತಿಯನ್ನು ಟೀಕಿಸಿದವರಿಗೆ ಮಹಿಳೆಯ ಸಂಬಂಧದಲ್ಲಿನ ವಿವಾದಾತ್ಮಕ ಆಚರಣೆಗಳನ್ನು ತೀವ್ರವಾಗಿ ಖಂಡಿಸಿದವರಿಗೆ ಪ್ರತ್ಯುತ್ತರವಾಗಿ ಸ್ಮೃತಿಗಳ ಕಾಲದಲ್ಲಿ ಮಹಿಳೆಯರಿಗೆ ಅತ್ಯುನ್ನತ ಸ್ಥಾನಮಾನ ನೀಡಲಾಗಿತ್ತೆಂದು ತಮ್ಮ ನಿಲುವನ್ನು ಸಮರ್ಥಿಸಿಕೊಂಡರು.

ಚರಿತ್ರೆ ಹಾಗೂ ಪುರಾಣಗಳಲ್ಲಿ ಚಿತ್ರಿತವಾಗಿರುವ ಮಹಿಳೆ ಸುಶಿಕ್ಷಿತೆ, ಪಂಡಿತೆ, ತತ್ವಜ್ಞಾನಿ ಮತ್ತು ಉತ್ತಮ ಅಭಿವ್ಯಕ್ತಿ ಸ್ವಾತಂತ್ರ್ಯವುಳ್ಳವಳು, ಕುಟುಂಬ ಹಾಗೂ ಸಮಾಜದಲ್ಲಿ ಗೌರವಾನ್ವಿತವಾದ ಸ್ಥಾನಮಾನವನ್ನು ಹೊಂದಿದ್ದವಳು. ಪ್ರಾಚೀನ ಭಾರತದಲ್ಲಿ ಮಹಿಳೆ ಕುಟುಂಬ ಸಮುದಾಯ ಹಾಗೂ ರಾಜಕೀಯದಲ್ಲಿ ಕ್ರಿಯಾಶೀಲವಾಗಿ ಭಾಗವಹಿಸುತ್ತಿದ್ದಳು ಎಂಬುದನ್ನು ಸಮಾಜ ಸುಧಾರಕರು ಒತ್ತಿ ಹೇಳಿದರು. ಸಮಾಜ ಸುಧಾರಣೆಗೆ ಅನುಕೂಲಕರವಾದ ಸಾರ್ವಜನಿಕ ಅಭಿಪ್ರಾಯ ಮೂಡಿಸಲು ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಹಿಳೆಯರಿಗೆ ಪ್ರಚೋದನೆ ನೀಡಲು ಈ ವಿವರಗಳನ್ನು ಸಮಾಜ ಸುಧಾರಕರು ಬಳಸಿಕೊಳ್ಳಲೆತ್ನಿಸಿದರು. ಅಲ್ಲದೆ ಸಮಾಜದ ಸಾಮಾಜಿಕ ಬಂಧವನ್ನು ಕೆಡಿಸದೆಯೇ ಬದಲಾವಣೆಯನ್ನು ತರುವುದೂ ಸಹ ಇದರ ಉದ್ದೇಶವಾಗಿತ್ತು.

ಭಾರತೀಯ ಮಹಿಳೆಯರು ಖಾಸಗೀ ಜೀವನದಿಂದ ಸಾರ್ವಜನಿಕ ಜೀವನಕ್ಕೆ ಪ್ರವೇಶಿಸಲು ಪಾಶ್ಚಾತ್ಯೀಕರಣ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕಾರಣವಾಯಿತು. ತತ್ಪರಿಣಾಮವಾಗಿ ಹಿಂದೂ ಸಮಾಜದ ಮಹಿಳೆಯ ಶೋಷಿತ ಪರಿಸ್ಥಿತಿಯ ಬಗ್ಗೆ ಜಾಗೃತಿ ಮೂಡಲಾರಂಭಿಸಿತು ಮತ್ತು ಅವಳಿಗೆ ಸಂಬಂಧಿಸಿದ ಸಾಂಪ್ರದಾಯಿಕ ಆಚರಣೆಗಳು ಮತ್ತು ಪದ್ಧತಿಗಳನ್ನು ಒರೆಗೆ ಹಚ್ಚಿ ನೋಡುವಂತಾಯಿತು ಮತ್ತು ಅದನ್ನು ಸುಧಾರಿಸುವ ಅಗತ್ಯ ತೋರಿತು. ಭಾರತೀಯ ಗಣ್ಯರಿಗೆ ದೊರೆತ ಇಂಗ್ಲಿಷ್ ಶಿಕ್ಷಣವೂ ಈ ಅರಿವಿಗೆ ಕಾರಣವಾಯಿತು.

೧೯ನೆಯ ಶತಮಾನದುದ್ದಕ್ಕೂ ಮತ್ತು ೨೦ನೆಯ ಶತಮಾನದ ಪ್ರಾರಂಭದಲ್ಲಿ ಆದ ಸಮಾಜ ಸುಧಾರಣೆಗಳ ಮೂಲಕ ಕಾನೂನಿನಲ್ಲಿ ಆದ ಬದಲಾವಣೆಗಳಲ್ಲಿ ಮಹಿಳೆಯರ ಸಂಘಟಿತ ಪ್ರಯತ್ನ ಕಾಣದಿದ್ದರೂ ಮಹಿಳಾ ಚಳವಳಿಯ ಪ್ರಾರಂಭಿಕ ಸೂಚನೆಗಳನ್ನು ಗುರುತಿಸಬಹುದು.

ಹೀಗಾಗಿ ಮಹಿಳಾ ಚಳವಳಿಯ ಪ್ರಾರಂಭವನ್ನು ಗುರುತಿಸುವಾಗ ಹಿಂದೂ ಪುರುಷರ ಪಾಶ್ಚಾತ್ಯೀಕರಣ ಬಹುಮುಖ್ಯವಾದುದಾಗುತ್ತದೆ. ೧೯ನೆಯ ಶತಮಾನ ಮತ್ತು ೨೦ನೆಯ ಶತಮಾನದ ಪ್ರಾರಂಭದಲ್ಲಿ ಕುಟುಂಬ ಹಾಗೂ ಸಮಾಜದಲ್ಲಿ ಮಹಿಳೆಯ ಸ್ಥಾನಮಾನವನ್ನು ಸುಧಾರಿಸುವ ಚಳವಳಿಗಳ ನಾಯಕತ್ವ ವಹಿಸಿದವರೇ ಪುರುಷರು. ಸಮಾಜದಲ್ಲಿ ಮಹಿಳೆಯರ ಪಾತ್ರ ಹಾಗೂ ಅವರಿಗೆ ಸಂಬಂಧಪಟ್ಟ ಆಚರಣೆ ಹಾಗೂ ಪದ್ಧತಿಗಳಿಂದಾಗುವ ಶೋಷಣೆಗಳ ಬಗ್ಗೆ ಈ ಪ್ರಮುಖರು ತಳೆದ ಅಭಿಪ್ರಾಯಗಳು ಮಹಿಳಾ ಚಳವಳಿಯ ದಿಕ್ಕನ್ನು ನಿರ್ಧರಿಸಿದವು. ರಾಷ್ಟ್ರೀಯ ಚಳವಳಿಯಲ್ಲಿ ಕ್ರಿಯಾಶೀಲ ರಾಜಕೀಯ ಕಾರ್ಯಕರ್ತರಾಗಿ ಭಾಗವಹಿಸುವಂತೆ ಮಹಿಳೆಯರಿಗೆ ಕರೆ ನೀಡಿದುದೇ ಪುರುಷರು. ಅದರಲ್ಲೂ ಮುಖ್ಯವಾಗಿ ಮಹಾತ್ಮಾಗಾಂಧಿ ಅವರು;ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರು ತಳೆದ ಅಭಿಪ್ರಾಯಗಳಿಗೆ, ಆ ಬಗ್ಗೆ ಅವರ ಮನೆಯ ಪುರುಷರು ತಳೆದ ಅಭಿಪ್ರಾಯಗಳೇ ಪ್ರೇರಕವಾಗಿದ್ದವು.

೧೯ನೆಯ ಶತಮಾನದ ಮಧ್ಯಭಾಗದಲ್ಲಿ ಇಂಗ್ಲಿಷ್ ಶಿಕ್ಷಣದ ಪ್ರಯೋಜನ ಪಡೆದವರೆಲ್ಲ ಸಾಮಾನ್ಯವಾಗಿ ಮೇಲ್ವರ್ಗ ಮತ್ತು ಮಧ್ಯಮ ವರ್ಗಕ್ಕೆ ಸೇರಿದವರಾಗಿದ್ದರು. ಸರ್ಕಾರದಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಗೌರವಯುತ ಹುದ್ದೆ ಪಡೆಯಬಹುದೆಂಬ ವ್ಯವಹಾರಿಕತೆಯೇ ಹಿಂದೂ ಪುರುಷರು ಇಂಗ್ಲಿಷ್ ಶಿಕ್ಷಣ ಪಡೆಯಲು ಮುಖ್ಯ ಕಾರಣವಾಗಿತ್ತು. ಇಂಗ್ಲೀಷ್ ಶಿಕ್ಷಣ ಪಡೆದ ಇವರು ತಮ್ಮ ಕೆಲಸದಲ್ಲಿ ಪಾಶ್ಚಿಮಾತ್ಯ ಕೆಲಸದ ರೀತಿ, ನಡತೆ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕಿತ್ತು. ಆದರೆ ಕುಟುಂಬದ ಖಾಸಗಿ ಜೀವನದಲ್ಲಿ ಹಿಂದೂ ಸಂಪ್ರದಾಯಗಳು ಹಾಗೂ ನಂಬಿಕೆಗಳನ್ನು ಆಚರಿಸಬೇಕಿತ್ತು. ಇವೆರಡರ ನಡುವಿನ ದ್ವಂದ್ವ, ಶಿಕ್ಷಿತ ಗಣ್ಯರನ್ನು ಯೋಚಿಸುವಂತೆ ಮಾಡಿತು. ಮಹಿಳೆಯರು ಶಿಕ್ಷಣ ಪಡೆದು ಆಧುನಿಕ ಮನೋಭಾವವನ್ನು ಮೂಡಿಸಿಕೊಂಡ ಹೊರತು ಅರ್ಥವಿಲ್ಲದ ಸಾಂಪ್ರದಾಯಿಕ ಆಚರಣೆಗಳನ್ನು ಬದಲಾಯಿಸಲು ಸಾಧ್ಯವಿಲ್ಲವೆಂಬುದನ್ನು ಮನಗಂಡರು. ಈ ದೃಷ್ಟಿಯಿಂದ ಇವರು ಮಹಿಳಾ ಚಳವಳಿಯ ನಾಯಕತ್ವವನ್ನು ವಹಿಸಿದುದೇ ಅಲ್ಲದೆ, ಮಹಿಳೆಯರು ಅದರಲ್ಲಿ ಪಾಲ್ಗೊಳ್ಳುವುದನ್ನು ಪ್ರೋತ್ಸಾಹಿಸಿದರು. ಸತಿ ಪದ್ಧತಿ ನಿಷೇಧ, ಹೆಣ್ಣು ಮಕ್ಕಳ ಶಿಕ್ಷಣ, ವಿವಾಹ ಮತ್ತು ವಿಧವೆಯರ ಬಾಳಿಗೆ ಸಂಬಂಧಪಟ್ಟ ಅನೇಕ ಅಂಶಗಳ ಬಗೆಗಿನ ಚಳವಳಿಗಳನ್ನು ಬೆಂಬಲಿಸಿದರು. ಗಣ್ಯರು, ಸಮಾಜ ಸುಧಾರಕರ ಈ ಮನೋಭಾವಗಳು ಹಾಗೂ ಚಿಂತನೆಗಳು ಸಮಾಜಕ್ಕೆ ಆದರ್ಶವಾದವು. ಹಿಂದೂ ಸಮಾಜದಲ್ಲಿ ಮಹಿಳೆಯ ಸ್ಥಾನಮಾನವನ್ನು ಸುಧಾರಿಸುವ ಈ ಚಳವಳಿ ೧೯ನೆಯ ಶತಮಾನದಾದ್ಯಂತ, ನಿಧಾನವಾದರೂ ಗಮನೀಯ ಗತಿಯನ್ನು ಪಡೆಯಿತು. ಇದು ತಮ್ಮ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸುವ ಮಟ್ಟಿಗೆ, ಅವರ ವಿವಾಹವನ್ನು ಒಂದೆರಡು ವರ್ಷಗಳ ಕಾಲ ಮುಂದೂಡುವ ಮಟ್ಟಿಗೆ, ಅವರನ್ನು ಬ್ರಹ್ಮ ಸಮಾಜದಂತಹ ಕುಟುಂಬಕ್ಕೆ ಸೀಮಿತವಲ್ಲದ ಸಭೆಗಳಿಗೆ ಕರೆದೊಯ್ಯುವ ಮಟ್ಟಿಗೆ ಫಲ ನೀಡಿತು. ರಾಜಾರಾಂ ಮೋಹನ್‌ರಾಯ್, ರಾನಡೆ, ಪಂಡಿತ ವಿದ್ಯಾಸಾಗರ, ಕೇಶವಚಂದ್ರ ಸೇನ್, ಮಹರ್ಷಿ ಕರ್ವೆಯಂತಹವರು ಈ ಸುಧಾರಣಾ ಚಳವಳಿಗಳ ಮುಂಚೂಣಿಯಲ್ಲಿದ್ದರು.

ಮದುವೆಯ ಒಪ್ಪಿಗೆ ವಯಸ್ಸು ಅಥವಾ ವಿಧವಾ ಪುನರ್ವಿವಾಹದ ಹಕ್ಕುಗಳ ವಿಷಯಗಳಲ್ಲಿ ವಿವಾದಗಳು ಉಂಟಾದ ರೀತಿಯಲ್ಲಿಯೇ ಮಹಿಳಾ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ವಿವಾದಗಳು ಉಂಟಾದರೂ, ಮಹಿಳೆಯರಿಗೆ ಶಿಕ್ಷಣ ಅಗತ್ಯ ಎಂಬ ಬಗ್ಗೆ ಬಹುಜನ ಸಮ್ಮತಿಯಿತ್ತು. ಆದರೆ ಶಿಕ್ಷಣದ ಬಗ್ಗೆ ಜನ ಸಮುದಾಯದಲ್ಲಿದ್ದ ರೂಢಿಗತ ವಿರೋಧವನ್ನು, ಶಿಕ್ಷಣಕ್ಕೆ ಬೇಕಾದ ಹಣಕಾಸಿನ ಹಾಗೂ ತರಬೇತಿ ಹೊಂದಿದ ಹಿಂದೂ ಉಪಾಧ್ಯಾಯರ ಕೊರತೆಯನ್ನು ಎದುರಿಸಬೇಕಾಗಿ ಬಂತು. ಈ ಸಂದರ್ಭದಲ್ಲಿ ೧೯೫೪ರಲ್ಲಿ ಸರಕಾರ ಕೈಗೊಂಡ ಸಹಾಯಾನುದಾನ ವ್ಯವಸ್ಥೆಯಿಂದಾಗಿ ಹಣಕಾಸಿನ ಕೊರತೆ ಬಹುಮಟ್ಟಿಗೆ ನೀಗಿತು.

ಪ್ರಾರಂಭದಲ್ಲಿ ಮತ ಪ್ರಚಾರಕರು ಮತಾಂತರಗೊಳಿಸಬಹುದೆಂಬ ಭಯದಿಂದ ಮಿಷನರಿ ಶಾಲೆಗಳಿಗೆ ಮಕ್ಕಳನ್ನು ಕಳುಹಿಸಲು ಹಿಂಜರಿದರೂ ೨೦ನೆಯ ಶತಮಾನದ ಪ್ರಾರಂಭದಲ್ಲಿ ಈ ಭಯ ಕ್ರಮೇಣ ಮಾಯವಾಯಿತು. ಗಣ್ಯರೆನಿಸಿದ ಹಿಂದೂಗಳು ತಮ್ಮ ಹೆಣ್ಣುಮಕ್ಕಳನ್ನು ಈ ಶಾಲೆಗಳಿಗೆ ಕಳುಹಿಸಲಾರಂಭಿಸಿದರು. ಪ್ರಮುಖ ಹಿಂದೂ ಕುಟುಂಬಗಳ ಹೆಣ್ಣುಮಕ್ಕಳು ಸಂಪ್ರದಾಯಬದ್ಧ ಜೀವನ

ಕ್ರಮದಿಂದ ಹೊರಬಂದು ತಮಗೆ ದೊರೆತ ಹೊಸ ಅವಕಾಶಗಳನ್ನು ಬಳಸಿಕೊಳ್ಳಲಾರಂಭಿಸಿದರು. ಅಂದಿನ ರಾಷ್ಟ್ರೀಯ ಚಳವಳಿಯ ರಾಜಕಾರಣಿಗಳು ತಮ್ಮ ಮನೆಯ ಹೆಣ್ಣುಮಕ್ಕಳು ಶಿಕ್ಷಿತರಾಗಿರಬೇಕು, ಮನೆಯಿಂದ ಹೊರಗೆ ಹೋಗಿ ದುಡಿಯಬೇಕೆಂಬ ಇಚ್ಛೆಯನ್ನು ತೋರಿದರು. ಅದರಲ್ಲೂ ರಾಜಕಾರಣಿಗಳು ಹಾಗೂ ಸಮಾಜಸುಧಾರಕರು ತಮ್ಮ ಪತ್ನಿ, ಹೆಣ್ಣುಮಕ್ಕಳು ಹಾಗೂ ಅಕ್ಕತಂಗಿಯರು ಸುಶಿಕ್ಷಿತರಾಗಿದ್ದರೆ ಅದು ತಮಗೆ ಹಾಗೂ ರಾಷ್ಟ್ರಕ್ಕೆ ಹೆಮ್ಮೆಯ ವಿಷಯವೆಂದು ಭಾವಿಸಿದರು. ಹೀಗಾಗಿ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಸಮಾಜ ಸುಧಾರಣಾ ಚಳವಳಿಗಳನ್ನು ಸಂಘಟಿಸುವಂತೆ ಮತ್ತು ಸಾರ್ವಜನಿಕ ಜೀವನದಲ್ಲಿ ತೀರ್ಮಾನ ಕೈಗೊಳ್ಳುವ ಪಾತ್ರ ವಹಿಸುವಂತೆ ಮಹಿಳೆಯರಿಗೆ ಪ್ರೋತ್ಸಾಹ ನೀಡಿದರು.

ಭಾರತದಲ್ಲಿನ ಮಹಿಳಾ ಚಳವಳಿಯನ್ನು ಮಹಾತ್ಮಗಾಂಧಿ ಅವರ ರಾಷ್ಟ್ರೀಯ ರಾಜಕಾರಣದ ಅವಿಭಾಜ್ಯ ಅಂಗ ಎಂದೇ ಹೇಳಬೇಕು. ಮಹಿಳೆಯರಲ್ಲಿ ಮೂಡಿದ ರಾಷ್ಟ್ರೀಯ ಮನೋಭಾವ ಅವರ ಜೀವನದಲ್ಲಿ ಬದಲಾವಣೆಯನ್ನು ತಂದುದೇ ಅಲ್ಲದೆ, ಅವರನ್ನು ಕ್ರಿಯಾಶೀಲರನ್ನಾಗಿ ಮಾಡಿತು. ತಮಗೆ ಹೊಸತಾದ ವಿಭಿನ್ನ ಪಾತ್ರ ವಹಿಸುವಂತೆ ಪ್ರಚೋದಿಸಿತು. ಈ ಸಮಯದಲ್ಲಿ ಮಹಿಳೆ ಹೊಸ ಪಾತ್ರದಲ್ಲಿ ಕ್ರಾಂತಿಕಾರಿಯಾಗಿ ಕಂಡಳು. ಮೆರವಣಿಗೆಯಲ್ಲಿ ಭಾಗವಹಿಸಿದಳು. ರಾಜಕೀಯ ಸಮಾವೇಶದಲ್ಲಿ ಭಾಗವಹಿಸಿದಳು. ಜೈಲಿಗೆ ಹೋದಳು. ಕಾಂಗ್ರೆಸ್ ಸಭೆಗಳನ್ನು ಸಮಾವೇಶಗೊಳಿಸಿದಳು. ಆದರೆ ಮಹಿಳೆ ತನಗಿರುವ ಸ್ವಾತಂತ್ರ್ಯವನ್ನು ಗೃಹಿಣಿಯಾಗಿ ತನ್ನ ಕರ್ತವ್ಯಕ್ಕೆ ಭಂಗ ಬರದ ರೀತಿಯಲ್ಲಿ ನಿರ್ವಹಿಸಬೇಕಿತ್ತು. ತನ್ನ ಹೊಸ ಪಾತ್ರ ಹಾಗೂ ಸಾಂಪ್ರದಾಯಿಕವಾದ ತನ್ನ ಗೃಹಿಣಿಯ ಪಾತ್ರಗಳ ನಡುವೆ ಯಾವುದೇ ರೀತಿಯ ಸಂಘರ್ಷ ಉಂಟಾಗದಂತೆ ಅವಳು ಎಚ್ಚರ ವಹಿಸಬೇಕಾಗಿತ್ತು. ಮಹಾತ್ಮಗಾಂಧಿಯವರಿಗೆ ರಾಷ್ಟ್ರೀಯ ಚಳವಳಿ ಕೇವಲ ರಾಜಕೀಯ ಚಳವಳಿಯಾಗದೆ ಸಮಾಜವನ್ನು ಪುನರ್‌ರಚಿಸುವ, ಪುನಶ್ಚೇತನಗೊಳಿಸುವ ಸಾಧನವೂ ಆಗಿತ್ತು. ಆದ್ದರಿಂದಲೇ ಅವರು ಮಹಿಳೆಯರಿಗೆ ತಾವೇ ಸ್ವತಃ ಯೋಚಿಸುವಂತಹ ತರಬೇತಿ ಹಾಗೂ ತಿಳಿವನ್ನು ನೀಡಿದರು. ಭಾರತೀಯ ಸಮಾಜದಲ್ಲಿ ಮಹಿಳೆಯರಿಗಿರುವ ಸ್ಥಾನಮಾನವನ್ನು ಹಾಗೂ ಅವರು ವಹಿಸುವ ಪಾತ್ರವನ್ನು ಉತ್ತಮಗೊಳಿಸಲು ಮಹಾತ್ಮಗಾಂಧಿ ಅವರಿಗೆ ಅತ್ಯಂತ ಕಾಳಜಿಯಿತ್ತು. ಈ ಕಾಳಜಿಯೇ ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸಲು ಮಹಿಳೆಯರಿಗೆ ಪ್ರಚೋದನೆಯಾಯಿತು. ಅವರ ನಾಯಕತ್ವ ಹಾಗೂ ಕಾರ್ಯಕ್ರಮಗಳ ಸ್ವರೂಪದಿಂದಾಗಿ ಸಂಪ್ರದಾಯಬದ್ಧ ಮಹಿಳೆಯರೂ ಸ್ವಾತಂತ್ರ್ಯ ಚಳವಳಿಗಳಲ್ಲಿ ಭಾಗವಹಿಸುವಂತಾಯಿತು. ಹೀಗಾಗಿ, ಪುರುಷರಂತೆಯೇ ಅನೇಕ ಮಹಿಳೆಯರ ರಾಜಕೀಯ ಜೀವನವೂ ಮಹಾತ್ಮಗಾಂಧಿಯವರೊಡನೆ ಇದ್ದ ಪ್ರತ್ಯಕ್ಷ ಅಥವಾ ಪರೋಕ್ಷ ಸಂಪರ್ಕದೊಂದಿಗೇ ಪ್ರಾರಂಭವಾಗುತ್ತದೆ.

ರಾಜಕಾರಣದಲ್ಲಿ ಮಹಿಳೆ ಪಾಲ್ಗೊಳ್ಳುವುದು ಎಂದರೆ ಚುನಾವಣೆಯಲ್ಲಿ ಮತ್ತು ಆಡಳಿತದಲ್ಲಿ ಪಾಲ್ಗೊಳ್ಳುವುದು ಎಂದು ಸೀಮಿತ ಅರ್ಥವಲ್ಲ. ಈ ಪಾಲ್ಗೊಳ್ಳುವಿಕೆಯನ್ನು ವಿಶಾಲಾರ್ಥದಲ್ಲಿ ಪರಿಭಾವಿಸಬೇಕಾಗುತ್ತದೆ. ಮತ ಚಲಾವಣೆ, ರಾಜಕೀಯ ಪಕ್ಷಗಳಿಗೆ ಬೆಂಬಲ, ಶಾಸಕರೊಂದಿಗೆ ಸಂಪರ್ಕ, ರಾಜಕೀಯ ಪಕ್ಷಗಳ ಪ್ರಣಾಳಿಕೆಗಳನ್ನು ಹಾಗೂ ಅಭಿಪ್ರಾಯಗಳನ್ನು ಜನರಿಗೆ ತಲುಪಿಸುವುದು ಹಾಗೂ ರಾಜಕಾರಣ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರುವಂತಹ ಇತರ ಸಂಬಂಧಿ ಚಟುವಟಿಕೆಗಳೂ ಇದರಲ್ಲಿ

ಸೇರುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಆಡಳಿತದ ಮೇಲೆ ಪರಿಣಾಮ ಬೀರುವಂತಹ ಯಾವುದೇ ಸಂಘಟಿತ ಚಟುವಟಿಕೆಯಲ್ಲಿ ಭಾಗವಹಿಸಿದರೂ ಅದು ರಾಜಕೀಯ ಭಾಗವಹಿಸುವಿಕೆಯಾಗುತ್ತದೆ ಎನ್ನಬಹುದು. ಇಂತಹ ಚಟುವಟಿಕೆಗಳಲ್ಲಿ ತೊಡಗಿರುವವರು ನೇರವಾಗಿ ನಿರ್ಧಾರ ಕೈಗೊಳ್ಳಲು ಅಧಿಕಾರ ಹೊಂದಿರದಿದ್ದರೂ, ನಿರ್ಧಾರ ಕೈಗೊಳ್ಳುವವರ ದೃಷ್ಟಿಕೋನ ಹಾಗೂ ವರ್ತನೆಯ ಮೇಲೆ ಪ್ರಭಾವ ಬೀರುತ್ತಾರೆ.

ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವ ಹಕ್ಕು ಪ್ರತಿಯೊಬ್ಬ ನಾಗರಿಕನಿಗೂ ಇದೆ. ಇದು ಅವನ/ಳ ಮೂಲಭೂತ ಹಕ್ಕು ಅಲ್ಲದೆ, ಅದನ್ನು ಚಲಾಯಿಸುವುದು ಅವನ/ಳ ಕರ್ತವ್ಯವೂ ಆಗಿರುತ್ತದೆ. ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡು ಸಮಾಜದಲ್ಲಿ ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವ ವಾತಾವರಣ ಹಾಗೂ ಅವಕಾಶ ಪ್ರತಿಯೊಬ್ಬ ನಾಗರಿಕನಿಗೂ ಇದೆ ಎಂದು ಭಾವಿಸಿ ಈ ಹಕ್ಕನ್ನು ಅವನಿಗೆ ನೀಡಲಾಗಿದೆ. ರಾಜಕೀಯದಲ್ಲಿ ಮಹಿಳೆಯ ಭಾಗವಹಿಸುವಿಕೆಯನ್ನು ನಾವು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಹಿಂದೆ ಹೇಳಿದಂತೆ, ರಾಜಕೀಯ ಭಾಗವಹಿಸುವಿಕೆಯನ್ನು ವಿಶಾಲಾರ್ಥದಲ್ಲಿ ನೋಡಿದಾಗ ಕಾರ್ಮಿಕ ಚಳವಳಿಗಳು, ವರದಕ್ಷಿಣೆ, ಅತ್ಯಾಚಾರ, ಮನೆಯಲ್ಲಿನ ಹಿಂಸೆ, ಬಲಪ್ರಯೋಗ, ಆಹಾರ ಕಲಬೆರಕೆ, ಕಾಡುಗಳನ್ನು ಕಡಿಯುವುದು ಈ ಯಾವುದೇ ವಿಷಯದ ಬಗ್ಗೆ ಮಹಿಳೆಯರು ಸಂಘಟಿತರಾಗಿ ನಡೆಸುವ ಯಾವುದೇ ಚಳವಳಿ, ಪ್ರತಿಭಟನೆ ಅಥವಾ ಬೆಂಬಲಿಸುವ ಸಭೆಗಳೂ ಸಹ ರಾಜಕೀಯ ಚಟುವಟಿಕೆಗಳೆನಿಸಿಕೊಳ್ಳುತ್ತವೆ. ಆದರೆ ರಾಜಕೀಯ ಭಾಗವಹಿಸುವಿಕೆ ಎಂಬ ಪದ ಬಳಕೆಗೆ ಇರುವ ಸಾಂಪ್ರದಾಯಿಕ ಅರ್ಥದಲ್ಲಿ ಮಹಿಳೆಯ ಪಾಲ್ಗೊಳ್ಳುವಿಕೆಯನ್ನು ಅರ್ಥೈಸಿದರೆ ಅವಳಿನ್ನೂ ರಾಜಕೀಯದ ಹೊರ ಆವರಣದಲ್ಲಿಯೇ ಉಳಿದಿದ್ದಾಳೆ ಎಂದೇ ಹೇಳಬಹುದು. ಇದಕ್ಕೆ ಕಾರಣ ಅವಳಿಗೆ ಇರುವ ಸಾಮಾಜಿಕ ಹಾಗೂ ಆರ್ಥಿಕ ಕಟ್ಟುಪಾಡುಗಳು. ಹೀಗಾಗಿ ಸ್ಥಳೀಯ, ಗ್ರಾಮೀಣ, ಜಿಲ್ಲಾ ಹಾಗೂ ರಾಷ್ಟ್ರಮಟ್ಟದಲ್ಲಿ ಮಹಿಳೆಯ ಪ್ರಾತಿನಿಧ್ಯ ಅತ್ಯಂತ ಕಡಿಮೆ. ಭಾರತದಲ್ಲಿ ೧೯೩೭ರಲ್ಲಿ ಮಹಿಳೆಗೆ ಸೀಮಿತ ಮತದಾನದ ಹಕ್ಕನ್ನು ನೀಡಲಾಯಿತು. ಅಂದಿನಿಂದೀಚೆಗೆ ಮತದಾರಳಾಗಿ, ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಯಾಗಿ ರಾಜ್ಯ ವಿಧಾನಮಂಡಲದ ಹಾಗೂ ರಾಷ್ಟ್ರಮಟ್ಟದಲ್ಲಿ ಸಂಸತ್ತಿನ ಚರ್ಚೆಗಳಲ್ಲಿ ಭಾಗವಹಿಸುವ ಮೂಲಕ ಹಾಗೂ ಕಾರ್ಯಾಂಗ ಹಾಗೂ ನ್ಯಾಯಾಂಗಗಳಲ್ಲಿ ವಿವಿಧ ಹಂತಗಳ ಅಧಿಕಾರ ಸ್ಥಾನಗಳಲ್ಲಿ ಕಾರ್ಯನಿರ್ವಹಿಸುವ ಮೂಲಕ ಮಹಿಳೆ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಲೇ ಬಂದಿದ್ದಾಳೆ.

ಒಬ್ಬ ಪ್ರಜೆ ಮತದಾನ ಮಾಡುವ ಮೂಲಕ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾನೆ. ಇಂತಹ ಔಪಚಾರಿಕ ಪ್ರಕ್ರಿಯೆಯಲ್ಲಿ ಮಹಿಳೆ ಭಾಗವಹಿಸುವಂತೆ ಮಾಡಲು ರಾಜಕೀಯ ಪಕ್ಷಗಳು ಮಾಡುವ ಪ್ರಯತ್ನಗಳು, ಮತದಾನದ ಮಹತ್ವದ ಬಗೆಗೆ ಮಹಿಳೆಯರಿಗಿರುವ ಅರಿವು ಮತ್ತು ಒಟ್ಟಾರೆಯ ರಾಜಕೀಯ ವಾತಾವರಣ ಇಂತಹ ಪ್ರಕ್ರಿಯೆಯಲ್ಲಿ ಮಹಿಳೆಯ ಭಾಗವಹಿಸುವಿಕೆಯ ಪ್ರಮಾಣವನ್ನು ನಿರ್ಧರಿಸುವಲ್ಲಿ ಮಹತ್ವದ್ದಾಗುತ್ತದೆ. ಈ ಮುಂದಿನ ಕೋಷ್ಟಕ ಚುನಾವಣೆಗಳಲ್ಲಿನ ಮಹಿಳೆಯ ಭಾಗವಹಿಸುವಿಕೆಯನ್ನು ತೋರಿಸುತ್ತದೆ.

ವರ್ಷ	ಶೇ.ಒಟ್ಟು ಮತದಾನ ಶೇಕಡವಾರು	ಮತ ಚಲಾಯಿಸಿದ ಹೊಸ ಮತದಾರರ ಸಂಖ್ಯೆ	ಮತ ಚಲಾಯಿಸಿದ ಮಹಿಳಾ ಮತದಾರರು	ಚುನಾಯಿತ ಮಹಿಳೆಯರ
೧೯೭೭	೬೦.೪೯	೬೫.೬೩	೫೯.೯೬	೧೯
೧೯೮೦	೫೬.೯೨	೬೧.೧೫	೫೧.೨೨	೨೮
೧೯೮೪	೬೩.೬೧	೬೮.೧೭	೫೮.೬೦	೪೩
೧೯೮೯	-	-	-	೨೮

ಮಹಿಳೆಯ ರಾಜಕೀಯ ಭಾಗವಹಿಸುವಿಕೆಯ ಚರಿತ್ರೆಯನ್ನು ನೋಡಿದಾಗ ಯಾವುದೇ ರಾಜಕೀಯ ಪಕ್ಷವೂ ಮಹಿಳೆಯರನ್ನು ಒಂದು ರಾಜಕೀಯ ಶಕ್ತಿಯನ್ನಾಗಿ ಪರಿಗಣಿಸಿಯೇ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಸಂವಿಧಾನದಲ್ಲಿ ಮಹಿಳೆಗೆ ರಾಜಕೀಯ ಸಮಾನತೆಯನ್ನು ನೀಡಿದ್ದು ರಾಜಕೀಯ ಪ್ರಕ್ರಿಯೆಯಲ್ಲಿ ಅವಳು ಭಾಗವಹಿಸುವಂತೆ ಮಾಡುವುದರತ್ತ ಇಟ್ಟ ಮಹತ್ವದ ಹೆಜ್ಜೆ ಎನ್ನಬಹುದು. ಆದರೆ ಮಹಿಳೆಗೆ ಸಮಾಜದಲ್ಲಿ ಇರುವ ಗೌಣ ಸ್ಥಾನಮಾನ, ಆರ್ಥಿಕ ಅವಲಂಬನೆ, ಅಸಮರ್ಥತೆ, ಸಾಂಸ್ಕೃತಿಕ ಕಟ್ಟುಪಾಡುಗಳು ಮತ್ತು ಮೌಲ್ಯಗಳು ಹಾಗೂ ರಾಜಕೀಯದಲ್ಲಿ ಮಹಿಳೆ ಭಾಗವಹಿಸುವುದರ ಬಗ್ಗೆ ಸಮಾಜ ತಳೆದಿರುವ ದೃಷ್ಟಿಕೋನ ಇವುಗಳಿಂದಾಗಿ ಭಾರತದ ಮಹಿಳೆ ಇನ್ನೂ ರಾಜಕೀಯ ಪ್ರಕ್ರಿಯೆಯ ಹೊರವಲಯದಲ್ಲಿಯೇ ಉಳಿದಿದ್ದಾಳೆ. ವರ್ಷಗಳು ಕಳೆದರೂ ಸಂಸತ್ತಿನ ಚುನಾವಣೆಗಳಲ್ಲಿ ಮಹಿಳಾ ಸ್ಪರ್ಧಿಗಳ ಸಂಖ್ಯೆ ಹೆಚ್ಚಿಲ್ಲ (ಇದು ಶೇ.೧೦ಕ್ಕಿಂತ ಕಡಿಮೆಯೇ ಉಳಿದಿದೆ)

ಸ್ವಾತಂತ್ರ್ಯ ಹೋರಾಟದ ಮೂಲಕ ಮುಂಚೂಣಿಗೆ ಬಂದ ಮಹಿಳೆಯರನ್ನು ರಾಷ್ಟ್ರೀಯ ಹೋರಾಟದ ತರುವಾಯ ಅವರ ಅಗತ್ಯವಿಲ್ಲವೆಂದು ಭಾವಿಸಿ ಸಾರ್ವಜನಿಕ ಕ್ಷೇತ್ರದಿಂದ ಹಿಂದಕ್ಕೆ ತಳ್ಳಲಾಯಿತು. ಸಂವೈಧಾನಿಕ ಹಕ್ಕುಗಳನ್ನು ಅವರು ಪಡೆದುಕೊಂಡರೂ ಅವರ ಸ್ಥಾನ 'ಉದ್ಧಾರ ಮಾಡಬೇಕಾದ ಮಹಿಳೆಯ ಸ್ಥಾನವಾಗಿಯೇ ಉಳಿಯಿತು' . ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ಮೂಲಕ ಮಹಿಳೆಯರಿಗೆ ಸಮಾನ ಸ್ಥಾನಮಾನ ಕೊಡುವುದರ ಮೂಲಕ ಭಾರತ ದೇಶ ಪ್ರಗತಿಪರ ಹಾಗೂ ಆಧುನಿಕತೆಯ ಮುಖವಾಡ ತೊಟ್ಟಿತೇ ವಿನಾ ದಿನನಿತ್ಯದ ಸಾಮಾಜಿಕ, ಸಾಂಸ್ಕೃತಿಕ ಜೀವನದಲ್ಲಿ ಹಾಗೂ ಕಾನೂನಿನಲ್ಲಿ ಸ್ತ್ರೀ ಪುರುಷ ತಾರತಮ್ಯ ಉಳಿದುಕೊಂಡೇ ಬಂತು. ಇದಕ್ಕೆ ಕಾರಣ ಕಾನೂನಿನ ಉಪಬಂಧಗಳನ್ನು ಅನುಷ್ಠಾನಗೊಳಿಸಲು ಬಲಯುತವಾದ ಕಾರ್ಯತಂತ್ರವನ್ನು ಹೊಂದಿಲ್ಲದಿರುವುದು. ಹೀಗಾಗಿ ಸ್ವಾತಂತ್ರ್ಯ ಬಂದ ೫೦ ವರ್ಷಗಳ ನಂತರವೂ ಸಿದ್ಧಾಂತ ಹಾಗೂ ಆಚರಣೆಯಲ್ಲಿನ ಈ ಅಂತರ ಹಾಗೆಯೇ ಉಳಿದುಬಂದಿದೆ.

೬ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಯು ಅಭಿವೃದ್ಧಿಯ ಸಾಧನವಾಗಬಲ್ಲಳು ಎಂಬುದನ್ನು ಹಾಗೂ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಪುರುಷರಿಗೆ ಸಮಾನವಾಗಿ ಭಾಗವಹಿಸುವ ಸಾಮರ್ಥ್ಯವನ್ನು ಹೊಂದಿದ್ದಾಳೆಂಬುದನ್ನು ಗುರುತಿಸಲಾಯಿತು.

ರಾಜಕೀಯ ಪ್ರಕ್ರಿಯೆ ಎಂಬುದು ರಾಜಕೀಯ ಪಕ್ಷಗಳ ಅಥವಾ ಅಭ್ಯರ್ಥಿಗಳ ಪೈಕಿಯಿಂದ ತಮಗೆ ಬೇಕಾದವರನ್ನು ಆಯ್ದು ಅವರಿಗೆ ರಾಷ್ಟ್ರವನ್ನು ಆಳುವ ಅಧಿಕಾರ ನೀಡುವ ಅವಕಾಶವನ್ನು ನಾಗರಿಕರಿಗೆ ನೀಡುವ ಒಂದು ವ್ಯವಸ್ಥೆ. ಮಹಿಳೆಯು ಹಿಂದಿನಿಂದಲೂ ತನ್ನ ಸ್ಥಾನವನ್ನು ತಾಯಿಯಾಗಿ, ಪತ್ನಿಯಾಗಿ, ಗೃಹಕೃತ್ಯಗಳನ್ನು ನೋಡಿಕೊಳ್ಳುವ ಮತ್ತು ಸಹಾಯ ಹಸ್ತ ಬೇಡುವ ವ್ಯಕ್ತಿಯ ಸ್ಥಾನಕ್ಕೆ ಸೀಮಿತಗೊಳಿಸಿರುವುದರಿಂದ, ಅವಳು ತನಗಿರುವ ಅಭಿವೃದ್ಧಿಯ ಸೀಮಿತ ಅವಕಾಶಗಳನ್ನು ಮತ್ತು ಸಾರ್ವಜನಿಕ ಜೀವನದಲ್ಲಿ ಭಾಗವಹಿಸಲು ಸ್ಪರ್ಧಿಸುವ ಅವಕಾಶದ ಕೊರತೆಯನ್ನು ಪ್ರಶ್ನಿಸಲೇ ಇಲ್ಲ. ಆದರೆ ಈ ದೃಷ್ಟಿಕೋನ ೧೯೯೦ರಿಂದೀಚೆಗೆ ತೀವ್ರವಾಗಿ ಬದಲಾಯಿತು.

/ರಾಜಕೀಯದಲ್ಲಿ ಮಹಿಳೆಯ ಪಾತ್ರ ಬಹುಮಟ್ಟಿಗೆ ಮಹಿಳೆಯ ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಾನಮಾನವನ್ನು ಅವಲಂಬಿಸುತ್ತದೆ. ಮಹಿಳೆಯರ ಶಿಕ್ಷಣದ ಬಗೆಗಿನ ರಾಷ್ಟ್ರೀಯ ಸಮಿತಿ ೧೯೪೭ರಿಂದ ೧೯೫೭ರ ನಡುವಿನ ಅವಧಿಯಲ್ಲಿ ಮಹಿಳಾ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಸಮಾಧಾನಕರ ಪ್ರಗತಿ ಕಂಡುಬಂದಿಲ್ಲ ಎಂದು ತಿಳಿಸಿದೆ. ಈವತ್ತಿಗೂ ಪುರುಷರ ಹಾಗೂ ಮಹಿಳೆಯರ ಶಿಕ್ಷಣದ ನಡುವೆ ಅಗಾಧ ಅಂತರ ಇದೆ. ಶಾಲೆಯಲ್ಲಿನ ಪ್ರತಿ ೧೦೦ ಬಾಲಕರಿಗೆ ಪ್ರತಿಯಾಗಿ ಶಿಕ್ಷಣ ಪಡೆಯುವ ಬಾಲಕಿಯರ ಸಂಖ್ಯೆ ಕೇವಲ ೩೬. ಹೀಗಾಗಿ ಮಹಿಳಾ ಸಾಕ್ಷರತೆಯ ಪ್ರಮಾಣ ಕಡಿಮೆಯಾಗಿರುವುದರ ನೇರ ಪರಿಣಾಮವಾಗಿ ಮಹಿಳೆ ರಾಜಕೀಯ ಕ್ಷೇತ್ರದಿಂದ ದೂರ ಉಳಿದಿದ್ದಾಳೆ ಎನ್ನಬಹುದು. ಅನಕ್ಷರಸ್ಥ ಮಹಿಳೆಗೆ ರಾಜಕಾರಣ ಎಂದರೆ ಏನೆಂಬುದೇ ತಿಳಿದಿರುವುದಿಲ್ಲ. ಮತ ಚಲಾಯಿಸುವ ಹಕ್ಕುಗಳಾಗಲೀ, ನಾಗರಿಕಳಾಗಿ ಅವಳು ಹೊಂದಿರುವ ಹಕ್ಕುಗಳಾಗಲಿ ಅವಳಿಗೆ ತಿಳಿದಿರುವುದಿಲ್ಲ. ಸಾಮಾನ್ಯವಾಗಿ ತನ್ನ ಕುಟುಂಬದಲ್ಲಿ ಯಜಮಾನ ಹೇಳಿದ ಚಿಹ್ನೆಯ ಮುಂದೆ ಹೆಬ್ಬೆಟ್ಟು ಗುರುತು ಮಾಡುವ ಮೂಲಕ ದೇಶದ ರಾಜಕೀಯದಲ್ಲಿ ಭಾಗವಹಿಸುವ ಮಟ್ಟಿಗೆ ಅವಳ ಪಾತ್ರ ಸೀಮಿತವಾಗಿರುತ್ತದೆ. ಹೀಗಾಗಿ ತಮಗಿರುವ ಹಕ್ಕುಗಳ ಬಗ್ಗೆಯೇ ತಿಳಿವಿಲ್ಲದ ಮಹಿಳೆಯರ ರಾಜಕೀಯ ಪ್ರಜ್ಞೆಯ ಬಗ್ಗೆ ಚರ್ಚೆ ಮಾಡುವುದು ಅರ್ಥಹೀನ ಎನಿಸಿಬಿಡುತ್ತದೆ. ,

ರಾಜಕೀಯದಲ್ಲಿ ಮಹಿಳೆಯ ಭಾಗವಹಿಸುವಿಕೆ ಬೆಳೆದು ಬಂದ ಬಗೆಯನ್ನು ಗಮನಿಸಿದರೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಮೂರು ದಶಕಗಳ ಚರಿತ್ರೆಯಲ್ಲಿ ಮಹಿಳೆಯ ಭಾಗವಹಿಸುವಿಕೆ ತೀರಾ ಕಡಿಮೆ ಪ್ರಮಾಣದ್ದೆಂದು ಹೇಳಬಹುದು. ಕಾಂಗ್ರೆಸ್ಸಿನ ಅಂದಿನ ಅಧಿವೇಶನಗಳಲ್ಲಿ ಅವಳು ಭಾಗವಹಿಸಿದುದು ಅವರ ಗಂಡಂದಿರ ಸಹಾಯಕಿಯಾಗಿ ಅಂದರೆ ಅವರ ಆಹಾರ ಮತ್ತು ಅನುಕೂಲವನ್ನು ನೋಡಿಕೊಳ್ಳುವ ಸಹಾಯಕಿಯಾಗಿ ಎಂದೇ ಹೇಳಬಹುದು.

ಬಂಗಾಳ ವಿಭಜನೆಯ ವಿರುದ್ಧ ನಡೆದ ಚಳವಳಿ ಮತ್ತು ಸ್ವದೇಶ ಚಳವಳಿಗಳು ಭಾರತದ ವಿವಿಧ ಭಾಗಗಳಿಂದ ಮಹಿಳೆಯರನ್ನು ಆಕರ್ಷಿಸಿದವು. ಇದರ ಫಲವಾಗಿ ಮಹಿಳೆಯು ರಾಷ್ಟ್ರೀಯ ಚಳವಳಿಯಲ್ಲಿ ಕ್ರಿಯಾಶೀಲಳಾಗಿ ಪಾಲ್ಗೊಳ್ಳಲು ಆರಂಭಿಸಿದಳು. ಸತ್ಯಾಗ್ರಹ, ಚಳವಳಿಗಳಲ್ಲಿ, ಸಾರ್ವಜನಿಕ ಸಭೆಗಳ ಮೇಲಿರುವ ನಿಷೇಧವನ್ನು ಉಲ್ಲಂಘಿಸಿ ಕೈಗೊಂಡ ಮೆರವಣಿಗೆಗಳಲ್ಲಿ ಹಾಗೂ ಮದ್ಯದಂಗಡಿಗಳ ಮುಂದೆ ಮತ್ತು ವಿದೇಶಿ ಬಟ್ಟೆಗಳನ್ನು ಮಾರುವ ಅಂಗಡಿಗಳ ಮುಂದೆ ವಿರೋಧ ವ್ಯಕ್ತಪಡಿಸುವ ಸಭೆಗಳಲ್ಲಿ ಭಾಗವಹಿಸಿದಳು.

ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆ ಬಹುಮುಖ್ಯ ಪಾತ್ರವನ್ನು ವಹಿಸಿದ್ದಳು. ಎಲ್ಲಸ್ತರಗಳ ಮಹಿಳೆಯರೂ ಈ ಚಳವಳಿಯಲ್ಲಿ ಪಾಲ್ಗೊಂಡಿದ್ದರು. ದಂಡಿ ಸತ್ಯಾಗ್ರಹವನ್ನು ನೋಡಲೆಂದೇ ವಿಶೇಷವಾಗಿ ಆಗಮಿಸಿದ ಅಮೆರಿಕನ್ ಪತ್ರಕರ್ತನೊಬ್ಬ 'ಗಾಂಧಿ ಸ್ವಾತಂತ್ರ್ಯವನ್ನು ಪಡೆಯುತ್ತಾರೋ ಇಲ್ಲವೋ, ಆದರೆ ಮಹಿಳೆಯರನ್ನು ಗೃಹಬಂಧನದಿಂದ ಬಿಡಿಸಿ ರಾಷ್ಟ್ರೀಯ ಹೋರಾಟದಲ್ಲಿ ಪರಿಣಾಮಕಾರಿಯಾದ ಪಾತ್ರ ವಹಿಸುವಂತೆ ಮಾಡುವ ಅದ್ಭುತವನ್ನು ಸಾಧಿಸಿದ್ದಾರೆ' ಎಂದು ಅಭಿಪ್ರಾಯಪಟ್ಟಿದ್ದಾರೆ. ಸ್ವಾತಂತ್ರ ಚಳವಳಿ ಅದರಲ್ಲೂ ಗಾಂಧೀಜಿ ನೇತೃತ್ವದ ಅಹಿಂಸಾ ಚಳವಳಿ ಮಹಿಳೆಯರನ್ನು ಮುಂಚೂಣಿಗೆ ಬರುವಂತೆ ಮಾಡಿತು.

ಅಹಿಂಸಾ ಚಳವಳಿಯಲ್ಲಿ ಭಾಗವಹಿಸುವುದರ ಮೂಲಕ ಮಾತ್ರವಲ್ಲದೆ, ಟ್ರೇಡ್ ಯೂನಿಯನ್‌ಗಳನ್ನು ಸಂಘಟಿಸುವ ಮೂಲಕ ಮತ್ತು ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಡುವ ಮೂಲಕ ಮಹಿಳೆಯರು ನೇರವಾಗಿ ಚಳವಳಿಗಳಲ್ಲಿ ಭಾಗವಹಿಸಿದರು. ಡಾ.ಬಿ.ಆರ್.ಅಂಬೇಡ್ಕರ್ ಅವರು ಪ್ರಾರಂಭಿಸಿದ ದಲಿತರ ಸ್ವಾತಂತ್ರ್ಯ ಹೋರಾಟದಲ್ಲಿ ಸಹ ಪಾಲ್ಗೊಂಡರು. ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಜೈಲು ಸೇರಿದ ಉದಾಹರಣೆಗಳು ಅನೇಕವಿದೆ.

ಮೇಲೆ ಹೇಳಿದಂತಹ ಅನೌಪಚಾರಿಕ ರಾಜಕೀಯ ಪ್ರಕ್ರಿಯೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದುದರ ಫಲವಾಗಿ ಕೆಲವೇ ಮಂದಿ ಮಹಿಳೆಯರಾದರೂ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಔಪಚಾರಿಕ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಸಾಧ್ಯವಾಯಿತು.

ಸ್ವಾತಂತ್ರ್ಯ ಬಂದ ನಂತರ, ಭಾರತ ಸಂವಿಧಾನವು ಮಹಿಳೆಯರಿಗೆ ಪುರುಷರೊಂದಿಗೆ ಸಮಾನವಾಗಿ ಹಕ್ಕುಗಳನ್ನು ನೀಡುದುದರ ಜೊತೆಗೆ ೨೧ ವರ್ಷಗಳು ತುಂಬಿದ ಎಲ್ಲಾ ಪುರುಷರು ಹಾಗೂ ಮಹಿಳೆಯರಿಗೆ ಮತ ಚಲಾಯಿಸುವ ಹಕ್ಕುಗಳನ್ನು ನೀಡಿತು. ಭಾರತ ಸಂವಿಧಾನದಲ್ಲಿ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡಿದ್ದರೂ ಅವರು ಪೂರ್ಣ ಪ್ರಯೋಜನ ಪಡೆದುಕೊಂಡಿಲ್ಲವೆಂಬುದು ಲೋಕಸಭೆಯಲ್ಲಿ ಅವರ ಅತ್ಯಲ್ಪ ಪ್ರಮಾಣದ ಪ್ರಾತಿನಿಧ್ಯವನ್ನು ಕಂಡಾಗ ತಿಳಿದುಬರುತ್ತದೆ. ೧೯೫೨ರಲ್ಲಿ ನಡೆದ ಚುನಾವಣೆಗಳಲ್ಲಿ ಒಟ್ಟು ೪೯೯ ಸದಸ್ಯರ ಪೈಕಿ ಕೇವಲ ೨೨ ಮಹಿಳೆಯರು, ೧೯೫೭ರಲ್ಲಿ ೫೦೦ ಸದಸ್ಯರಿಗೆ ಕೇವಲ ೨೭ ಮಹಿಳೆಯರು ಇದ್ದರು. ಈ ಸಂಖ್ಯೆ ೧೯೬೨ರಲ್ಲಿ ೫೦೩ಕ್ಕೆ ಪ್ರತಿಯಾಗಿ ೩೪ ಮಹಿಳೆಯರು, ೧೯೬೭ರಲ್ಲಿ ೫೨೩ಕ್ಕೆ ಪ್ರತಿಯಾಗಿ ೩೧ ಮಹಿಳೆಯರು, ೧೯೭೧ರಲ್ಲಿ ೫೨೧ಕ್ಕೆ ಪ್ರತಿಯಾಗಿ ೨೨ ಮಹಿಳೆಯರು, ೧೯೭೭ರಲ್ಲಿ ೫೪೪ಸದಸ್ಯರಿಗೆ ೧೯ ಮಹಿಳೆಯರು, ೧೯೮೦ರ ಚುನಾವಣೆಗಳಲ್ಲಿ ೫೪೪ಸದಸ್ಯರ ಪೈಕಿ ೨೮ ಮಹಿಳೆಯರು, ೧೯೮೪ರಲ್ಲಿ ೫೪೪ ಸದಸ್ಯರ ಪೈಕಿ ೪೪ ಮಹಿಳೆಯರು, ೧೯೮೯ರಲ್ಲಿ ೫೨೯ ಸದಸ್ಯರಿಗೆ ೨೭ ಮಹಿಳೆಯರು ಇದ್ದುದು ಕಂಡುಬರುತ್ತದೆ. ೧೯೯೧ರ ಸಾರ್ವತ್ರಿಕ ಚುನಾವಣೆಗಳಲ್ಲಿ ೨೮ ಮಹಿಳೆಯರು ಲೋಕಸಭೆಗೆ ಚುನಾಯಿತರಾದರೆ ೫೮ ಸಚಿವರ ಪೈಕಿ ೬ ಮಂದಿ ಮಹಿಳೆಯರು ಇದ್ದು ಅವರಲ್ಲಿ ಒಬ್ಬರು ಕ್ಯಾಬಿನೆಟ್ ದರ್ಜೆಯ ಸಚಿವರಾಗಿದ್ದರು. ಮಹಿಳಾ ಪ್ರಾತಿನಿಧ್ಯದ ಸಂಖ್ಯೆ ಕಡಿಮೆಯಿದ್ದರೂ ಅತ್ಯಲ್ಪ ಅವಧಿಯಲ್ಲಿಯೇ ವರದಕ್ಷಿಣೆ ನಿಷೇಧ ವಿಧೇಯಕ, ಹಿಂದೂ ವಿವಾಹ ತಿದ್ದುಪಡಿ ವಿಧೇಯಕ, ಭಾರತೀಯ ಮಕ್ಕಳ ದತ್ತಕ ವಿಧೇಯಕ, ಅನೈತಿಕ ವ್ಯವಹಾರಗಳು

ಮತ್ತು ವ್ಯಭಿಚಾರದ ಮನೆಗಳ ನಿಯಂತ್ರಣ ವಿಧೇಯಕ ಮುಂತಾದ ಪ್ರಮುಖವಾದ ಖಾಸಗೀ ಸದಸ್ಯರ ವಿಧೇಯಕಗಳನ್ನು ಮಂಡಿಸಲಾಯಿತು. ಈ ವಿಧೇಯಕಗಳನ್ನು ಚರ್ಚಿಸಿ ಅವುಗಳಲ್ಲಿ ಕೆಲವಕ್ಕೆ ಅನುಮೋದನೆಯನ್ನು ನೀಡಲಾಯಿತು. ೩ನೇ ಲೋಕಸಭೆಯ ನಂತರ ಸ್ತ್ರೀ ಸಂಸದರು ವಹಿಸಿದ ಪಾತ್ರ ಗುಣಾತ್ಮಕವಾಗಿ ಬದಲಾಯಿತು. ಇದಕ್ಕೆ ಕಾರಣ ಇಂದಿರಾಗಾಂಧಿಯವರು ಭಾರತದ ಮೊದಲ ಪ್ರಧಾನ ಮಂತ್ರಿಯಾದುದು, ಇಷ್ಟಾಗಿಯೂ ಸಂಸತ್ತಿನಲ್ಲಿನ ಅವರ ಪ್ರಾತಿನಿಧ್ಯ ಶೇ.೧೦ ಮೀರಲಿಲ್ಲ.”[೧]

ಸಕ್ರಿಯ ರಾಜಕಾರಣದಲ್ಲಿ ಮಹಿಳೆ

ಭಾರತದ ರಾಜಕೀಯ ಇತಿಹಾಸದಲ್ಲಿ ಮಹಿಳೆ ತೀರಾ ನಗಣ್ಯಳೇನಲ್ಲ. ರಾಜ ಮಹಾರಾಜರ ಕಾಲದಲ್ಲಿ ನಂತರ ಸ್ವಾತಂತ್ರ್ಯ ಹೋರಾಟದ ಸಂದರ್ಭಗಳಲ್ಲಿ ಸಾವಿರಾರು ಮಹಿಳೆಯರು ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದಾರೆ. ನಿರ್ಣಾಯಕ ಪಾತ್ರ ವಹಿಸಿದ್ದಾರೆ. ಸ್ವಾತಂತ್ರ್ಯ ಹೋರಾಟದ ಜೊತೆಗೆ ಸ್ತ್ರೀ ಪುರುಷರಿಬ್ಬರಿಗೂ ಸಮಾನವಾದ ರಾಜಕೀಯ ಸ್ವಾತಂತ್ರ್ಯ ದೊರಕಬೇಕು ಎಂದು ಹೋರಾಡಿದ್ದಾರೆ. ಅದಕ್ಕೆ ಅಂದು ಸಮಾಜದ ಬೆಂಬಲವೂ ಇತ್ತು. ಆದರೆ ಚರಿತ್ರೆಯ ಪುಸ್ತಕಗಳು ಮಹಿಳೆಯರ ಬಗೆಗಿನ ಎಂದಿನ ಉದಾಸೀನತೆಯಿಂದ ಈ ಮಹಿಳೆಯರ ಕೊಡುಗೆಯನ್ನು ನಿರ್ಲಕ್ಷಿಸಿದೆ. ಸ್ವಾತಂತ್ರ್ಯಾನಂತರ ದೊರಕಿದ ಅಧಿಕಾರದ ಅವಕಾಶ ಬಾಚಿಕೊಳ್ಳುವ ಪೈಪೋಟಿಯಲ್ಲಿ ಪುರುಷ ವರ್ಗ ಮಹಿಳೆಯರನ್ನು ಹಿಂದಿಕ್ಕಿ ತಾನು ಮುನ್ನುಗ್ಗಿತು. ದೇಶದ ಸ್ವಾತಂತ್ರ್ಯದ ಜೊತೆಜೊತೆಗೆ ಸಮಾನತೆಗಾಗಿಯೂ ಹೋರಾಡುತ್ತಿದ್ದ ಮಹಿಳೆಯರು ಸ್ವಾತಂತ್ರ್ಯಾನಂತರ ಸಮಾನತೆಯ ಹೋರಾಟಕ್ಕೆ ಸೀಮಿತಗೊಂಡರು. ಮಹಾಪೂರದಂತೆ ಎದ್ದು ಬಂದಿದ್ದ ಮಹಿಳಾ ಶಕ್ತಿಯನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುವ ನಾಯಕತ್ವ ಹಾಗೂ ಅಖಂಡವಾದ ಹೋರಾಟಗಳು ಇಲ್ಲವಾಗಿದ್ದರಿಂದ ಮಹಿಳಾ ಚಳವಳಿ ಮೊನಚು ಕಳೆದುಕೊಂಡಿತು. ಆ ಮಹಾಪೂರ ಬರುಬರುತ್ತಾ ಇಳಿದುಹೋಯಿತು.

ಬದಲಾದ ಇಂದಿನ ಪರಿಸ್ಥಿತಿಯಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆ ಕಾಣುತ್ತಿದ್ದಾಳೆ. ದಾಪುಗಾಲು ಇಡುತ್ತಿದ್ದಾಳೆ. ಆದರೆ ನೀತಿ, ನಿರೂಪಣಾ ಸ್ಥಾನಗಳಲ್ಲಿ ಶಾಸನ ರೂಪಿಸುವ ಸಂಸ್ಥೆಗಳಲ್ಲಿ ಅವಳ ಅನುಪಸ್ಥಿತಿ ಎದ್ದು ಕಾಣುತ್ತಿದೆ. ಹಿಂದೊಮ್ಮೆ ಮಹಿಳೆಗೆ ಮೀಸಲಾತಿ ಬೇಡ, ಸಮಾನತೆ ಬೇಕು ಎಂದಿದ್ದ ಸಂಘಟನೆಗಳು ಇಂದು ರಾಜಕೀಯ ಮೀಸಲಾತಿಯು ಸಮಾನತೆಯ ಕಡೆಗೆ ಒಂದು ಹೆಜ್ಜೆ ಎಂದು ಪರಿಗಣಿಸಿದೆ. ಅಂತೆಯೇ ಸಮಾಜದ ಉದ್ದೇಶಪೂರ್ವಕ ಉದಾಸೀನತೆಗೆ, ನಿರ್ಲಕ್ಷ್ಯಕ್ಕೆ ಸೆಡ್ಡು ಹೊಡೆದ ಮಹಿಳೆಯರು ಪಂಚಾಯತ್ ಸಂಸ್ಥೆಗಳಲ್ಲಿ ಮೀಸಲಾತಿಯ ಮೂಲಕ ಮತ್ತೆ ರಾಜಕೀಯ ಪ್ರವೇಶ ಮಾಡಿದ್ದಾರೆ. ಚುನಾವಣೆಯಲ್ಲಿ ಆಯ್ಕೆಯಾಗಿ ಬಂದಿರುವ ಲಕ್ಷಾಂತರ ಮಹಿಳೆಯರು ದೇಶದ ಸಾಮಾಜಿಕ ಹಾಗೂ ರಾಜಕೀಯ ಇತಿಹಾಸಕ್ಕೆ ಹೊಸ ತಿರುವು ನೀಡುತ್ತಿದ್ದಾರೆ.

“ಮಹಿಳೆಯರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿದುದರ ಫಲವಾಗಿ ಸ್ವಾತಂತ್ರ್ಯಾನಂತರದ ರಾಜಕಾರಣದಲ್ಲಿ ಕೆಲ ಮಹಿಳೆಯರಿಗಾದರೂ ಗಣನೀಯ ಸ್ಥಾನ ದೊರೆಯಿತು. ಮಹಿಳೆಯರು ಪುರುಷರಿಗೆ ಸರಿಸಮರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳದಿದ್ದರೆ, ಆ ಹೋರಾಟದುದ್ದಕ್ಕೂ ಎದುರಾದ ಎಲ್ಲ ತೊಂದರೆಗಳನ್ನು ಎದುರಿಸಿ ವೈಯಕ್ತಿಕ ಜೀವನದ ಸುಖವನ್ನು ತ್ಯಾಗ

ಮಾಡಿರದಿದ್ದಿದ್ದರೆ ಮತ್ತು ಆ ನಂತರ ದೇಶದ ವಿಭಜನೆಯ ಸಮಯದ ಮಾತುಕತೆಗಳಲ್ಲಿ ತೊಡಗದಿದ್ದರೆ ಪುರುಷರು ಮಹಿಳೆಯರ ಬಗೆಗಿದ್ದ ತಮ್ಮ ಅಭಿಪ್ರಾಯಗಳನ್ನು ಬದಲಿಸಿಕೊಳ್ಳುತ್ತಿರಲಿಲ್ಲ ಹಾಗೂ ಮಹಿಳೆಯರು ಅಷ್ಟು ಸುಲಭವಾಗಿ ಮತದಾನದ ಹಕ್ಕನ್ನು ಪಡೆಯುತ್ತಿರಲಿಲ್ಲ. ಸ್ತ್ರೀ ವಿಮೋಚನೆಯ ಪರವಾಗಿ ಮೊದಲು ದನಿಯೆತ್ತಿದವರೇ ಪಾಶ್ಚಾತ್ಯ ಮಹಿಳೆಯರು. ಆದರೆ ಭಾರತೀಯ ಮಹಿಳೆಯರು ಮತದಾನದ ಹಕ್ಕನ್ನು ಪಡೆದ ನಂತರವೂ ಪಾಶ್ಚಾತ್ಯ ರಾಷ್ಟ್ರಗಳ ಮಹಿಳೆಯರು ಮತ ಚಲಾಯಿಸುವ ಹಕ್ಕಿಗಾಗಿ ಹೆಚ್ಚು ಕಾಲ ಹೋರಾಡಬೇಕಾಯಿತು ಎಂಬುದು ವಿಪರ್ಯಾಸವಾಗಿ ಕಾಣಬಹುದಾದರೂ ಚಾರಿತ್ರಿಕ ಸತ್ಯ. ಮಹಿಳೆಯರು ಪುರುಷರಿಗೆ ಸಮನಾಗಿ ಕೆಲಸ ಮಾಡಬೇಕು ಎಂಬುದೇ ಗಾಂಧಿ ಹಾಗೂ ನೆಹರೂ ಅವರ ಅಭಿಪ್ರಾಯವಾಗಿತ್ತು. ಮಹಿಳೆಯರು ಸ್ವಾತಂತ್ರ್ಯಾನಂತರದ ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವರ ಈ ನಿಲುವೇ ಕಾರಣವಾಯಿತು. ಈ ಹಿನ್ನೆಲೆಯಲ್ಲಿಯೇ ಸಂವಿಧಾನ ರಚನೆಯಲ್ಲಿಯೂ ಮಹಿಳೆ ಭಾಗವಹಿಸಲು ಸಾಧ್ಯವಾಯಿತು. ಮಹಿಳೆಗೆ ಪುರುಷರೊಡನೆ ಸಮಾನ ಸ್ಥಾನಮಾನ ಹಾಗೂ ಗೌರವವನ್ನು ಕಲ್ಪಿಸಿಕೊಡುವುದು ಇದರ ಉದ್ದೇಶವಾಗಿತ್ತು. ಭಾರತದ ಸಂವಿಧಾನ ಸಭೆಯನ್ನು ೧೯೪೬ರಲ್ಲಿ ರಚಿಸಲಾಯಿತು. ಅದರಲ್ಲಿ ೧೫ ಮಹಿಳೆಯರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಯಿತು. ಮದರಾಸಿನ ಅಮ್ಮು ಸ್ವಾಮಿನಾಥನ್, ದಾಕ್ಷಾಯಿಣಿ ವೇಲಾಯುಧನ್ ಮತ್ತು ದುರ್ಗಾಬಾಯಿ ದೇಶಮುಖ್, ಮುಂಬಯಿಯಿಂದ ಹಂಸ ಮೆಹ್ತ, ಒರಿಸ್ಸಾದಿಂದ ಮಾಲ್ತಿಚೌಧರಿ, ಉತ್ತರ ಪ್ರದೇಶದಿಂದ ಸುಚೇತಾ ಕೃಪಲಾನಿ, ವಿಜಯಲಕ್ಷ್ಮಿ ಪಂಡಿತ್, ಪೂರ್ಣಿಮಾ ಬ್ಯಾನರ್ಜಿ, ಕಮಲಾ ಚೌಧರಿ ಮತ್ತು ಬೇಗಂ ಐಜಾಜ್ ರಸೂಲ್, ಬಿಹಾರ್‌ನಿಂದ ಸರೋಜಿನಿ ನಾಯ್ಡು, ಪಂಜಾಬಿನಿಂದ ಬೇಗಂ ಜಹನಾರಾ ಷಾ ನವಾಜ್, ಬಂಗಾಳದಿಂದ ಲೈಲಾರಾಯ್ ಮತ್ತು ಬೇಗಂ ಇಕ್ರಾಮುಲ್ಲಾ ಇವರು ಆ ಮಹಿಳೆಯರು. ಭಾರತೀಯ ಮಹಿಳೆಯರು ತಮಗೆ ಮತದಾನದ ಹಕ್ಕನ್ನು ನೀಡಬೇಕೆಂದು ಒತ್ತಾಯಿಸಿದರು. ಸಂವಿಧಾನ ಇದನ್ನು ಸಂತೋಷದಿಂದ ನೀಡಿತು. ಇದರಿಂದಾಗಿ ಮಹಿಳೆಯರು ಪುರುಷರೊಂದಿಗೆ ಸಮಾನ ಹಕ್ಕನ್ನು ಪಡೆಯುವಂತಾಯಿತು. ಸಂವಿಧಾನದ ೩೨೬ನೇ ಅನುಚ್ಛೇದ ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕನ್ನು ನೀಡಿದೆ. (ಆದರೆ ಮಹಿಳಾ ವಿಮೋಚನೆ ಇದರಿಂದ ಸಾಧಿಸಿದಂತಾಯಿತು ಎಂದು ಹೇಳಲಾಗದು). ಫ್ರಾನ್ಸ್, ಯುಎಸ್‌ಎ ಅಥವಾ ಇಂಗ್ಲೆಂಡಿನಂತಹ ದೇಶಗಳಲ್ಲಿ ಮಹಿಳೆ ಉನ್ನತ ಪದವಿಗೇರುವ ಬಹು ಮುಂಚೆಯೆ ಭಾರತೀಯ ಮಹಿಳೆ ಉನ್ನತ ಪದವಿಗಳನ್ನಲಂಕರಿಸಿದ್ದಳು. ಉತ್ತರ ಪ್ರದೇಶದಲ್ಲಿ ಸುಚೇತಾ ಕೃಪಲಾನಿ ಮುಖ್ಯಮಂತ್ರಿಯಾಗಿದ್ದರೆ, ಲಕ್ಷ್ಮೀ ಮೆನನ್ ಮತ್ತು ವೈಯೋಲೆಟ್ ಆಳ್ವ ಸಂಸತ್ ಸದಸ್ಯೆಯರೂ, ಸರೋಜಿನಿ ನಾಯ್ಡು ರಾಜ್ಯಪಾಲರೂ ಆಗಿದ್ದರು. ವಿಜಯಲಕ್ಷ್ಮಿ ಪಂಡಿತ್ ಅವರು ಪ್ರಾವಿಂಶಿಯಲ್ ಸರಕಾರದಲ್ಲಿ ಸಚಿವೆಯಾಗಿ ಸೇವೆ ಸಲ್ಲಿಸಿದ ಪ್ರಪ್ರಥಮ ಮಹಿಳೆಯಾಗಿದ್ದರು. ಸ್ವಾತಂತ್ರ್ಯಾನಂತರ ಅವರು ಅಂತರರಾಷ್ಟ್ರೀಯ ಮಟ್ಟದ ರಾಜಕಾರಣಿಯಾಗಿ ಬೆಳೆದರು. ಅವರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಗೆ ಅಧ್ಯಕ್ಷರಾಗಿ ಚುನಾಯಿತರಾದ ಪ್ರಥಮ ಮಹಿಳೆ. ಮುಂದೆ ಅವರು ಯುಎಸ್‌ಎಸ್‌ಆರ್‌ಗೆ ಮತ್ತು ಯುಎಸ್‌ಎಗೆ ರಾಜತಾಂತ್ರಿಕ ಪ್ರತಿನಿಧಿಯಾಗಿ, ಲಂಡನ್ನಿಗೆ ಹೈಕಮೀಷನರ್ ಆಗಿ ತೆರಳಿದ್ದರು. ಯಾವೊಬ್ಬ ಮಹಿಳಾ ರಾಯಭಾರಿಯೂ ಇವರಿಗೆ ಸರಿಸಾಟಿಯಾಗಿ ಬೆಳೆಯಲಿಲ್ಲ ಎನ್ನಬಹುದು. ಈಗ ರಾಜ್ಯಗಳೆಂದು ಕರೆಯಲಾಗುವ

ಆಗಿನ ಪ್ರಾಂತ್ಯವಾದ ಉತ್ತರ ಪ್ರದೇಶ ಅತಿ ದೊಡ್ಡ ಪ್ರಾಂತ್ಯವಾಗಿತ್ತು. ಅಂತಹ ದೊಡ್ಡ ಹಾಗೂ ಸಮಸ್ಯಾತ್ಮಕವಾದ ಪ್ರಾಂತ್ಯವನ್ನು ಅತಿ ಯಶಸ್ವಿಯಾಗಿ ಆಳಿದ ಜೊತೆಯಲ್ಲಿಯೇ ಸಮಾಜಸೇವೆಯಲ್ಲಿ ಆಸಕ್ತಿಯನ್ನುಳುಸಿಕೊಂಡಂತಹ ಅಪರೂಪದ ರಾಜಕಾರಣಿ ಸುಚೇತಾ ಕೃಪಲಾನಿಯವರು.

ಸ್ವಾತಂತ್ರ್ಯ ಹಾಗೂ ವಿಭಜನೆ ಇವೆರಡೂ ಜಾತ್ಯತೀತ, ಪ್ರಜಾಸತ್ತಾತ್ಮಕ ಸಂವಿಧಾನವನ್ನು ರಚಿಸಲು ಅವಕಾಶ ಮಾಡಿಕೊಟ್ಟಿತು. ಇದರಿಂದಾಗಿ ಮಹಿಳೆಗೆ ಪುರುಷನೊಂದಿಗೆ ಸಮಾನ ಸ್ಥಾನಮಾನ ದೊರೆಯಿತು. ಆದರೆ ಪ್ರಗತಿಪರ ಮನೋಭಾವದ ಮಹಿಳೆಯರ ಸಂಖ್ಯೆ ತೀರಾ ಕಡಿಮೆಯಾಗಿತ್ತು. ಇದಕ್ಕೆ ಸಂಪ್ರದಾಯಬದ್ಧ ಸಾಮಾಜಿಕ ಆಚರಣೆಗಳು, ಮೂಢನಂಬಿಕೆಗಳು, ಅಜ್ಞಾನ, ತರ್ಕಬದ್ಧವಲ್ಲದ ನಂಬಿಕೆಗಳು, ಮಡಿವಂತಿಕೆ ಇವುಗಳು ಕಾರಣವಾಗಿದ್ದವು. ಮಾರ್ಗರೇಟ್ ಕಸಿನ್ಸ್, ಕಮಲಾದೇವಿ ಚಟ್ಟೋಪಾಧ್ಯಾಯ ಹಾಗೂ ದೂರದರ್ಶಿತ್ವವಿರುವ ಇತರ ಮಹಿಳೆಯರ ಸುಮಾರು ನಲವತ್ತು ವರ್ಷಗಳ ಶ್ರಮದಿಂದಾಗಿ ಮಹಿಳೆಯರಿಗೆ ಮತದಾನದ ಹಕ್ಕು ದೊರೆತಿತ್ತು.

ಭಾರತದಲ್ಲಿ ಮೊದಲ ಸಾರ್ವತ್ರಿಕ ಚುನಾವಣೆ ನಡೆದದ್ದು ೧೯೫೨ರಲ್ಲಿ. ಅನಕ್ಷರಸ್ಥ ಹಾಗೂ ಅಶಿಕ್ಷಿತ ಗ್ರಾಮೀಣ ಜನಸಂಖ್ಯೆಯೇ ಹೆಚ್ಚಿಸುವ ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಯಶಸ್ವಿಯಾಗಲಾರದು ಎಂದೇ ವಿದೇಶೀಯರು ಭಾವಿಸಿದ್ದರು. ಭಾರತದ ಜನತೆಗೆ ಸ್ವಾತಂತ್ರ್ಯ ಸಂಗ್ರಾಮದಿಂದ ಭಿನ್ನವಾದ ಜನ ಸಮೂಹದ ಭಾಗವಹಿಸುವಿಕೆ ಒಂದು ಹೊಸ ಅನುಭವ ನೀಡಿತು. ಸ್ತ್ರೀ ಪುರುಷರೆನ್ನದೇ ಎಲ್ಲರೂ ತಂಡತಂಡವಾಗಿ ಹೊರಟು ಮತ ಚಲಾಯಿಸಿದರು. ಪ್ರಜಾಪ್ರಭುತ್ವ, ಪ್ರತಿಯೊಬ್ಬನಲ್ಲೂ ತಾನು ಬಹುಮುಖ್ಯ ವ್ಯಕ್ತಿಯೆಂಬ ಭಾವನೆಯನ್ನು ಮೂಡಿಸಿತು. ಈ ಚುನಾವಣೆಯಲ್ಲಿ ಲೋಕಸಭೆಯ ೪೭ ಸ್ಥಾನಗಳ ಪೈಕಿ ೨೩ ಸ್ಥಾನಗಳಿಗೆ ಮಹಿಳೆಯರು ಚುನಾಯಿತರಾಗಿದ್ದರು. ರಾಜ್ಯ ವಿಧಾನಮಂಡಲಗಳಿಗೆ ಚುನಾಯಿತರಾದ ೩,೬೪೧ ಸದಸ್ಯರ ಪೈಕಿ ೯೮ ಮಂದಿ ಮಹಿಳೆಯರಾಗಿದ್ದರು. ಮೊದಲ ಚುನಾವಣೆಯಲ್ಲಿ ರಾಜಕುಮಾರಿ ಅಮೃತಕೌರ್ ಆರೋಗ್ಯ ಖಾತೆಯ ಕ್ಯಾಬಿನೆಟ್ ದರ್ಜೆಯ ಸಚಿವೆಯಾದರು. ಮರಕತಂ ಚಂದ್ರಶೇಖರ್ ಅವರು ಉಪಸಚಿವೆಯಾದರು.

ಮುಂದೆ, ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಗಳಲ್ಲೊಬ್ಬರಾಗಿ ಕಾರ್ಯನಿರ್ವಹಿಸಿದ ಲಕ್ಷ್ಮಿಮೆನನ್ ಅವರನ್ನು ಸಂಸತ್ತಿನ ಮೊದಲ ಐದು ವರ್ಷಗಳ ಅವಧಿಗೆ ಕಾರ್ಯದರ್ಶಿಯನ್ನಾಗಿ ಮಾಡಲಾಯಿತು. ಆನಂತರ ವಿದೇಶಿ ವ್ಯವಹಾರಗಳ ಸಚಿವರಾಗಿದ್ದ ಶ್ರೀ ಜವಹರಲಾಲ್ ನೆಹರೂ ಅವರ ಅಡಿಯಲ್ಲಿ ವಿದೇಶ ವ್ಯವಹಾರಗಳ ಉಪಸಚಿವೆಯಾಗಿ ೧೯೬೭ರವರೆಗೂ ಕೆಲಸ ನಿರ್ವಹಿಸಿದರು.

ಎರಡನೆಯ ಸಾರ್ವತ್ರಿಕ ಚುನಾವಣೆಯ ವೇಳೆಗೆ ಎಂದರೆ ೧೯೫೭ರ ವೇಳೆಗೆ ಹಳ್ಳಿಹಳ್ಳಿಯ ಮೂಲೆಮೂಲೆಗೂ ಚುನಾವಣೆಯಲ್ಲಿ ಆಸಕ್ತಿ ಹರಡಿತು. ರಾಜಕೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಸ್ಪರ್ಧೆಗೆ ಇಳಿಸುವಾಗ ಹೆಚ್ಚಿನ ಮುತುವರ್ಜಿ ವಹಿಸಲಾರಂಭಿಸಿದರು. ತಮ್ಮ ಅಭ್ಯರ್ಥಿಗಳು ಗೆಲ್ಲುವ ಸಂಭವದ ಬಗ್ಗೆ ಲೆಕ್ಕ ಹಾಕಲಾರಂಭಿಸಿದರು.

ಪ್ರಥಮ ಸಾರ್ವತ್ರಿಕ ಚುನಾವಣೆ ಸಂಸದೀಯ ತಂತ್ರಗಳ ಬಗ್ಗೆ ತರಬೇತಿ ಅಗತ್ಯವೆಂಬುದನ್ನು ತೋರಿಸಿಕೊಟ್ಟಿತು. ಆಗ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಮಹಿಳಾ ಘಟಕದ ನಾಯಕತ್ವ ವಹಿಸಿದ್ದ

ಶ್ರೀಮತಿ ಇಂದಿರಾಗಾಂಧಿ ಅವರು ಶಾಸಕರ ಸಮ್ಮೇಳನಗಳನ್ನು ಸಂಘಟಿಸಿದರು. ಸಂಸದೀಯ ಕಾರ್ಯವಿಧಾನದ ಬಗ್ಗೆ ಆಳವಾದ ಅನುಭವವುಳ್ಳ ಹಾಗೂ ಮಹಿಳೆಯರ ಸ್ಥಾನಮಾನದ ಬಗ್ಗೆ ವಿಶ್ವಸಂಸ್ಥೆಯಲ್ಲಿ ಭಾರತವನ್ನು ಪ್ರತಿನಿಧಿಸುತ್ತಿದ್ದ ಲಕ್ಷ್ಮಿ ಮೆನನ್ ಹಾಗೂ ಸುಚೇತಾ ಕೃಪಲಾನಿ ಅವರು ಈ ಸಮ್ಮೇಳನಗಳನ್ನು ಸಂಘಟಿಸಲು ನೆರವು ನೀಡಿದರು.[೨೨]

೧೯೭೧ರಲ್ಲಿ ಭಾರತದಲ್ಲಿ ಮಹಿಳೆಯ ಸ್ಥಾನಮಾನ ಕುರಿತು ಅಧ್ಯಯನ ಮಾಡಲು ರಚಿಸಲಾಗಿದ್ದ ಸಮಿತಿ ತನ್ನ ವರದಿಯನ್ನು ೧೯೭೫ರಲ್ಲಿ ಸಲ್ಲಿಸಿತು. ಈ ಸಮಿತಿ ತನಗೆ ವಹಿಸಿಕೊಟ್ಟ ಪರಿಶೀಲನಾಂಶಗಳ ಪ್ರಕಾರ ಭಾರತೀಯ ಮಹಿಳೆಯ ರಾಜಕೀಯ ಸ್ಥಾನಮಾನದ ಮೌಲ್ಯೀಕರಣವನ್ನು ಎರಡು ದೃಷ್ಟಿಗಳಿಂದ ಮಾಡಿತು. ಮೊದಲನೆಯದಾಗಿ ಮಹಿಳೆಯ ಸ್ಥಾನಮಾನದ ಮೇಲೆ ಸಂವೈಧಾನಿಕ ಉಪಬಂಧಗಳು ಬೀರಿರುವ ಪರಿಣಾಮಗಳು;ಎರಡನೆಯದಾಗಿ ರಾಷ್ಟ್ರ ನಿರ್ಮಾಣದಲ್ಲಿ ಮಹಿಳೆಯರು ಸಕ್ರಿಯ ಪಾತ್ರವಹಿಸುವಂತೆ ಅವರನ್ನು ಶಕ್ತರನ್ನಾಗಿಸಲು ಕೈಗೊಳ್ಳಬೇಕಾದ ಕ್ರಮಗಳು. ಹೀಗೆ ಮಾಡುವಾಗ ಮಹಿಳೆಯರ ರಾಜಕೀಯ ಯಶಸ್ಸನ್ನು ಮೂರು ದೃಷ್ಟಿಕೋನಗಳಿಂದ ಅಳೆಯುವ ಪ್ರಯತ್ನ ಮಾಡಲಾಗಿದೆ. ಮೊದಲನೆಯದಾಗಿ ಮತದಾರರಾಗಿ ಮತ್ತು ಅಭ್ಯರ್ಥಿಗಳಾಗಿ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದು, ಎರಡನೆಯದಾಗಿ ರಾಜಕೀಯ ಅರಿವು, ಬದ್ಧತೆ ಮತ್ತು ತಾದಾತ್ಮ್ಯ;ಮೂರನೆಯದಾಗಿ ರಾಜಕೀಯ ಪ್ರಕ್ರಿಯೆಯ ಮೇಲೆ ಅವುಗಳ ಪ್ರಭಾವ.

೧೯೫೦ರಲ್ಲಿ ಸಂವಿಧಾನವನ್ನು ಅಳವಡಿಸಿಕೊಂಡಂದಿನಿಂದಲೇ ಕಾನೂನು ರೀತ್ಯ ಮಹಿಳೆಯರಿಗೆ ಸಮಾನ ಸ್ಥಾನಮಾನವೇನೋ ದೊರೆಯಿತು. ಆದರೆ ಸಮಾಜದ ಧೋರಣೆ, ಅದರಲ್ಲೂ ಮುಖ್ಯವಾಗಿ ಪುರುಷರ ಧೋರಣೆ ಬದಲಾದ ಹೊರತು ಯಾವುದೇ ಕಾನೂನು ಅದರಷ್ಟಕ್ಕೆ ಪರಿಣಾಮಕಾರಿಯಾಗಲಾರದು ಎಂಬುದು ಅಂದಿನಿಂದ ಇಂದಿನವರೆಗೆ ಮಹಿಳೆಯ ಸ್ಥಿತಿಗತಿಯ ವಿಶ್ಲೇಷಣೆ ಮಾಡಿದಾಗ ತಿಳಿದುಬರುವ ಅಂಶ.

"ರಾಜಕೀಯ ಪ್ರಕ್ರಿಯೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಕುರಿತಂತೆ "ಭಾರತದಲ್ಲಿ ಮಹಿಳೆಯರ ಸ್ಥಾನಮಾನ ಸಮಿತಿ"ಯ ಕೆಲವು ಅಭಿಪ್ರಾಯಗಳನ್ನು ಇಲ್ಲಿ ಗಮನಿಸುವುದು ಅತ್ಯಂತ ಸೂಕ್ತವೆನಿಸುತ್ತದೆ. ಮತ ಚಲಾಯಿಸಿರುವ ಮಹಿಳೆಯರ ಸಂಖ್ಯೆಯಲ್ಲಿ ಏರಿಕೆಯಾಗಿರುವುದನ್ನು ಚುನಾವಣಾ ಅಂಕಿಅಂಶಗಳಿಂದ ಕಾಣಬಹುದು. ಈ ಸಂಖ್ಯೆ ೧೯೬೨ರಲ್ಲಿ ಶೇ. ೪೬.೬ ಇದ್ದು, ೧೯೬೭ರಲ್ಲಿ ಶೇ.೫೫.೪ಕ್ಕೆ ಏರಿತ್ತು ಮತ್ತು ಈ ಶೇಕಡವಾರು ಪ್ರಮಾಣ ೧೯೭೧ರಲ್ಲಿ ಶೇ.೪೯.೧ಕ್ಕೆ ಇಳಿಯಿತು. ಆದರೆ ಈ ಚುನಾವಣೆಯಲ್ಲಿ ಮತ ಚಲಾಯಿಸಿದ ಪುರುಷರ ಸಂಖ್ಯೆಯೂ ಇಳಿಮುಖವಾಗಿತ್ತು. ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳ ಸಂಖ್ಯೆಯ ನಡುವಿನ ವ್ಯತ್ಯಾಸ ತುಂಬಾ ಅಗಾಧವಾದುದು. ೧೯೭೧ರಲ್ಲಿ ಕೇವಲ ಶೇ.೧೭ರಷ್ಟು ಸ್ಥಾನಗಳಿಗೆ ಮಹಿಳಾ ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಒಟ್ಟು ಅಭ್ಯರ್ಥಿಗಳ ಸಂಖ್ಯೆಗೆ ಹೋಲಿಸಿದರೆ, ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಶೇ.೪ನ್ನು ಎಂದೂ ಮೀರಿಲ್ಲ. ಮತದಾರರ ಸಂಖ್ಯೆ ಕಡಿಮೆ ಇರುವಂತಹ ಉತ್ತರ ಪ್ರದೇಶ, ಬಿಹಾರ ಮತ್ತು ಮಧ್ಯಪ್ರದೇಶಗಳಲ್ಲಿಯೇ ಅತಿ ಹೆಚ್ಚಿನ ಅಭ್ಯರ್ಥಿಗಳು ಸ್ಪರ್ಧಿಸಿರುವುದು ಕುತೂಹಲಕಾರಿ ಅಂಶ. ಇದು ರಾಜಕೀಯದಲ್ಲಿ ಮಹಿಳಾ ಭಾಗವಹಿಸುವಿಕೆಯ ಪ್ರಮಾಣ ಮತ್ತು ಮಹಿಳಾ ಅಭ್ಯರ್ಥಿಗಳ ಆಯ್ಕೆಯ ನಡುವೆ ಯಾವುದೇ ಸಂಬಂಧವಿಲ್ಲ

ಎಂಬುದನ್ನು ಸೂಚಿಸುತ್ತದೆ. ಪಂಜಾಬ್ ನಗರ ಪ್ರದೇಶಗಳಲ್ಲಿ ಪುರುಷ ಮತದಾರರಿಗಿಂತ ಮಹಿಳಾ ಮತದಾರರೇ ಹೆಚ್ಚಿದ್ದರೂ, ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಅತಿ ಕಡಿಮೆ. ಕೇರಳ ಮತ್ತು ಮಹಾರಾಷ್ಟ್ರಗಳಲ್ಲಿ ರಾಜಕೀಯ ಭಾಗವಹಿಸುವಿಕೆಯ ಪ್ರಮಾಣ ಹೆಚ್ಚಿದ್ದರೂ ಈ ಕೆಲವು ವರ್ಷಗಳಲ್ಲಿ ಅಭ್ಯರ್ಥಿಗಳ ಸಂಖ್ಯೆಯಲ್ಲಿನ ಏರಿಕೆ ತೀರಾ ನಿಧಾನಗತಿಯದು. ಪಶ್ಚಿಮ ಬಂಗಾಳದಲ್ಲಿ ಅಭ್ಯರ್ಥಿಗಳ ಸಂಖ್ಯೆ ೧೯೭೧ರಲ್ಲಿ ಇದ್ದಕ್ಕಿದ್ದಂತೆ ಏರಿದೆ. ಆದರೆ ಬಹುಪಾಲು ರಾಜ್ಯಗಳಲ್ಲಿ ಅಭ್ಯರ್ಥಿಗಳ ಸಂಖ್ಯೆ ಹೆಚ್ಚಾಗಿಯೇ ಇಲ್ಲ. ಇಲ್ಲವೇ ಕಡಿಮೆಯಾಗಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಕರ್ನಾಟಕ ಹಿಂದುಳಿದ ರಾಜ್ಯವಲ್ಲದಿದ್ದರೂ ಇಲ್ಲಿಯೂ ಮೂರು ಸಾರ್ವತ್ರಿಕ ಚುನಾವಣೆಗಳಲ್ಲಿ ಒಬ್ಬಳೇ ಒಬ್ಬಳು ಮಹಿಳಾ ಅಭ್ಯರ್ಥಿಯನ್ನೂ ಚುನಾವಣೆಗೆ ನಿಲ್ಲಿಸಿಲ್ಲ. ಉಳಿದೆರಡರಲ್ಲಿ ಒಬ್ಬಳೇ ಒಬ್ಬಳು ಮಹಿಳಾ ಅಭ್ಯರ್ಥಿಯನ್ನು ನಿಲ್ಲಿಸಲಾಗಿದೆ. ಮಣಿಪುರ, ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ ಹಾಗೂ ಒರಿಸ್ಸಾದ ಮಹಿಳಾ ಅಭ್ಯರ್ಥಿಗಳನ್ನು ಚುನಾವಣೆಗಳಿಗೆ ನಿಲ್ಲಿಸದಿದ್ದುದಕ್ಕಾಗಿ ಮಹಿಳೆಯರು ರಾಜಕೀಯ ಪಕ್ಷಗಳನ್ನು ಕಟುವಾಗಿ ಟೀಕಿಸಿದ್ದಾರೆ. ಅಭ್ಯರ್ಥಿಗಳ ಸಂಖ್ಯೆ ಕಡಿಮೆಯಿರುವುದು ರಾಜಕೀಯ ಪಕ್ಷಗಳ ಅಲಕ್ಷ್ಯವನ್ನು ತೋರಿಸುತ್ತದೆಯೇ ವಿನಾ ಮಹಿಳೆಯರ ಆಶಯವನ್ನಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಚುನಾವಣೆಯ ಅಂಕಿ-ಅಂಶಗಳ ವಿಶ್ಲೇಷಣೆಯ ಜೊತೆಗೆ, ವಿವಿಧ ಮಹಿಳಾ ತಂಡಗಳೊಡನೆ ಚರ್ಚೆಗಳನ್ನು ನಡೆಸಿ ಕೆಲವು ಸಾಮಾನ್ಯ ಅಭಿಪ್ರಾಯಗಳನ್ನು ಸಮಿತಿ ವ್ಯಕ್ತಪಡಿಸಿದೆ.

೧. ಪ್ರತಿ ಚುನಾವಣೆಯಲ್ಲಿಯೂ ಹೆಚ್ಚುತ್ತಿರುವ ಮಹಿಳಾ ಮತದಾರರ ಸಂಖ್ಯೆ ಸಂವಿಧಾನ ತಮಗೆ ನೀಡಿರುವ ರಾಜಕೀಯ ಹಕ್ಕುಗಳ ಬಗೆಗೆ ಅವರಲ್ಲಿ ಹೆಚ್ಚಿನ ಅರಿವು ಮೂಡುತ್ತಿರುವುದನ್ನು ಸೂಚಿಸುತ್ತದೆ. ಮಹಿಳೆಯರನ್ನು ರಾಜಕೀಯದ ಮುಖ್ಯ ಪ್ರವಾಹದಲ್ಲಿ ತರಲು ಸಾಕ್ಷರತೆ ಮತ್ತು ಸಮೂಹ ಮಾಧ್ಯಮಗಳು ಸಹಾಯಕವಾಗಬಹುದು.

೨. ಹೊಸ ಮಹಿಳಾ ಅಭ್ಯರ್ಥಿಗಳು ರಾಜಕೀಯ ಪ್ರವೇಶಿಸುತ್ತಿರುವಂತೆಯೇ ಹಳಬರು ಸಕ್ರಿಯ ರಾಜಕೀಯದಿಂದ ದೂರ ಸರಿಯುತ್ತಿದ್ದಾರೆ. ದೀರ್ಘಕಾಲದ ರಾಜಕೀಯ ಹಿನ್ನೆಲೆಯಿರುವ ಕುಟುಂಬಗಳಿಂದ ಬಂದವರಾಗಿರುವಂತಹ ಇವರು ರಾಜಕೀಯದಿಂದ ಹೊರ ಹೋಗಿರುವುದನ್ನು ಅವರಿಗೆ ರಾಜಕೀಯ ಪ್ರಕ್ರಿಯೆಯಲ್ಲಿ ಸ್ವಲ್ಪಮಟ್ಟಿಗೆ ಭ್ರಮನಿರಸನವಾಗಿದೆ ಎಂಬುದನ್ನು ಸೂಚಿಸುತ್ತದೆ.

೩. ಮುಸಲ್ಮಾನರು ಹಾಗೂ ಗುಡ್ಡಗಾಡು ಜನಾಂಗಗಳ ಮಹಿಳೆಯರಲ್ಲಿ ಮತದಾರರಾಗಿ ಹಾಗೂ ಅಭ್ಯರ್ಥಿಗಳಾಗಿ ರಾಜಕೀಯದಲ್ಲಿ ಭಾಗವಹಿಸುವವರ ಪ್ರಮಾಣ ಸ್ವಲ್ಪ ಕಡಿಮೆ. ಆದರೆ ಇದಕ್ಕೆ ಅಪವಾದಗಳಿವೆ.

೪. ಬ್ರಾಹ್ಮಣೇತರ ಮಧ್ಯಮ ಹಾಗೂ ಪರಿಶಿಷ್ಟ ಜಾತಿಯ ಮಹಿಳೆಯರ ಪೈಕಿ ರಾಜಕೀಯದಲ್ಲಿ ಭಾಗವಹಿಸುವವರ ಪ್ರಮಾಣ ಹೆಚ್ಚಿದೆ. ವಿವಿಧ ರಾಜ್ಯಗಳ ಹಳ್ಳಿಗಳಲ್ಲಿ ಈ ಸಮುದಾಯಗಳಿಗೆ ಸೇರಿದ ಮಹಿಳೆಯರನ್ನು ಭೇಟಿ ಮಾಡಿದಾಗ ಅವರು ರಾಜಕೀಯದಲ್ಲಿ ಭಾಗವಹಿಸಲು ನಿರ್ಧರಿಸಿರುವುದು ತಿಳಿದುಬಂತು.

೫. ಗ್ರಾಮೀಣ ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸುವುದು ಕಡಿಮೆ ಎಂಬುದು ವ್ಯಾಪಕವಾದ ನಂಬಿಕೆಯಾದರೂ ವಾಸ್ತವದಲ್ಲಿ ಮತ ಚಲಾವಣೆಗೆ ಸಂಬಂಧಿಸಿದಂತೆ ಗ್ರಾಮೀಣ ಹಾಗೂ ನಗರ ಮಹಿಳಾ

ಮತದಾರರ ಪ್ರಮಾಣದಲ್ಲಿ ಇರುತ್ತಿದ್ದ ವ್ಯತ್ಯಾಸ ತಗ್ಗುತ್ತಿದೆ. ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸುವುದರ ಮೇಲೆ ನಗರೀಕರಣ ಯಾವುದೇ ಪರಿಣಾಮವನ್ನು ಬೀರಲಿಲ್ಲ ಎಂಬುದನ್ನು ನಮ್ಮ ತನಿಖೆ ಸೂಚಿಸುತ್ತದೆ. ಮನೆಯಲ್ಲಿ ನಿಬಾಯಿಸಬೇಕಾದ ಕರ್ತವ್ಯಗಳಿಂದಾಗಿ ತಾವು ರಾಜಕೀಯದಲ್ಲಿ ಭಾಗವಹಿಸಲಾಗುವುದಿಲ್ಲ ಎಂಬುದು ನಗರ ಮಹಿಳೆಯರ ಹೇಳಿಕೆ.

೬. ಮತದಾನದ ಹಕ್ಕು ತಮಗೆಂತಹ ಅಧಿಕಾರವನ್ನು ನೀಡಿದೆ ಎಂಬುದರ ಅರಿವು ಸಾಮಾನ್ಯವಾಗಿ ತಿಳಿದಿರುವುದಕ್ಕಿಂತ ವ್ಯಾಪಕವಾಗಿದೆ. ಮಧ್ಯಪ್ರದೇಶ, ಉತ್ತರ ಪ್ರದೇಶ, ತ್ರಿಪುರ ರಾಜ್ಯಗಳ ಹಳ್ಳಿಗಳಲ್ಲಿನ ಮುಸಲ್ಮಾನ, ಗುಡ್ಡಗಾಡು ಜನಾಂಗ ಹಾಗೂ ಪರಿಶಿಷ್ಟ ಜಾತಿಯ ಮಹಿಳೆಯರಿಂದ ಇದು ತಿಳಿದುಬಂದಿತು. ಅಲ್ಲದೆ ರಹಸ್ಯ ಮತಪತ್ರದ ಮಹತ್ವದ ಅರಿವೂ ಇವರಿಗಿದೆ ಮತ್ತು ಇದರಿಂದಾಗಿಯೇ ಮತ ಚಲಾಯಿಸುವಾಗ ಸ್ವತಂತ್ರ ನಿರ್ಧಾರವನ್ನು ಕೈಗೊಳ್ಳುವುದು ಸಾಧ್ಯ ಎಂಬುದೂ ತಿಳಿದಿದೆ.

೭. ರಾಜಕೀಯ ಪಕ್ಷಗಳು ಮಹಿಳೆಯರಿಗೆ ರಾಜಕೀಯ ಶಿಕ್ಷಣ ನೀಡುವುದನ್ನು ಮತ್ತು ರಾಜಕೀಯದ ಬಗ್ಗೆ ಆಸಕ್ತಿ ತಳೆಯುವಂತೆ ಮಾಡುವುದನ್ನು ಅಲಕ್ಷಿಸಿದೆ ಎಂಬ ಸಾಮಾನ್ಯ ಅಭಿಪ್ರಾಯವಿದೆ.

೮. ಮಹಿಳಾ ಅಭ್ಯರ್ಥಿಗಳಲ್ಲಿ ಬಹುಮಂದಿ ಶ್ರೀಮಂತ ಕುಟುಂಬದಿಂದ ಬರುತ್ತಾರೆ. ಇವರ ವಿದ್ಯಾಭ್ಯಾಸದ ಮಟ್ಟದಲ್ಲಿ ವ್ಯತ್ಯಾಸವಿದ್ದರೂ, ಬಹುಮಟ್ಟಿಗೆ ಎಲ್ಲರೂ ಶಿಕ್ಷಿತರು. ಅವರಲ್ಲಿ ಕೆಲವರು ರಾಜಕೀಯ ಕುಟುಂಬಗಳಿಂದ ಬಂದವರು. ಹೊಸಬರಲ್ಲಿ ಬಹುಮಂದಿ ಯಾವುದೇ ಹಿಂದಿನ ರಾಜಕೀಯ ಅನುಭವ ಇಲ್ಲದಿರುವವರು.

೯. ರಾಜಕೀಯದಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸದಂತೆ ತಡೆಯುವ ಅಂಶಗಳೆಂದರೆ ಚುನಾವಣೆಗೆ ತಗಲುವ ವೆಚ್ಚ ಹೆಚ್ಚುತ್ತಿರುವುದು. (ಮಹಿಳೆಯರಲ್ಲಿ ಬಹುಮಂದಿಗೆ ಯಾವುದೇ ಸ್ವತಂತ್ರ ಆದಾಯವಿಲ್ಲದಿರುವುದರಿಂದ ಇದು ಬಹುದೊಡ್ಡ ಸಮಸ್ಯೆ), ಹಿಂಸೆಯ ಭಯ; ಚಾರಿತ್ರ್ಯ ವಧೆ, ಕೊನೆಯ ಎರಡು ಕಾರಣಗಳು ಇತ್ತೀಚೆಗೆ ಹೆಚ್ಚಾಗಿರುವುದರಿಂದ ಮಹಿಳೆಯರು ಚುನಾವಣೆಗಳಲ್ಲಿ ಸ್ಪರ್ಧಿಸದಂತಾಗಿದೆ".

ಅಂಕಿಅಂಶಗಳಲ್ಲಿ ಈಗ ಸ್ವಲ್ಪ ಏರುಪೇರುಗಳಿದ್ದರೂ ಸಮಿತಿಯು ವ್ಯಕ್ತಪಡಿಸಿರುವ ಮೇಲಿನ ಅಭಿಪ್ರಾಯಗಳು ಇಂದಿಗೂ ಪ್ರಸ್ತುತವಾಗಿವೆ.

ರಾಜಕೀಯ ಪ್ರವೃತ್ತಿಗಳ ಬಗ್ಗೆ ಸಮಿತಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ.

ಮಹಿಳೆಯರ ರಾಜಕೀಯ ಅರಿವಿನ ಮಟ್ಟ ಪ್ರದೇಶದಿಂದ ಪ್ರದೇಶಕ್ಕೆ, ವರ್ಗದಿಂದ ವರ್ಗಕ್ಕೆ ಮತ್ತು ಸಮುದಾಯದಿಂದ ಸಮುದಾಯಕ್ಕೆ ವ್ಯತ್ಯಾಸಗೊಳ್ಳುತ್ತದೆ. ಇದು ಬಹುಮಟ್ಟಿಗೆ ಆಯಾ ಪ್ರದೇಶದ ರಾಜಕೀಯ ಪಕ್ಷಗಳು ಮಹಿಳೆಯರ ಬಗ್ಗೆ ತಳೆದ ನಿಲುವು ಮತ್ತು ಸ್ಥಳೀಯ ನಾಯಕತ್ವದ ಮಟ್ಟ ಇವುಗಳನ್ನು ಅವಲಂಬಿಸಿರುತ್ತದೆ. ಶಿಕ್ಷಣ, ನಗರೀಕರಣ ಮತ್ತು ಸಮೂಹ ಮಾಧ್ಯಮಗಳ ಪ್ರಭಾವ ಒಂದೇ ರೀತಿ ಇರುವುದಿಲ್ಲ ಎಂಬುದು ನಮಗೆ ತಿಳಿದುಬಂದಿತು. ಸಾಕ್ಷರತೆ ರಾಜಕೀಯ ಅರಿವು ಮತ್ತು ಭಾಗವಹಿಸುವಿಕೆಗಳೆರಡರ ಮೇಲೂ ನೇರವಾಗಿ ಪ್ರಭಾವ ಬೀರುತ್ತದೆ ಎಂದು ಕಂಡುಬರುತ್ತದೆ. ಆದರೆ ಶಿಕ್ಷಣ ರಾಜಕೀಯ ಭಾಗವಹಿಸುವಿಕೆಯ ಮೇಲೆ ನೇರ ಪ್ರಭಾವ ಬೀರುವುದಿಲ್ಲ. ನಗರ ಹಾಗೂ ಗ್ರಾಮೀಣ ಮಹಿಳೆಯರ

ರಾಜಕೀಯ ಅರಿವಿನ ಮಟ್ಟದಲ್ಲಿ ಅಂತಹ ಪ್ರಮುಖ ವ್ಯತ್ಯಾಸವೇನೂ ಇಲ್ಲ ಎಂಬ ಅಂಶ ಇದನ್ನು ದೃಢಪಡಿಸುತ್ತದೆ.

ಒಟ್ಟಾರೆಯಾಗಿ, ವೃತ್ತಿನಿರತ ಮಹಿಳೆಯರೂ ಸೇರಿದಂತೆ ಉದ್ಯೋಗಸ್ಥ ಮಹಿಳೆಯರಲ್ಲಿ ರಾಜಕೀಯ ಅರಿವು ಹೆಚ್ಚಿದ್ದರೂ ಭಾಗವಹಿಸುವಿಕೆ ಹೆಚ್ಚಾಗಿಲ್ಲ ಅಥವಾ ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಾನಮಾನ ಉತ್ತಮವಾಗಿದೆ ಎಂಬ ಮಾತ್ರಕ್ಕೆ ಅವರಿಗೆ ಹೆಚ್ಚಿನ ರಾಜಕೀಯ ಅರಿವು ಇದೆ ಎಂದೂ ಇಲ್ಲ. ಮಹಿಳಾ ಶಾಸಕರ ಪೈಕಿ, ಬಹುಮಂದಿ ಶ್ರೀಮಂತ ಕುಟುಂಬಗಳಿಂದ ಬಂದವರಾಗಿದ್ದರೂ, ಶ್ರೀಮಂತ ಕುಟುಂಬದ ಮಹಿಳೆಯರಿಗೆ ರಾಜಕೀಯ ಅರಿವು ಕಡಿಮೆಯೆಂಬುದು ನಮ್ಮ ಅಧ್ಯಯನದಿಂದ ತಿಳಿದುಬಂದಿದೆ. ಇದಕ್ಕೆ ಕಾರಣ ರಾಜಕೀಯದ ಬಗ್ಗೆ ಅವರಿಗಿರುವ ಅನಾಸಕ್ತಿ.

ಮತದಾನ ಮಾಡುವಾಗ ಗ್ರಾಮೀಣ ಮಹಿಳೆಯರ ಮೇಲೆ ಗ್ರಾಮ ಮುಖಂಡರ ಪ್ರಭಾವ ಗಾಢವಾಗಿದ್ದರೂ ಅವರ ಗಂಡಂದಿರ ಪ್ರಭಾವ ಬಹುಮಟ್ಟಿಗೆ ಕಡಿಮೆ. ಮಹಿಳಾ ಸಂಘಟನೆಗಳೂ ಸಹ ಮಹಿಳೆಯರಿಗೆ ರಾಜಕೀಯ ಶಿಕ್ಷಣ ನೀಡುವಲ್ಲಿ ವಿಫಲವಾಗಿದೆ.

ರಾಜಕೀಯದಲ್ಲಿರುವ ಭ್ರಷ್ಟಾಚಾರ ಮತ್ತು ಅದಕ್ಷತೆಯಿಂದಾಗಿ ಹಾಗೂ ತಮ್ಮ ದಿನನಿತ್ಯದ ಜೀವನದ ಸಮಸ್ಯೆಗಳೊಂದನ್ನೂ ರಾಜಕೀಯ ಪರಿಹರಿಸಿಲ್ಲ ಎಂದು ಮಹಿಳೆಯರು ಭಾವಿಸುವುದರಿಂದಾಗಿ ಮಹಿಳೆಯರಲ್ಲಿ ರಾಜಕೀಯ ಬಗ್ಗೆ ಮೋಹ ಉಳಿದಿಲ್ಲ ಎಂದು ಹೇಳಬಹುದು. ಒಂದು ಅಧ್ಯಯನದಲ್ಲಿ ಸಂದರ್ಶಿಸಿದ ಮಹಿಳೆಯರ ಪೈಕಿ ಶೇಕಡ ೪೨ರಷ್ಟು ಮಹಿಳೆಯರು ಸಾಮಾಜಿಕ ಪ್ರಗತಿಯಾಗಬೇಕಾದರೆ ಚುನಾವಣೆಯೆಂಬ 'ಆಚರಣೆ'ಗೆ ಬದಲಾಗಿ ಕ್ರಾಂತಿಯಾಗಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ವಿವಿಧ ರಾಜ್ಯಗಳಲ್ಲಿ ನಾವು ನಡೆಸಿದ ತನಿಖೆಯಿಂದ ಮಹಿಳೆಯರು ಎಲ್ಲಕ್ಕಿಂತ ಹೆಚ್ಚಾಗಿ ದಿನನಿತ್ಯದ ಸಮಸ್ಯೆಗಳ ಬಗ್ಗೆ ಹೆಚ್ಚು ವ್ಯಾಕುಲಗೊಂಡಿರುವುದು ಕಂಡುಬಂದಿದೆ. "ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಸಮಸ್ಯೆಗಳ ನಡುವೆ ಇದ್ದ ಐಕ್ಯತೆಯೇ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಅದರಲ್ಲಿ ಭಾಗವಹಿಸುವುದಕ್ಕೆ ಕಾರಣವಾಯಿತು. ಸ್ವಾತಂತ್ರ್ಯಾನಂತರ ಅಂತಹ ಚಳವಳಿ ಇಲ್ಲದಿರುವುದು ಹಾಗೂ, ತಮಗೆ ನೇರವಾಗಿ ಸಂಬಂಧಿಸಿದ ಸಾಮಾಜಿಕ ಸಮಸ್ಯೆಗಳು ಮತ್ತು ರಾಜಕೀಯ ಪ್ರಕ್ರಿಯೆ ನಡುವೆ ಸಂಬಂಧ ಇಲ್ಲದಿರುವುದು ಇತ್ತೀಚಿನ ವರ್ಷಗಳಲ್ಲಿ ಮಹಿಳೆ ರಾಜಕೀಯದಲ್ಲಿ ಕಡಿಮೆ ಪ್ರಮಾಣದಲ್ಲಿ ಭಾಗವಹಿಸುವುದಕ್ಕೆ ಕಾರಣವಾಗಿದೆ"

ರಾಜಕೀಯ ಪ್ರಕ್ರಿಯೆಗಳ ಮೇಲೆ ಮಹಿಳೆಯರ ಪ್ರಭಾವದ ಬಗ್ಗೆ ಸಮಿತಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಈ ಮುಂದಿನಂತಿವೆ:

"ಮಹಿಳೆಯರ ಭಾಗವಹಿಸುವಿಕೆಯ ಪ್ರಮಾಣವನ್ನು ಚುನಾವಣೆಯಲ್ಲಿ ಗೆದ್ದ ಮಹಿಳೆಯರ ದಾಖಲೆಯಿಂದ ನಿರ್ಧರಿಸಲಾಗುವುದಿಲ್ಲ. ಲೋಕಸಭೆಗೆ ಗೆದ್ದು ಯಶಸ್ವಿಯಾದ ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಮತ್ತು ಶೇಕಡವಾರು ಪ್ರಮಾಣ ೧೯೬೨ರಲ್ಲಿದ್ದ ೩೩(೬೦.೬) ರಿಂದ ೧೯೭೧ರಲ್ಲಿ ೨೧ (೨೫.೯) ಕ್ಕೆ ಏಕಪ್ರಕಾರವಾಗಿ ಇಳಿದಿದೆ. ೧೯೭೧ರಲ್ಲಿ ಅದರ ಈ ತೀವ್ರ ಇಳಿತಕ್ಕೆ ಕಾರಣ ಸೋಲನ್ನನುಭವಿಸಿದ ಮಹಿಳೆಯರ

ಪೈಕಿ ಬಹುಮಂದಿ ಸ್ವತಂತ್ರ ಅಭ್ಯರ್ಥಿಗಳು ಮತ್ತು ೧೯೭೧ರಲ್ಲಿ ಚುನಾವಣೆಗೆ ಸ್ವತಂತ್ರವಾಗಿ ಸ್ಪರ್ಧಿಸಿದ್ದ ಮಹಿಳೆಯರ ಸಂಖ್ಯೆ ಹೆಚ್ಚಾಗಿತ್ತು. ಇದಕ್ಕೆ ಕಾರಣ ಪಕ್ಷಗಳು ತಮ್ಮ ಪಕ್ಷದಿಂದ ಸಾಕಷ್ಟು ಮಹಿಳಾ ಅಭ್ಯರ್ಥಿಗಳನ್ನು ಚುನಾವಣೆಗೆ ನಿಲ್ಲಿಸದೇ ಇದ್ದುದು. ಮಹಿಳಾ ಅಭ್ಯರ್ಥಿಗಳ ಯಶಸ್ಸು ಅವರಿಗಿರುವ ಪಕ್ಷದ ಬೆಂಬಲ, ಅಳವಡಿಸಿಕೊಂಡ ಪ್ರಚಾರ ತಂತ್ರಗಳು ಮತ್ತು ಅಭ್ಯರ್ಥಿಗಳ ಕುಟುಂಬದ ಹಿನ್ನೆಲೆಯ ಜೊತೆಗೆ ಅವರ ವ್ಯಕ್ತಿತ್ವವನ್ನು ಅವಲಂಬಿಸಿರುತ್ತದೆ. ೧೯೫೨ರಿಂದ ಭಾರತದ ಸಂಸತ್ತಿನಲ್ಲಿ ೨೧೨ ಮಂದಿ ಮಹಿಳೆಯರು ಸೇವೆ ಸಲ್ಲಿಸಿದ್ದಾರೆ. ಅವರಲ್ಲಿ ೨೧೯ ಮಂದಿ ಲೋಕಸಭೆಗೆ ಮತ್ತು ೮೩ ಮಂದಿ ರಾಜ್ಯಸಭೆಗೆ ಆಯ್ಕೆಯಾದವರು. ರಾಜ್ಯ ವಿಧಾನ ಸಭೆಗಳಿಗೆ ಸಂಬಂಧಿಸಿದಂತೆ ಯಶಸ್ವಿ ಅಭ್ಯರ್ಥಿಗಳ ಪ್ರಮಾಣ ಕಡಿಮೆಯಾಗಿದೆ, ಇಲ್ಲವೆ ಸ್ಥಗಿತಗೊಂಡಿದೆ"

ರಾಜಕೀಯ ಪ್ರಕ್ರಿಯೆಗಳ ಮೇಲೆ ಪ್ರಭಾವ ಬೀರಲು ಇಂದಿನ ಮಹಿಳೆಯರು ವಿಫಲರಾಗಿರುವುದಕ್ಕೆ ಕಾರಣಗಳನ್ನು ಸಮಿತಿ ವಿಶ್ಲೇಷಿಸಿದೆ:

"ಸ್ವಾತಂತ್ರ್ಯಾನಂತರದ ನಿಕಟೋತ್ತರ ಅವಧಿಯಲ್ಲಿ ಬಂದ ಮಹಿಳಾ ಮುಖಂಡರಲ್ಲಿ ಬಹುಮಂದಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಅನುಭವವಿದ್ದವರು. ಇವರೆಲ್ಲ ಮಹಿಳೆಯರ ಕಲ್ಯಾಣ ಮತ್ತು ಅಭಿವೃದ್ಧಿಗಾಗಿ ನಡೆದ ಚಳವಳಿಯಲ್ಲಿ ಕೆಲಸ ಮಾಡಿದವರು. ಪ್ರಾತಿನಿಧಿಕ ಸಭೆಗಳಲ್ಲಿ ಮಹಿಳೆಯರ ಪರ ವಕ್ತಾರರಾಗಿದ್ದವರು ಮತ್ತು ಸ್ವಾತಂತ್ರ್ಯದ ನಂತರದ ಮೊದಲ ಕೆಲವು ವರ್ಷಗಳಲ್ಲಿ ಮಹಿಳೆಯರ ಕಾನೂನು ಸ್ಥಾನಮಾನವನ್ನು ಬದಲಾಯಿಸಿ ಸಾಮಾಜಿಕ ಶಾಸನ ರಚನೆಯನ್ನು ಬೆಂಬಲಿಸುವ ಬಗ್ಗೆ ಜನತೆಯ ಅಭಿಪ್ರಾಯ ರೂಪಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸಿದ್ದವರು. ಆ ಸಮಯದಲ್ಲಿ ಸರ್ಕಾರ ಕೈಗೊಂಡ ಮಹಿಳಾ ಅಭಿವೃದ್ಧಿಯ ನೀತಿ ಹಾಗೂ ಕಾರ್ಯಕ್ರಮಗಳನ್ನು ರೂಪಿಸಲು ಅವರಲ್ಲಿ ಕೆಲವರು ನೆರವಾಗಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಷ್ಟ್ರೀಯ ನಾಯಕರಾಗಿ ರೂಪುಗೊಂಡಿದ್ದ ಮುಂದಾಳುಗಳಲ್ಲಿ ಅನೇಕರು ಕೇಂದ್ರ ಸರ್ಕಾರದ ಇಲ್ಲವೆ ಸಂಸತ್ತಿನ ಸದಸ್ಯರಾಗಿದ್ದರು. ಆದರೆ ರಾಜ್ಯಗಳಲ್ಲಿ ಹೊಸ ಪೀಳಿಗೆ ರಾಜಕೀಯವನ್ನು ಪ್ರವೇಶಿಸಿತು. ಸ್ಥಳೀಯ ನಿಕಾಯಗಳ ಸ್ಥಾನಗಳಿಗೆ ಸ್ಪರ್ಧಿಸುವ ಮಹಿಳಾ ಅಭ್ಯರ್ಥಿಗಳಿಗೆ ಅವರ ಸಾಮಾಜಿಕ ಸೇವೆಯನ್ನು ಇಂದಿಗೂ ಒಂದು ಅರ್ಹತೆಯನ್ನಾಗಿ ಪರಿಗಣಿಸಲಾಗುತ್ತದೆ. ಆದರೆ ವಿಧಾನಸಭೆಯ ಸ್ಥಾನಗಳಿಗಲ್ಲ ಎಂಬುದನ್ನು ನಮ್ಮ ಅಧ್ಯಯನ ತೋರಿಸಿಕೊಟ್ಟಿದೆ. ರಾಜ್ಯಮಟ್ಟದ ರಾಜಕಾರಣದಲ್ಲಿ ಸದ್ಯದಲ್ಲಿರುವ ಸಾಮಾಜಿಕ ವ್ಯತ್ಯಾಸಗಳು ಪ್ರತಿಬಿಂಬಿತವಾಗುವುದು ಅಪರೂಪವಾಗಿದೆ ಎಂದು ರಾಜಕೀಯ ಕಾರ್ಯಕರ್ತರು ತಿಳಿಸಿದ್ದಾರೆ. ರಾಜ್ಯದ ರಾಜಕಾರಣದಲ್ಲಿ ತೊಡಗಿರುವ ಮಹಿಳೆಯರು ಸಾಮಾನ್ಯವಾಗಿ ಆರ್ಥಿಕವಾಗಿ ಸುಸ್ಥಿತಿಯಲ್ಲಿರುವ ಮತ್ತು ರಾಜಕೀಯವಾಗಿ ಗಣ್ಯರೆನಿಸಿಕೊಂಡ ಕುಟುಂಬಗಳಿಂದ ಬಂದವರಾಗಿರುತ್ತಾರೆ ಮತ್ತು ಜನತೆಯ ಸೇವೆ ಮಾಡಿದರೆಂಬುದಕ್ಕಿಂತ ಹೆಚ್ಚಾಗಿ ಪಕ್ಷದ ಬೆಂಬಲದಿಂದ ಪ್ರಾತಿನಿಧಿಕ ಪ್ರಕ್ರಿಯೆಯಲ್ಲಿ ಸೇರಿಕೊಂಡವರಾಗಿರುತ್ತಾರೆ.

ಪಕ್ಷದ ಕಾರ್ಯಕರ್ತರಲ್ಲಿಯೂ ಮಹಿಳೆಯರ ಸಂಖ್ಯೆ ಕಡಿಮೆ. ವಿಧಾನಮಂಡಲಕ್ಕೆ (ಶಾಸನ ಸಭೆಗೆ) ಅವರು ಚುನಾಯಿತರಾದಾಗ ಅವರು ಮಹಿಳೆಯರಿಗಾಗಿ ಯಾವುದೇ ವಿಶೇಷ ಜವಾಬ್ದಾರಿಯನ್ನು ತೆಗೆದುಕೊಳ್ಳದೆ

ಜನತೆಯ ಪ್ರತಿನಿಧಿಯಾಗಿ ತಮ್ಮ ಪಾತ್ರ ವಹಿಸಲು ಮುಂದಾಗುತ್ತಾರೆ. ಮುಂಚಿನ ವರ್ಷಗಳಲ್ಲಿ ಸದಸ್ಯರು ಮಹಿಳೆಯರ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನಕ್ಕೆ ಪಕ್ಷ ಭೇದ ಮರೆತು ದನಿಗೂಡಿಸುತ್ತಿದ್ದರು. ಆದರೆ ಇತ್ತೀಚಿನ ವರ್ಷಗಳಲ್ಲಿ ಮಹಿಳಾ ಶಾಸಕರು, ವಿಶೇಷವಾಗಿ ಮಹಿಳೆಯರ ಸಮಸ್ಯೆಗಳ ಬಗ್ಗೆ ಕಾಳಜಿ ಅಥವಾ ಆಸಕ್ತಿ ತೋರುತ್ತಿಲ್ಲ. ಸಕ್ರಿಯ ರಾಜಕಾರಣದಿಂದ ಹೊರಗಿರುವ ಅನೇಕ ಮಹಿಳೆಯರು ಈ ಟೀಕೆಯನ್ನು ಮಾಡಿದ್ದಾರೆ. ಶಾಸನ ಸಭೆಗಳಲ್ಲಿ ನಡೆಯುವ ಸಹ ಸಂವಾದಗಳಾಗಲೀ, ಚರ್ಚೆಗಳಾಗಲೀ ಮಹಿಳಾ ಸಮಸ್ಯೆಗಳಿಗೆ ಗಮನಕೊಟ್ಟಿರುವುದು ಬಹು ಕಡಿಮೆ." [೩]

೧. ಗೀತಾ ಕೃಷ್ಣಮೂರ್ತಿ, ಮಹಿಳೆ ಕಾನೂನು ಮತ್ತು ರಾಜಕಾರಣ, ಪ್ರಸಾರಾಂಗ ಪ್ರಕಾಶನ, ಕನ್ನಡ ವಿ.ವಿ ಹಂಪಿ, ೨001. ಪು.ಸಂ. 190 ರಿಂದ 199

೨. ಗೀತಾ ಕೃಷ್ಣಮೂರ್ತಿ, ಮಹಿಳೆ ಕಾನೂನು ಮತ್ತು ರಾಜಕಾರಣ, ಪ್ರಸಾರಾಂಗ ಪ್ರಕಾಶನ, ಕನ್ನಡ ವಿ.ವಿ ಹಂಪಿ, ೨001 ಪು.ಸಂ. ೨30 ರಿಂದ ೨31

೩. ಗೀತಾ ಕೃಷ್ಣಮೂರ್ತಿ, ಮಹಿಳೆ ಕಾನೂನು ಮತ್ತು ರಾಜಕಾರಣ, ಪ್ರಸಾರಾಂಗ ಪ್ರಕಾಶನ, ಕನ್ನಡ ವಿ.ವಿ ಹಂಪಿ, ೨001 ಪು.ಸಂ. ೨30 ರಿಂದ ೨38

ಅಧ್ಯಾಯ ೩

ರಾಜಕೀಯದಲ್ಲಿ ಮಹಿಳಾ ಮೀಸಲಾತಿ

೩

ರಾಜಕೀಯದಲ್ಲಿ ಮಹಿಳಾ ಮೀಸಲಾತಿ

ಇಂದು ಭಾರತದ ರಾಜಕೀಯ ಭೂಪಟದಲ್ಲಿ ಮಹಿಳೆಯರು ಮುಖ್ಯಮಂತ್ರಿ, ಸಂಪುಟ ಮಂತ್ರಿ, ರಾಷ್ಟ್ರಪತಿ ಮತ್ತು ರಾಜ್ಯಪಾಲರಾಗಿ ಅಧಿಕಾರದ ಅನುಭವ ಪಡೆದಿದ್ದಾರೆ. ಆದರೆ ಜನಸಾಮಾನ್ಯ ಮಹಿಳೆಗೆ ರಾಜಕೀಯ ಪ್ರವೇಶ ಅಷ್ಟೊಂದು ಸುಲಭವಿದೆಯೇ? ಪಂಚಾಯತ್ ರಾಜ್ ಚುನಾವಣೆಗಳಲ್ಲಿ ದೊರಕಿದ ಮೂರನೇ ಒಂದು ಸ್ಥಾನದ ಮೀಸಲಾತಿಯಿಂದಾಗಿ ಅಪಾರ ಸಂಖ್ಯೆಯ ಮಹಿಳೆಯರು ಅಧಿಕಾರದ ಚುಕ್ಕಾಣಿ ಹಿಡಿದಿದ್ದನ್ನು ಹಲವಾರು ರಾಜ್ಯಗಳಲ್ಲಿ ನಾವು ಕಾಣುತ್ತೇವೆ. ಅಧಿಕಾರ ಪಡೆಯುವಲ್ಲಿ ಮಹಿಳೆಯರು ಭಾಗವಹಿಸುವ ಪ್ರಕ್ರಿಯೆಗೆ ಸಿಕ್ಕ ಚಾಲನೆಯಾಗಿ ಇದು ಮಹತ್ವದ ಘಟನೆಯೇನೋ ಹೌದು. ಪಂಚಾಯ್ತಿ ರಾಜ್ಯ ವ್ಯವಸ್ಥೆಯಲ್ಲಿ ಮಹಿಳೆಯ ಮೀಸಲಾತಿ ಬಗ್ಗೆ ಇಂತಹ ನಿರ್ಧಾರ ತೆಗೆದುಕೊಳ್ಳಲು ಆಧಾರವಾದ ತತ್ವದ ಧ್ಯೇಯೋದ್ದೇಶ ಎಲ್ಲರೂ ಒಪ್ಪಬೇಕಾದಂತಹುದು. ಇದರಿಂದ ಆಡಳಿತದ ಎಲ್ಲ ಸ್ತರಗಳಲ್ಲಿ ವಿಶೇಷವಾದ ಸ್ತ್ರೀ ಕೇಂದ್ರಿತ ತಿಳುವಳಿಕೆಯ ಅಗತ್ಯತೆಯ ವಾಸ್ತವಾಂಶವನ್ನು ಒಪ್ಪಬೇಕಾದ ಮನೋನಿರ್ಣಯವನ್ನು ಮಾಡಲಾಗಿದೆ. ಈವರೆಗೆ ಮಹಿಳೆಯರ ಮೂಲಭೂತ ಅವಶ್ಯಕತೆಗಳಿಗೆ ಮತ್ತು ಕಾಳಜಿಗಳಿಗೆ ಹೆಚ್ಚಿನ ಗಮನ ನೀಡಿಲ್ಲದ್ದರ ಕೊರತೆಯನ್ನು ತುಂಬುವ ಪ್ರಯತ್ನವೂ ಇದಾಗಿದೆ.

ರಾಜಕೀಯ ಪಕ್ಷಗಳೆಲ್ಲಾ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಮಹಿಳಾ ಮೀಸಲಾತಿಯನ್ನು ಒಂದು ಆಶ್ವಾಸನೆಯನ್ನಾಗಿ ಹಾಕಿಕೊಂಡಿದ್ದರೂ ಅದು ಹುಸಿ ಆಶ್ವಾಸನೆಯಾಗಿಯೇ ಉಳಿಯಿತು. ಎಡ ಪಕ್ಷಗಳನ್ನು ಹೊರತುಪಡಿಸಿ ಬೇರೆಲ್ಲಾ ರಾಜಕೀಯ ಪಕ್ಷಗಳು ಈ ಸಂವಿಧಾನದ ತಿದ್ದುಪಡಿಗೆ ಹಿಂದೇಟು ಹಾಕುತ್ತಿದೆ. ಇದನ್ನು ಕುರಿತು ನಡೆಯುತ್ತಿರುವ ಚರ್ಚೆಯಲ್ಲಿ ಕೆಲವು ರಾಜಕೀಯ ಧುರೀಣರು ವ್ಯಕ್ತಪಡಿಸುತ್ತಿರುವ ಅಭಿಪ್ರಾಯಗಳಂತೂ ನಾಚಿಕೆಗೇಡಿನದಾಗಿದೆ ಮತ್ತು ನಮ್ಮ ಸಂಸ್ಕೃತಿಯ ಭಯಂಕರ ಸತ್ಯಗಳನ್ನು ಬಯಲು ಮಾಡುತ್ತಿವೆ. ಇತ್ತೀಚೆಗೆ ಚುನಾಯಿತರಾದ ಮತ್ತು ಅಧಿಕಾರದ ರುಚಿ ಕಂಡ ಮಹಿಳೆಯರು ತಮಗೆ ದೊರಕಿದ ಅವಕಾಶಕ್ಕೆ ತಮ್ಮ ಮನೆಯವರ ಬೆಂಬಲ, ಸಹಕಾರವೇ ಕಾರಣವಾದ್ದರಿಂದ ರಾಜಕೀಯ ಸಭೆ, ಕಲಾಪಗಳಲ್ಲಿ ಅವರೂ ಭಾಗವಹಿಸಲು ಅವಕಾಶವಿರಬೇಕು ಎಂದಿರುವುದು ತೀರಾ ಅವಹೇಳನಕಾರಿಯಷ್ಟೇ ಅಲ್ಲ, ಮೀಸಲಾತಿಯ ಮೂಲಸತ್ವವನ್ನೇ ಅಣಕು ಮಾಡುವಂತಿದೆ. ಮಹಿಳಾ ಮೀಸಲಾತಿಯ ಲಾಭ ಪಡೆದು ತಮ್ಮ ಹೆಂಡತಿ, ಮಗಳ ಮೂಲಕ ತಮ್ಮ ಧ್ವನಿಯನ್ನು ಪುರುಷರು ಎತ್ತುವ ಹಲವು ಪ್ರಕರಣಗಳು ನಮ್ಮ ಮುಂದೆ ಜೀವಂತವಾಗಿ ಇರುವಾಗ ಮಹಿಳೆಯರು ಸ್ವತಃ ತಮ್ಮ

ಪುರುಷರಿಗೆ ಮಣೆ ಹಾಸುವುದು ಈ ಪದ್ಧತಿಯನ್ನು ಮುಂದುವರಿಸಿದಂತೆ ಆಗುವುದಿಲ್ಲವೇ? ಮಹಿಳೆಯರು ಸ್ವತಂತ್ರ ವ್ಯಕ್ತಿತ್ವವಾಗಿ ರೂಪುಗೊಳ್ಳುವವರೆಗೂ ಇಂತಹ ಸಮಸ್ಯೆಗಳು ಇದ್ದೇ ಇರುತ್ತವೆ. ಆದ್ದರಿಂದ ಮಹಿಳಾ ಮೀಸಲಾತಿಗಾಗಿ ಹೋರಾಟವೆಂದರೆ ಸ್ವತಂತ್ರ ವ್ಯಕ್ತಿತ್ವದ ಮಹಿಳೆಯರ ಸಂಖ್ಯೆಯನ್ನು ಹೆಚ್ಚಿಸುವತ್ತ ಜಾಗೃತಿಯ ಹೋರಾಟವೂ ಹೌದು. ಮೀಸಲಾತಿ ಮಸೂದೆ ಒಪ್ಪಿ ಜಾರಿಯಾದರೂ ಈ ಹೋರಾಟ ನಿಲ್ಲದೇ ಅರ್ಹ ಮಹಿಳೆಯರನ್ನು ರೂಪಿಸಬೇಕಾದ ಹಿರಿಯ ಜವಾಬ್ದಾರಿಯೊಂದಿಗೆ ಇದು ಮುಂದೆ ನಿರಂತರವಾಗಿ ಸಾಗಬೇಕಾಗುತ್ತದೆ.

ಇನ್ನು ಈ ದಿಕ್ಕಿನತ್ತ ರಾಜಕೀಯ ಪಕ್ಷಗಳ ಜವಾಬ್ದಾರಿಯೇನೂ ಕಡಿಮೆಯಿಲ್ಲ. ಮೀಸಲು ಮಸೂದೆಯನ್ನು ಬೆಂಬಲಿಸುವ ಮತ್ತು ಮುಂದೆ ಬೆಂಬಲಿಸಬಹುದಾದ ಎಲ್ಲ ರಾಜಕೀಯ ಪಕ್ಷಗಳೂ ತಮ್ಮ-ತಮ್ಮ ಪಕ್ಷಗಳೊಳಗೆ ಮಹಿಳೆಯರಿಗೆ ಎಷ್ಟರ ಮಟ್ಟಿಗಿನ ಪ್ರಾತಿನಿಧ್ಯ ಕೊಟ್ಟಿವೆ ಎಂಬ ಆತ್ಮಶೋಧನೆಯ ಪ್ರಶ್ನೆ ಹಾಕಿಕೊಳ್ಳಬೇಕು. ಪಕ್ಷಗಳು ರಾಜಕೀಯ ಪ್ರಾತಿನಿಧ್ಯವನ್ನು ಕೊಡದೆ ನಾಯಕಿಯರನ್ನು ರೂಪಿಸಲು ಅಸಮರ್ಥವಾದಲ್ಲಿ ದಿಢೀರನೇ ಚುನಾವಣೆಗಳಿಗೆ ಮಾತ್ರ ಮಹಿಳಾ ಅಭ್ಯರ್ಥಿಯ ಹುಡುಕಾಟ ನಡೆಸಿ ಯಾರನ್ನೋ ನಾಮಮಾತ್ರವಾಗಿ ನಿಲ್ಲಿಸಿದರೆ ಆಗಲೂ ಅಂತಹ ಅಭ್ಯರ್ಥಿಗಳು ನಿಜವಾದ ಮಹಿಳಾ ಸಮುದಾಯದ ಪ್ರತಿನಿಧಿಯಾಗುವ ಬದಲು, ಆ ರಾಜಕೀಯ ಪಕ್ಷಗಳ ಕೊಂಬುಕಹಳೆಯಾಗಬಹುದು. ಎಲ್ಲಾ ರಾಜಕೀಯ ಹೋರಾಟಗಳಲ್ಲೂ, ಸಾಮೂಹಿಕ ಹೋರಾಟಗಳಲ್ಲೂ ಮಹಿಳೆಯರು ಭಾಗವಹಿಸದಿದ್ದರೆ ರಾಜಕೀಯ ಜ್ಞಾನವು ಇಲ್ಲವಾಗುತ್ತದೆ. ಆದ್ದರಿಂದ ಮೀಸಲಾತಿ ಎನ್ನುವ ಪದಕ್ಕೆ ಗೌರವವನ್ನು ದಕ್ಕಿಸಿಕೊಡಬೇಕಾದರೆ ಮೊದಲಿಗೆ ಮಹಿಳೆಯರು ತಮ್ಮ ಹಕ್ಕು, ಕರ್ತವ್ಯಗಳ ಬಗ್ಗೆ ಜಾಗೃತರಾಗುವುದಷ್ಟೇ ಅಲ್ಲ, ತಮ್ಮ ಸುತ್ತಮುತ್ತಲ ಜಗತ್ತಿನಲ್ಲಿ ಕ್ರಿಯಾಶೀಲರಾಗುವ ಮನೋಭಾವ ಮೂಡಿಸಿಕೊಳ್ಳಬೇಕು.

"ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೆ ವಿಶೇಷವಾದ ಮೀಸಲಾತಿಯನ್ನು ನೀಡುವುದು ಒಂದು ಸಂಖ್ಯಾತ್ಮಕ ಸಾಫಲ್ಯವೇ ಹೊರತು ಅದರಿಂದ ಮಹಿಳೆಯರ ಪರಿಸ್ಥಿತಿಯಲ್ಲಿ ಹೆಚ್ಚಿನ ಬದಲಾವಣೆಗಳನ್ನೇನೂ ತರಲಾಗದು ಎನ್ನುವ ವಾದವನ್ನು ನಾವು ತಳ್ಳಿ ಹಾಕುವಂತಿಲ್ಲ. ಅಧಿಕಾರ ದೊರೆತ ಮೇಲೆ ಬಹುಮಂದಿ ಮಹಿಳೆಯರು ಆ ಅಧಿಕಾರವನ್ನು ಉಳಿಸಿಕೊಳ್ಳುವ ಹೋರಾಟದಲ್ಲಿ ಮಗ್ನರಾಗಿ ಮಹಿಳಾಪರ ವಿಚಾರಗಳಿಗೆ ಸಂಬಂಧಿಸಿದ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದಿಲ್ಲ ಎಂಬುದೂ ಸಂಪೂರ್ಣವಾಗಿ ಸುಳ್ಳಲ್ಲ. ಆದರೆ ಇಂತಹ ವಾದಗಳು ಪುರುಷರ ಮಟ್ಟಿಗೂ ಅನ್ವಯಿಸುವಂತಹುದು. ಅಪರಾಧೀಕರಣ, ಸ್ವಾರ್ಥತೆ, ಭ್ರಷ್ಟಾಚಾರ, ಧಾರ್ಮಿಕ ಮೂಲಭೂತವಾದ, ಜಾತೀಯತೆ, ಕ್ರೌರ್ಯ ಮುಂತಾದ ಸಮಾಜ ವಿರೋಧಿ ಪ್ರವೃತ್ತಿಗಳ ಹಿಡಿತದಲ್ಲಿ ಸಿಲುಕಿರುವ ಸಮಕಾಲೀನ ರಾಜಕಾರಣದಲ್ಲಿ ಪುರುಷರೇ ಆಗಲಿ, ಮಹಿಳೆಯರೇ ಆಗಲಿ ನಿಷ್ಠೆಯಿಂದ ಕಾರ್ಯ ನಿರ್ವಹಿಸುವುದು ಬಹು ಕಠಿಣ. ಹಾಗೆಂದು ಸಮಾಜದಲ್ಲಿ ಅರ್ಧದಷ್ಟಿರುವ ಒಂದು ವರ್ಗವನ್ನೇ ರಾಜಕೀಯ ಪ್ರಕ್ರಿಯೆಯಿಂದ ದೂರವಿಡುವುದು ಸರಿಯಲ್ಲ. ಸಂಖ್ಯೆಯ ದೃಷ್ಟಿಯಿಂದಲೇ ಆದರೂ, ಇದು ಹೆಚ್ಚು-ಹೆಚ್ಚು ಮಹಿಳೆಯರು ಎಲ್ಲಾ ಮಟ್ಟಗಳಲ್ಲೂ

ರಾಜಕೀಯ ಸಂಸ್ಥೆಗಳನ್ನು ಪ್ರವೇಶ ಮಾಡುವುದು ಅವಶ್ಯಕವಾಗಿದೆ. ಪ್ರವೇಶ ಪಡೆದ ನಂತರ ಅವರನ್ನು ಸಬಲೀಕರಣಗೊಳಿಸುವ ಪ್ರಕ್ರಿಯೆ ಸತತವಾಗಿ ನಡೆಯುತ್ತಲೇ ಇರಬೇಕು. ಇಷ್ಟೇ ಅಲ್ಲ, ಸ್ತ್ರೀ ವಿರೋಧಿ ಪ್ರವೃತ್ತಿಗಳನ್ನು ಪ್ರತಿಪಾದಿಸುವ, ಪೋಷಿಸುವ ಹಾಗೂಪುರುಷ ಪ್ರಾಧಾನ್ಯತೆಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಮಹಿಳೆಯರು ರಾಜಕಾರಣವನ್ನು ಪ್ರವೇಶಿಸಿ, ಇಡೀ ಮಹಿಳಾ ಹೋರಾಟಕ್ಕೆ ಪೆಟ್ಟು ಬೀಳಬಹುದಾದಂತಹ ಪರಿಸ್ಥಿತಿಯನ್ನು ಎದುರಿಸಲೂ ನಾವು ತಯಾರಾಗಿರಬೇಕು. ರಾಜಕೀಯವೇ ಕೊಳಕು, ಅದು ನಮ್ಮಂಥವರಿಗಲ್ಲ ಎಂದು ಹಿಂದೆ ನಿಂತು ಟೀಕೆ ಮಾಡುವ ಬದಲು ಸ್ತ್ರೀಪರ ಕಾಳಜಿಗಳನ್ನು ಹೊಂದಿರುವ, ಸ್ತ್ರೀ ಸಮಾನತೆಯ ಹೋರಾಟಕ್ಕೆ ಒಂದು ನಿಶ್ಚಿತ ಗುರಿಯನ್ನು ನೀಡಬಲ್ಲಂತಹ ಮಹಿಳೆಯರು ರಾಜಕೀಯ ಪ್ರಕ್ರಿಯೆಗೆ ಪ್ರವೇಶಿಸಲು, ಪ್ರಭಾವಿಸಲು ಮುಂದೆ ಬರದಿದ್ದಲ್ಲಿ ಮೀಸಲಾತಿ ರಾಜಕೀಯ ಚದುರಂಗದಾಟದಲ್ಲಿ ಪುರುಷ ಪ್ರಧಾನ ಮೌಲ್ಯ ವ್ಯವಸ್ಥೆ ಎಸೆಯುವ ಮತ್ತೊಂದು ದಾಳವಾಗುತ್ತದೆಯಷ್ಟೆ.

ಮಹಿಳೆಯರಿಗೆ ದೊರೆತಿರುವ ಸಮಾನತೆ ಬಹುಮಟ್ಟಿಗೆ ಒಂದು ಸೈದ್ಧಾಂತಿಕ ಮಟ್ಟದಲ್ಲಿದೆ. ಮೂಲಭೂತವಾದ ಬದುಕಿನ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕಿ, ತಮಗೆ ದೊರೆತಿರುವ ಸಮಾನತೆಯನ್ನು ವಾಸ್ತವ್ಯದಲ್ಲಿ ಪಡೆಯಲು ಮಹಿಳೆಯರಿಗೆ ಅಡ್ಡಿ ಬಂದಿರುವ ಪ್ರವೃತ್ತಿಗಳನ್ನು ಸಮಾಜದ ಪ್ರತಿಯೊಂದು ಸಂಸ್ಥೆಯಿಂದಲೂ ಕಿತ್ತೊಗೆಯಬೇಕು. ಹುಟ್ಟುವ ಮೊದಲೇ ಸ್ತ್ರೀಯನ್ನು ಕಡೆಗಾಣಿಸುವ ಲಿಂಗ ಕುರುಡು ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳಾ ಮೀಸಲಾತಿಯಂಥ ಕ್ರಾಂತಿಕಾರಿಯಾದ ಒಂದು ಹೆಜ್ಜೆಯನ್ನು ಅರ್ಥಪೂರ್ಣವಾಗಿ ಇಡಬೇಕಾದರೆ, ಸಾಮಾಜಿಕ-ಆರ್ಥಿಕ ಪರಿಸ್ಥಿತಿ ಬದಲಾಗುವುದರ ಜೊತೆಗೆ ಲಿಂಗ ಸಮಾನತೆಯನ್ನು ಆಧರಿಸಿದ ರಾಜಕೀಯ ವ್ಯವಸ್ಥೆಯಲ್ಲಿ ಭಾಗವಹಿಸಲು ಅವಶ್ಯಕವಾದ ಮಾನಸಿಕ ತಯಾರಿಯನ್ನು ಜೀವನದ ಪ್ರಾರಂಭಿಕ ಹಂತಗಳಿಂದಲೇ ಸ್ತ್ರೀ-ಪುರುಷರಿಬ್ಬರಿಗೂ ನೀಡಬೇಕು.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಶೇ.೩೩ ಮೀಸಲಾತಿ ದೊರೆತಿದ್ದು, ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.೩೩ ಮೀಸಲಾತಿಯನ್ನು ನೀಡಬೇಕೆಂಬ ಮಸೂದೆಗೆ ವ್ಯಾಪಕವಾದ ಬೆಂಬಲವಿದ್ದರೂ, ಇಂದಿಗೂ ಅದಕ್ಕೆ ಸಂಬಂಧಿಸಿದ ಸಂವಿಧಾನಾತ್ಮಕ ತಿದ್ದುಪಡಿಗೆ ಅಂಗೀಕಾರ ದೊರತಿಲ್ಲವೆಂಬುದು ಲಿಂಗಸಂಬಂಧಿ ಪೂರ್ವಗ್ರಹಗಳು ನಮ್ಮ ಸಮಾಜದಲ್ಲಿ ಎಷ್ಟು ಭದ್ರವಾಗಿ ಬೇರೂರಿವೆ ಎಂಬುದಕ್ಕೆ ಸಾಕ್ಷಿಯಾಗಿದೆ. ಲೋಕಸಭೆಯ ವಿಶೇಷ ಸಮಿತಿಯ ಪರಿಶೀಲನೆಗೆ ಈ ಮಸೂದೆಯನ್ನು ಒಪ್ಪಿಸುವುದು,· ಇದನ್ನು ಕುರಿತಂತೆ ಇನ್ನಷ್ಟು ವ್ಯಾಪಕ ಚರ್ಚೆಯಾಗಬೇಕೆಂದು ಹೇಳುವುದು ಅಥವಾ ತಾಂತ್ರಿಕ ತೊಂದರೆಗಳನ್ನು ನಿವಾರಿಸುವವರೆಗೂ ಈ ಮಸೂದೆಗೆ ಅಂಗೀಕಾರ ಸಾಧ್ಯವಿಲ್ಲ ಎಂದು ಹೇಳುವುದು ಇವೆಲ್ಲವೂ ಪುರುಷ ಪ್ರಧಾನ ಮೌಲ್ಯವ್ಯವಸ್ಥೆ ಅಧಿಕಾರದ ಮರುಹಂಚಿಕೆಯ ಪ್ರಕ್ರಿಯೆಗೆ ತೋರಿಸುತ್ತಿರುವ ಪ್ರತಿಕ್ರಿಯೆಗಳಾಗಿವೆ. ಸ್ವತಂತ್ರ ಬಂದಾಗಿನಿಂದಲೂ ರಾಜಕೀಯ ಅಧಿಕಾರದ ಮೇಲೆ ತಮ್ಮ ಏಕಸ್ವಾಮ್ಯವನ್ನು ಸ್ಥಾಪಿಸಿಕೊಂಡಿದ್ದ ಪುರುಷ ರಾಜಕಾರಣಿಗಳು ಈ ಅಧಿಕಾರವನ್ನು ಸ್ವಲ್ಪ ಮಟ್ಟಿಗಾದರೂ ಬಿಟ್ಟುಕೊಡಲು ತಯಾರಿಲ್ಲವೆಂಬುದು ಲಿಂಗ ಸಮಾನತೆಯ

ಹೋರಾಟಕ್ಕಷ್ಟೇ ಅಲ್ಲ, ಪ್ರಜಾಪ್ರಭುತ್ವಕ್ಕೆ ಒಂದು ದೊಡ್ಡ ಸವಾಲಾಗಿದೆ.

ಪ್ರತೀ ಪ್ರಮುಖ ರಾಜಕೀಯ ಪಕ್ಷವೂ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಮಹಿಳೆಯರಿಗೆ ಶೇ.೩೩ರಷ್ಟು ಮೀಸಲಾತಿಯನ್ನು ನೀಡುವುದಾಗಿ ಘೋಷಿಸಿ ತನ್ನ ಸ್ತ್ರೀಪರ ಕಾಳಜಿಗಳನ್ನು ಚುನಾವಣಾ ಸಮಯದಲ್ಲಿ ಪ್ರದರ್ಶಿಸಿದ್ದರೂ, ಆ ಕಾಳಜಿಗಳನ್ನು ಕಾರ್ಯರೂಪಕ್ಕೆ ತರುವ ಸಂದರ್ಭ ಒದಗಿ ಬಂದಾಗ ಯಾವುದಾದರೂ ಒಂದು ಕಾರಣವನ್ನು ಮುಂದಿಟ್ಟುಕೊಂಡು ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದು ಮಹಿಳೆಯರನ್ನು ಕುರಿತ ಅವರ ಆಸಕ್ತಿ ಎಷ್ಟರ ಮಟ್ಟಿಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ತಾವು ಪ್ರಗತಿಪರರು, ಸ್ತ್ರೀ-ಪುರುಷ ಸಮಾನತೆಯ ತತ್ವಕ್ಕೆ ಬದ್ಧರು ಎಂದು ತೋರಿಸಿಕೊಳ್ಳಲು ಮಹಿಳೆಯರನ್ನು ಒಂದು ಬಂಡವಾಳವನ್ನಾಗಿಸಿಕೊಂಡ ರಾಜಕೀಯ ಪಕ್ಷಗಳ ಧುರೀಣರನೇಕರು ಮಹಿಳೆಯರೊಡನೆ ತಾವು ಹಿಡಿದಿಟ್ಟುಕೊಂಡಿರುವ ಅಧಿಕಾರವನ್ನು ಹಂಚಿಕೊಳ್ಳುವ ಪ್ರಶ್ನೆ ಬಂದಾಗ ಹಿಮ್ಮೆಟ್ಟುತ್ತಿರುವುದು ಏತಕ್ಕೆ? ಪಂಚಾಯಿತಿಗಳಲ್ಲಿ ಅವರಿಗೆ ಈಗಾಗಲೇ ಮೀಸಲಾತಿಯ ಸೌಲಭ್ಯವನ್ನು ನೀಡಿ ಒಂದು ಪ್ರಯೋಗವನ್ನು ನಡೆಸಿದ್ದೇವೆ. ಆ ಪ್ರಯೋಗದಲ್ಲಿ ಅವರನ್ನೂ ಜಯಿಸಿ ಬರಬೇಕಾಗಿದೆ. ಮಹಿಳೆಯರಿಗೆ ರಾಜಕೀಯ ಅಧಿಕಾರವನ್ನಿತ್ತರೆ ಅದನ್ನು ಬಳಸಲು ಅವರಿಗೆ ಇನ್ನೂ ಅನುಭವ ಸಾಲದು ಎನ್ನುವ ವಾದವನ್ನು ಮುಂದಿಟ್ಟು ಇನ್ನೆಷ್ಟು ದಿನ ಅವರಿಗೆ ನ್ಯಾಯಯುತವಾಗಿ ದೊರೆಯಬೇಕಾದ ಹಕ್ಕಿನಿಂದ ಅವರನ್ನು ವಂಚಿಸುತ್ತಾರೆ? ಅವಕಾಶ ದೊರೆತರೆ ತಾನೇ ಅನುಭವಗಳನ್ನು ಪಡೆಯುವುದು. ಪುರುಷರಿಗೇನೂ ರಾಜಕೀಯ ಜೀವನದಲ್ಲಿ ಭಾಗವಹಿಸುವ ಅನುಭವ ಜನ್ಮಜಾತವಾಗಿ ಬರಲಿಲ್ಲವಲ್ಲ."[೧]

"ಮೀಸಲಾತಿ ಬೇಕು. ಆದರೆ ಇದೊಂದು ಶಾಶ್ವತ ಪರಿಹಾರವಲ್ಲ. ಶತಮಾನಗಳಿಂದ ಶಿಕ್ಷಣದಿಂದ ವಂಚಿತರಾದ ಮಹಿಳೆಯರಿಗೆ ಮೀಸಲಾತಿ ನೀಡುವುದರಿಂದಾಗಿ ಅವಕಾಶ ದೊರೆಯುವುದು ಮಾತ್ರವಲ್ಲ. ರಾಜಕೀಯ ಅರಿವನ್ನೂ ಮೂಡಿಸುತ್ತಿದೆ. ಮೀಸಲಾತಿ ಶೇ.೩೩ರಷ್ಟೇ ಆದರೂ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸುವವರ ಸಂಖ್ಯೆ ಹೆಚ್ಚಾಗುತ್ತದೆ. ಅಂದ ಮೇಲೆ ಎಷ್ಟೋ ಮಹಿಳೆಯರಲ್ಲಿ ರಾಜಕೀಯ ಪ್ರಜ್ಞೆ, ಅರಿವು ಮಾತ್ರವಲ್ಲ ತಮ್ಮ ಹಕ್ಕುಗಳಿಗಾಗಿ ಹೋರಾಡುವ ಆತ್ಮವಿಶ್ವಾಸ ಮೂಡುವುದರಲ್ಲಿ ಸಂಶಯವಿಲ್ಲ.

ಕರ್ನಾಟಕದಲ್ಲಿ ಪಂಚಾಯಿತಿ ವ್ಯವಸ್ಥೆಯಲ್ಲಿ ಮೀಸಲಾತಿ ಇರುವುದರಿಂದಾಗಿಯೇ ಹೆಚ್ಚಿನ ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸುವುದು ಸಾಧ್ಯವಾಗಿದೆ. ಮಹಿಳೆಯರು ಆತ್ಮವಿಶ್ವಾಸದಿಂದ ಮಾತನಾಡತೊಡಗಿದ್ದಾರೆ. ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಸಭೆ, ರ್‍ಯಾಲಿಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಮೀಸಲಾತಿ ಮಹಿಳಾ ಚಳುವಳಿಗೆ ಒಂದು 'ಕಿಕ್ ' ಕೊಡಬಲ್ಲದು, ಪೂರಕವಾಗಬಲ್ಲದು, ಒಂದು ಕ್ರಾಂತಿಕಾರಕ ಬದಲಾವಣೆಗೆ ನಾಂದಿ ಹಾಡಬಲ್ಲದು. ತೀವ್ರಗತಿಯ ಬದಲಾವಣೆಗೊಳಗಾಗುತ್ತಿರುವ ಸಮಾಜದಲ್ಲಿ ಮಹಿಳೆಯರಿಗೆ ಸಿಗಬಹುದಾದ ಇಂಥ ಅವಕಾಶ ಅವರ ಬದುಕಿನಲ್ಲಿ ಒಂದು ದೊಡ್ಡ ಕ್ರಾಂತಿಯನ್ನೇ ತರಬಲ್ಲದು. ಎಲ್ಲ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ ೧/೩ ಭಾಗ ಮೀಸಲಾತಿ ನೀಡಬೇಕೆಂಬ ಸಂವಿಧಾನ ತಿದ್ದುಪಡಿ ಮಸೂದೆ ಮಂಡನೆಯಾದಾಗ ಅಂತಹ ಪ್ರತಿರೋಧವೇನೂ ಬಂದಿರಲಿಲ್ಲ. ಎಲ್ಲ ರಾಜ್ಯಗಳೂ ಆ ಕಾಯಿದೆಯನ್ನು ಜಾರಿಗೆ ತಂದವು.

ಕ್ರಾಂತಿಕಾರಿ ಕ್ರಮ ಎನ್ನುತ್ತಾ ಎಲ್ಲಾ ಪಕ್ಷಗಳೂ ಖುಷಿ ವ್ಯಕ್ತಪಡಿಸಿದವು. ಆದರೆ ಕಾಯಿದೆ ಜಾರಿಗೆ ಬಂದ ನಂತರ ಮೀಸಲಾತಿಯ ಮಿತಿಯನ್ನು ಮೀರಿಸಿ ಅಸಂಖ್ಯಾತ ಮಹಿಳೆಯರು ಚುನಾಯಿತರಾದಾಗ, ಗ್ರಾಮಗಳ ರಾಜಕೀಯ ಚಿತ್ರಣವನ್ನು, ಸಾಮಾಜಿಕ-ಆರ್ಥಿಕ ನೆಲೆಯನ್ನು, ಹಣ ಮತ್ತು ಜಾತಿಯನ್ನಾಧರಿಸಿದ್ದ ಅಧಿಕಾರದ ಪ್ರಾಭಲ್ಯವನ್ನು ಅಲುಗಾಡಿಸಿದಾಗ ಪುರುಷ ಸಮಾಜ ದಿಢೀರನೆ ಎಚ್ಚರಗೊಂಡಿತು."[೨]

"ಮಹಿಳಾ ಮೀಸಲಾತಿ ಕಾಯಿದೆಯನ್ನು ಅಂಗೀಕರಿಸದೆ ಜಂಟಿ ಆಯ್ಕೆ ಸಮಿತಿಗೆ ಒಪ್ಪಿಸಿದಾಗ ಅದನ್ನು ವಿಳಂಬ ತಂತ್ರವೆಂದು ಭಾವಿಸಲಾಗಿತ್ತು. ಆದರೆ ಸಂಸತ್ ಸದಸ್ಯೆ ಗೀತಾ ಮುಖರ್ಜಿ ಸ್ವಲ್ಪ ಕಾಲಾವಧಿಯಲ್ಲಿಯೇ ವರದಿಯನ್ನು ಸಲ್ಲಿಸಿ ಮಹಿಳೆಯ ರಾಜಕೀಯ ಮೀಸಲಾತಿಗೆ ಅವಕಾಶ ನೀಡುವ ಸಂವಿಧಾನದ ೧೮೧ನೇ ತಿದ್ದುಪಡಿಯ ಅಧಿನಿಯಮವನ್ನು ಸರ್ಕಾರ ಅಂಗೀಕರಿಸಬೇಕು ಎಂದು ಒತ್ತಾಯ ಮಾಡಿದರು.

ವಿವಿಧ ಪಕ್ಷಗಳ ಮಹಿಳಾ ಸದಸ್ಯರು ಹೇಳುವಂತೆ ಆಯಾ ಪಕ್ಷಗಳು, ಪಕ್ಷಗಳ ಹಂತದಲ್ಲಿಯೇ ಮಹಿಳೆಯನ್ನು ತಮ್ಮ ಕಾರ್ಯಕ್ರಮಗಳಲ್ಲಿ ಹಾಗೂ ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕು ಎಂಬ ಮಾತಿನಲ್ಲಿ ಹೆಚ್ಚು ಅರ್ಥವಿದೆ. ಅಂತೆಯೇ ಮಹಿಳಾ ಮೀಸಲಾತಿ ವಿಧೇಯಕದ ಬಗ್ಗೆ ವಿರುದ್ಧ ಅಭಿಪ್ರಾಯಗಳು ವ್ಯಕ್ತವಾದಾಗಲೆಲ್ಲ ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಮೀಸಲಾತಿಯನ್ನು ಬಿಟ್ಟು ಪರ್ಯಾಯ ವಿಧಾನಗಳನ್ನು ಆಲೋಚಿಸಲಾಗಿದೆ. ಏಕೆಂದರೆ ಶಾಸಕಾಂಗದಲ್ಲಿ ಮಹಿಳೆಯರಿಗೆ ನಿಗದಿಪಡಿಸಿದ ಮೀಸಲಾತಿ ಇರುವುದು ನೇಪಾಳ, ಫಿಲಿಫೈನ್ಸ್ ಮತ್ತು ಹಿಂದಿನ ಸೋವಿಯತ್ ಒಕ್ಕೂಟಗಳಲ್ಲಿ ಮಾತ್ರ. ರಾಜಕೀಯದಲ್ಲಿ ಮಹಿಳೆಯ ಭಾಗವಹಿಸುವಿಕೆಯ ದೃಷ್ಟಿಯಿಂದ ಇವು ಯಾವುವೂ ಹೆಚ್ಚಿನ ಯಶಸ್ಸು ಕಂಡಿಲ್ಲ.

ಸ್ಕಾಂಡಿನೇವಿಯನ್ ಮತ್ತು ಇತರೆ ಯುರೋಪಿಯನ್ ದೇಶಗಳಲ್ಲಿ ಸಂಸತ್ತಿನಲ್ಲಿ ಮಹಿಳೆಯರಿಗೆ ಸ್ಥಾನಗಳನ್ನು ಮೀಸಲಿರಿಸದೆಯೇ ಹೆಚ್ಚಿನ ಮಹಿಳಾ ಪ್ರಾತಿನಿಧ್ಯವನ್ನು ಸಾಧಿಸಿದ್ದಾರೆ. ಮಹಿಳೆಯರಿಗೆ ಶೇ.೩೩ರ ಮೀಸಲಾತಿ ನೀಡಿದಾಗ ಅವರ ಪ್ರಾತಿನಿಧ್ಯ ಶೇ.೩೩ಕ್ಕೆ ನಿಂತು ಬಿಡುವ ಸಾಧ್ಯತೆಯೇ ಹೆಚ್ಚು. ಏಕೆಂದರೆ ಯಾವ ಪಕ್ಷವೂ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಮಹಿಳಾ ಅಭ್ಯರ್ಥಿಗಳನ್ನು ಚುನಾವಣೆಗೆ ನಿಲ್ಲಿಸುವುದಿಲ್ಲ. ಆದರೆ ಈ ಮೀಸಲಾತಿಯನ್ನು ನೀಡದೆಯೇ ಸ್ಥಳೀಯ ಸರ್ಕಾರಗಳಲ್ಲಿ ಕೆಲಸ ಮಾಡುತ್ತಾ ಸತತವಾದ ಪ್ರಯತ್ನದಿಂದ ಜನರ ವಿಶ್ವಾಸ ಗಳಿಸಿ ಪುರುಷರಿಗೆ ಸಮನಾದ ಅಥವಾ ಇನ್ನೂ ಹೆಚ್ಚಿನ ಪ್ರಾತಿನಿಧ್ಯವನ್ನು ಗಳಿಸಿಕೊಳ್ಳುವುದು ಮೇಲೆ ಹೇಳಿದ ದೇಶಗಳಲ್ಲಿ ಸಾಧ್ಯವಾಗಿದೆ. ಸ್ವೀಡನ್ನಿನಲ್ಲಿ ೧೯೯೪ರಲ್ಲಿ ಕೌಂಟಿ ಕೌನ್ಸಿಲ್‌ಗಳಿಗೆ ಚುನಾಯಿತರಾದವರಲ್ಲಿ ಶೇ. ೪೮ರಷ್ಟು ಮಹಿಳೆಯರಿದ್ದರು. ಈ ಪ್ರಾತಿನಿಧ್ಯ ಸುಲಭವಾಗಿ ಗಳಿಸಿದುದಲ್ಲ. ಸ್ಥಳೀಯ ಮಟ್ಟದಲ್ಲಿ ವ್ಯಾಪಕವಾದ ಸ್ತ್ರೀಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಮಹಿಳಾ ಮತದಾರರಲ್ಲಿ ಜಾಗೃತಿಯನ್ನುಂಟು ಮಾಡಿದುದಲ್ಲದೆ ಮಹಿಳಾ ಚಳವಳಿಗಳ ಮೂಲಕ ಒತ್ತಡ ಹೇರುವ ಮೂಲಕವೂ ಇದನ್ನು ಸಾಧಿಸಿದ್ದಾರೆ. ಅಲ್ಲದೆ ಬಹುಪಾಲು ಎಲ್ಲ ರಾಜಕೀಯ ಪಕ್ಷಗಳೂ ತಮ್ಮ ಪಕ್ಷಗಳಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ನೀಡಲು ಬದ್ಧವಾಗಿವೆ. ಇಂತಹ ಮನೋಭಾವ ನಮ್ಮ ರಾಜಕಾರಣಿಗಳಲ್ಲಿ, ರಾಜಕೀಯ ಪಕ್ಷಗಳಲ್ಲಿ ಬರಬೇಕು. ಆದರೆ ಭಾರತದಲ್ಲಿ ಮಹಿಳೆಯರಿಗೆ ರಾಜಕೀಯ ಪ್ರವೇಶವೇ

ದುಸ್ತರವಾಗಿರುವಾಗ ಈ ಸಂದರ್ಭದಲ್ಲಿ ಮೀಸಲಾತಿಯ ಕಾಯಿದೆಯನ್ನು ತರುವುದು ಅಗತ್ಯವಾಗಿದೆ.

ಈಗ ಸಿದ್ಧವಾಗಿರುವ ಮೀಸಲಾತಿ ವಿಧೇಯಕದಲ್ಲಿ ಮಹಿಳೆಯರಿಗಾಗಿ ಮೀಸಲಿಡುವ ಚುನಾವಣಾ ಕ್ಷೇತ್ರಗಳನ್ನು ಲಾಟರಿ ಎತ್ತುವ ಮೂಲಕ ನಿರ್ಧರಿಸುವ ಪ್ರಸ್ತಾವವಿದೆ. ಆದರೆ ಹಾಗೆ ಮಾಡಿದಾಗ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ತಾವು ಪ್ರತಿನಿಧಿಸಬೇಕಾದ ಚುನಾವಣಾ ಕ್ಷೇತ್ರದ ಬಗ್ಗೆ ಅಲ್ಲಿಯ ಜನತೆಯ ಬಗ್ಗೆ ಪ್ರೀತಿ ಬೆಳೆಯುವುದಿರಲಿ, ಅಲ್ಲಿಯ ಜನರ ಸಮಸ್ಯೆಗಳ ಬಗ್ಗೆಯೂ ಅರಿವಿರುವುದಿಲ್ಲ. ಪ್ರಜಾಸತ್ತಾತ್ಮಕ ಆಡಳಿತದ ಮೂಲಗುಣವಾದ ಪ್ರತಿನಿಧಿ-ಮತದಾರರ ಸಂಬಂಧವನ್ನೇ ಕತ್ತರಿಸಿ ಬಿಡುವ ಈ ವ್ಯವಸ್ಥೆ ಆಡಳಿತದ ಅಡಿಪಾಯವನ್ನು ಅಲ್ಲಾಡಿಸದೇ ಇರದು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಮೀಸಲಾತಿಯ ಈ ವ್ಯವಸ್ಥೆ, ಪರ್ಯಾಯ ವ್ಯವಸ್ಥೆಯನ್ನು ಮಾಡುವವರೆಗೆ ಅನಿವಾರ್ಯವಾಗುತ್ತದೆ.

ಮೀಸಲಾತಿಯಿಂದ ರಾಜಕಾರಣಿಗಳ ಕುಟುಂಬ ವರ್ಗ ಹಾಗೂ ಮೇಲ್ವರ್ಗಗಳ ಶ್ರೀಮಂತ ಮಹಿಳೆಯರು ಮಾತ್ರ ರಾಜಕೀಯ ರಂಗ ಪ್ರವೇಶಿಸಿದಂತಾಗುತ್ತದೆಯೇ ಹೊರತು ಮಹಿಳೆಯರಿಗೆ ನಿಜವಾದ ಪ್ರಾತಿನಿಧ್ಯ ದೊರೆಯುವುದಿಲ್ಲ ಎಂಬುದು ಒಂದು ವಾದ. ಆದರೆ 'ರಾಜಕಾರಣ'ವಂಶಪಾರಂಪರ್ಯವಾಗಿ ಮುಂದುವರಿದ ಅನೇಕ ಕುಟುಂಬಗಳು ನಮ್ಮಲ್ಲಿರುವಾಗ ಮಹಿಳೆಯ ವಿಷಯ ಬಂದಾಗ ಮಾತ್ರ ಅಪಶ್ರುತಿ ಕೇಳಿ ಬರುವುದೇಕೆ ಎಂದು ಪ್ರಶ್ನಿಸಬೇಕಾಗುತ್ತದೆ.

ರಾಜಕೀಯದಲ್ಲಿ ಮೀಸಲಾತಿ ನೀಡುವಷ್ಟರಿಂದಲೇ ಮಹಿಳೆಯ ಸಂಕಷ್ಟಗಳು ದೂರವಾಗುವುದಿಲ್ಲ. ಆದರೆ ಸ್ತ್ರೀ ಪುರುಷ ಸಮಾನತೆ ಸಾಧನೆಯ ಹಾದಿಯಲ್ಲಿ ಇದು ಒಂದು ಮೈಲಿಗಲ್ಲಾಗುತ್ತದೆ. ಸಂವಿಧಾನದಲ್ಲಿ ಕೊಡಮಾಡಿರುವ ಸಮಾನತೆಯ ಹಕ್ಕನ್ನು ಸಾಧಿಸುವ ದಿಕ್ಕಿನಲ್ಲಿ ಜಾರಿಗೊಂಡ ಕಾನೂನುಗಳ ಪೈಕಿ ಇದು ಪ್ರಮುಖವಾಗುತ್ತದೆ. ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದರೂ ಸಿಕ್ಕದೆ ಹೋಗಿರುವ ಪ್ರಾತಿನಿಧ್ಯವನ್ನು ಕೊಡುವಂತೆ ಕಾನೂನಿನ ಮೂಲಕ ಕಡ್ಡಾಯಪಡಿಸಿದಂತಾಗುತ್ತದೆ.

ರಾಜಕೀಯ ಪ್ರವೇಶಿಸುವ ಮಹಿಳೆಯರು ತಮ್ಮ ವೃತ್ತಿಯನ್ನು ಗಂಭೀರವಾಗಿ ಪರಿಗಣಿಸಬೇಕಲ್ಲದೆ ದೇಶದ ರಾಜಕೀಯದ ಬಗ್ಗೆ ಆಳವಾಗಿ ಚಿಂತಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ತಮ್ಮ ಪುರುಷ ಸಹೋದ್ಯೋಗಿಗಳ ಕೈಗೊಂಬೆಯಾಗಿ ಪಕ್ಷಗಳು ಮುಂದೊಡ್ಡುವ ಮಹಿಳಾ 'ವರ್ಚಸ್ಸು'ಅಷ್ಟೇ ಆಗಿ ಉಳಿಯಬಾರದು. ಒಬ್ಬ ಮಹಿಳೆ ರಾಜಕೀಯದಲ್ಲಿದ್ದಾಳೆಂದರೆ ಅದಕ್ಕೆ ಕಾರಣ ಅನಿವಾರ್ಯತೆ ಅಥವಾ ತಪ್ಪು ನಿರ್ಧಾರ ಎಂದಾಗಬಾರದು. ಅಲ್ಲದೆ ಪುರುಷರು ಆರೋಪಿಸಿರುವಂತೆ ಮಹಿಳೆ ಮಹಿಳೆಯನ್ನು ಎಂದೂ ಬೆಂಬಲಿಸುವುದಿಲ್ಲ ಎಂಬಂತಾಗಬಾರದು. ಅಧಿಕಾರದ ಜೊತೆಯಲ್ಲಿಯೇ ಜವಾಬ್ದಾರಿಯೂ ಇರುತ್ತದೆ. ಅದನ್ನೂ ನಿಬಾಯಿಸಬೇಕು ಮತ್ತು ಆ ಸ್ಥಾನಕ್ಕೆ ತಕ್ಕಂತೆ ನಡೆದುಕೊಳ್ಳಬೇಕು.

ಮೀಸಲಾತಿ ಮೂಲಕ ಮಹಿಳೆಯರಿಗೆ ಅಧಿಕಾರ ನೀಡಿದ್ದು ಒಂದು ರಾಷ್ಟ್ರೀಯ ಅನಾಹುತ ಎಂಬಂತೆ ಬೊಬ್ಬೆ ಇಟ್ಟು. ಮಹಿಳೆಯರು ಅನಕ್ಷರಸ್ಥರು, ಅಜ್ಞಾನಿಗಳು, ಅಬಲೆಯರು, ರಾಜಕೀಯ ಅವರಿಗಲ್ಲ. ಅವರು ರಾಜಕೀಯಕ್ಕೆ ಇಳಿದರೆ ಮನೆಯ ಗತಿಯೇನು? ಮಕ್ಕಳು-ಹಿರಿಯರನ್ನು ಸಾಕುವವರು ಯಾರು? ಸಂಸ್ಕೃತಿ ಕಾಪಾಡುವವರಾರು? ಎಂದೆಲ್ಲಾ ಗೋಳಾಡಿದರು. ಇದಕ್ಕೆಲ್ಲ ಜಗ್ಗದಿದ್ದಾಗ, ಪ್ರಾಕ್ಸಿ

ರಾಜಕಾರಣ ನಡೆಯುತ್ತದೆ. ಮೇಲ್ವರ್ಗ-ಮೇಲ್ಜಾತಿ ಮಹಿಳೆಯರು ಮಾತ್ರ ಮುಂದೆ ಬರುತ್ತಾರೆ ಎಂದು ನೀತಿಯ ಮಾತನ್ನಾಡಿದರು. ಇದಾವುದಕ್ಕೂ ಸೋಲದಿದ್ದಾಗ ಒಬ್ಬೊಬ್ಬ ಮಹಿಳೆಯನ್ನೇ ಗುರಿಯನ್ನಾಗಿಟ್ಟುಕೊಂಡು ಆ ಮಹಿಳೆಯರು ಕೆಲಸ ಮಾಡದಂತಹ ಪರಿಸರ ಸೃಷ್ಟಿಸಲು ತೊಡಗಿದರು. ಅವರ ಕೆಲಸಗಳಿಗೆ ಅಡ್ಡಗಾಲು ಹಾಕುವುದು. ಯೋಜನೆಗಳಿಗೆ ಕತ್ತರಿ ಹಾಕಿಸುವುದು ಮುಂತಾದ ವಾಮಮಾರ್ಗಗಳನ್ನು ಬಳಸುತ್ತಿದ್ದಾರೆ. ಇದಾವುದಕ್ಕೂ ಜಗ್ಗದೆ ಮುಂದೆ ಸಾಗುತ್ತಲೇ ಇರುವ ಮಹಿಳೆಯರನ್ನು ಅವರ ಆತ್ಮಸ್ಥೈರ್ಯವನ್ನು, ಮುಂದಾಳತ್ವವನ್ನು, ಸಾಮರ್ಥ್ಯವನ್ನು, ಸುತ್ತಲಿನ ಸಮಾಜದ ಇಂತಹ ಮಹಿಳೆಯರನ್ನು ನಿಧಾನವಾಗಿ ಒಪ್ಪಿಕೊಳ್ಳುವುದನ್ನು ನೋಡಿ ಹತಾಶೆಗೊಂಡ ಹಲವರು ಮಾನಸಿಕ-ದೈಹಿಕವಾಗಿ ಮಹಿಳೆಯರ ಮೇಲೆ ಒತ್ತಡ ಹೇರುತ್ತಿದ್ದಾರೆ. ಇವುಗಳೆಲ್ಲದರ ದೃಷ್ಟಿಕೋನದ ವಿಶ್ಲೇಷಣೆಯೇ ಅಧ್ಯಯನದ ಮುಖ್ಯ ಭಾಗವಾಗಿರುತ್ತದೆ."[೩]

೧. ಅಚಲ ದ್ವೈಮಾಸಿಕ ಪತ್ರಿಕೆ 1998 ನವೆಂಬರ್, ಪ್ರಕಾಶಕರು: ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು ಪು.ಸಂ. 03

೨. ಅಚಲ ದ್ವೈಮಾಸಿಕ ಪತ್ರಿಕೆ 1997 ಮಾರ್ಚ್, ಪ್ರಕಾಶಕರು: ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು ಪು.ಸಂ. 05

೩. ಗೀತಾ ಕೃಷ್ಣಮೂರ್ತಿ, ಮಹಿಳೆ ಕಾನೂನು ಮತ್ತು ರಾಜಕಾರಣ, ಪ್ರಸಾರಾಂಗ ಪ್ರಕಾಶನ, ಕನ್ನಡ ವಿ.ವಿ ಹಂಪಿ, ೨001 ಪು.ಸಂ. ೨60 ರಿಂದ ೨6೨

ಅಧ್ಯಾಯ ೪

ಪಂಚಾಯತ್ ರಾಜ್ ವ್ಯವಸ್ಥೆಯ ಐತಿಹಾಸಿಕ ಬೆಳವಣಿಗೆ

೪

ಪಂಚಾಯತ್ ರಾಜ್ ವ್ಯವಸ್ಥೆಯ ಐತಿಹಾಸಿಕ ಬೆಳವಣಿಗೆ

ಭಾರತವು ಸುಸಂಘಟಿತವೂ, ಸುಭದ್ರವೂ ಆದ ಗ್ರಾಮೀಣ ಸಮುದಾಯವನ್ನು ಹೊಂದಿದೆ. ಗ್ರಾಮ ಪಂಚಾಯಿತಿಯು ಬಹುಕಾಲದಿಂದಲೂ ಒಂದಲ್ಲ ಒಂದು ರೂಪದಲ್ಲಿ ಜನರ ಹಿತವನ್ನು ಕಾಪಾಡಿಕೊಂಡು ಬರುತ್ತಿದೆ. ಆದರೆ ಭಾರತಕ್ಕೆ ಸ್ವಾತಂತ್ರ್ಯ ಬಂದು ಅದರಲ್ಲಿ ಸ್ವತಂತ್ರ ಗಣರಾಜ್ಯ ಸ್ಥಾಪನೆಯಾದ ಮೇಲೆ ಗ್ರಾಮ ಪಂಚಾಯಿತಿಗೆ ಹೆಚ್ಚಿನ ಮಹತ್ವ ಬರತೊಡಗಿತು. ಗ್ರಾಮ ಪಂಚಾಯಿತಿಗಳು ಸುವ್ಯವಸ್ಥಿತವಾದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸಂಘಟನೆಗಳೇ ಅಲ್ಲದೆ ರಾಜಕೀಯ ವ್ಯವಸ್ಥೆಯನ್ನು ಹೊಂದಿದ್ದವು. ಪ್ರಾಚೀನ ಕಾಲದಲ್ಲೂ ಗ್ರಾಮಗಳು ಉತ್ತಮ ಆಡಳಿತಾತ್ಮಕ ವ್ಯವಸ್ಥೆಯನ್ನು ಹೊಂದಿದ್ದವೆನ್ನಬಹುದು.

ಪ್ರಾಚೀನ ಕಾಲ : ಗ್ರಾಮ ಪಂಚಾಯಿತಿ ವ್ಯವಸ್ಥೆಯು ಭಾರತಕ್ಕೆ ಹೊಸದೇನಲ್ಲ. ಪ್ರಾಚೀನ ಭಾರತದಲ್ಲಿ ವೇದಗಳ ಕಾಲದಿಂದಲೂ ಗ್ರಾಮ ಪಂಚಾಯಿತಿಗಳು ಅಸ್ತಿತ್ವದಲ್ಲಿದ್ದವು. ಪ್ರಾಚೀನ ಭಾರತದಲ್ಲಿ ಗ್ರಾಮ ಪಂಚಾಯಿತಿಗಳ ಅಸ್ತಿತ್ವಕ್ಕೆ ಮನುಸ್ಮೃತಿ, ಪುರಾಣಗಳು, ಇತಿಹಾಸ, ಶಾಸನಗಳು ಮತ್ತು ವಿದೇಶಿ ಪ್ರವಾಸಿಗರ ಬರವಣಿಗೆಗಳಲ್ಲಿ ಸಾಕಷ್ಟು ಪುರಾವೆಗಳಿವೆ.

ರಾಮಾಯಣ ಮತ್ತು ಮಹಾಭಾರತದಲ್ಲಿ ಗ್ರಾಮಾಡಳಿತ ವ್ಯವಸ್ಥೆಯ ಬಗ್ಗೆ ವಿವರಗಳಿವೆ. ಗೋಷ ಮತ್ತು ಗ್ರಾಮ ಎಂಬ ಎರಡು ರೀತಿಯ ಸಮುದಾಯಗಳಿದ್ದು, ಗೋಷ ಗ್ರಾಮಕ್ಕಿಂತ ಚಿಕ್ಕದಾಗಿದ್ದವು. ಗೋಷ ನಿವಾಸಿಗಳನ್ನು 'ಗೋಪರು'' ಎಂದು ಹೆಸರಿಸುತ್ತಿದ್ದ ಬಗ್ಗೆ ಮಹಾಭಾರತದಲ್ಲಿ ಉಲ್ಲೇಖವಿದೆ. ಮನುವಿನ ಅಭಿಪ್ರಾಯದಂತೆ ಗ್ರಾಮ ಮುಖ್ಯಸ್ಥನನ್ನು ''ಗ್ರಾಮಿಕ'' ಎಂತಲೂ ಹತ್ತು ಗ್ರಾಮಗಳ ಮುಖ್ಯಸ್ಥನನ್ನು 'ದಶ ಗ್ರಾಮಿಣಿ' ಎಂತಲೂ ನೂರು ಗ್ರಾಮಗಳ ಮುಖ್ಯಸ್ಥನನ್ನು 'ಸಹಸ್ರ ಗ್ರಾಮಿಣಿ' ಎಂತಲೂ ಕರೆಯುತ್ತಿದ್ದರೆಂದು ಹೇಳಿದ್ದಾರೆ. ಅಟ್ಟೇಕರ್‌ರವರು ಗ್ರಾಮಾಧಿಕಾರಿಗಳು ಗ್ರಾಮದ ಹಿರಿಯರ ಸಲಹೆಯಂತೆ ಕಾರ್ಯನಿರ್ವಹಿಸುತ್ತಿದ್ದರೆಂದು ಸದಸ್ಯರು ಗ್ರಾಮದ ಪ್ರಜಾ ಪ್ರತಿನಿಧಿ ಸಭೆಯಿಂದ ಚುನಾಯಿಸಲ್ಪಡುತ್ತಿದ್ದರೆಂದು ಅಭಿಪ್ರಾಯ ಪಟ್ಟಿದ್ದಾರೆ.

ಶುಕ್ರ ನೀತಿಸಾರದಲ್ಲಿ ಗ್ರಾಮಗಳನ್ನು ಜೇಷ್ಠ, ಮಧ್ಯಮ ಮತ್ತು ಕನಿಷ್ಠ ಎಂಬ ಮೂರು

ವಿಧಗಳಾಗಿ ವಿಭಾಗಿಸಿರುವುದು ಕಂಡು-ಬರುತ್ತದೆ. ಇದರಲ್ಲಿ ಸಹಸ್ರಾಧಿಪತಿ, ಗ್ರಾಮನೇತ, ಭಾಗರ, ಲೇಖಕ, ಶುಲ್ಕ ಗ್ರಾಹಕ ಮತ್ತು ಪ್ರತಿಹಾರಿ ಎಂಬ ಆರು ವಿಧದ ಗ್ರಾಮಾಧಿಕಾರಿಗಳಿದ್ದರೆಂದು ತಿಳಿಸಲಾಗಿದೆ. ಸಹಸ್ರಾಧಿಪತಿಯು - ಶಾಂತಿಪಾಲನೆ ಮತ್ತು ಸುವ್ಯವಸ್ಥೆ, ಗ್ರಾಮನೇತ - ಬಾಕಿ ವಸೂಲಿ, ಲೇಖಕ - ಲೆಕ್ಕವನ್ನೂ, ಶುಲ್ಕಗ್ರಾಹಕ - ತೆರಿಗೆ ವಸೂಲಿ ಮತ್ತು ಪ್ರತಿಹಾರಿಯು - ಸುದ್ದಿ ಪ್ರಸಾರ ಕಾರ್ಯಗಳನ್ನು ನಿರ್ವಹಿಸುತ್ತಿದ್ದರೆಂದು ತಿಳಿಯಲಾಗಿದೆ.

ಪ್ರಾಚೀನ ಭಾರತದ ಗ್ರಾಮಪಂಚಾಯಿತಿಗಳು ಗ್ರಾಮ ಗಣರಾಜ್ಯಗಳಂತಿದ್ದವು. ರಾಜರ ಆಡಳಿತವಿದ್ದಾಗ್ಯೂ ರಾಜರು ಗ್ರಾಮ ಪಂಚಾಯಿತಿ ವ್ಯವಹಾರಗಳಲ್ಲಿ ಅನವಶ್ಯಕ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಅವು ಬಾಹ್ಯ ನಿಯಂತ್ರಣದಿಂದ ಸಂಪೂರ್ಣ ಮುಕ್ತವಾಗಿದ್ದವು. ಗ್ರಾಮ ಪಂಚಾಯಿತಿಗಳು ಸ್ವಯಂ ಸಂಘಟಿತ, ಸ್ವಯಂ ರಕ್ಷಿತ, ಸ್ವತಂತ್ರ ಗಣರಾಜ್ಯಗಳಂತಿದ್ದವು. ಅವು ಅತ್ಯುತ್ತಮ ಮಟ್ಟ ಸ್ವಾತಂತ್ರ್ಯ, ಸ್ವಾವಲಂಬನೆ ಮತ್ತು ಸ್ವಯಂ ಆಡಳಿತವನ್ನು ಹೊಂದಿ ಒಂದೊಂದು ಸ್ವತಂತ್ರ ರಾಷ್ಟ್ರದೋಪಾದಿಯಲ್ಲಿದ್ದವು. ಈ ಮೇಲ್ಕಂಡ ವಿಷಯಗಳನ್ನು ಗಮನಿಸಿದರೆ ಸರ್ ಚಾರ್ಲ್ಸ್ ಮೆಟ್ಕಾಫ್ ಅವರು "ಪ್ರಾಚೀನ ಭಾರತೀಯ ಪಂಚಾಯಿತಿಗಳು ಗಣರಾಜ್ಯಗಳಂತಿದ್ದವು" ಎಂದಿರುವುದು ಸಮಂಜಸವಾಗಿದೆ.

ಮಧ್ಯಯುಗ : ಇದು ಪ್ರಭುತ್ವದ ಕಾಲ. ರಾಜ ಮಹಾರಾಜರ ನಿರಂಕುಶ ಆಡಳಿತದ ಕಾಲ. ಅಧಿಕಾರವನ್ನು ತಮ್ಮದಾಗಿಸಿಕೊಂಡು ಉಂಬಳಿಗಮಾನ್ಯ ವ್ಯವಸ್ಥೆಯನ್ನು ಜಾರಿಗೆ ತಂದರು. ಗ್ರಾಮಾಧಿಕಾರ ಜನರಿಗೆ ಬಿಟ್ಟಿದ್ದು. ಮುಸ್ಲಿಮರ ಆಳ್ವಿಕೆಯವರೆಗೂ ಗ್ರಾಮ ಸಮುದಾಯಗಳು ತಮ್ಮದೇ ಸ್ಥಳೀಯ ಆಡಳಿತವನ್ನು ಮುಂದುವರಿಸಿದ್ದವು. ಚಾಲುಕ್ಯರ ಆಡಳಿತದಲ್ಲಿ ಪ್ರತೀ ಗ್ರಾಮವು 'ಗ್ರಾಮ ಸಂಘ' ಎಂಬ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದವು. ಗ್ರಾಮಗಳ ಸದಸ್ಯರನ್ನು 'ಕೌಟುಂಬಿಕ' ಎಂತಲೂ ಕರೆಯುತ್ತಿದ್ದು, ಗ್ರಾಮ ನಾಯಕರನ್ನು ರಾಜರು ಔಪಚಾರಿಕವಾಗಿ ನೇಮಿಸುತ್ತಿದ್ದರು. ಅಂದಿನ ಗ್ರಾಮೀಣ ನಾಯಕತ್ವವು ವಂಶಪಾರಂಪರ್ಯವಾಗಿತ್ತು.

ಮುಸ್ಲಿಮರ ಕಾಲ : ಮುಸ್ಲಿಮರ ಆಳ್ವಿಕೆಯೊಂದಿಗೆ ಗ್ರಾಮ ಪಂಚಾಯಿತಿಯ ಅವನತಿಯಾಯಿತೆಂದು ಹೇಳಬಹುದು. ಪರಕೀಯರಾದ ತಹ ಮುಸ್ಲಿಂ ರಾಜರು ಮತ್ತು ಆಡಳಿತಗಾರರಿಗೆ ಭಾರತದ ಸ್ವಯಂ ಆಡಳಿತದ ಅರಿವಿಲ್ಲದ್ದರಿಂದ ಮತ್ತು ಅದರ ಅನುಭವವಿಲ್ಲದ್ದರಿಂದ ಗ್ರಾಮ ಪಂಚಾಯಿತಿಯ ಮಹತ್ವದ ಅರಿವು ಅವರಿಗೆ ಇರಲಿಲ್ಲ. ಮುಸ್ಲಿಮರ ಭೂ ಒಡೆತನದ ಹಂಬಲ ಮತ್ತು ಹಳ್ಳಿಗಳ ಸಂಪತ್ತನ್ನು ದೋಚಬೇಕೆಂಬ ದುರಾಸೆಯೂ ಗ್ರಾಮಗಳ ಸ್ವಾವಲಂಬನೆಗೆ ಧಕ್ಕೆಯಾಯಿತು. ಅವರು ಗ್ರಾಮೀಣ ಜನರ ಮೇಲೆ ವಿವಿಧ ರೀತಿಯ ತೆರಿಗೆಗಳನ್ನು ಹೇರಿ ಶೋಷಿಸಿದರು. ಭೂ ಕಂದಾಯ ಸಂದಾಯವು ಗ್ರಾಮೀಣ ಸ್ವಾವಲಂಬನೆಯನ್ನು ನಾಶಗೊಳಿಸಿತು. ಅಕ್ಬರನ ಭೂಹಿಡುವಳಿ ಪದ್ಧತಿಗೆ ಸಂಬಂಧಿಸಿದ ಕೆಲವು ಕ್ರಮಗಳು ಗ್ರಾಮೀಣ ಪಂಚಾಯಿತಿಯಲ್ಲಿ ತ್ವರಿತ ಬದಲಾವಣೆಯನ್ನು ತಂದಿತು.

ಬ್ರಿಟೀಷರ ಕಾಲ : ಬ್ರಿಟೀಷರ ಆಳ್ವಿಕೆಯ ಪ್ರಾರಂಭಿಕ ಕಾಲದಲ್ಲಿ ಭಾರತೀಯ ವ್ಯವಸ್ಥೆ, ಪಂಚಾಯಿತಿಗಳು ನಿರ್ಲಕ್ಷಿಸಲ್ಪಟ್ಟಿದ್ದು, ಅನಂತರ ಗುರುತಿಸಲ್ಪಟ್ಟು ಬ್ರಿಟೀಷ್ ಚಿಂತಕರು ಮತ್ತು ಆಡಳಿತಗಾರರು ಗ್ರಾಮ ಪಂಚಾಯಿತಿಯ ಆಡಳಿತ ವ್ಯವಸ್ಥೆಯನ್ನು ಪ್ರಶಂಶಿಸಿದರು. ಅವುಗಳ ಸ್ವಯಂ ಅಧಿಕಾರವನ್ನು ಮೊಟಕುಗೊಳಿಸಿದರು. ಭೂ ಕಂದಾಯ ವಸೂಲಿ, ಭೂ ಒಡೆತನದ ವ್ಯವಹಾರ, ಗ್ರಾಮೀಣ ಶಾಂತಿಪಾಲನೆ, ಸುವ್ಯವಸ್ಥೆ, ಗ್ರಾಮ ನ್ಯಾಯ ಮುಂತಾದ ಗ್ರಾಮ ಪಂಚಾಯಿತಿಯ ಸಾಂಪ್ರದಾಯಿಕ ಕಾರ್ಯಗಳು ಮತ್ತು ಹಕ್ಕು ಬಾಧ್ಯತೆಗಳು, ಬ್ರಿಟೀಷರ ಕಛೇರಿಗಳಿಗೆ ಮತ್ತು ಅಧಿಕಾರಿಗಳಿಗೆ ಹಸ್ತಾಂತರಗೊಂಡವು. ಬ್ರಿಟೀಷರು ತಮ್ಮ ಕೇಂದ್ರೀಕೃತ ಆಡಳಿತವನ್ನು ಭದ್ರಗೊಳಿಸಿ, ಗ್ರಾಮಾಡಳಿತವನ್ನು ದುರ್ಬಲಗೊಳಿಸಿದರು. ಸ್ವತಂತ್ರ ಗಣರಾಜ್ಯಗಳಂತಿದ್ದ ಗ್ರಾಮಗಳು ಪ್ರತಿಯೊಂದು ವ್ಯವಹಾರಕ್ಕೂ ಬ್ರಿಟಿಷರ ಆಡಳಿತವನ್ನು ಅವಲಂಬಿಸುವಂತಾಯಿತು.

ಆದರೂ ಸಹ ಬ್ರಿಟೀಷ್ ಆಡಳಿತಗಾರರೂ ಕೂಡ ಗ್ರಾಮ ಪಂಚಾಯಿತಿಗಳ ಪುನರುಜ್ಜೀವನಕ್ಕೆ ಕ್ರಮೇಣ ಒಲವು ತೋರಿಸಿದರು. ಸ್ವಯಂ ಆಡಳಿತ ಮತ್ತು ಪ್ರಾದೇಶಿಕ ಆಡಳಿತವನ್ನು ಜಾರಿಗೊಳಿಸುವ ದಿಸೆಯಲ್ಲಿ ಬ್ರಿಟೀಷರು ೧೮೪೨-೭೨ರ ಅವಧಿಯಲ್ಲಿ ಪುರಸಭೆಯನ್ನು ರಚಿಸಿದರು. ೧೮೮೨ರಲ್ಲಿ ಲಾರ್ಡ್ ರಿಪ್ಪನ್ ರವರ ನಿರ್ಣಯದಂತೆ ಭಾರತದ ಅನೇಕ ಪ್ರಾಂತ್ಯಗಳು ಸ್ಥಳೀಯ ಸ್ವಯಂ ಆಡಳಿತ ಸರ್ಕಾರಗಳ ರಚನಾ ಕಾಯಿದೆಗಳನ್ನು ಜಾರಿಗೆ ತಂದವು. ೧೯೦೯ರ ರಾಯಲ್ ಕಮಿಷನ್ ಜಿಲ್ಲಾ ಸಮಿತಿಗಳ ರಚನೆಯ ಜೊತೆಗೆ ಉಪ ಜಿಲ್ಲಾ ಸಮಿತಿ, ತಾಲ್ಲೂಕು ಸಮಿತಿ ಗ್ರಾಮ ಸಮಿತಿಗಳನ್ನು ರಚಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿತು.

ಗ್ರಾಮ ಮಟ್ಟದಲ್ಲಿ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಹಾಗೂ ಆಧುನೀಕರಣ ತರಬೇಕೆಂಬುದು ಪಂಚಾಯತ್ ರಾಜ್ ಸಂಸ್ಥೆಗಳ ಉದ್ದೇಶ. ಭಾರತದ ಇಡೀ ಗ್ರಾಮೀಣ ಸಂರಚನೆಯಲ್ಲಿ ಆಗಬೇಕಿರುವ ಬದಲಾವಣೆಯನ್ನು ಈ ಸಂಸ್ಥೆಗಳ ಮೂಲಕ ತರಲು ಪ್ರಯತ್ನಿಸಲಾಗುತ್ತದೆ. ಭಾರತಕ್ಕೆ ಸ್ವತಂತ್ರ ದೊರೆತ ಕಾಲದಿಂದಲೂ ಭಾರತದ ಜೀವನಾಡಿಗಳೆನಿಸಿದ ಗ್ರಾಮಗಳನ್ನು ಅಭಿವೃದ್ಧಿ ಪಡಿಸುವ ಪ್ರಯತ್ನಗಳನ್ನು ಸತತವಾಗಿ ಮಾಡಲಾಗುತ್ತಿದೆ. ೧೯೫೨ರಲ್ಲಿ ಭಾರತದ ಗ್ರಾಮೀಣ ಜನತೆಯ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರಾರಂಭಿಸಿದ ಸಮುದಾಯ ಅಭಿವೃದ್ಧಿ ಕಾರ್ಯಕ್ರಮ ಇಂಥ ಪ್ರಯತ್ನಗಳಲ್ಲಿ ಮೊದಲನೆಯದು. ೧೯೫೩ರಲ್ಲಿ ಪುನಃ ರಾಷ್ಟ್ರೀಯ ವಿಸ್ತರಣಾ ಸೇವೆಗಳನ್ನು ಹಮ್ಮಿಕೊಳ್ಳಲಾಯಿತು. ಆದರೆ ನಿರ್ಧಾರ ಕೈಗೊಳ್ಳುವ ಅಧಿಕಾರ ಹಾಗೂ ಕಾರ್ಯಕ್ರಮಗಳ ಅನುಷ್ಠಾನದ ಜವಾಬ್ದಾರಿ ಇವೆರಡೂ ಸರ್ಕಾರದ ಆಡಳಿತ ಯಂತ್ರದ ಕೈಯಲ್ಲಿದ್ದುದರಿಂದ ಸ್ಥಳೀಯ ಜನರ ಪಾಲ್ಗೊಳ್ಳುವಿಕೆ ಸಾಕಷ್ಟಿರಲಿಲ್ಲ. ಹೀಗಾಗಿ ಇವೆರಡೂ ಪ್ರಯತ್ನಗಳು ವಿಫಲವಾದವು.

ಕ್ರಿ.ಶ.೧೯೫೭ರಲ್ಲಿ ಬಲವಂತರಾಯ್ ಜೆ.ಮೆಹ್ತಾ ಸಮಿತಿ ಗ್ರಾಮೀಣ ಅಭಿವೃದ್ಧಿಗಾಗಿ ಮೂರು

ಹಂತದ ವ್ಯವಸ್ಥೆಯನ್ನು ಶಿಫಾರಸ್ಸು ಮಾಡಿತು. ಅವುಗಳೆಂದರೆ ಗ್ರಾಮ, ಮಧ್ಯಂತರ ಮತ್ತು ಉನ್ನತ ವ್ಯವಸ್ಥೆಗಳು. ೧೯೫೯ರಲ್ಲಿ ನೆಹರೂರವರ ವೈಯಕ್ತಿಕ ಶ್ರಮದಿಂದಾಗಿ ರಾಜಸ್ಥಾನದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೆ ಬಂದಿತು. ನಂತರ ೧೯೬೦ರ ಮಧ್ಯಭಾಗದಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿ (ಡಿ.ಡಿ.ಬಿ)ಯು ಗ್ರಾಮಪಂಚಾಯಿತಿಗಳಿಗೆ ಚುನಾವಣೆ ನಡೆಸಲಾಯಿತು. ಈ ವ್ಯವಸ್ಥೆಯಲ್ಲಿ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಶ್ರಮವಹಿಸಿದ ಹಲವು ಮಹಿಳೆಯರನ್ನು ಜೊತೆಗೂಡಿಸಿಕೊಳ್ಳಲಾಯಿತು.

ಕ್ರಿ.ಶ.೧೯೭೭ರಲ್ಲಿ ಅಶೋಕ ಮೆಹ್ತಾ ಕಮಿಟಿಯು ಸ್ಥಳೀಯ ಪಂಚಾಯಿತಿಗಳನ್ನು ರಾಜಕೀಯ ಸಂಸ್ಥೆಗಳನ್ನಾಗಿಸಿ ಪ್ರಜಾಪ್ರಭುತ್ವ ವ್ಯವಸ್ಥೆ ಕಾಪಾಡಲು ವರದಿ ಮಾಡಿತು. ಇದರಲ್ಲಿ ಮೊಟ್ಟ ಮೊದಲ ಬಾರಿಗೆ ಮಹಿಳೆಯರಿಗೆ ಮೀಸಲಾತಿ ನಿಗಧಿಪಡಿಸಲಾಯಿತು. ಈ ಸಮಿತಿಯ ವರದಿ ಆಧರಿಸಿ ೧೯೮೫ರಲ್ಲಿ ಕಾನೂನು ರಚಿಸಿ ಕರ್ನಾಟಕದಲ್ಲಿ ಶೇ.೨೫ರಷ್ಟು ಮೀಸಲಾತಿಯನ್ನು ಮಹಿಳೆಯರಿಗೆ ನೀಡಲಾಯಿತು.

ಕ್ರಿ.ಶ.೧೯೮೩ರಲ್ಲಿ ಅಬ್ದುಲ್ ನಾಜೀರ್ ಸಾಬ್ ರವರ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪ್ರಯತ್ನದಿಂದಾಗಿ ಶೇ.೨೫ರ ಮೀಸಲಾತಿ ಕರ್ನಾಟಕದಲ್ಲಿ ಪ್ರಭಲವಾಯಿತು. ಈ ಹಂತದಲ್ಲಿ ಇದ್ದಂತಹ ಹಲವು ಕೊರತೆಗಳನ್ನು ನೀಗಿಸಿ ಅವುಗಳನ್ನು ಬಲಗೊಳಿಸಿ, ನಿರಂತರವಾದ ಅಸ್ತಿತ್ವವನ್ನು ಉಳಿಸಿ ಎಲ್ಲಾ ಅಧಿಕಾರವನ್ನು ಗ್ರಾಮ ಪಂಚಾಯಿತಿಗಳಿಗೆ ನೀಡುವುದರ ಜೊತೆಗೆ ಸಂವಿಧಾನದ ಮೂಲಕ ಉನ್ನತ ಸ್ಥಾನಮಾನವನ್ನು ನೀಡಬೇಕೆಂಬುದು ಆಗಿನ ಪ್ರಧಾನ ಮಂತ್ರಿಗಳಾದ ರಾಜೀವ ಗಾಂಧಿಯವರ ಆಸಕ್ತಿಯಾಗಿದ್ದ ಕಾರಣ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಸಿದ್ಧಪಡಿಸಿದರು. ಆದರೆ ಇದಕ್ಕೆ ರಾಜ್ಯಸಭೆಯಲ್ಲಿ ಬೆಂಬಲ ದೊರೆಯಲಿಲ್ಲ. ಇವರ ಕನಸನ್ನು ನನಸು ಮಾಡಲು ಪಿ.ವಿ.ನರಸಿಂಹರಾವ್ ರವರ ನೇತೃತ್ವದ, ಕಾಂಗ್ರೆಸ್ ಸರ್ಕಾರ ದಿಟ್ಟ ಕ್ರಮವನ್ನು ತೆಗೆದುಕೊಂಡಿತು. ಪರಿಣಾಮವಾಗಿ ಸಂವಿಧಾನದ ೭೩ನೇ ತಿದ್ದುಪಡಿ ಮಸೂದೆಗೆ ಸಂಪತ್ತಿನ ಅಂಗೀಕಾರ ೧೯೯೨ರಲ್ಲಿ ದೊರೆಯಿತು. ೨೪-೦೪-೧೯೯೩ರಿಂದ ಇಲ್ಲಿನ ಸೂಚನೆಗಳು ಜಾರಿಗೆ ಬಂದವು. ಈ ತಿದ್ದುಪಡಿಯಿಂದಾಗಿ ಮಹಿಳೆಯರಿಗೆ ಗ್ರಾಮ ಪಂಚಾಯಿತಿಯಲ್ಲಿ ಶೇ.೩೩.೩. ಮೀಸಲಾತಿ ದೊರಕಿತು. ದಿ ಪಂಚಾಯತ್ ಎಂಬ ಶೀರ್ಷಿಕೆಯನ್ನು ಒಳಗೊಂಡ ೯ನೇ ಅಧ್ಯಾಯವನ್ನು ಸಂವಿಧಾನದಲ್ಲಿ ಸೇರಿಸಿ, ೨೪೩ ರಿಂದ ೨೪೩ರವರೆಗೆ ೧೬ ಹೊಸ ವಿಧಿಗಳನ್ನು ಅಳವಡಿಸಿಕೊಳ್ಳಲಾಯಿತು. ಹೀಗೆ ಮಹಿಳೆಯರು ಗ್ರಾಮ ಪಂಚಾಯಿತಿಯಲ್ಲಿ ಸ್ಥಾನಪಡೆದು ಹಲವು ಸಾಧನೆಗಳ ಕಡೆಗೆ ಹೆಜ್ಜೆ ಇಟ್ಟಿದ್ದಾರೆಯಾದರೂ, ಅಲ್ಲಿಯೇ ಸಮಸ್ಯೆಗಳನ್ನೂ ಎದುರಿಸುತ್ತಿದ್ದಾರೆ.

ಸ್ವಾತಂತ್ರ್ಯಾ ನಂತರ ಸಂವಿಧಾನ ಸಮಾನ ಅವಕಾಶ ನೀಡಿದ್ದರೂ ಮಹಿಳೆಯರು ರಾಜಕೀಯದಿಂದ ದೂರ ಉಳಿದರು. ವಿಶೇಷ ಪ್ರಕರಣವಾಗಿ ಶ್ರೀಮತಿ ಇಂದಿರಾಗಾಂಧಿಯವರು ಹನ್ನೊಂದು ವರ್ಷಗಳ ಕಾಲ ದೇಶವನ್ನು ಆಳಿದರು. ರಾಷ್ಟ್ರ ಮತ್ತು ರಾಜ್ಯಮಟ್ಟದ ರಾಜಕಾರಣದಲ್ಲಿ ಮಹಿಳೆಯರ ಸಂಖ್ಯೆ

ಹೆಚ್ಚಾಗಲೇ ಇಲ್ಲ. ೧೯೭೪ರಲ್ಲಿ ಎನ್ .ಸಿ.ಎಸ್ .ಡಬ್ಲ್ಯೂ ಸಲ್ಲಿಸಿದ ವರದಿಯಲ್ಲಿ ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆ ತುಂಬಾ ಕಡಿಮೆಯಿರುವುದು ಕಂಡುಬಂದಿತು. ಮಹಿಳೆಯರು ಅವರಾಗಿಯೇ ರಾಜಕೀಯ ಪ್ರವೇಶ ಮಾಡಲು ಸಾಧ್ಯವಿಲ್ಲ ಎಂಬುದನ್ನು ಕಂಡುಕೊಂಡ ಕರ್ನಾಟಕ ಸರ್ಕಾರ ೧೯೮೭ರಲ್ಲಿ ಮಂಡಲ್ ಪಂಚಾಯಿತಿಯಲ್ಲಿ ಶೇ.೨೫ರಷ್ಟು ಮೀಸಲಾತಿಯನ್ನು ನೀಡಿತು. ಇದೇ ನೀತಿಯನ್ನು ಅನುಸರಿಸಿ ೧೯೯೨ರಲ್ಲಿ ಭಾರತ ಸರ್ಕಾರ ೭೩ ಮತ್ತು ೭೪ನೇ ಸಂವಿಧಾನ ತಿದ್ದುಪಡಿ ಮಾಡಿ ಸ್ಥಳೀಯ ಸಂಸ್ಥೆ ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಶೇ.೩೩ರಷ್ಟು ಮೀಸಲಾತಿಯನ್ನು ನೀಡಿತು.

ಭಾರತದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಬಹಳ ಕಾಲದಿಂದ ಅಸ್ತಿತ್ವದಲ್ಲಿದ್ದರೂ ಜನರ ಆಶೋತ್ತರಗಳಿಗೆ ಸ್ಪಂದಿಸುವ ಉತ್ತಮ ಸೇವೆಯನ್ನು ನೀಡುವ ಸ್ಥಳೀಯ ಸ್ವಯಂ ಸರ್ಕಾರಗಳಾಗಿ ಕೆಲಸ ನಿರ್ವಹಿಸುವ ಸ್ಥಾನಮಾನ ಮತ್ತು ಗೌರವಗಳನ್ನು ಸಂಪಾದಿಸುವಲ್ಲಿ ವಿಫಲವಾಗಿವೆ. ಎಂದು ಹೇಳಬಹುದು. ನಿಯಮಿತವಾಗಿ ನಡೆಯುವ ಚುನಾವಣೆಗಳು, ಮಹಿಳೆಯರು, ದುರ್ಬಲ ವರ್ಗದವರಿಗೆ ಪ್ರಾತಿನಿಧ್ಯ ಕಡಿಮೆ ಪ್ರಮಾಣದಲ್ಲಿರುವುದು, ಸಾಕಷ್ಟು ಪ್ರಮಾಣದ ಅಧಿಕಾರವನ್ನು ನೀಡದಿರುವುದು, ಆರ್ಥಿಕ ಸಂಪನ್ಮೂಲಗಳ ಕೊರತೆ ಮುಂತಾದವುಗಳು ಅದಕ್ಕೆ ಅಡ್ಡಿ ಆತಂಕವನ್ನು ಉಂಟುಮಾಡಿದ್ದವು. ಈ ಕೊರತೆಗಳನ್ನು ನೀಗಿಸಿ ಅವುಗಳನ್ನು ಬಲಗೊಳಿಸಿ ನಿರಂತರವಾದ ಅಸ್ತಿತ್ವವನ್ನು ಉಳಿಸಿ ಎಲ್ಲಾ ಅಧಿಕಾರವನ್ನು ನೀಡುವುದರ ಜೊತೆಗೆ ಸಂವಿಧಾನದ ಮೂಲಕ ಸ್ಥಾನಮಾನವನ್ನು ನೀಡುವುದು ಆಗಿನ ಪ್ರಧಾನ ಮಂತ್ರಿಗಳಾದ ಶ್ರೀ ರಾಜೀವ್ ಗಾಂಧಿಯವರು ಪ್ರಯತ್ನಿಸಿ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಸಿದ್ದಪಡಿಸಿದರು. ೨೪-೦೪-೧೯೯೩ ರಿಂದ ಜಾರಿಗೆ ಬಂದಿತು. ''ದಿ ಪಂಚಾಯತ್ '' ಶೀರ್ಷಿಕೆಯನ್ನು ಒಳಗೊಂಡು ೯ನೇ ಅಧ್ಯಯನವನ್ನು ಸಂವಿಧಾನದಲ್ಲಿ ಸೇರಿಸಿ ೨೪೩ ರಿಂದ ೨೪೩ರವರೆಗೂ ೧೬ ಹೊಸ ವಿಧಿಗಳನ್ನು ಅಳವಡಿಸಲಾಗಿದೆ.

೨೪೩ನೇ ವಿಧಿಯ ಪ್ರಕಾರ ಪ್ರತಿ ರಾಜ್ಯದಲ್ಲಿ ಮೂರು ಹಂತದಲ್ಲಿ ಅಂದರೆ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಪಂಚಾಯಿತಿಗಳನ್ನು ರಚಿಸುವುದು. ಇಪ್ಪತ್ತು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯಿಲ್ಲದ ರಾಜ್ಯಗಳಲ್ಲಿ ತಾಲ್ಲೂಕು ಪಂಚಾಯಿತಿಗಳನ್ನು ರಚಿಸಬೇಕಾಗಿಲ್ಲ.

೨೪೩ನೇ ವಿಧಿಯ ರಚನೆಗಳ ಬಗ್ಗೆ ತಿಳಿಸುತ್ತದೆ. ಈ ವಿಷಯದಲ್ಲಿ ಕಾನೂನು ಮಾಡಲು ರಾಜ್ಯ ಶಾಸಕಾಂಗಕ್ಕೆ ಅಧಿಕಾರ ನೀಡಿದೆ. ನೇರ ಚುನಾವಣೆಯ ಮೂಲಕ ಸದಸ್ಯರು ಪ್ರಜೆಗಳಿಂದ ಆಯ್ಕೆಯಾಗಬೇಕು. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಸಂಬಂಧಪಟ್ಟ ಸಂಸತ್ತಿನ ಎರಡು ಸದನ ಹಾಗೂ ರಾಜ್ಯ ಶಾಸಕಾಂಗದ ಎರಡು ಸದನಗಳ ಸದಸ್ಯರು ಪ್ರಾತಿನಿಧ್ಯತೆ ಪಡೆಯುವಂತೆ ರಾಜ್ಯ ಶಾಸಕಾಂಗ ಕಾನೂನು ಮಾಡಲು ಅಧಿಕಾರ ಪಡೆದಿದೆ. ಪಂಚಾಯಿತಿಯ ಅಧ್ಯಕ್ಷರು ಮತ್ತು ಎಲ್ಲಾ ಸದಸ್ಯರು (ಆಯ್ಕೆಯಾದರವು

ಹಾಗೂ ಪದನಿಮಿತ್ತ ಸದಸ್ಯರು) ಅವರ ಸಭೆಗಳಲ್ಲಿ ಮತದಾನದ ಹಕ್ಕನ್ನು ಪಡೆದಿದ್ದಾರೆ ಎಂದು ೪ನೇ ಉಪವಿಧಿ ತಿಳಿಸುತ್ತದೆ.

೫ನೇ ಉಪವಿಧಿಯ ಪ್ರಕಾರ ಗ್ರಾಮ ಪಂಚಾಯಿತಿ ಅಧ್ಯಕ್ಷರ ಆಯ್ಕೆಯ ವಿಧಾನದ ಬಗ್ಗೆ ರಾಜ್ಯ ಶಾಸಕಾಂಗವು ಕಾನೂನು ಮಾಡಬಹುದು ಮತ್ತು ಉಳಿದ ಎರಡು ಹಂತದ ಪಂಚಾಯಿತಿಗಳ ಅಧ್ಯಕ್ಷರನ್ನು ಚುನಾಯಿತ ಸದಸ್ಯರು ತಮ್ಮಲ್ಲೇ ಒಬ್ಬರನ್ನು ಆಯ್ಕೆ ಮಾಡಬೇಕಾಗುವುದು.

೨೪೩(ಡಿ) ವಿಧಿಯು ಮೀಸಲು ಸ್ಥಾನಗಳ ಬಗ್ಗೆ ತಿಳಿಸುತ್ತದೆ. ಪ್ರತಿಯೊಂದು ಹಂತದ ಪಂಚಾಯಿತಿಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಕೆಲವು ಸದಸ್ಯ ಸ್ಥಾನಗಳನ್ನು ಮೀಸಲಿಡಬೇಕು. ಈ ವರ್ಗಗಳಿಗೆ ನಿಗಧಿಪಡಿಸಿರುವ ಒಟ್ಟು ಮೀಸಲು ಕ್ಷೇತ್ರಗಳಲ್ಲಿ ೧/೩ಕ್ಕೆ ಕಡಿಮೆಯಿಲ್ಲದಂತೆ ಈ ವರ್ಗಗಳ ಮಹಿಳೆಯರಿಗೆ ಮೀಸಲು ಸ್ಥಾನಗಳ ಅವಕಾಶವಿದೆ. ಅಲ್ಲದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳು ಮಹಿಳೆಯರಿಗೆ ಮೀಸಲಿಡುವ ಸ್ಥಾನಗಳೂ ಸೇರಿದಂತೆ ಇತರೆ ಮಹಿಳೆಯರಿಗೂ ಎಲ್ಲಾ ಹಂತದ ಪಂಚಾಯಿತಿಗಳು ೧/೩ಕ್ಕಿಂತ ಕಡಿಮೆ ಇಲ್ಲದೆ ಸ್ಥಾನಗಳನ್ನು ಕಾಯ್ದಿರಿಸಬೇಕು. ಮೀಸಲು ಕ್ಷೇತ್ರಗಳನ್ನು ಸರದಿಯ ಆಧಾರದ ಮೇಲೆ ಬದಲಾಯಿಸಲು ಅವಕಾಶವಿದೆ. ರಾಜ್ಯದ ಶಾಸಕಾಂಗ ಮಾಡುವ ಕಾನೂನಿನನ್ವಯ ಎಲ್ಲಾ ಹಂತದ ಪಂಚಾಯಿತಿಗಳ ಅಧ್ಯಕ್ಷ ಸ್ಥಾನಗಳನ್ನು ಮೇಲೆ ತಿಳಿಸಿರುವ ಎಲ್ಲಾ ವರ್ಗಗಳಿಗೆ ಹಾಗೂ ೧/೩ರಷ್ಟು ಮಹಿಳೆಯರಿಗೆ ಮೀಸಲಿಡಬೇಕು. ಮೀಸಲು ನಿಯಮಕ್ಕೆ ಒಳಗಾದ ಅಧ್ಯಕ್ಷ ಸ್ಥಾನಗಳನ್ನು ಬದಲಾಯಿಸಲು ಅವಕಾಶವಿದೆ. ಅಲ್ಲದೆ ಹಿಂದುಳಿದ ವರ್ಗದವರಿಗೂ ಯಾವುದೇ ಹಂತದ ಪಂಚಾಯಿತಿಗಳಲ್ಲಿ ಅಥವಾ ಅವರ ಅಧ್ಯಕ್ಷ ಸ್ಥಾನದಲ್ಲಿ ಮೀಸಲು ನಿಯಮ ಜಾರಿಗೆ ತರಲು ರಾಜ್ಯ ಶಾಸಕಾಂಗಕ್ಕೆ ಅಧಿಕಾರವಿದೆ ಎಂದು ೬ನೆಯ ಉಪವಿಧಿಯು ತಿಳಿಸುತ್ತದೆ.

೨೪೩(ಇ) ವಿಧಿಯ ಪ್ರಕಾರಕ ಎಲ್ಲಾ ಹಂತಗಳ ಪಂಚಾಯಿತಿಯ ಅವಧಿ ಮೊದಲ ಸಭೆ ಸೇರುವ ದಿನದಿಂದ ಐದು ವರ್ಷಗಳು ಅವಧಿ ಮುಗಿಯುವುದರೊಳಗೆ ಚುನಾವಣೆ ನಡೆಯಬೇಕು. ಒಂದು ವೇಳೆ ನಿಗಧಿತ ಅವಧಿಗಿಂತ ಮೊದಲೇ ವಿಸರ್ಜನೆಯಾದಲ್ಲಿ ಆರು ತಿಂಗಳೊಳಗೆ ಚುನಾವಣೆ ನಡೆಯಬೇಕು. ವಿಸರ್ಜನೆಯಾದ ೬ ತಿಂಗಳಿಗಿಂತ ಹೆಚ್ಚು ಅವಧಿ ಇದ್ದರೆ ಉಳಿದ ಅವಧಿಗೆ ಮಾತ್ರ ಚುನಾವಣೆ ನಡೆಸಬಹುದು.

೨೪೩(ಜಿ) ವಿಧಿಯನ್ವಯ ಪಂಚಾಯಿತಿಗಳು ಸ್ವಯಂ ಸರ್ಕಾರಗಳಂತೆ ಕೆಲಸ ಮಾಡಲು ರಾಜ್ಯ ಶಾಸಕಾಂಗ ಕಾನೂನು ರಚಿಸಿ ಅವುಗಳಿಗೆ ಅಧಿಕಾರಗಳನ್ನು ಮತ್ತು ಜವಾಬ್ದಾರಿಗಳನ್ನು ಕೊಡಬೇಕು. ಈ ಸ್ಥಳೀಯ ಸರ್ಕಾರಗಳು ಆರ್ಥಿಕ ಅಭಿವೃದ್ಧಿಗೆ ಹಾಗೂ ಸಾಮಾಜಿಕ ನ್ಯಾಯಕ್ಕೆ ಯೋಜನೆಗಳನ್ನು

ಸಿದ್ಧಪಡಿಸಿ ಅವುಗಳನ್ನು ಜಾರಿಗೆ ತರಲು ಹಾಗೂ ಸಂವಿಧಾನದ ೧೧ನೆಯ ಅನುಸೂಚಿಯಲ್ಲಿ ಸರ್ಕಾರಗಳಿಗೆ ನೀಡಿರುವ ವಿಷಯಗಳ ಮೇಲೆ ಕಾನೂನು ಮಾಡಿ ಅವುಗಳನ್ನು ಅನುಷ್ಠಾನಕ್ಕೆ ತರಲು ಅವಕಾಶವಿದ್ದು ಅಧಿಕಾರ ವಿಕೇಂದ್ರೀಕರಣದ ಮಹತ್ವವನ್ನು ಈ ವಿಧಿಯಲ್ಲಿ ಕಾಣಬಹುದು. ಇದೇ ವಿಧಿಯ ಅನ್ವಯ ೧೧ನೇ ಅನುಸೂಚಿಯಲ್ಲಿ ಪಂಚಾಯಿತಿಗಳಿಗೆ ಈ ಕೆಳಕಂಡ ೨೯ ವಿಷಯಗಳ ಬಗ್ಗೆ ಅಧಿಕಾರ ಕೊಡಲಾಗಿದೆ.

೧. ವ್ಯವಸಾಯ
೨. ಭೂ ಅಭಿವೃದ್ಧಿ, ಭೂ ಸುಧಾರಣಾ ಕಾಯ್ದೆಗಳ ಅನುಷ್ಠಾನ
೩. ಸಣ್ಣ ನೀರಾವರಿ ಮತ್ತು ಜಲ ಸಂಪನ್ಮೂಲ ನಿರ್ವಹಣೆ
೪. ಮೀನುಗಾರಿಕೆ
೫. ಹೈನುಗಾರಿಕೆ ಮತ್ತು ಕೋಳಿ ಸಾಕಾಣಿಕೆ
೬. ಸಣ್ಣ ಅರಣ್ಯಗಳ ಉತ್ಪನ್ನ
೭. ಸಾಮಾಜಿಕ ಮತ್ತು ಕೃಷಿ ಅರಣ್ಯ
೮. ಸಣ್ಣ ಕೈಗಾರಿಕೆಗಳು (ಆಹಾರ ಸಂಸ್ಕರಣ ಕೈಗಾರಿಕೆ ಸೇರಿದಂತೆ)
೯. ಗ್ರಾಮೀಣ ವಸತಿ
೧೦. ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳು
೧೧. ಕುಡಿಯುವ ನೀರು
೧೨. ಸೌದೆ ಮತ್ತು ಮೇವು
೧೩. ರಸ್ತೆಗಳು, ಸೇತುವೆಗಳು ಮತ್ತು ಇತರೆ ಸಂಪನ್ನಗಳು
೧೪. ಗ್ರಾಮೀಣ ವಿದ್ಯುಚ್ಛಕ್ತೀಕರಣ
೧೫. ಬಡತನ ನಿರ್ಮೂಲನಾ ಯೋಜನೆ
೧೬. ಸಂಪ್ರದಾಯೇತರ ಇಂಧನ ಮೂಲಗಳು
೧೭. ಶಿಕ್ಷಣ (ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಸೇರಿದಂತೆ)
೧೮. ವಯಸ್ಕರ ಮತ್ತು ಅನೌಪಚಾರಿಕ ಶಿಕ್ಷಣ
೧೯. ತಾಂತ್ರಿಕ ತರಬೇತಿ ಮತ್ತು ವೃತ್ತಿಪರ ಶಿಕ್ಷಣ
೨೦. ಗ್ರಂಥಾಲಯಗಳು
೨೧. ಸಾಂಸ್ಕೃತಿಕ ಚಟುವಟಿಕೆಗಳು
೨೨. ಮಾರುಕಟ್ಟೆ ಮತ್ತು ಜಾತ್ರೆಗಳು
೨೩. ಆರೋಗ್ಯ ಮತ್ತು ನೈರ್ಮಲ್ಯ (ಆಸ್ಪತ್ರೆಗಳು ಮತ್ತು ಪ್ರಾಥಮಿಕ ಕೇಂದ್ರಗಳು ಸೇರಿದಂತೆ)

೨೪. ಕುಟುಂಬ ಕಲ್ಯಾಣ

೨೫. ಸಾಮಾಜಿಕ ಕಲ್ಯಾಣ

೨೬. ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ

೨೭. ಪರಿಶಿಷ್ಟ ಜಾತಿ - ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ

೨೮. ಸಾರ್ವಜನಿಕ ವಿತರಣಾ ಪದ್ಧತಿ

೨೯. ಸಮುದಾಯದ ಆರ್ಥಿಕ ಸಂರಕ್ಷಣೆ

ಪಂಚಾಯಿತಿಗಳ ಹಣಕಾಸು ಪದ್ಧತಿಯ ಪರಿಶೀಲನೆಗೆ ಮತ್ತು ಶಿಫಾರಸ್ಸುಗಳಿಗೆ ೭೩ನೇ ಸಂವಿಧಾನದ ತಿದ್ದುಪಡಿ ಜಾರಿಗೆ ಬಂದ ಒಂದು ವರ್ಷದೊಳಗೆ ಮತ್ತು ಆ ನಂತರ ೫ ವರ್ಷಕ್ಕೊಮ್ಮೆ ರಾಜ್ಯಪಾಲರು ಹಣಕಾಸು ಆಯೋಗವನ್ನು ನೇಮಿಸಬೇಕೆಂದು ೨೪೩-೧ ವಿಧಿ ತಿಳಿಸುತ್ತದೆ.

ಪಂಚಾಯಿತಿಗಳನ್ನು ನಡೆಸಲು ಮತದಾರರ ಪಟ್ಟಿಗಳನ್ನು ತಿದ್ದುಪಡಿಸಿ ಮೇಲ್ವಿಚಾರಣೆಗೆ ಹಾಗೂ ನಿವೇಶನ ಮಾಡಲು ರಾಜ್ಯ ಚುನಾವಣಾ ಆಯೋಗಕ್ಕೆ ೨೪೩ನೇ ವಿಧಿಯು ಅಧಿಕಾರ ನೀಡಿದೆ. ರಾಜ್ಯ ಚುನಾವಣಾ ಅಧಿಕಾರಿಯನ್ನು ರಾಜ್ಯಪಾಲರು ನೇಮಿಸಬೇಕು. ರಾಜ್ಯಶಾಸಕಾಂಗ ಕಾನೂನಿಗೆ ಅನುಗುಣವಾಗಿ ಚುನಾವಣಾ ಅಧಿಕಾರಿಯ ಸೇವಾ ನಿಯಮಗಳನ್ನು ಮತ್ತು ಅವಧಿಯನ್ನು ರಾಜ್ಯಪಾಲರು ನಿರ್ಧರಿಸುತ್ತಾರೆ. ಹೈಕೋರ್ಟಿನ ನ್ಯಾಯಾಧೀಶರ ಪದಚ್ಯುತಿಗೆ ಗೊತ್ತುಪಡಿಸಿರುವ ಸರಿಸಮವಾದ ಕಾರಣಗಳು ಮತ್ತು ಪ್ರಕ್ರಿಯೆಯನ್ನು ಅನುಸರಿಸಿ ರಾಜ್ಯ ಚುನಾವಣಾಧಿಕಾರಿಯನ್ನು ಪದಚ್ಯುತಿಗೊಳಿಸಬಹುದು.

ಪಂಚಾಯತ್‌ರಾಜ್ ಹಂತಗಳು

೧. ಗ್ರಾಮ ಪಂಚಾಯಿತಿ : ಪಂಚಾಯಿತಿ ರಾಜ್ಯ ವ್ಯವಸ್ಥೆಯ ಮೊದಲ ಹಂತವೇ ಗ್ರಾಮ ಪಂಚಾಯಿತಿ. ಐದು ಸಾವಿರದಿಂದ ಏಳು ಸಾವಿರ ಜನಸಂಖ್ಯೆಯುಳ್ಳ ಗ್ರಾಮ ಅಥವಾ ಗ್ರಾಮಗಳ ಗುಂಪನ್ನು ಪಂಚಾಯಿತಿಯ ರಚನೆಗೆ ಪರಿಗಣಿಸಲಾಗಿದೆ. ಆದರೆ ಮಲೆನಾಡು ಮತ್ತು ಕರಾವಳಿಯ ಚಿಕ್ಕಮಂಗಳೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಹಾಸನ, ಶಿವಮೊಗ್ಗ ಇತ್ಯಾದಿ ಜಿಲ್ಲೆಗಳಲ್ಲಿ ಈ ಸಂಖ್ಯೆ ೨,೫೦೦ ಸಂಖ್ಯೆಗೆ ಮಿತಿಗೊಂಡಿದೆ. ಕರ್ನಾಟಕ ರಾಜ್ಯದಲ್ಲಿನ ಗ್ರಾಮಪಂಚಾಯಿತಿಯ ಸದಸ್ಯರ ಒಟ್ಟು ಸಂಖ್ಯೆ ಅದರ ಒಟ್ಟು ಜನಸಂಖ್ಯೆಗೆ ಅನುಗುಣವಾಗಿರುತ್ತದೆ. ಪ್ರತಿ ೪೦೦ ಜನಸಂಖ್ಯೆಗೆ ಒಬ್ಬ ಸದಸ್ಯನಿರುತ್ತಾನೆ/ಳೆ. ಗ್ರಾಮ ಪಂಚಾಯಿತಿಯ ಒಟ್ಟು ಸ್ಥಾನಗಳಲ್ಲಿ ಶೇ.೧೮ ಸ್ಥಾನಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೂ ೧/೩ ಸ್ಥಾನ ಹಾಗೂ ಮಹಿಳೆಯರಿಗೂ ೧/೩ ಭಾಗ ಮೀಸಲಿರಿಸಲಾಗಿದೆ. ಪ್ರತಿ ಗ್ರಾಮ ಪಂಚಾಯಿತಿಯು ಒಬ್ಬ ಅಧ್ಯಕ್ಷ ಮತ್ತು ಒಬ್ಬ ಉಪಾಧ್ಯಕ್ಷರನ್ನು ಹೊಂದಿರುತ್ತದೆ. ಇವರು ಗ್ರಾಮ ಪಂಚಾಯಿತಿ ಸದಸ್ಯರಿಂದ ಚುನಾಯಿಸಲ್ಪಡುತ್ತಾರೆ. ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳು ಮೇಲಿನಂತೆ ಶೇಕಡಾನ್ವಯ ಮೀಸಲಾತಿಗೊಳಪಟ್ಟಿದೆ. ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗೆ ಕನಿಷ್ಠ ೨೧ ವರ್ಷ

ವಯಸ್ಸಾಗಿರಬೇಕು ಮತ್ತು ಮತದಾರರಿಗೆ ೧೮ ವರ್ಷ ವಯಸ್ಸಾಗಿರಬೇಕು. ಪ್ರತೀ ಗ್ರಾಮ ಪಂಚಾಯಿತಿಯ ಅಧಿಕಾರಾವಧಿಯು ೫ ವರ್ಷಗಳು.

ರಾಜೀನಾಮೆ, ವಜಾಗೊಳಿಸುವಿಕೆ ಅಥವಾ ಇನ್ನಾವುದೇ ರೀತಿಯಿಂದ ಸ್ಥಾನವು ತೆರವಾದಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಮತ್ತೊಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಬಹುದಾಗಿದೆ. ಈ ಕಾರ್ಯವನ್ನು ಗ್ರಾಮ ಪಂಚಾಯಿತಿಗೆ ಆಯ್ಕೆಯಾದ ಸದಸ್ಯರುಗಳಿಂದಲೇ ನಡೆಸಲಾಗುತ್ತದೆ. ಕೆಲವು ವೇಳೆ ಹುದ್ದೆಗಳು ಖಾಲಿ ಇದ್ದಾಗ ಜಿಲ್ಲಾಧಿಕಾರಿಯು ನೇಮಿಸಿದ ಸದಸ್ಯರು ತಾತ್ಕಾಲಿಕ ಅಧ್ಯಕ್ಷರಾಗಿ ಕಾರ್ಯವನ್ನು ನಿರ್ವಹಿಸುತ್ತಾರೆ.

ಗ್ರಾಮ ಪಂಚಾಯಿತಿಗಳಲ್ಲಿ ಅಧಿಕಾರವಧಿಯು ಗ್ರಾಮ ಪಂಚಾಯಿತಿಯ ಸಾಮಾನ್ಯ ಚುನಾವಣೆಗೆ ಅಥವಾ ಎರಡನೇ ಚುನಾವಣೆಯಲ್ಲಿ ಆಯ್ಕೆಯಾಗಿರುವ ಸದಸ್ಯರ ಮೊದಲ ಸಭೆಯಿಂದ ಆರಂಭವಾಗುತ್ತದೆ. ಸಾಂದರ್ಭಿಕವಾದ ಸ್ಥಾನವನ್ನು ತುಂಬಿದಲ್ಲಿ ಅಧಿಕಾರವಧಿಯು ೫ನೇ ಸೆಕ್ಷನ್ ೮ನೇ ಸಬ್ ಸೆಕ್ಷನ್ ಅಡಿಯಲ್ಲಿ ಆತನ ಹೆಸರನ್ನು ಪ್ರಕಟಿಸಿದ ದಿನದಿಂದ ಪ್ರಾರಂಭವಾಗುತ್ತದೆ. ಗ್ರಾಮ ಪಂಚಾಯಿತಿ ಸದಸ್ಯರು ಅಧ್ಯಕ್ಷನಿಗೆ ರಾಜಿನಾಮೆ ಪತ್ರ ಬರೆದು ರಾಜಿನಾಮೆ ನೀಡಬಹುದು. ಅಂತಹ ರಾಜೀನಾಮೆ ಪತ್ರವು ಸ್ವೀಕರಿಸಲ್ಪಟ್ಟ ದಿನದಿಂದ ೧೫ ದಿನಗಳ ನಂತರ ಸ್ಥಾನವು ತೆರವಾಗುತ್ತದೆ. ಈ ದಿನದೊಳಗೆ ಸದಸ್ಯರು ರಾಜೀನಾಮೆ ಪತ್ರವನ್ನು ಹಿಂತೆಗೆದುಕೊಳ್ಳಬಹುದು.

ಚುನಾವಣೆಯ ಮೂಲಕ ಆಯ್ಕೆಯಾದ ಸದಸ್ಯರು ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಪ್ರತಿ ೨ ತಿಂಗಳಿಗೊಮ್ಮೆಯಾದರೂ ಸಭೆ ಸೇರಬೇಕು. ಒಂದು ವೇಳೆ ತುರ್ತು ವಿಷಯಕ್ಕೆ ಸಂಬಂಧಪಟ್ಟಂತೆ ಸಭೆ ಕರೆಯಬೇಕೆಂಬ ಇಚ್ಛೆ ಇದ್ದಲ್ಲಿ, ಆಯ್ಕೆಯಾದ ೧/೩ ಭಾಗ ಸದಸ್ಯರು ಪತ್ರ ಮುಖಾಂತರ ಕೋರಿದರೆ ಪತ್ರ ತಲುಪಿದ ೧೫ ದಿನದೊಳಗೆ ವಿಶೇಷ ಸಭೆಗಳನ್ನು ನಡೆಸಬಹುದು. ಕೆಲವು ಸಂದರ್ಭಗಳಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಮೇಲೆ ಅವಿಶ್ವಾಸ ಗೊತ್ತುವಳಿ ಮಂಡಿಸುವಂತಿದ್ದರೆ ಆಯ್ಕೆಯಾದ ಸದಸ್ಯರಲ್ಲಿ ೨/೩ ಭಾಗ ಸದಸ್ಯರು ತಮ್ಮ ಅವಿಶ್ವಾಸ ನಿರ್ಣಯವನ್ನು ಮಂಡಿಸಿದರೆ ಆಗ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಸ್ಥಾನ ತೆರವಾದಂತೆ. ಆದರೆ ೨/೩ರಷ್ಟು ಭಾಗಕ್ಕಿಂತಲೂ ಕಡಿಮೆಯಿಲ್ಲದ ಸದಸ್ಯರು ಸಹಿ ಮಾಡಿದ ಉದ್ದೇಶವನ್ನು ವ್ಯಕ್ತಪಡಿಸುವ ಪತ್ರದ ಮೂಲಕ ನೀಡಬೇಕಾಗುತ್ತದೆ.

ಪ್ರತಿಯೊಂದು ಗ್ರಾಮ ಪಂಚಾಯಿತಿಗೂ ಒಬ್ಬ ಪೂರ್ಣಕಾಲಿಕ ಕಾರ್ಯದರ್ಶಿ ಇರುತ್ತಾನೆ. ಈತನು ಸರ್ಕಾರಿ ನೌಕರನಾಗಿದ್ದು ಗ್ರಾಮ ಪಂಚಾಯಿತಿ ಆಡಳಿತ ನಿರ್ವಹಣೆಯನ್ನು ಹೊಂದಿರುತ್ತಾನೆ. ಕಾರ್ಯದರ್ಶಿಯು ಸಾಮಾನ್ಯ ಸಭೆಗಳಿಗೆ ೭ ದಿನಗಳು ಮತ್ತು ವಿಶೇಷ ಸಭೆಗಳಿಗೆ ಕನಿಷ್ಟ ಪಕ್ಷ ಮೂರು ದಿನಗಳ ಮುಂಚಿತವಾಗಿ ನೋಟೀಸನ್ನು ಜಾರಿ ಮಾಡಬೇಕಾಗುತ್ತದೆ. ಇದರಲ್ಲಿ ಸಭೆ ನಡೆಯುವ ದಿನಾಂಕ,

ಸಮಯ, ಸ್ಥಳವನ್ನು ಸ್ಪಷ್ಟವಾಗಿ ನಮೂದಿಸಬೇಕಾಗುತ್ತದೆ. ಆತನು ಹೀಗೆ ಮಾಡಲು ವಿಫಲವಾದರೆ ಸಭೆಯನ್ನು ಕರೆಯಬಹುದು. ಸರ್ಕಾರದಿಂದ ನಿರ್ದೇಶಿಸಲ್ಪಟ್ಟಂತೆ ನೋಟೀಸನ್ನು ನೀಡಲ್ಪಟ್ಟ ಅಧಿಕಾರಿಗಳು ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬಹುದು. ಆದರೆ ಮತ ನೀಡುವ ಹಕ್ಕು ಇರುವುದಿಲ್ಲ. ಆದರೆ ಭಾಗವಹಿಸಬೇಕೆಂಬ ಕಡ್ಡಾಯವಿರುವುದಿಲ್ಲ.

ಪ್ರತಿಯೊಂದು ಗ್ರಾಮ ಪಂಚಾಯಿತಿಗೂ ಸರ್ಕಾರವು ವಾರ್ಷಿಕವಾಗಿ ಮೂರು ಲಕ್ಷ ರೂಪಾಯಿಗಳ ಅನುದಾನ ನೀಡುತ್ತದೆ. ಈ ಮೊತ್ತವನ್ನು ವಿದ್ಯುತ್ ಸರಬರಾಜು, ಆರೋಗ್ಯ, ನೈರ್ಮಲ್ಯ ಮತ್ತಿತರ ಕಲ್ಯಾಣ ಕಾರ್ಯಕ್ರಮಗಳಿಗೆ ವಿನಿಯೋಗಿಸಬೇಕು. ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯಿಂದ ಮೊಬಲಗು, ತೆರಿಗೆ, ಶುಲ್ಕ, ಕಾಣಿಕೆ ಮತ್ತು ಪಂಚಾಯಿತಿಯ ಚರ ಮತ್ತು ಸ್ಥಿರ ಆಸ್ತಿಯಿಂದ ಉತ್ಪತ್ತಿಯ ಗ್ರಾಮಪಂಚಾಯಿತಿ ನಿಧಿಗೆ ಸೇರುತ್ತದೆ.

೨. ತಾಲ್ಲೂಕು ಪಂಚಾಯಿತಿ : ಕರ್ನಾಟಕ ರಾಜ್ಯ ಪಂಚಾಯಿತಿ ರಾಜ್ ವ್ಯವಸ್ಥೆಯಲ್ಲಿ ತಾಲ್ಲೂಕು ಪಂಚಾಯಿತಿಯು ಎರಡನೇ ಹಂತ. ಇದು ತಾಲ್ಲೂಕು ಮಟ್ಟದ ಪಂಚಾಯಿತಿಯಾಗಿದೆ. ರಾಜ್ಯದ ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ತಾಲ್ಲೂಕು ಪಂಚಾಯಿತಿ ಇದ್ದು ಪ್ರಸ್ತುತ ೧೭೫ ತಾಲ್ಲೂಕು ಪಂಚಾಯಿತಿಗಳಿವೆ. ಪ್ರತಿ ೧೦ ಸಾವಿರ ಜನಸಂಖ್ಯೆಗೆ ಒಬ್ಬ ಸದಸ್ಯನಿರುತ್ತಾನೆ/ಳೆ. ತಾಲ್ಲೂಕು ಪಂಚಾಯಿತಿ ಸದಸ್ಯತ್ವದ ಅಭ್ಯರ್ಥಿಗೆ ಕನಿಷ್ಠ ೨೦ ವರ್ಷ ವಯಸ್ಸಾಗಿರಬೇಕು. ಚುನಾಯಿತ ಪ್ರತಿನಿಧಿಗಳಲ್ಲದೆ ಆಯಾ ತಾಲ್ಲೂಕಿಗೆ ಸಂಬಂಧಿಸಿದ ಲೋಕಸಭಾ ಸದಸ್ಯ ರಾಜ್ಯಸಭಾ ಸದಸ್ಯ, ಶಾಸನಾ ಸಭಾ ಮತ್ತು ವಿಧಾನ ಪರಿಷತ್ತಿನ ಸದಸ್ಯರು ಸದಸ್ಯರಾಗಿರುತ್ತಾರೆ. ಉಪವಿಭಾಗಾಧಿಕಾರಿಯು ಲಾಟರಿ ಎತ್ತುವ ಮೂಲಕ ತಾಲ್ಲೂಕಿನ ಗ್ರಾಮ ಪಂಚಾಯಿತಿಯ ೧/೫ ಭಾಗ ಅಧ್ಯಕ್ಷರನ್ನು ಸರದಿ ಪ್ರಕಾರ ಒಂದು ವರ್ಷದ ಅವಧಿಗೆ ತಾಲ್ಲೂಕು ಪಂಚಾಯಿತಿಗೆ ಸದಸ್ಯರನ್ನಾಗಿ ಆಯ್ಕೆ ಮಾಡುತ್ತಾರೆ. ತಾಲ್ಲೂಕು ಪಂಚಾಯಿತಿ ಸಭೆಗಳಲ್ಲಿ ಮತ ನೀಡುವ ಅಧಿಕಾರ ಹೊಂದಿರುತ್ತಾರೆ. ತಾಲ್ಲೂಕು ಪಂಚಾಯಿತಿಯ ಒಟ್ಟು ಸದಸ್ಯರಲ್ಲಿ ಶೇ.೧೮(೧೫+೩) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟಿನವರಿಗೆ ಮತ್ತು ಮಹಿಳೆಯರಿಗೆ ೧/೩ ಭಾಗ ಮೀಸಲಾತಿಯಿರುತ್ತದೆ.

ಇದೇ ಮುಂತಾದ ಮೀಸಲಾತಿಯು ರಾಜ್ಯದ ಒಟ್ಟು ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೂ ಅನ್ವಯಿಸುತ್ತದೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಮತದಾನದ ಹಕ್ಕುಳ್ಳ ಸದಸ್ಯರಿಂದ ಆಯ್ಕೆಗೊಳ್ಳುತ್ತಾರೆ. ಇವರ ಅಧಿಕಾರವಧಿಯು ೫ ವರ್ಷ ಒಂದು ವೇಳೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನವು ಸಾಂದರ್ಭಿಕವಾಗಿ ತೆರವಾದ ಸ್ಥಾನದ ಅವಧಿಯು ಒಂದು ತಿಂಗಳಿಗಿಂತ ಕಡಿಮೆ ಇದ್ದಲ್ಲಿ ಚುನಾವಣೆ ನಡೆಸಲು ಸಾಧ್ಯವಿಲ್ಲದಿದ್ದಲ್ಲಿ ಉಳಿದ ಸದಸ್ಯರಿಂದಲೇ ಆಯ್ಕೆ ಮಾಡಲಾಗುತ್ತದೆ.

ಸಾಮಾನ್ಯ ಚುನಾವಣೆಯಲ್ಲಿ ಆಯ್ಕೆಯಾದ ತಾಲ್ಲೂಕು ಪಂಚಾಯಿತಿ ಸದಸ್ಯರುಗಳ ಅವಧಿಯು ೫ ವರ್ಷಗಳಾಗಿರುತ್ತದೆ. ಈ ಅವಧಿಯು ತಾಲ್ಲೂಕು ಪಂಚಾಯಿತಿ ನಿರ್ದಿಷ್ಟಪಡಿಸಿದ ಪ್ರಥಮ ಸಭೆಯಿಂದ ಆರಂಭವಾಗುತ್ತದೆ. ಆದರೆ ಸಾಂದರ್ಭಿಕವಾಗಿ ಸ್ಥಾನವನ್ನು ತುಂಬಿರುವಂತಹ ಸಂದರ್ಭದಲ್ಲಿ ಆತನ ಹೆಸರನ್ನು ಸೆಕ್ಷನ್ ೧೩೪೫ರ ಪ್ರಕಾರ ಅಧಿಕಾರವು ಪ್ರಾರಂಭವಾಗುತ್ತದೆ. ತಾಲ್ಲೂಕು ಪಂಚಾಯಿತಿಯ ಸಾಮಾನ್ಯ ಸ್ಥಾಯಿ ಸಮಿತಿ, ಹಣಕಾಸು ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸಮಿತಿ ಹಾಗೂ ಸಾಮಾಜಿಕ ನ್ಯಾಯ ಸಮಿತಿ ಎಂಬ ಮೂರು ಸ್ಥಾಯಿ ಸಮಿತಿಗಳಲ್ಲಿ ಹೊಂದಿರುತ್ತದೆ.

೩. ಜಿಲ್ಲಾ ಪಂಚಾಯಿತಿ : ರಾಜ್ಯದ ಪ್ರತೀ ಜಿಲ್ಲೆಯು ಒಂದೊಂದು ಜಿಲ್ಲಾ ಪಂಚಾಯಿತಿಯನ್ನು ಹೊಂದಿದ್ದು ಇದು ಚುನಾಯಿತರಾದ ಸದಸ್ಯರನ್ನು ಹೊಂದಿದ್ದು, ಈ ಸದಸ್ಯರುಗಳ ಸಂಖ್ಯೆ ಪ್ರತೀ ೪೦ ಸಾವಿರ ಜನಸಂಖ್ಯೆಗೆ ಒಬ್ಬರಿರುತ್ತಾರೆ. ಆದರೆ ಇದು ಕೊಡಗು, ಉತ್ತರ ಕನ್ನಡ, ಚಿಕ್ಕಮಂಗಳೂರು ಮುಂತಾದ ಕಡಿಮೆ ಜನಸಾಂದ್ರತೆ ಜಿಲ್ಲೆಗಳಲ್ಲಿ ೩೦ ಸಾವಿರ ಜನಸಂಖ್ಯೆಗೆ ಒಬ್ಬ ಸದಸ್ಯನಿಗೆ ನಿಗಧಿಗೊಳಿಸಲಾಗಿದೆ. ಜಿಲ್ಲೆಗೆ ಸಂಬಂಧಿಸಿದ ಲೋಕಸಭೆ, ರಾಜ್ಯಸಭೆ, ವಿಧಾನ ಪರಿಷತ್ ಸದಸ್ಯರು, ಜಿಲ್ಲಾ ತಾಲ್ಲೂಕು ಪಂಚಾಯಿತಿಗಳ ಅಧ್ಯಕ್ಷರೂ ಸಹ ಜಿಲ್ಲಾ ಪಂಚಾಯಿತಿಯ ಸದಸ್ಯರಾಗಿರುತ್ತಾರೆ. ಇವರುಗಳ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಮತ್ತು ಮತ ಚಲಾಯಿಸುವ ಅಧಿಕಾರವನ್ನು ಹೊಂದಿದ್ದಾರೆ. ಜಿಲ್ಲಾ ಪಂಚಾಯಿತಿಯ ಒಟ್ಟು ಸದಸ್ಯರಿಗೆ ಶೇ.೧೮ರಷ್ಟು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೂ ೧/೩ ಭಾಗ ಹಿಂದುಳಿದ ವರ್ಗಗಳಿಗೂ ೧/೩ ಮಹಿಳೆಯರಿಗೂ ಮೀಸಲಾತಿಯ ಪ್ರಮಾಣವು ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳಿಗೂ ಅನ್ವಯಿಸುತ್ತದೆ.

ಜಿಲ್ಲಾ ಪಂಚಾಯಿತಿಯ ಸಭೆಯು ಕನಿಷ್ಟ ಪಕ್ಷ ಎರಡು ತಿಂಗಳಿಗೊಮ್ಮೆಯಾದರೂ ನಡೆಯಬೇಕು. ಈ ಸಭೆಯು ಸಾಮಾನ್ಯವಾಗಿ ಜಿಲ್ಲಾ ಪಂಚಾಯತ್ ನ ಕೇಂದ್ರ ಕಛೇರಿಯಲ್ಲಿ ನಡೆಯುತ್ತದೆ. ಜಿಲ್ಲಾ ಪಂಚಾಯಿತಿ ಮೊದಲ ಬಾರಿ ರಚನೆಯಾದಂತಹ ಜಿಲ್ಲಾ ಪಂಚಾಯಿತಿಯ ಮೊದಲ ಸಭೆಯ ದಿನಾಂಕವನ್ನು ಅಧ್ಯಕ್ಷತೆ ವಹಿಸುವ ಜಿಲ್ಲಾಧಿಕಾರಿ ನಿರ್ಧಾರ ಮಾಡುತ್ತಾರೆ. ಮುಂದಿನ ಸಭೆ ದಿನಾಂಕವನ್ನು ಹಿಂದಿನ ಸಭೆಯಲ್ಲಿಯೇ ನಿಗಧಿಗೊಳಿಸಲಾಗುತ್ತದೆ.

ಅಧ್ಯಾಯ ೫

ಮಾಹಿತಿ ಸಂಗ್ರಹಣೆಯ ವಿವರಣೆ

ಮಾಹಿತಿ ಸಂಗ್ರಹಣೆಯ ವಿವರಣೆ

ಗ್ರಾಮ ಪಂಚಾಯಿತಿಯಲ್ಲಿ ಅಭ್ಯರ್ಥಿಗಳಾಗಿ ಮಹಿಳಾ ಸಮುದಾಯದ ಭಾಗವಹಿಸುವಿಕೆ ಎಂಬ ವಿಷಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದು, ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನ ಬನ್ನೂರು ಹೋಬಳಿಯ ವ್ಯಾಪ್ತಿಯಲ್ಲಿ ಬರುವ ೯ ಗ್ರಾಮ ಪಂಚಾಯಿತಿ ಕ್ಷೇತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಯಿತು. ಅವುಗಳೆಂದರೆ ಅಂಕನಹಳ್ಳಿ, ಹೆಗ್ಗೂರು, ತುರಗನೂರು, ಅತ್ತಹಳ್ಳಿ, ಮಲಿಯೂರು, ಹನುಮನಾಳು, ಸೀಹಳ್ಳಿ, ಬೀಡನಹಳ್ಳಿ, ಕೊಡಗಹಳ್ಳಿ.

ಪಂಚಾಯಿತಿ ರಾಜ್ಯ ವ್ಯವಸ್ಥೆಯ ಮೊದಲನೇ ಹಂತವೇ ಗ್ರಾಮ ಪಂಚಾಯಿತಿಯಾಗಿದ್ದು, ೫೦೦೦-೭೦೦೦ ಜನಸಂಖ್ಯೆಯುಳ್ಳ ಗ್ರಾಮಗಳ ಗುಂಪನ್ನು ಗ್ರಾಮ ಪಂಚಾಯಿತಿ ರಚನೆಗೆ ಪರಿಗಣಿಸಲಾಗುತ್ತದೆ. ಕರ್ನಾಟಕ ರಾಜ್ಯದಲ್ಲಿನ ಗ್ರಾಮ ಪಂಚಾಯಿತಿ ಸದಸ್ಯರ ಒಟ್ಟು ಸಂಖ್ಯೆ ಆ ಗ್ರಾಮದ ಒಟ್ಟು ಜನಸಂಖ್ಯೆಗೆ ಅನುಗುಣವಾಗಿರುತ್ತದೆ. ಪ್ರತೀ ೪೦೦ ಜನಸಂಖ್ಯೆಗೆ ಒಬ್ಬರು ಸದಸ್ಯರಿರುತ್ತಾರೆ.

೧. **ಅಂಕನಹಳ್ಳಿ** ಗ್ರಾಮ ಪಂಚಾಯಿತಿ ಕ್ಷೇತ್ರಕ್ಕೆ ಒಟ್ಟು ೭ ಗ್ರಾಮಗಳು ಸೇರಿಕೊಂಡಿವೆ. ಅವುಗಳೆಂದರೆ ಅಂಕನಹಳ್ಳಿ, ಕೆಂಪೇಗೌಡನ ಕೊಪ್ಪಲು, ಮೆಣಸಿಕ್ಯಾತನ ಹಳ್ಳಿ, ದೊಡ್ಡ ಮುಲುಗೂಡು, ಕಾಡುಕೊತ್ತನ ಹಳ್ಳಿ, ಕರಿಹುರುಳಿ ಕೊಪ್ಪಲು, ಗುಡ್ಡದ ಕೊಪ್ಪಲು. ಈ ಕ್ಷೇತ್ರದಲ್ಲಿ ಒಟ್ಟು ೧೮ ಸದಸ್ಯರಿದ್ದಾರೆ. ಅದರಲ್ಲಿ ೮ ಮಹಿಳಾ ಸದಸ್ಯರಿದ್ದು, ೧೦ ಪುರುಷ ಸದಸ್ಯರಿದ್ದಾರೆ. ಅಧ್ಯಕ್ಷರು ಮಹಿಳೆಯಾಗಿದ್ದು, ಪ್ರತಿ ಹಳ್ಳಿಗಳಿಂದಲೂ ಸದಸ್ಯರು ಆಯಾ ಜನಸಂಖ್ಯೆಗೆ ತಕ್ಕಂತೆ ಮೀಸಲಾತಿಗೆ ತಕ್ಕಂತೆ ಗ್ರಾಮ ಪಂಚಾಯಿತಿ ಚುನಾವಣೆಗೆ ನಿಂತು ಆಯ್ಕೆಗೊಂಡಿದ್ದಾರೆ. ಮಹಿಳಾ ಅಧ್ಯಯನದ ದೃಷ್ಟಿಕೋನದಿಂದ ಈ ಗ್ರಾಮ ಪಂಚಾಯಿತಿ ಕ್ಷೇತ್ರದಲ್ಲಿ ಸಂದರ್ಶನದ ಕಾರ್ಯವನ್ನು ಹಮ್ಮಿಕೊಳ್ಳಲಾಯಿತು. ಇಲ್ಲಿನ ಸದಸ್ಯರು, ಸಾರ್ವಜನಿಕರು ಹಲವು ಅಂಶಗಳನ್ನು ತಿಳಿಸಿದ್ದಾರೆ. ಅವುಗಳನ್ನು ವಿವಿಧ ತೆರನಾದ ಸಾಮಾಜಿಕ, ರಾಜಕೀಯ, ಆರ್ಥಿಕ, ಕೌಟುಂಬಿಕ ಹಿನ್ನೆಲೆಗಳಲ್ಲಿ ಈ ಮುಂದಿನ ಭಾಗದಲ್ಲಿ ವಿವರಿಸಲಾಗಿದೆ.

ಅಂಕನಹಳ್ಳಿ ಗ್ರಾಮಪಂಚಾಯಿತಿಯ ಮಹಿಳಾ ಸದಸ್ಯರ ವಿವರಣಾ ಪಟ್ಟಿ

ಕ್ರಮ ಸಂಖ್ಯೆ	ಹೆಸರು	ವಯಸ್ಸು	ಜಾತಿ	ವಿದ್ಯಾರ್ಹತೆ	ಗ್ರಾಮ
೧.	ಜಯಮ್ಮ (ಅಧ್ಯಕ್ಷರು)	33	SC	ಇಲ್ಲ	ಅಂಕನಹಳ್ಳಿ
೨.	ದಾಕ್ಷಾಯಿಣಿ (ಉಪಾಧ್ಯಕ್ಷರು)	31	ಲಿಂಗಾಯಿತ	10ನೇ ತರಗತಿ	ಅಂಕನಹಳ್ಳಿ
೩.	ವಸಂತ	34	ಒಕ್ಕಲಿಗ	9ನೇ ತರಗತಿ	ಮೆಣಸಿಕ್ಯಾತನಹಳ್ಳಿ
೪.	ಮಂಜುಳ	33	ಕುರುಬ	10ನೇ ತರಗತಿ	ಮೆಣಸಿಕ್ಯಾತನಹಳ್ಳಿ
೫.	ಲತಾಮಣಿ	24	ಒಕ್ಕಲಿಗ	10ನೇ ತರಗತಿ	ದೊಡ್ಡಮುಲುಗೂಡು
೬.	ಪುಟ್ಟರಾಜಮ್ಮ	41	ಕುರುಬ	5ನೇ ತರಗತಿ	ದೊಡ್ಡ ಮುಲುಗೂಡು
೭.	ಭಾಗ್ಯಮ್ಮ	37	ST	ಇಲ್ಲ	ದೊಡ್ಡ ಮುಲುಗೂಡು
೮.	ಕೆ.ಜೆ.ಜಯಶೀಲ	24	ಕುರುಬ	10ನೇ ತರಗತಿ	ಕರಿಹುರುಳಿ ಕೊಪ್ಪಲು

ಮೇಲ್ಕಂಡ ಪಟ್ಟಿಯಂತೆ ೮ ಮಹಿಲಾ ಸದಸ್ಯರು ಅಂಕನಹಳ್ಳಿ ಗ್ರಾಮ ಪಂಚಾಯಿತಿಯ ಸದಸ್ಯರಾಗಿದ್ದು, ಇವರುಗಳು ವಿವಿಧ ಜಾತಿಗಳಿಗೆ ಸೇರಿದವರಾಗಿದ್ದಾರೆ. ಕುರುಬ ಜನಾಂಗದಿಂದ ಮೂರು, ಒಕ್ಕಲಿಗ ಸಮುದಾಯದಿಂದ ಇಬ್ಬರು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಲಿಂಗಾಯಿತ ಸಮುದಾಯದಿಂದ ತಲಾ ಒಬ್ಬೊಬ್ಬರು ಆಯ್ಕೆಗೊಂಡಿದ್ದಾರೆ. ಇವರುಗಳ ವಿದ್ಯಾರ್ಹತೆ ಎಸ್.ಎಸ್ಎಲ್.ಸಿಯನ್ನು ಮೀರದೆ, ಶಿಕ್ಷಣವನ್ನೇ ಪಡೆಯದ ಮಹಿಳಾ ಸದಸ್ಯರೂ ಇದ್ದಾರೆ.

೨. ಹೆಗ್ಗೂರು ಗ್ರಾಮ ಪಂಚಾಯಿತಿ ಕ್ಷೇತ್ರಕ್ಕೆ ಒಟ್ಟು ೫ ಗ್ರಾಮಗಳು ಸೇರಿಕೊಂಡಿವೆ. ಅವುಗಳೆಂದರೆ ಹೆಗ್ಗೂರು, ಬಸವನ ಹಳ್ಳಿ, ನಂಜಾಪುರ, ಕಟ್ಟೆಕೊಪ್ಪಲು, ನುಗ್ಗಳ್ಳಿ ಕೊಪ್ಪಲು, ಈ ಕ್ಷೇತ್ರದಲ್ಲಿ ಒಟ್ಟು ೧೮ ಸದಸ್ಯರಿದ್ದಾರೆ. ಅದರಲ್ಲಿ ೭ ಮಹಿಳಾ ಸದಸ್ಯರಿದ್ದು ೧೧ ಪುರುಷ ಸದಸ್ಯರಿದ್ದಾರೆ. ಅಧ್ಯಕ್ಷರು ಮಹಿಳೆಯಾಗಿದ್ದು ಪ್ರತಿ ಹಳ್ಳಿಗಳಿಂದಲೂ ಸದಸ್ಯರು ಆಯ್ಕೆಗೊಂಡಿದ್ದಾರೆ.

ಹೆಗ್ಗೂರು ಗ್ರಾಮಪಂಚಾಯಿತಿಯ ಮಹಿಳಾ ಸದಸ್ಯರ ವಿವರಣಾ ಪಟ್ಟಿ

ಕ್ರಮ ಸಂಖ್ಯೆ	ಹೆಸರು	ವಯಸ್ಸು	ಜಾತಿ	ವಿದ್ಯಾರ್ಹತೆ	ಗ್ರಾಮ
೧.	ಗೌರಮ್ಮ	40	ಒಕ್ಕಲಿಗ	2ನೇ ತರಗತಿ	ನುಗ್ಗಳ್ಳಿ ಕೊಪ್ಪಲು
೨.	ರಾಜಮ್ಮ	38	SC	ಇಲ್ಲ	ಹೆಗ್ಗೂರು
೩.	ಚಿಕ್ಕಸಿದ್ದಮ್ಮ	42	ಕುರುಬ	ಇಲ್ಲ	ನಂಜಾಪುರ
೪.	ಶಿವಮ್ಮ (ಅಧ್ಯಕ್ಷರು)	48	ಕುಂಬಾರರು	ಇಲ್ಲ	ಬಸವನಹಳ್ಳಿ
೫.	ಲಕ್ಷ್ಮಮ್ಮ	48	ಒಕ್ಕಲಿಗ	3ನೇ ತರಗತಿ	ಬಸವನಹಳ್ಳಿ
೬.	ಮಲ್ಲಮ್ಮ	50	ST	1ನೇ ತರಗತಿ	ಹೆಗ್ಗೂರು
೭.	ಕಲಾವತಿ	28	ಒಕ್ಕಲಿಗ	5ನೇ ತರಗತಿ	ಹೆಗ್ಗೂರು

ಮೇಲ್ಕಂಡ ಪಟ್ಟಿಯಂತೆ ೭ ಮಹಿಳಾ ಸದಸ್ಯರು ಹೆಗ್ಗೂರು ಗ್ರಾಮ ಪಂಚಾಯಿತಿಯ ಸದಸ್ಯರಾಗಿದ್ದು, ಇವರುಗಳು ವಿವಿಧ ಸಮುದಾಯಗಳಿಂದ ಆಯ್ಕೆಗೊಂಡಿರುತ್ತಾರೆ. ವಿದ್ಯಾರ್ಹತೆಯ ಪ್ರಾಥಮಿಕ ಶಿಕ್ಷಣವನ್ನು ಮೀರಿಲ್ಲ ಹಾಗೂ ಕೆಲವರು ಶಾಲೆಗಳ ಮೆಟ್ಟಿಲನ್ನು ತಲುಪದೆ ರಾಜಕೀಯದ ಕದತಟ್ಟಿರುವುದು ವಿಸ್ಮಯಕಾರಿ ವಿಚಾರವಾಗಿದೆ. ಇದಕ್ಕೆ ಮೀಸಲಾತಿ ಕಾರಣವಾಗಿದ್ದರೂ ಸಹ ಮಹಿಳೆಯರ ಆಸಕ್ತಿಯನ್ನು ನಾವಿಲ್ಲಿ ಗಮನಿಸಬಹುದಾಗಿದೆ.

೩. **ಮಲಿಯೂರು** ಗ್ರಾಮ ಪಂಚಾಯಿತಿಯ ಬನ್ನೂರು ಹೋಬಳಿಯ ವ್ಯಾಪ್ತಿಗೆ ಸೇರಿದ್ದು ಈ ಗ್ರಾಮ ಪಂಚಾಯಿತಿ ಕ್ಷೇತ್ರಕ್ಕೆ ಒಟ್ಟು ಆರು ಗ್ರಾಮಗಳು ಸೇರಿಕೊಳ್ಳುತ್ತವೆ. ಅವುಗಳೆಂದರೆ ಮಲಿಯೂರು, ಒಡ್ಡರ ಕೊಪ್ಪಲು, ಚೆನ್ನವೀರೇಗೌಡನ ಕೊಪ್ಪಲು, ಬಿ.ಬೆಟ್ಟಹಳ್ಳಿ, ಕುಂತನಹಳ್ಳಿ, ಮೇಗಳಕೊಪ್ಪಲು. ಈ ಕ್ಷೇತ್ರದಲ್ಲಿ ಒಟ್ಟು ೧೭ ಸದಸ್ಯರಿದ್ದು, ಅದರಲ್ಲಿ ೮ ಮಹಿಳಾ ಸದಸ್ಯರು ಹಾಗೂ ೯ ಪುರುಷ ಸದಸ್ಯರಿದ್ದಾರೆ. ಅಧ್ಯಕ್ಷರು ಪುರುಷರಾಗಿದ್ದು, ಪ್ರತಿ ಹಳ್ಳಿಗಳಿಂದಲೂ ಸದಸ್ಯರು ಆಯ್ಕೆಗೊಂಡಿದ್ದಾರೆ.

ಮಲಿಯೂರು ಗ್ರಾಮಪಂಚಾಯಿತಿಯ ಮಹಿಳಾ ಸದಸ್ಯರ ವಿವರಣಾ ಪಟ್ಟಿ

ಕ್ರಮ ಸಂಖ್ಯೆ	ಹೆಸರು	ವಯಸ್ಸು	ಜಾತಿ	ವಿದ್ಯಾರ್ಹತೆ	ಗ್ರಾಮ
೧.	ಮಿಣಕಮ್ಮ	50	SC	ಇಲ್ಲ	ಮಲಿಯೂರು
೨.	ಮಹದೇವಮ್ಮ (ಉಪಾಧ್ಯಕ್ಷರು)	32	SC	ಇಲ್ಲ	ಮಲಿಯೂರು
೩.	ರೂಪ	22	ಬೋವಿಜನಾಂಗ	10ನೇ ತರಗತಿ	ಒಡ್ಡರಕೊಪ್ಪಲು
೪.	ಶಾಂತಮ್ಮ	33	ಕುರುಬರು	5ನೇ ತರಗತಿ	ಒಡ್ಡರಕೊಪ್ಪಲು
೫.	ಶಿವಮ್ಮ	40	SC	4ನೇ ತರಗತಿ	ಕುಂತನಹಳ್ಳಿ
೬.	ಜಯಮ್ಮ	45	SC	ಇಲ್ಲ	ಕುಂತನಹಳ್ಳಿ
೭.	ಸವಿತ	29	ಒಕ್ಕಲಿಗ	10ನೇ ತರಗತಿ	ಮೇಗಳಕೊಪ್ಪಲು
೮.	ಜಯಂತಿ	30	ರಜಪೂತರು	ಪಿಯುಸಿ	ಬಿ.ಬೆಟ್ಟಹಳ್ಳಿ

ಮೇಲ್ಕಂಡ ಪಟ್ಟಿಯಂತೆ ಮಲಿಯೂರು ಗ್ರಾಮ ಪಂಚಾಯಿತಿ ಕ್ಷೇತ್ರದಲ್ಲಿ ೮ ಮಹಿಳಾ ಸದಸ್ಯರಿದ್ದು ಪರಿಶಿಷ್ಟ ಜಾತಿ ಸಮುದಾಯದ ಮಹಿಳೆಯರು ಅರ್ಧದಷ್ಟಿದ್ದಾರೆ. ವಿದ್ಯಾರ್ಹತೆಯು ಪಿ.ಯು.ಸಿ ಮಟ್ಟವನ್ನು ಮೀರಿಲ್ಲ. ಶಿಕ್ಷಣವನ್ನೇ ಪಡೆಯದ ಮಹಿಳಾ ಸದಸ್ಯರನ್ನು ನಾವಿಲ್ಲಿ ಕಾಣಬಹುದು. ವಿವಿಧ ಗ್ರಾಮಗಳಿಂದ ಇವರು ಆಯ್ಕೆಗೊಂಡಿದ್ದು, ಉಪಾಧ್ಯಕ್ಷರಾಗಿ ಮಹಾದೇವಮ್ಮ ಆಯ್ಕೆಗೊಂಡಿದ್ದಾರೆ.

೪. **ಅತ್ತಹಳ್ಳಿ** ಗ್ರಾಮ ಪಂಚಾಯಿತಿಯ ಕ್ಷೇತ್ರ ವ್ಯಾಪ್ತಿಗೆ ಎರಡು ಹಳ್ಳಿಗಳು ಒಳಗಾಗುತ್ತವೆ. ಅವುಗಳೆಂದರೆ ಅತ್ತಹಳ್ಳಿ ಹಾಗೂ ಕಂಚನಹಳ್ಳಿ ಒಟ್ಟು ೯ ಸದಸ್ಯರು ಈ ಗ್ರಾಮ ಪಂಚಾಯ್ತಿಯಲ್ಲಿದ್ದು,

ಅದರಲ್ಲಿ ೫ ಮಹಿಳೆಯರು ಹಾಗೂ ೪ ಪುರುಷರಿರುತ್ತಾರೆ. ಅಧ್ಯಕ್ಷರು ಮಹಿಳೆಯಾಗಿದ್ದು, ಪ್ರತಿ ಹಳ್ಳಿಗಳಿಂದಲೂ ಸದಸ್ಯರು ಆಯ್ಕೆಗೊಂಡಿದ್ದಾರೆ.

ಅತ್ತಹಳ್ಳಿ ಗ್ರಾಮಪಂಚಾಯಿತಿಯ ಮಹಿಳಾ ಸದಸ್ಯರ ವಿವರಣಾ ಪಟ್ಟಿ

ಕ್ರಮ ಸಂಖ್ಯೆ	ಹೆಸರು	ವಯಸ್ಸು	ಜಾತಿ	ವಿದ್ಯಾರ್ಹತೆ	ಗ್ರಾಮ
೧.	ಮಹದೇವಮ್ಮ (ಅಧ್ಯಕ್ಷರು)	45	SC	5ನೇ ತರಗತಿ	ಅತ್ತಹಳ್ಳಿ
೨.	ಹೆಚ್.ಎನ್.ಮಂಜುಳ	35	ಒಕ್ಕಲಿಗ	6ನೇ ತರಗತಿ	ಅತ್ತಹಳ್ಳಿ
೩.	ಪ್ರೇಮ	30	ST	ಇಲ್ಲ	ಅತ್ತಹಳ್ಳಿ
೪.	ಮಮತ	30	ಒಕ್ಕಲಿಗ	10ನೇ ತರಗತಿ	ಅತ್ತಹಳ್ಳಿ
೫.	ಎ.ಎನ್.ಗೀತ	28	ರಜಪೂತರು	II ಪಿಯುಸಿ	ಅತ್ತಹಳ್ಳಿ
೧.	ಶ್ರೀನಿವಾಸಮೂರ್ತಿ	47	ಲಿಂಗಾಯಿತ	ಇಲ್ಲ	ಕಂಚನಹಳ್ಳಿ
೨.	ಕೆ.ರಾಮೇಗೌಡ	51	ಒಕ್ಕಲಿಗ	10ನೇ ತರಗತಿ	ಅತ್ತಹಳ್ಳಿ
೩.	ಜೆ.ಲೋಕೇಶ್	41	ಒಕ್ಕಲಿಗ	ಎಂ.ಎ	ಅತ್ತಹಳ್ಳಿ
೪.	ಪುಟ್ಟಸ್ವಾಮಿ	38	SC	6ನೇ ತರಗತಿ	ಅತ್ತಹಳ್ಳಿ

ಮೇಲ್ಕಂಡ ಪಟ್ಟಿಯಂತೆ ಅತ್ತಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ೫ ಮಹಿಳಾ ಸದಸ್ಯರು ೪ ಪುರುಷ ಸದಸ್ಯರಿದ್ದಾರೆ. ಒಕ್ಕಲಿಗ ಸಮುದಾಯದವರು ಹೆಚ್ಚಿದ್ದಾರೆನ್ನಬಹುದು. ವಿದ್ಯಾರ್ಹತೆಯು ಪರಿವಾಗಿಲ್ಲವೆಂಬಂತಿದ್ದು ಅತ್ಯಂತ ಹೆಚ್ಚು ಓದಿರುವ ಸದಸ್ಯರಿಗೆ ಹೆಚ್ಚು ಮಹತ್ವವಿರುತ್ತದೆ. ಮಹದೇವಮ್ಮ ಎಂಬ ಮಹಿಳೆ ಅಧ್ಯಕ್ಷರಾಗಿರುತ್ತಾರೆ.

೫. **ಬೀಡನಹಳ್ಳಿ** ಗ್ರಾಮ ಪಂಚಾಯಿತಿಯು ಬನ್ನೂರು ಹೋಬಳಿ ವ್ಯಾಪ್ತಿಗೆ ಬರುವಂಥದಾಗಿದ್ದು, ಈ ಕ್ಷೇತ್ರಕ್ಕೆ ಒಟ್ಟು ೩ ಗ್ರಾಮಗಳು ಸೇರ್ಪಡೆಗೊಂಡಿವೆ. ಅವುಗಳೆಂದರೆ ದಾಸೇಗೌಡನ ಕೊಪ್ಪಲು, ಯಡಹಳ್ಳಿ ಹಾಗೂ ಬೀಡನಹಳ್ಳಿ. ಈ ಕ್ಷೇತ್ರದಲ್ಲಿ ಒಟ್ಟು ೯ ಸದಸ್ಯರಿದ್ದು, ಅದರಲ್ಲಿ ೫ ಮಹಿಳಾ ಸದಸ್ಯರು ಹಾಗೂ ೪ ಪುರುಷ ಸದಸ್ಯರಿದ್ದಾರೆ.

ಬೀಡನಹಳ್ಳಿ ಗ್ರಾಮಪಂಚಾಯಿತಿಯ ಮಹಿಳಾ ಸದಸ್ಯರ ವಿವರಣಾ ಪಟ್ಟಿ

ಕ್ರಮ ಸಂಖ್ಯೆ	ಹೆಸರು	ವಯಸ್ಸು	ಜಾತಿ	ವಿದ್ಯಾರ್ಹತೆ	ಗ್ರಾಮ
೧.	ಮಹದೇವಮ್ಮ	48	ಒಕ್ಕಲಿಗ	8ನೇ ತರಗತಿ	ಬೀಡನಹಳ್ಳಿ
೨.	ಮಹದೇವಮ್ಮ	50	ನಾಯಕ	ಇಲ್ಲ	ಬೀಡನಹಳ್ಳಿ
೩.	ಲಕ್ಷ್ಮಿ	40	ಮಡಿವಾಳಶೆಟ್ಟರು	7ನೇ ತರಗತಿ	ಬೀಡನಹಳ್ಳಿ
೪.	ಮಹದೇವಮ್ಮ	50	ಲಿಂಗಾಯಿತ	6ನೇ ತರಗತಿ	ಯಡಹಳ್ಳಿ
೫.	ರತ್ನಮ್ಮ (ಅಧ್ಯಕ್ಷರು)	46	SC	7ನೇ ತರಗತಿ	ಯಡಹಳ್ಳಿ
೧.	ನಂಜುಂಡಸ್ವಾಮಿ	42	ಒಕ್ಕಲಿಗ		ಬೀಡನಹಳ್ಳಿ
೨.	ಯೋಗೇಶ್	35	ಆಚಾರಿ		ಬೀಡನಹಳ್ಳಿ
೩.	ನಾಗಣ್ಣ	28	ಒಕ್ಕಲಿಗ		ದಾಸೇಗೌಡನಕೊಪ್ಪಲು
೪.	ಲೋಕೇಶ್	32	ಒಕ್ಕಲಿಗ		ದಾಸೇಗೌಡನಕೊಪ್ಪಲು

ಮೇಲ್ಕಂಡ ಪಟ್ಟಿಯಂತೆ ೫ ಮಹಿಳಾ ಸದಸ್ಯರೂ ೪ ಪುರುಷ ಸದಸ್ಯರೂ ಇದ್ದು ಇವರುಗಳು ವಿವಿಧ ಸಮುದಾಯಗಳಿಂದ ಚುನಾಯಿತರಾಗಿದ್ದಾರೆ. ವಿದ್ಯಾರ್ಹತೆಯು ಅಷ್ಟೇನೂ ತೃಪ್ತಿದಾಯಕವಲ್ಲದಿದ್ದರೂ ಮಹಿಳೆಯರು ಚುರುಕಾಗಿ ಕಾರ್ಯನಿರ್ವಹಿಸುತ್ತಾರೆ. ರತ್ನಮ್ಮ ಎಂಬುವವರು ಅಧ್ಯಕ್ಷರಾಗಿದ್ದು, ಕಡಿಮೆ ಅಂತರದ ವಯಸ್ಸಿನ ವ್ಯತ್ಯಾಸ ಕಂಡುಬಂದಿದೆ. ವಿವಿಧ ಜಾತಿಗಳಿಂದ ತಲಾ ಒಬ್ಬೊಬ್ಬ ಮಹಿಳೆಯರು ಕಂಡುಬಂದರೆ ಪುರುಷ ಸದಸ್ಯರಲ್ಲಿ ೩ ಸ್ಥಾನ ಒಕ್ಕಲಿಗರ ಪಾಲಾಗಿದೆ. ವಿವಿಧ ಗ್ರಾಮಗಳಿಂದ ಮಹಿಳಾ-ಪುರುಷ ಸದಸ್ಯರು ಆಯ್ಕೆಗೊಂಡಿದ್ದಾರೆ.

೬. **ಹನುಮನಾಳು** ಗ್ರಾಮ ಪಂಚಾಯಿತಿಯ ಕ್ಷೇತ್ರ ವ್ಯಾಪ್ತಿಗೆ ಸೇರುವ ಗ್ರಾಮಗಳೆಂದರೆ ಹನುಮನಾಳು, ಮಾರಗೌಡನ ಹಳ್ಳಿ, ಗೊರವನ ಹಳ್ಳಿ, ಬಾಣಗವಾಡಿಗಳಾಗಿವೆ. ಈ ಗ್ರಾಮ ಪಂಚಾಯಿತಿ ಕ್ಷೇತ್ರದಲ್ಲಿ ಒಟ್ಟು ೧೫ ಸದಸ್ಯರಿದ್ದು ಅದರಲ್ಲಿ ೭ ಮಹಿಳಾ ಸದಸ್ಯರು ಹಾಗೂ ೮ ಪುರುಷ ಸದಸ್ಯರಿದ್ದಾರೆ. ಇಲ್ಲಿ ಕಾರ್ಯದರ್ಶಿ ಸುಜ್ಞಾನ ಮೂರ್ತಿ ಎಂಬುವವರಾಗಿದ್ದು ಇಂದ್ರಮ್ಮ ಅಧ್ಯಕ್ಷ ಸ್ಥಾನ ವಹಿಸಿದ್ದಾರೆ.

ಹನುಮನಾಳು ಗ್ರಾಮಪಂಚಾಯಿತಿಯ ಮಹಿಳಾ ಸದಸ್ಯರ ವಿವರಣಾ ಪಟ್ಟಿ

ಕ್ರಮ ಸಂಖ್ಯೆ	ಹೆಸರು	ವಯಸ್ಸು	ಜಾತಿ	ವಿದ್ಯಾರ್ಹತೆ	ಗ್ರಾಮ
೧.	ಇಂದ್ರಮ್ಮ (ಅಧ್ಯಕ್ಷರು)	35	ST	ಇಲ್ಲ	ಬಾಣಗವಾಡಿ
೨.	ವಿಜಯ	35	ಗೌಡ	7ನೇ ತರಗತಿ	ಬಾಣಗವಾಡಿ
೩.	ಮಾಯಮ್ಮ	50	SC	ಇಲ್ಲ	ಬಾಣಗವಾಡಿ
೪.	ಪದ್ಮಮ್ಮ ಡಿ	45	ಒಕ್ಕಲಿಗ	9ನೇ ತರಗತಿ	ಗೊರವನಹಳ್ಳಿ
೫.	ಸರೋಜ	26	ಶೆಟ್ಟರು	5ನೇ ತರಗತಿ	ಮಾರಗೌಡನಹಳ್ಳಿ
೬.	ಸುಶೀಲಮ್ಮ	42	ಒಕ್ಕಲಿಗ	ಇಲ್ಲ	ಹನುಮನಾಳು
೭.	ವಿನೋದ	30	ಒಕ್ಕಲಿಗ	7ನೇ ತರಗತಿ	ಹನುಮನಾಳು

ಕ್ರಮ ಸಂಖ್ಯೆ	ಹೆಸರು	ವಯಸ್ಸು	ಜಾತಿ	ವಿದ್ಯಾರ್ಹತೆ	ಗ್ರಾಮ
೧.	ದೇವರಾಜು	40	ಒಕ್ಕಲಿಗ	10ನೇ ತರಗತಿ	ಗೊರವನಹಳ್ಳಿ
೨.	ನಾಗರಾಜು ಜಿ.ಆರ್.	36	ಕುಂಬಾರ	ಇಲ್ಲ	ಗೊರವನಹಳ್ಳಿ
೩.	ಶಿವಶಂಕರ್	45	ಒಕ್ಕಲಿಗ	10ನೇ ತರಗತಿ	ಮಾರಗೌಡನಹಳ್ಳಿ
೪.	ಮಹದೇವು	51	ಒಕ್ಕಲಿಗ	ಇಲ್ಲ	ಮಾರಗೌಡನಹಳ್ಳಿ
೫.	ಹೆಚ್.ಸಿ.ಪ್ರಕಾಶ್	50	ಒಕ್ಕಲಿಗ	7ನೇ ತರಗತಿ	ಹನುಮನಾಳು
೬.	ಸಿದ್ದೇಗೌಡ	46	ಒಕ್ಕಲಿಗ	7ನೆ ತರಗತಿ	ಹನುಮನಾಳು
೭.	ಹೆಚ್.ಎಸ್.ದಯಾನಂದ್	35	ಒಕ್ಕಲಿಗ	10ನೇ ತರಗತಿ	ಹನುಮನಾಳು
೮.	ಮಹಾದೇವು	50	ಒಕ್ಕಲಿಗ	10ನೇ ತರಗತಿ	ಹನುಮನಾಳು

ಮೇಲ್ಕಂಡ ಪಟ್ಟಿಯಂತೆ ಹನುಮನಾಳು ಗ್ರಾಮ ಪಂಚಾಯಿತಿಯಲ್ಲಿ ಒಟ್ಟು ೧೫ ಸದಸ್ಯರಿದ್ದು ಒಕ್ಕಲಿಗ ಸಮುದಾಯದವರು ಅತ್ಯಧಿಕ ಪ್ರಮಾಣದಲ್ಲಿದ್ದಾರೆ. ವಿದ್ಯಾರ್ಹತೆಯು ಮೆಚ್ಚುವಂತಹದೇನೂ ಇಲ್ಲವಾದರೂ ರಾಜಕೀಯ ಸಂಗತಿಗಳನ್ನು ಬಹಳ ಚೆನ್ನಾಗಿ ಅರಿತವರಾಗಿದ್ದಾರೆ. ಇಂದ್ರಮ್ಮ ಅಧ್ಯಕ್ಷರಾಗಿದ್ದುಕೊಂಡು ಕಾರ್ಯ ನಿರ್ವಹಿಸುತ್ತಿದ್ದಾರೆ. ವಿವಿಧ ವರ್ಗಗಳಿಂದ ಚುನಾಯಿತಗೊಂಡಿದ್ದು, ವಯಸ್ಸಿನ ಅಂತರ ಹೆಚ್ಚಾಗಿದೆ ಎಂದು ತಿಳಿದುಬರುತ್ತದೆ. ಅಂತೆಯೇ ವಿವಿಧ ಗ್ರಾಮಗಳಿಂದ ಚುನಾಯಿತಗೊಂಡಿದ್ದಾರೆ.

೭. ಬನ್ನೂರು ಹೋಬಳಿಯ ವ್ಯಾಪ್ತಿಗೆ ಬರುವ ಮತ್ತೊಂದು ಗ್ರಾಮ ಪಂಚಾಯಿತಿ ಎಂದರೆ ತುರಗನೂರು ಗ್ರಾಮ ಪಂಚಾಯಿತಿ. ಈ ಪಂಚಾಯಿತಿ ವ್ಯಾಪ್ತಿಗೆ ತುರಗನೂರು ಹಾಗೂ ಯಾಚೇನಹಳ್ಳಿ ಎಂಬ ಎರಡು ಗ್ರಾಮಗಳು ಒಳಗೊಳ್ಳುತ್ತವೆ. ಒಟ್ಟು ೧೬ ಸದಸ್ಯರಿದ್ದು, ಅದರಲ್ಲಿ ೭ ಮಹಿಳಾ ಸದಸ್ಯರು ಹಾಗೂ ೯ ಪುರುಷ ಸದಸ್ಯರಿದ್ದಾರೆ. ಮಂಚಮ್ಮ ಎಂಬುವವರು ಅಧ್ಯಕ್ಷರಾಗಿದ್ದು, ಟಿ.ಎಸ್ .ಸುರೇಶ್ ಎಂಬುವವರು ಬಿಲ್ ಕಲೆಕ್ಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ತುರಗನೂರು ಗ್ರಾಮಪಂಚಾಯಿತಿಯ ಮಹಿಳಾ ಸದಸ್ಯರ ವಿವರಣಾ ಪಟ್ಟಿ

ಕ್ರಮ ಸಂಖ್ಯೆ	ಹೆಸರು	ವಯಸ್ಸು	ಜಾತಿ	ವಿದ್ಯಾರ್ಹತೆ	ಗ್ರಾಮ
೧.	ಮಂಚಮ್ಮ (ಅಧ್ಯಕ್ಷರು)	40	SC	ಇಲ್ಲ	ಯಾಚೇನಹಳ್ಳಿ
೨.	ಗಿರಿಜಮ್ಮ	32	ಒಕ್ಕಲಿಗ	4ನೇ ತರಗತಿ	ಯಾಚೇನಹಳ್ಳಿ
೩.	ಸರಸ್ವತಮ್ಮ	38	ವಿಶ್ವಕರ್ಮ	ಇಲ್ಲ	ಯಾಚೇನಹಳ್ಳಿ
೪.	ವಿಶಾಲಾಕ್ಷಮ್ಮ	35	ಗೌಡ	7ನೇ ತರಗತಿ	ತುರುಗನೂರು
೫.	ಚೆನ್ನಬಸಮ್ಮ	48	ಲಿಂಗಾಯಿತ	7ನೇ ತರಗತಿ	ತುರುಗನೂರು
೬.	ಲಕ್ಷ್ಮಮ್ಮ (ಉಪಾಧ್ಯಕ್ಷರು)	37	ಕ್ಷತ್ರಿಯರು	ಇಲ್ಲ	ತುರುಗನೂರು
೭.	ರತ್ನಮ್ಮ	40	ಬೆಸ್ತರು	3ನೇ ತರಗತಿ	ತುರುಗನೂರು

ಮೇಲ್ಕಂಡ ಪಟ್ಟಿಯಂತೆ ತುರಗನೂರು ಗ್ರಾಮ ಪಂಚಾಯಿತಿಯಲ್ಲಿ ಒಟ್ಟು ೧೬ ಸದಸ್ಯರಿದ್ದು ಅದರಲ್ಲಿ ೭ ಮಹಿಳಾ ಸದಸ್ಯರು ಹಾಗೂ ೯ ಪುರುಷ ಸದಸ್ಯರಿದ್ದಾರೆ. ವಿವಿಧ ಜಾತಿಯವರು ಚುನಾಯಿತಗೊಂಡಿದ್ದು ವಿವಿಧ ಗ್ರಾಮಗಳಿಂದ ಮೀಸಲಾತಿಯಂತೆ ನೇಮಕಗೊಂಡಿದ್ದಾರೆ. Y.M.ಭೋಜರಾಜ್ , Y.C. ದೇವನಾಥ Y.K. ನವೀನ್ , Y.M.ಮಾಡು, ಜವರ ಶೆಟ್ಟಿ, T.S. ಮಹಾಲಿಂಗು, ಟಿ.ಸಿ. ರಾಮಚಂದ್ರು, ಟಿ.ಎನ್ .ನಾಗರಾಜು, ಟಿ.ಎಸ್ .ಲಕ್ಷ್ಮಣ ಮುಂತಾದ ಪುರುಷ ಸದಸ್ಯರಿದ್ದಾರೆ.

೮. ಬಿ.ಸೀಹಳ್ಳಿ ಗ್ರಾಮ ಪಂಚಾಯಿತಿಯ ಕ್ಷೇತ್ರ ವ್ಯಾಪ್ತಿಗೆ ಬರುವ ಗ್ರಾಮಗಳೆಂದರೆ ಹುಣಸಿಗಹಳ್ಳಿ, ಭೂತಗಹಳ್ಳಿ, ಜಾಮಲಾಪುರ, ಬಿ.ಸೀಹಳ್ಳಿ. ಈ ಗ್ರಾಮ ಪಂಚಾಯಿತಿ ಕ್ಷೇತ್ರದಲ್ಲಿ ಒಟ್ಟು ೧೫ ಸದಸ್ಯರಿದ್ದು, ಅದರಲ್ಲಿ ೭ ಮಹಿಳಾ ಸದಸ್ಯರು ಹಾಗೂ ೮ ಪುರುಷ ಸದಸ್ಯರಾಗಿದ್ದಾರೆ. ನಿಂಗಮ್ಮ ಎನ್ನುವವರು ಅಧ್ಯಕ್ಷರಾಗಿರುತ್ತಾರೆ.

ಬಿ. ಸೀಹಳ್ಳಿ ಗ್ರಾಮಪಂಚಾಯಿತಿಯ ಮಹಿಳಾ ಸದಸ್ಯರ ವಿವರಣಾ ಪಟ್ಟಿ

ಕ್ರಮ ಸಂಖ್ಯೆ	ಹೆಸರು	ವಯಸ್ಸು	ಜಾತಿ	ವಿದ್ಯಾರ್ಹತೆ	ಗ್ರಾಮ
೧.	ಶಶಿ .	42	ಒಕ್ಕಲಿಗ	ಇಲ್ಲ	ಸೀಹಳ್ಳಿ ಬಿ .
೨.	ಚೆನ್ನಮ್ಮ	48	ಅಗಸರು	ಇಲ್ಲ	ಸೀಹಳ್ಳಿ ಬಿ
೩.	ನಿಂಗಮ್ಮ	65	SC	ಇಲ್ಲ	ಸೀಹಳ್ಳಿ ಬಿ
೪.	ಭಾಗ್ಯಮ್ಮ	38	ಒಕ್ಕಲಿಗ	2ನೇ ತರಗತಿ	ಭೂತಗಳ್ಳಿ
೫.	ಹೇಮಾವತಿ	42	ಆಚಾರಿ	ಇಲ್ಲ	ಸೀಹಳ್ಳಿ ಬಿ
೬.	ಸಿದ್ದಮ್ಮ	45	ಒಕ್ಕಲಿಗ	ಇಲ್ಲ	ಹುಣಸಿಗಹಳ್ಳಿ
೭.	ಕಮಲಮ್ಮ	45	SC	ಇಲ್ಲ	ಸೀಹಳ್ಳಿ ಬಿ

ಕ್ರಮ ಸಂಖ್ಯೆ	ಹೆಸರು	ಜಾತಿ	ಗ್ರಾಮ
೧.	ಗೋಪಾಲಚಾರಿ	ಆಚಾರಿ	ಸೀಹಳ್ಳಿ ಬಿ
೨.	ಕೆಂಪಶೆಟ್ಟಿ	ಮಡಿವಾಳಶೆಟ್ಟರು	ಸೀಹಳ್ಳಿ ಬಿ
೩.	ಗೋವಿಂದ	ಒಕ್ಕಲಿಗ	ಭೂತಗಹಳ್ಳಿ
೪.	ಸಿದ್ದೇಗೌಡ	ಒಕ್ಕಲಿಗ	ಸೀಹಳ್ಳಿ ಬಿ
೫.	ಮಾಲಿಂಗೇಗೌಡರು	ಒಕ್ಕಲಿಗ	ಸೀಹಳ್ಳಿ ಬಿ
೬.	ವೆಂಕಟೇಶ್ ಹೆಚ್.ಎಲ್.	ಒಕ್ಕಲಿಗ	ಹುಣಸಿಗಹಳ್ಳಿ
೭.	ಜವರೇಗೌಡ	ಒಕ್ಕಲಿಗ	ಸೀಹಳ್ಳಿ ಬಿ
೮.	ವೀರಪ್ಪಗೌಡ ಎಸ್.ಕೆ.	ಒಕ್ಕಲಿಗ	ಸೀಹಳ್ಳಿ ಬಿ

ಮೇಲ್ಕಂಡ ಪಟ್ಟಿಯಂತೆ ಬಿ.ಸೀಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಒಟ್ಟು ೧೫ ಸದಸ್ಯರಿದ್ದು ಒಕ್ಕಲಿಗೆ ಸಮುದಾಯದವರು ಅತ್ಯಧಿಕವಾಗಿದ್ದಾರೆ. ವಿದ್ಯಾರ್ಹತೆಯು ಶೂನ್ಯವಾಗಿದ್ದು, ವಿವಿಧ ಜಾತಿಯ ಸಮುದಾಯಗಳಿಂದ ಚುನಾಯಿತಗೊಂಡಿದ್ದಾರೆ. ಅಷ್ಟೇನೂ ವಯಸ್ಸಿನ ಅಂತರ ಕಂಡುಬಂದಿಲ್ಲ.

೯. **ಕೊಡಗಹಳ್ಳಿ** ಗ್ರಾಮ ಪಂಚಾಯಿತಿಯು ಬನ್ನೂರು ಹೋಬಳಿ ವ್ಯಾಪ್ತಿಗೆ ಸೇರಿದ್ದು, ಈ ಕ್ಷೇತ್ರಕ್ಕೆ ಒಟ್ಟು ೪ ಗ್ರಾಮಗಳು ಸೇರ್ಪಡೆಯಾಗಿವೆ. ಅವುಗಳೆಂದರೆ ಕೊಡಗಹಳ್ಳಿ, ಗಾಡಿಜೋಗಿ ಹುಂಡಿ, ಮಾದಿಗ ಹಳ್ಳಿ, ಅರವಟ್ಟಿಗೆ ಕೊಪ್ಪಲು, ಒಟ್ಟು ಇಲ್ಲಿ ೧೭ ಸದಸ್ಯರಿದ್ದು, ಇಡೀ ಬನ್ನೂರಿಗೆ ದೊಡ್ಡ ಗ್ರಾಮ ಪಂಚಾಯಿತಿ ಎಂದು ಹೇಳಬಹುದು. ಇದರಲ್ಲಿ ೭ ಮಹಿಳಾ ಸದಸ್ಯರು ಹಾಗೂ ೧೦ ಪುರುಷ ಸದಸ್ಯರಿದ್ದಾರೆ.

ಕೊಡಗಹಳ್ಳಿ ಗ್ರಾಮಪಂಚಾಯಿತಿಯ ಮಹಿಳಾ ಸದಸ್ಯರ ವಿವರಣಾ ಪಟ್ಟಿ

ಕ್ರಮ ಸಂಖ್ಯೆ	ಹೆಸರು	ವಯಸ್ಸು	ಜಾತಿ	ವಿದ್ಯಾರ್ಹತೆ	ಗ್ರಾಮ
೧.	ಎಂ.ಗಾಯತ್ರಿ	36	ಕುರುಬ	10ನೇ ತರಗತಿ	ಅರವಟ್ಟಿಗೆ ಕೊಪ್ಪಲು
೨.	ಮಹದೇವಮ್ಮ	46	ನಾಯಕ	ಇಲ್ಲ	ಅರವಟ್ಟಿಗೆ ಕೊಪ್ಪಲು
೩.	ಭಾಗ್ಯ	36	SC	ಇಲ್ಲ	ಕೊಡಗಹಳ್ಳಿ
೪.	ಪ್ರಭಾಮಣಿ (ಅಧ್ಯಕ್ಷರು)	35	ಒಕ್ಕಲಿಗ	7ನೇ ತರಗತಿ	ಕೊಡಗಹಳ್ಳಿ
೫.	ನಾಗರತ್ನ	40	ಒಕ್ಕಲಿಗ	5ನೇ ತರಗತಿ	ಕೊಡಗಹಳ್ಳಿ
೬.	ಲಕ್ಷ್ಮಮ್ಮ	45	ಕುರುಬ	ಇಲ್ಲ	ಕೊಡಗಹಳ್ಳಿ
೭.	ಸಾಕಮ್ಮ	50	ಕುರುಬ	ಇಲ್ಲ	ಗಾಡಿಜೋಗಿ ಹುಂಡಿ

ಮೇಲ್ಕಂಡ ಪಟ್ಟಿಯಂತೆ ಕೊಡಗಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ೭ ಮಹಿಳಾ ಸದಸ್ಯರಿದ್ದು ೧೦ ಪುರುಷ ಸದಸ್ಯರಿದ್ದಾರೆ. ಅವರುಗಳೆಂದರೆ, ಚಿಕ್ಕ ಜವರಪ್ಪ (೭೦), ಸ್ವಾಮಿ (೩೫), ಮಹಾದೇವು

(೩೦), ಎಮ್ .ಎಸ್ .ಶಿವರಾಜು(೨೮), ಸಿದ್ದಪ್ಪಾಜಿ (೩೦), ಜಿ.ಹೆಚ್ .ನಿಂಗೇಗೌಡ (೫೫), ಶ್ರೀನಿವಾಸ ಕಟ್ಟಿ (೩೫), ವಿವಿಧ ಜಾತಿ ಸಮುದಾಗಳಿಂದ ಆಯ್ಕೆಗೊಂಡಿದ್ದು ಇವರಲ್ಲಿ ಅಕ್ಷರತೆಯ ಮಟ್ಟ ಬಹಳ ಕಡಿಮೆ ಇದೆ.

ಹೀಗೆ ಅಧ್ಯಯನಕ್ಕೆ ಒಳಗಾದ ಬನ್ನೂರು ಹೋಬಳಿಯ ೯ ಗ್ರಾಮ ಪಂಚಾಯಿತಿಗಳಲ್ಲಿ ಮಹಿಳಾ ಸದಸ್ಯರ ಪ್ರಮಾಣ ಹಾಗೂ ಅವರ ವಯಸ್ಸು, ಜಾತಿ, ವಿದ್ಯಾರ್ಹತೆ, ಆಯ್ಕೆಗೊಂಡ ಗ್ರಾಮದ ಹೆಸರುಗಳನ್ನು ಪೂರ್ಣವಾಗಿ ತಿಳಿದುಕೊಳ್ಳಬಹುದಾಗಿದೆ. ಮಾಹಿತಿಗಳನ್ನು ತಿಳಿದುಕೊಂಡ ನಂತರ ಸಂದರ್ಶನಕ್ಕೆ ಒಳಗಾದ ಮಹಿಳೆಯರ, ಪುರುಷ ಸದಸ್ಯರ ಹಾಗೂ ಸಾರ್ವಜನಿಕರ ಹಲವು ಅಭಿಪ್ರಾಯಗಳನ್ನು ಮಹಿಳಾ ದೃಷ್ಟಿಕೋನದ, ಮಹಿಳಾ ಅಧ್ಯಯನದ ಜ್ಞಾನ ಶಿಸ್ತಿನ ಚೌಕಟ್ಟಿಗೆ ತಂದು ವಿಶ್ಲೇಷಿಸುವುದು ಅತ್ಯಂತ ಪ್ರಮುಖ ಭಾಗವಾಗಿರುತ್ತದೆ. ಪಂಚಾಯಿತಿಗೆ ಆಯ್ಕೆಯಾದ ಬಗೆ, ಅಲ್ಲಿನ ಕೆಲವು ಕಾರ್ಯಗಳ ಬಗೆ, ಪುರುಷ ಸದಸ್ಯರ ಧೋರಣೆಗಳು, ಪಿತೃ ಪ್ರಧಾನ ಮೌಲ್ಯಗಳು ಮಹಿಳಾ ಸದಸ್ಯರ ಮೇಲೆ ಸವಾರಿ ಮಾಡುವ ವಿಧಾನಗಳನ್ನು ನಾವಿಲ್ಲಿ ಚರ್ಚೆಗೊಳಪಡಿಸಲಾಗುತ್ತದೆ.

ಹಲವು ತೆರನಾದ ಅಭಿರುಚಿಯುಳ್ಳ, ಅರ್ಹತೆಯುಳ್ಳ, ಯೋಚನೆಯುಳ್ಳ ಜನರು ಮಹಿಳಾ ರಾಜಕೀಯದ ಕ್ಷೇತ್ರಕ್ಕೆ ಕಾಲಿಟ್ಟಿರುವುದರ ಬಗೆಗೆ ತಮ್ಮದೇ ಆದ ನಿಲುವಿನಲ್ಲಿ ಉತ್ತರಿಸಲ್ಪಟ್ಟಿದ್ದಾರೆ. ಅಂತಹ ವಿಚಾರಗಳ ಹಿಂದೆ ಅಡಗಿರುವ ಮಹಿಳೆಯರ ನಿಜಸ್ಥಿತಿಯನ್ನು ಹೊರಗೆಡಹುವುದು ಈ ಅಧ್ಯಯನದ ಬಹುಮುಖ್ಯ ಸಂಗತಿಯಾಗಿದೆ. ಕೆಲವು ಸತ್ಯಾಂಶಗಳನ್ನು ಪಡೆಯಲು ಹಲವು ಪ್ರಶ್ನಾವಳಿಯನ್ನು ರೂಪಿಸಿ ಸಂದರ್ಶನ ಮಾಡಲಾಗಿದ್ದು, ಅಲ್ಲಿ ದೊರೆತ ಉತ್ತರಗಳನ್ನು ವಿಶ್ಲೇಷಣೆಗೆ ಒಳಪಡಿಸುವುದು ಈ ಮುಂದಿನ ಘಟಕದ ವಿಷಯವಾಗಿರುತ್ತದೆ.

ಈ ಅಧ್ಯಯನದಿಂದ ಬಹಳ ಮುಖ್ಯವಾದ ವಿಷಯ ತಿಳಿದುಬರುವುದೇನೆಂದರೆ ಬೆರಳೆಣಿಕೆಯಷ್ಟು ಮಹಿಳಾ ಸದಸ್ಯರು ಮಾತ್ರ ಯಾವುದೇ ರಾಜಕೀಯ back Ground ಇಲ್ಲದೆ ಗ್ರಾಮ ಪಂಚಾಯಿತಿ ಚುನಾವಣೆಗೆ ಅಭ್ಯಾರ್ಥಿಗಳಾಗಿ ನಿಂತು ಚುನಾಯಿತಗೊಂಡಿರುವುದಾಗಿದೆ. ಶೇ.೯೦ರಷ್ಟು ಮಹಿಳೆಯರ ಕುಟುಂಬದಲ್ಲಿ ಅಥವಾ ಸಂಬಂಧಿಕರಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಗೆ ಭಾಗವಹಿಸಿಯೇ ಇದ್ದಾರೆ. ಹಾಗೆಯೇ ಹಲವು ಚುನಾಯಿತಗೊಂಡ ಮಹಿಳೆಯರು ನೀವು ಯಾರ ಒಪ್ಪಿಗೆಯಿಂದ ಚುನಾವಣೆಗೆ ಅಭ್ಯರ್ಥಿಯಾದಿರಿ? ಎಂಬ ಪ್ರಶ್ನೆಗೆ ನಮ್ಮೆಜಮಾನ್ರು ಹೇಳಿದರು ಅದಕ್ಕೆ ಎಂಬ ಉತ್ತರವನ್ನೇ ಹೇಳಿರುವುದು ಪುರುಷ ಪ್ರಧಾನ ಸಮಾಜದ ಧೋರಣೆಗಳನ್ನು ಎತ್ತಿ ಹಿಡಿಯುವಂತಿದೆ. ಅವರು ಒಪ್ಪಿಗೆ ನೀಡಿರದಿದ್ದರೆ ಎಂಬ ಪ್ರಶ್ನೆಗೆ ಅಯ್ಯೋ ಗಂಡ ಹೇಳದೆ ಇಲ್ಲೀವರೆಗೆ ನಾನು ಯಾವ ಕೆಲಸವನ್ನೂ ಮಾಡಿಲ್ಲ ಎಂಬ ಉತ್ತವೇ ಕಾದಿತ್ತು.

ಅಂಕನಹಳ್ಳಿ ಗ್ರಾಮ ಪಂಚಾಯಿತಿಯ ದಾಕ್ಷಾಯಿಣಿ ಎಂಬ ಸದಸ್ಯೆ ೧೦ನೇ ತರಗತಿ ಮುಗಿಸಿದ್ದು, ಅಲ್ಪ ಮಟ್ಟಿನ ರಾಜಕೀಯ ಜ್ಞಾನವಿದ್ದರೂ ಪತಿಯೇ ನನ್ನ ಗೆಲುವಿಗೆ ಕಾರಣ. ನನಗೆ ಸಹಾಯ ಮಾಡುವ ವ್ಯಕ್ತಿ ಎಂದು ಹೇಳುವುದಕ್ಕೆ ಮರೆಯಲಿಲ್ಲ. ಜನರು ಅಭಿವೃದ್ಧಿಗೊಳ್ಳಬೇಕೆಂಬ ಉದ್ದೇಶವಿದ್ದ ಇವರಿಗೆ ಮೀಸಲಾತಿಯ ಬಗ್ಗೆ ಹಾಗೂ ಸರ್ಕಾರೀ ಸವಲತ್ತುಗಳ ಬಗ್ಗೆ ಮಾಹಿತಿ ತಿಳಿದಿದೆ. ಶಾಲಾ ಮಕ್ಕಳಿಗೆ, ಕಾಲೇಜು ವಿದ್ಯಾರ್ಥಿಗಳಿಗೆ ಹಳ್ಳಿಗೆ ಸರಿಯಾಗಿ ಸಾರಿಗೆ-ಸಂಪರ್ಕದ ಸೌಲಭ್ಯವಿಲ್ಲದ ಕಾರಣ ಪಂಚಾಯ್ತಿಯ ಕಡೆಯಿಂದ ಬೈಸಿಕಲ್ ವ್ಯವಸ್ಥೆ ಮಾಡಿಸಿದ್ದಾರೆ. ಚುನಾಯಿತಗೊಂಡ ನಂತರ ಸ್ಥಾನಮಾನದಲ್ಲಿ ಬದಲಾವಣೆಯಾಗಿದೆ ಎನ್ನುವ ಇವರು ಗೌರವಾದರಗಳು ಹೆಚ್ಚಾಗಿದೆ ಎಂದು ಸಂತೋಷ ವ್ಯಕ್ತಪಡಿಸುತ್ತಾರೆ. ಮನೆಗೆಲಸದಲ್ಲಿ ಮಗಳು, ಗಂಡ ಇಬ್ಬರೂ ಸಹಾಯ ಮಾಡುತ್ತಾರೆ ಎನ್ನುವುದರ ಬೆನ್ನಲ್ಲೇ ಕೆಲವು ತರಬೇತಿ ಶಿಬಿರಗಳಿಗೆ ಮನೆಗೆಲಸಗಳ ಒತ್ತಡಗಳಿಂದಾಗಿ ಹೋಗಲು ಸಾಧ್ಯವಾಗಲಿಲ್ಲ ಎನ್ನುತ್ತಾರೆ. ದೂರದ ಊರಿಗೆ ಸಭೆ-ಸಮಾರಂಭಗಳಿಗೆ ಹೋಗಿ ಮನೆಗೆ ತಡವಾಗಿ ಬಂದರೂ ಗಂಡ ಬೇಸರ ವ್ಯಕ್ತಪಡಿಸುವುದಿಲ್ಲ ಎಂದು ಸಂತೋಷದಿಂದ ಹೇಳುವುದರ ನಡುವೆಯೇ ಅವರೇ ಒತ್ತಾಯ ಮಾಡಿ ಚುನಾವಣೆಗೆ ನಿಲ್ಲಿಸಿ ಈಗ ಅವರೇ ಪ್ರಶ್ನೆಗಳನ್ನು ಮಾಡುವುದು ಸರಿಬರದ ಕಾರಣ ಸುಮ್ಮನಿರುತ್ತಾರೆ ಎನ್ನುತ್ತಾರೆ. ಆದರೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಬಗೆಗೆ ಕಾಳಜಿ ಹೊಂದಿರುವ ಇವರು ಬಾಯಿ ಮಾಡಿ ಕೇಳಿದರೆ ತಾನೇ ಅಧ್ಯಕ್ಷರು ಕೆಲಸ ಮಾಡಿಕೊಡೋದು ಎಂದು ಉತ್ತರಿಸುವುದನ್ನು ನೋಡಿದರೆ ಇವರಿಗೆ ಮಾತನಾಡುವ ಧೈರ್ಯವಿದೆ ಎಂದು ಹೇಳಬಹುದು. ಆದರೆ ಅಧ್ಯಕ್ಷರು ಪರಿಶಿಷ್ಟ ಜಾತಿ ಜನಾಂಗಕ್ಕೆ ಸೇರಿದವರಾಗಿದ್ದು, ಅವರನ್ನು ಯಾವುದೇ ವಿಚಾರವನ್ನಾದರೂ ತೆಗೆದು ಅವರನ್ನು ಹತ್ತಿಕ್ಕಬೇಕೆಂಬ ಕಾರಣವೇ ಅಂತಹ ಮಾತಿಗೆ ಸ್ಫೂರ್ತಿ ಎಂಬುದು ಕಂಡುಬಂದಿತು. ಸಭೆ ಸಮಾರಂಭಗಳಿಗೆ ಗಂಡ ಜೊತೆಯಲ್ಲಿ ಬರ್ತಾರೆ. ಬೇರೆಯವರ ಮನೆಯಲ್ಲಿ ಮಕ್ಕಳನ್ನು ಬಿಟ್ಟು ಹೋಗುತ್ತೇವೆ ಹಾಗೂ ಕೆಲವೊಮ್ಮೆ ಕಷ್ಟವೆನಿಸಿದಾಗ ಹೋಗೋದೇ ಇಲ್ಲ ಎಂದು ವಿವರಣೆ ನೀಡುತ್ತಾರೆ. ಇತರ ಪುರುಷ ಸದಸ್ಯರ ಜೊತೆ ಮಹಿಳೆಯರು ಸಭೆಗೆ ಹೋದಾಗ, ಒಟ್ಟಿಗೆ ಕುಳಿತಾಗ ಸಾರ್ವಜನಿಕರು ಮಾತಾನಾಡಿಕೊಳ್ಳುವುದನ್ನು ಕೇಳಿದಾಗ ಯಾಕಪ್ಪಾ ಚುನಾವಣೆಗೆ ನಿಂತುಕೊಂಡ್ವಿ, ಯಾಕಪ್ಪಾ ಬೇಕಿತ್ತು ಈ ಕಷ್ಟ ಎಂದು ಮಾತನಾಡಿಕೊಂಡಿದ್ದೇವೆ ಎನ್ನುತ್ತಾರೆ ದಾಕ್ಷಾಯಿಣಿಯವರು. ಮನೇ ಕಡೆ ಮಡಿ ಮೈಲಿಗೆ ಇರುತ್ತೆ ಹಾಗಂತ ಹೋದ ಕಡೆ ಮಾಡೋಕಾಗುತ್ತಾ ಎನ್ನುವ ಇವರ ಧ್ವನಿಯಲ್ಲಿ ಸಾಂಪ್ರದಾಯಿಕತೆಗೆ ಮನ್ನಣೆ ನೀಡುವ, ಮಡಿ ಮೈಲಿಗೆ ಕಲ್ಪನೆ ಮುಖ್ಯ ಎನ್ನುವ ನಿರ್ಧಾರವಿದ್ದಂತೆ ಕಾಣುತ್ತದೆ. ಸಮಾರಂಭಗಳಿಗೆ ಹೋದಾಗ ಪುರುಷ ಸಾಲಿನ ಕುರ್ಚಿಗಳು ಖಾಲಿ ಇದ್ದರೆ ಅವುಗಳನ್ನು ತೆಗೆದು ತಂದು ಮಹಿಳೆಯರ ಸಾಲಿನಲ್ಲಿ ಹಾಕಿ ಕೂರುತ್ತೇವೆ ಎನ್ನುವ ಇವರ ಮಾತು ಸಮಾಜದಲ್ಲಿ ಬೇರುಬಿಟ್ಟ ಗತಕಾಲದ ವಾಡಿಕೆಗಳನ್ನೇ ಮೈಗೂಡಿಸಿಕೊಂಡಂತಿತ್ತು. ಗ್ರಾಮ ಪಂಚಾಯ್ತಿಯಲ್ಲಿ ಗಂಡನನ್ನು ಕೇಳದೆ

ನಿರ್ಧಾರ ತೆಗೆದುಕೊಂಡರೆ, ಯಾವುದಾದರೂ ರುಜು ಹಾಕಿದರೆ ಗಂಡ ಬೈಯುತ್ತಾರೆ ಎಂದು ಲೀಲಾಜಾಲವಾಗಿ ಒಪ್ಪಿಕೊಳ್ಳುತ್ತಾರೆ. ಮಹಿಳೆಯರಿಗೆ ಮನೆಗೆಲಸವೇ ಸರಿಯಾದ ಕೆಲಸವೆಂದು ತೀರ್ಮಾನ ಮಾಡಿದಂತೆ ಮಾತನಾಡುತ್ತಾರೆ.

ಸಂದರ್ಶನದ ಮಧ್ಯೆ ಮಧ್ಯೆ ಅಧ್ಯಕ್ಷರಾದ ಜಯಮ್ಮ ಬೇಗ ಬಾ ನನ್ನ ಗಂಡ ಮನೆ ಚಾವಿ ಕೊಡು ಅಂತ ಕಾಲ್ ಮಾಡ್ತಾನೆ ಇದ್ದಾರೆ. ನಿಧಾನಕ್ಕೆ ಹೋದರೆ ಬೈತಾರೆ ಎಂದು ಹೇಳುತ್ತಲೇ ಇದ್ದರು. ಹಾಗೆಯೇ ಕೊನೆಯಲ್ಲಿ ಒಬ್ಬರು ಈ ದಿನವೆಲ್ಲಾ ಪಂಚಾಯಿತಿಗೆ ಬಂದು ಟೈಮೆಲ್ಲಾ ವೇಸ್ಟ್ ಆಯ್ತು ಎಂಬ ಮಾತುಗಳನ್ನು ಆಲಿಸಿದರೆ ಮಹಿಳೆಯರಿಗೆ ಎರಡು-ಮೂರು ಕೆಲಸದ ಹೊರೆಗಳು ಒತ್ತಡವನ್ನುಂಟು ಮಾಡುತ್ತಿವೆ ಎನ್ನಿಸುತ್ತದೆ. ಕಾರಣ ಈ ಸಮಾಜ ಕುಟುಂಬದ ಕೆಲಸಗಳನ್ನು ಮಹಿಳೆ ಮಾಡಲೇಬೇಕೆಂದು ಹೇಳುವಾಗ ಹೊರ ಕೆಲಸದ ಬಗೆಗೆ ಆಕೆಗೆ ಅಷ್ಟು ಕಾಳಜಿ ಬರಲು ಸಾಧ್ಯವಾಗುವುದಿಲ್ಲ.

<u>ಸಾರ್ವಜನಿಕರು</u> : ಕೆಲವು ಸಾರ್ವಜನಿಕರಿಗೆ ಯಾರು ಮಹಿಳಾ ಜನಪ್ರತಿನಿಧಿ ಎಂಬುದು ತಿಳಿದೇ ಇಲ್ಲ. ಕಾರಣ ಅವರ ಪರವಾಗಿ ಓಟು ಕೇಳಲು ಹೋದವರೂ ಕುಟುಂಬದ ಪುರುಷ ಸದಸ್ಯರು ಹಾಗೂ ಗ್ರಾಮದ ಪುರುಷ ಜನತೆಯಾಗಿದ್ದಾರೆ. ಮಹಿಳೆ ಆಯ್ಕೆಗೊಂಡ ನಂತರ ಕೆಲಸ ನಿರ್ವಹಿಸುತ್ತಿರುವವರೂ ಕುಟುಂಬದ ಪುರುಷರೇ ಆಗಿದ್ದಾರೆ ಎನ್ನಬಹುದು. ಸದಸ್ಯರು ಯಾವ ಸಮಸ್ಯೆಯನ್ನೂ ಕೇಳಲು ಬಂದಿಲ್ಲ, ಬೀದಿ ದೀಪಗಳನ್ನು ಸರಿಪಡಿಸಿಲ್ಲ, ನೀರಿನ ವ್ಯವಸ್ಥೆ ಸರಿಯಾಗಿಲ್ಲ. ಚರಂಡಿ ಅವ್ಯವಸ್ಥೆ ಬಗೆಗೆ ಗ್ರಾಮದ ಜನರು ದೂರು ನೀಡುವುದು ಸರಿಯೇ ಆಗಿದೆ. ಗ್ರಾಮವನ್ನು ಒಮ್ಮೆ ಅವಲೋಕಿಸಿದಾಗ ಈ ಅಂಶಗಳೇ ಎದ್ದು ಕಾಣುತ್ತವೆ. ಮಹಿಳೆಯರು ಪಂಚಾಯ್ತಿಗೆ ಹೋಗೋದು ಬರೋದು ಬಿಟ್ಟು ಬೇರೆ ಏನು ಕೆಲಸವೂ ಮಾಡೊಲ್ಲ ಎಂದು ದುಃಖಿತರಾಗಿಯೇ ಹೇಳುತ್ತಾರೆ. ಆದರೆ ಕುಡಿತ ಪುರುಷರ ಸ್ವತ್ತಾಗಿದ್ದು, ಮಹಿಳೆಯರಿಗೆ ಯಾವುದೇ ರೀತಿಯ ಸಹಾಯವನ್ನೂ ಮಾಡುತ್ತಿಲ್ಲ. ದನ-ಕರುಗಳಿಗೆ ಸಂಬಂಧಿಸಿದ ಕೆಲಸಗಳನ್ನು ಮಹಿಳೆಯರೇ ಮಾಡಬೇಕು. ಪುರುಷರು ಹರಟೆ ಹೊಡೆಯುತ್ತಾ ಕುಳಿತಿದ್ದರೂ ಆ ಕೆಲಸ ಮಾಡುವುದಿಲ್ಲ. ಇಂತಹ ವಿಚಾರಗಳನ್ನು ಗಮನಿಸಿದರೆ ಇಲ್ಲಿನ ಪುರುಷರೆಲ್ಲರೂ ಪುರುಷ ಪ್ರಧಾನ ಮೌಲ್ಯಗಳ ಧೋರಣೆಗಳಿಗೇನೂ ಹೊರತಾಗಿಲ್ಲ.

ಸಾರ್ವಜನಿಕ ಮಹಿಳೆಯರು ವಿಧವೆಯರಿಗೆ, . ವೃದ್ಧರಿಗೆ ದೊರೆಯುವ ಸಹಾಯ ಧನವನ್ನು ಮುಂದಾಗಿ ನಿಂತು ಮಾಡಿಸಿಕೊಟ್ಟಿದ್ದಾರೆ ಎನ್ನುತ್ತಾರೆ ಹಾಗೂ ಮನೆಯ ಪುರುಷರು ಊಟವನ್ನೂ ಹಾಕಿಕೊಂಡು ತಿನ್ನುವುದಿಲ್ಲ ಎಂದು ಕೋಪದಿಂದಲೇ ಹೇಳುವಾಗ ಗಂಡಸರ ಜೊತೆ ಊಟ ಮಾಡಬಾರದು. ಸಮನಾಗಿ ಅವರೊಟ್ಟಿಗೆ ಕುಳಿತುಕೊಳ್ಳುವುದು ತಪ್ಪು ಎಂದು ಹೇಳುವುದನ್ನು ಮರೆಯಲಿಲ್ಲ.

ಮರೀಗೌಡ ಎಂಬ ಅಂಕನಹಳ್ಳಿಯ ವ್ಯಕ್ತಿ ಮೀಸಲಾತಿ ಇರದಿದ್ದರೆ ಮಹಿಳೆಯರು ರಾಜಕೀಯಕ್ಕೆ ಬರೋಕೆ ಸಾಧ್ಯವಾಗುತ್ತಿರಲಿಲ್ಲ. ಕಾರಣ ಗಂಡಸರಿರೋವಾಗ ಹೆಂಗಸರಿಗೇಕೆ ರಾಜಕಾರಣ ಎಂದು ಮಾತಿಗಿಳಿಯುತ್ತಾರೆ. ಹೆಂಗಸು ಮೀಸಲಾತಿ ಮೂಲಕ ಅಧಿಕಾರಕ್ಕೆ ಬಂದರೂ ಗಂಡನೇ ಅಲ್ಲಿ ಅಧಿಕಾರ ಚಲಾಯಿಸುವುದು. ಹೆಂಗಸರೇನಿದ್ದರೂ ಹೂ ಮುಡಿದುಕೊಂಡು, ಸೀರೆ ಉಟ್ಟುಕೊಂಡು ಬರ್ತಾರಷ್ಟೆ. ಗಂಡಂದಿರು ಹೇಳಿದ ಹಾಗೆ ತಾನೆ ಹೆಂಡತಿಯರು ಕೇಳಬೇಕು ಯಾವ ದೇವರ ಒಕ್ಕಲೋರು ಹೆಚ್ಚಿರುತ್ತಾರೋ ಅವರು ಚುನಾವಣೆಗೆ ನಿಂತು ಗೆಲ್ಲುತ್ತಾರೆ. ಹೆಂಗಸರಿಗಿಂತ ಗಂಡಸರು ರಾಜಕೀಯದಲ್ಲಿದ್ದರೇನೆ ಚೆಂದ ಎನ್ನುವ ಇವರು ಬಂದರೆ ತಿಳುವಳಿಕೆ ಇರುವ ಮಹಿಳೆಯರು ರಾಜಕೀಯಕ್ಕೆ ಬರಬೇಕೆನ್ನುತ್ತಾರೆ. ಅದೇನೇ ಇರಲಿ ಮಹಳೆಯರಿಗೆ ಮನೆಗೆಲಸವೇ ಭೂಷಣ ಎಂಬುದು ಇವರ ವಾದವಾಗಿದೆ.

ಹೆಗ್ಗೂರು ಗ್ರಾಮದ ಮಲ್ಲಮ್ಮ ಎನ್ನುವವರು ಗಂಡ ಬೇಡವೆಂದರೂ ಗ್ರಾಮದ ಜನರು ಗಂಡನನ್ನು ಒಪ್ಪಿಸಿ ತನ್ನನ್ನು ಚುನಾವಣೆಗೆ ನಿಲ್ಲಿಸಿದರೆನ್ನುತ್ತಾರೆ. ಅಂದರೆ ಗಂಡನ ಒಪ್ಪಿಗೆಯೇ ಇಲ್ಲಿ ಹೆಚ್ಚು ಮಾನ್ಯತೆ ಇತ್ತು. ಚುನಾವಣೆಗೆ ನಿಲ್ಲಬೇಕಾದವರು ಒಪ್ಪದಿದ್ದರೂ ಸರಿ ಗಂಡನ ಒಪ್ಪಿಗೆಗೆ ಹೆಚ್ಚು ಮಹತ್ವ ಪಡೆಯುತ್ತದೆ. ರಾಜಕೀಯಕ್ಕೆ ಬರುವುದರ ಉದ್ದೇಶವೇನು ಎಂಬ ಪ್ರಶ್ನೆಗೆ ನಾನೇನ್ ಸೀರೆ ತೊಗೋಬೇಕಿತ್ತ ಏನೋ ನಾಲ್ಕಾರು ಜನ ಕೆಲಸ ಮಾಡಿದರಪ್ಪ ಅಂತ ಅನ್ನಿಸಿಕೊಳ್ಳೋಕಷ್ಟೆ ಬಂದೆ ಎನ್ನುತ್ತಾರೆ. ಆಕೆಯ ಮಗ ಪಂಚಾಯಿತಿಯಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತಿರುವುದರಿಂದ ತನಗೇನೂ ಅಲ್ಲಿ ಹೆಚ್ಚಿನ ಕೆಲಸವಿರುವುದಿಲ್ಲ. ಎಲ್ಲವನ್ನೂ ಮಗನೇ ನೋಡಿಕೊಳ್ಳುತ್ತಾನೆ ಎನ್ನುವಲ್ಲಿ ಅವರ ಮುಖದಲ್ಲಿ ನಿರಾಳತೆ ಇತ್ತು. ಯಾವುದೇ ಸಹಿಯನ್ನು ಮಗನ ಅನುಮತಿ ಇಲ್ಲದೇ ಹಾಕುವುದಿಲ್ಲ ಎನ್ನುವ ಇವರು ಗಂಡಸರ ಸಹಾಯವಿರದಿದ್ದರೆ ನಾವು ಹೆಂಗಸರು ರಾಜಕೀಯಕ್ಕೆ ಬರೋಕಾಗುತ್ತಾ ಎಂದೂ ಹೇಳುತ್ತಾರೆ. ಹಾಗೆಯೇ ಬಡ ಕುಟುಂಬಗಳಿಗೆ ದನಕರುಗಳನ್ನು ಕೊಡಿಸಬೇಕು, ಸಾಲ ಕೊಡಿಸಬೇಕು, ಸೇತುವೆ ಕಟ್ಟಿಸಬೇಕೆಂಬ ಆಶಯವನ್ನು ಕೊನೆಯಲ್ಲಿ ವ್ಯಕ್ತಪಡಿಸಿದರು. ದೂರದ ಊರಿನ ಸಭೆ ಸಮಾರಂಭಗಳಿಗೆ ಮಗನ ಜೊತೆ ಹೋಗುತ್ತೇನೆ ಎಂಬ ಮಾತಿನ ಜೊತೆಯಲ್ಲೇ ಮಹಿಳೆಯರು ರಾಜಕೀಯಕ್ಕೆ ಬಂದರೇನೇ ಕುಟುಂಬದ ದರಿದ್ರ, ದೇಶದ ದರಿದ್ರ ಹೋಗುವುದು ಎಂದು ಹೇಳುತ್ತಾರೆ. ಅದೇನೇ ಇರಲಿ ಶಿಕ್ಷಣವಿಲ್ಲದ ಕಾರಣ ಈ ಮಹಿಳೆಯು ಪುರುಷರ ಪರವಹಿಸಿ ಮಾತನಾಡಿದರು ಎಂಬುದು ನನ್ನ ಭಾವನೆ. ಮುಂಚೆ ಪಟ್ಟಿ ಹಾಕಿರೋ ಸೀರೆ ಹಾಕುತ್ತಿದ್ದೆ. ಸೂರಿಲ್ಲದ ಮನೆಯಲ್ಲಿದ್ದೆ. ಆದರೆ ಈಗ ನಮ್ಮ ಸಮುದಾಯದ ಜನರಿಗೆ ನಾಲ್ಕಾಣೆ ಭಾಗದಷ್ಟು ಮಾತ್ರ ಸಮಸ್ಯೆ ಉಳಿದಿದೆ. ಅದೂ ಕೂಡಾ ಕೆಲವು ವರ್ಷಗಳಲ್ಲಿ ಇರುವುದಿಲ್ಲ ಎನ್ನುತ್ತಾರೆ. ಆದರೆ ಒಂದು ವಿಷಯವೇನೆಂದರೆ ಪೈಪೋಟಿ ಎಂಬುದು ಮಹಿಳೆಯರ ನಡುವೆಯೇ ಉಂಟಾಗಿದೆ. ಅದೇನೇ ಇರಲಿ ರಾಜಕೀಯಕ್ಕೆ ಬಂದ ಮೇಲೆ

ಮಹಿಳೆಯರು ಕುಟುಂಬದ ಗೌರವ ಕಾಪಾಡುವಂತೆ ಇಲ್ಲಿಯೂ ಹೆಸರೊಸಗೆ ಪಡೆದುಕೊಳ್ಳಬೇಕು ಎನ್ನುತ್ತಾರೆ.

ಹೆಗ್ಗೂರು ಗ್ರಾಮದ ನಂಜುಂಡಸ್ವಾಮಿ ಎಂಬ ಪುರುಷ ಸದಸ್ಯ ಮಹಿಳೆಯರು ರಾಜಕೀಯಕ್ಕೆ ಬಂದರೆ ಒಳ್ಳೆಯದು ಎಂಬ ಉತ್ತರದ ಬೆನ್ನಲ್ಲೇ ಪತ್ನಿಯನ್ನು ಚುನಾವಣೆಗೆ ನಿಲ್ಲಿಸುವುದಿಲ್ಲ ಎನ್ನುತ್ತಾರೆ. ಬೇರೆ ಕುಟುಂಬದ ಹೆಂಗಸರು ರಾಜಕೀಯಕ್ಕೆ ಬರಬಹುದು ಎಂದು ಹೇಳುವ ಇವರು ತಮ್ಮ ಕುಟುಂಬದ ಮಹಿಳೆ ಮಾತ್ರ ಕುಟುಂಬಕ್ಕೆ ಮೀಸಲಾಗಿರಬೇಕೆಂಬ ಆಶಯ ವ್ಯಕ್ತಪಡಿಸುತ್ತಾರೆ. ಪಂಚಾಯಿತಿಗಳಲ್ಲಿ ಕೆಲವೊಮ್ಮೆ ಅಧಿಕಾರವನ್ನು ಅಧ್ಯಕ್ಷರಾಗಿರುವ ಮಹಿಳೆ ಚಲಾಯಿಸುವ ಬದಲು ಆಕೆಯ ಗಂಡ ಚಲಾಯಿಸುವುದರಿಂದ ಘರ್ಷಣೆಗಳಾಗುತ್ತವೆ ಎಂದಾಗ ನಮಗೆ ಅಧಿಕಾರ ಚಲಾಯಿಸುವಿಕೆಯ ಹಲವು ಮಜಲುಗಳು ತಿಳಿದುಬರುತ್ತವೆ. ಆದರೆ ನಾವಿಲ್ಲಿ ಮಹಿಳಾ ಅಧ್ಯಯನದ ದೃಷ್ಟಿಕೋನದಿಂದ ಯೋಚಿಸಿದಾಗ ತಿಳಿದುಬರುವುದೇನೆಂದರೆ ಶಿಕ್ಷಣ ಪಡೆಯದ ಮಹಿಳೆಯರು ರಾಜಕೀಯ ಕ್ಷೇತ್ರಕ್ಕೆ ಬರುತ್ತಿದ್ದಾರೆ. ಬಂದ ನಂತರ ಹಲವು ವಿಷಯಗಳನ್ನು, ವ್ಯವಹಾರಗಳನ್ನು ತಿಳಿದುಕೊಳ್ಳುತ್ತಿದ್ದಾರೆ. ಈ ಸಂದರ್ಭದಲ್ಲಿ ತಿಳಿದವರ ಸಲಹೆ ಬಹುಮುಖ್ಯವಾಗಿರುತ್ತದೆ. ಮುಂದೆ ಅವರೇ ಮತ್ತೆ ಗೆದ್ದು ಬಂದಾಗ ಸ್ವಃ ಅಧಿಕಾರವನ್ನು ನಡೆಸಬಹುದಾಗಿರುತ್ತದೆ. ಉದಾ : ಏನು ತಿಳಿಯದ ಮಕ್ಕಳು ಶಾಲೆಗೆ ಹೋಗಿ ಕಲಿತ ನಂತರ ಮುಂದೆ ಅವರೇ ಶಿಕ್ಷಕರಾಗುತ್ತಾರೆ. ಹಾಗೆಯೇ ಈಗ ತಾನೇ ರಾಜಕೀಯ ಕ್ಷೇತ್ರಕ್ಕೆ ಮಹಿಳೆಯರು ಕಾಲಿಡುತ್ತಿದ್ದು, ಸಲಹೆ ಸೂಚನೆಗಳನ್ನು ಪಡೆದ ನಂತರ ಮುಂದೆ ಅವರೇ ನಿರ್ಧಾರ ಕೈಗೊಳ್ಳುವ ಮಟ್ಟಕ್ಕೆ ಬೆಳೆಯುತ್ತಾರೆ. ಮಹಿಳೆಯರಿಗೆ ಒಂದೆಡೆ ಕುಳಿತು ಮಾಡುವ ಆಫೀಸ್ ವರ್ಕ ಉತ್ತಮವೆನಿಸುತ್ತದೆ ಎನ್ನುತ್ತಾರೆ. ಕೆಲವೊಮ್ಮೆ ಮಹಿಳಾ ಸದಸ್ಯರು ಯಾವುದಾದರೂ ಸಮಸ್ಯೆಯ ಬಗ್ಗೆ ಧೈರ್ಯವಾಗಿ ಕೇಳಿದಾಗ ಖುಷಿಯಾಗುತ್ತದೆ ಎನ್ನುವ ಇವರು ಒಟ್ಟಾರೆ ಮಹಿಳೆಯರು ಮನೆಯಲ್ಲಿದ್ದರೇನೇ ಭೂಷಣ ಎನ್ನುವ ನಿರ್ಧಾರಕ್ಕೆ ಬರುತ್ತಾರೆ.

ಮಲಿಯೂರು ಗ್ರಾಮ ಪಂಚಾಯಿತಿಯ ಚಿಕ್ಕಸ್ವಾಮಿ ಎಂಬ ಸದಸ್ಯ ಗ್ರಾಮದ ಸಮಸ್ಯೆಗಳೇ ಒತ್ತಡ ತರುತ್ತವೆ ಎಂದು ಪ್ರಾರಂಭಿಕ ಉತ್ತರ ಕೊಟ್ಟ ನಂತರ ಮಹಿಳೆಯರು ಎಂದು ವಿಷಾದದಿಂದಲೇ ಹೇಳುತ್ತಾರೆ. ಪುರುಷರಿಗೆ ಯಾಕಪ್ಪ ಮಹಿಳೆ ರಾಜಕೀಯಕ್ಕೆ ಬಂದಳು ಎಂದೆನಿಸಿದರೂ ಸಹ ಮಾತನ್ನು ಹೊರಹಾಕುವುದಿಲ್ಲ. ಗಂಡಸರಿಗೇ ದರ್ಪ ತೋರಿಸುತ್ತಾರೆ, ಪಕ್ಕದಲ್ಲಿ ಕುಳಿತುಕೊಳ್ಳುತ್ತಾರೆ ಅಂತ ಬೇಸರ ಆಗುತ್ತೆ. ಸಂಪ್ರದಾಯಗಳನ್ನು ಒಡೆದು ಹಾಕುತ್ತಿದ್ದಾರೆ ಎಂದೆನಿಸುತ್ತದೆ. ಆದರೆ ಅದನ್ನೆಲ್ಲ ಕೇಳೋಕಾಗಲ್ಲ ಕಾರಣ ಸರ್ಕಾರವೇ ಅವರಿಗೆ ಅಧಿಕಾರ, ಮೀಸಲಾತಿ ನೀಡಿದೆಯಲ್ಲ ಎಂದು ನಿಟ್ಟುಸಿರು ಬಿಡುತ್ತಾರೆ. ಆದರೂ ಅವಕಾಶ ಸಿಕ್ಕಿದರೆ ನನ್ ಹೆಂಡ್ತೀನ ಚುನಾವಣೆಗೆ ನಿಲ್ಲಿಸ್ತೀನಿ. ಗೆದ್ದರೆ ಏನೂ ಗೊತ್ತಿಲ್ಲದಿದ್ದರೂ ಕೂತಿದ ಬರ್ಲಿ. ಉಳಿದಿದ್ದನ್ನ ನಾನ್ ನೋಡ್ಕೋತೀನಿ ಎನ್ನುತ್ತಾರೆ.

ಇತರ ಪುರುಷರ ಜೊತೆ ಮಹಿಳೆಯರು ದೂರದ ಊರಿಗೆ ಹೋಗಕೂಡದು. ಹೋದರೆ ಗ್ರಾಮದ ನಾಲ್ಕಾರು ಜನ ನಾಲ್ಕಾರು ಮಾತುಗಳನ್ನಾಡಿಕೊಳ್ಳುತ್ತಾರೆ. ಅದಕ್ಕೆ ಅವಕಾಶ ಕೊಡಬಾರದು ಎಂದು ಸಾಂಪ್ರದಾಯಿಕ ಪುರುಷರ ನೈಜ ಚಿಂತನೆಯನ್ನೇ ಬಲಪಡಿಸುವ ಇವರು ತಮಗಿಂತ ಕೆಳಜಾತಿಯವರ ಜೊತೆ ಕುಳಿತು ಊಟ ಮಾಡುವುದಿಲ್ಲ ಎನ್ನುತ್ತಾರೆ. ಮಹಿಳೆ ಅಧ್ಯಕ್ಷರಾಗಿದ್ದರೆ, ಹೆಂಗಸಿನ ಮಾತು ಯಾಕೆ ಕೇಳಬೇಕು ಎಂತಲೇ ಕೆಲವು ನಿರ್ಧಾರಗಳನ್ನು ನಾವು ಬದಲಾಯಿಸುತ್ತೀವಿ. ಅದಕ್ಕೆ ಮಹಿಳೆ ಒಪ್ಪಿಕೊಳ್ಳುತ್ತಾಳೆ ಎನ್ನುತ್ತಾರೆ. ಹೊರಗಡೆ ಕೆಲಸ ಹೆಣ್ಣಿಗಲ್ಲ ಎಂದು ಮಹಿಳೆಯರ ಅಭಿವೃದ್ಧಿಯ ವಿರುದ್ಧವಾಗಿ ಕಟುವಾದ ಮಾತುಗಳನ್ನಾಡಿದರು. ಮಹಿಳೆಯರ ಅಭಿವೃದ್ಧಿಯನ್ನು ಕಂಡು ಇವರ ನಿಲುವೇಕೋ ನಕಾರಾತ್ಮಕವಾಗಿಯೇ ಕಾಣಿಸಿತು.

ಇದೇ ಮಲಿಯೂರು ಕ್ಷೇತ್ರದ ಉಪಾಧ್ಯಕ್ಷರಾಗಿರುವ ಮಹದೇವಮ್ಮ ಗಂಡ ರಾಜಕೀಯದಲ್ಲಿದ್ದ ಕಾರಣ ತಾನು ಮಹಿಳಾ ಮೀಸಲಾತಿಯಡಿಯಲ್ಲಿ ಚುನಾವಣೆಗೆ ನಿಂತುಕೊಂಡೆ ಎನ್ನುತ್ತಾರೆ. ಬಡವರಿಗೆ ಉಪಕಾರ ಮಾಡಬೇಕೆಂಬ ಉದ್ದೇಶವಿದೆ ಎನ್ನುವುದರ ಜೊತೆಗೆ ಏನೂ ಲಾಭ ಇಲ್ಲದೆ ಯಾರು ಯಾವ ಕೆಲಸ ಮಾಡುತ್ತಾರೆ. ಡ್ರೈನೇಜ್ ಮಾಡಿಸಿದಾಗ ಹಣ ಉಳಿಯಿತು. ಆದರೆ ಅದರ ಬಗ್ಗೆ ನಮ್ಮೆಜಮಾನ್ರು ನೋಡಿಕೊಳ್ಳುತ್ತಾರೆ ಎನ್ನುತ್ತಾರೆ. ಇಷ್ಟೆಲ್ಲಾ ಉತ್ತರಿಸುವ ಮಧ್ಯೆ ಗಂಡ ಬಂದ ತಕ್ಷಣ ಧ್ವನಿಯನ್ನು ಕುಗ್ಗಿಸುತ್ತಾರೆ. ಇದನ್ನು ಗಮನಿಸಿದಾಗ ನಮಗೆ ತಿಳಿಯುವುದೇನೆಂದರೆ ಮಹಿಳೆಯರು ಮುಕ್ತವಾಗಿ ಮಾತನಾಡುವುದಕ್ಕೆ ಹಲವು ವರ್ಷಗಳಿಂದ ಬದುಕಿ ಬಾಳಿದ ಮನೆಯಲ್ಲೇ ಅವಕಾಶ ದೊರೆಯದಿದ್ದಾಗ ಇನ್ನು ಪಂಚಾಯಿತಿ ಸ್ಥಳದಲ್ಲಿ ಇದು ಅಸಾಧ್ಯವೇ ಸರಿ. ಸಭೆಗಳಿಗೆ ಹೋಗಲು ಮನೆಗೆಲಸಗಳು ಅಡ್ಡಿ ಮಾಡುತ್ತವೆ. ಯಾರೂ ಸಹ ಮನೆಗೆಲಸಕ್ಕೆ ಸಹಾಯ ಮಾಡುವುದಿಲ್ಲ. ಯಾವುದೇ ಪಂಚಾಯಿತಿ ಕೆಲಸಕ್ಕೂ ಗಂಡನನ್ನು ಕೇಳಿಯೇ ಮಾಡುತ್ತೇನೆ ಎಂದು ಹೇಳುವುದರ ಜೊತೆ ದೂರದ ಸ್ಥಳಕ್ಕೆ ಹೋಗಿ ತಡವಾಗಿ ಮನೆಗೆ ಬಂದರೆ ಯಾವ ಗಂಡ ತಾನೆ ಬೈಯದೆ ಸುಮ್ಮನಿರುತ್ತಾರೆ ಎಂದೂ ತಮ್ಮ ನೋವನ್ನು ಹಂಚಿಕೊಳ್ಳುತ್ತಾರೆ. ಮನೆಯಲ್ಲೂ ಮಾಡ್ಬೇಕು, ಪಂಚಾಯ್ತಿ ಕೆಲಸವನ್ನೂ ಮಾಡ್ಬೇಕು, ಜನರ ಮಾತನ್ನೂ ಕೇಳಬೇಕು ಒಟ್ಟಾರೆ ಬಹಳ ಒತ್ತಡದ ಪರಿಸ್ಥಿತಿ ಅವರ ಮುಖದಲ್ಲಿ ಕಾಡುತ್ತಿತ್ತು. ಗಂಡಸರ ಜೊತೆ ವ್ಯವಹಾರ ಮಾಡುವುದು ಮುಜುಗರವೇ ಸರಿ. ಆದರೂ ನಾವು ನಿರ್ಧಾರ ಮಾಡಿದ್ದಕ್ಕೆ ಅವರು ಒಪ್ಪಿಗೆ ನೀಡುತ್ತಾರೆ. ಅವರ ನಿರ್ಧಾರಕ್ಕೆ ನಾವು ಒಪ್ಪಿಗೆ ನೀಡುತ್ತೇವೆ ಎನ್ನುತ್ತಾರೆ. ಆದರೂ ಗಂಡನ ಮಾತನ್ನು ಬಿಟ್ಟು ಕೆಲಸ ಮಾಡೋದು ನನ್ ಕೈಲಾಗಲ್ಲ ಎಂದೇ ಹೇಳಿಕೆ ನೀಡುತ್ತಾರೆ.

ಮಲಿಯೂರು ಗ್ರಾಮದ ಅಧ್ಯಕ್ಷರಾದ ನಾಗರಾಜಾಚಾರ್ ಅವರು ಕುಟುಂಬದವರು ರಾಜಕೀಯದಲ್ಲಿದ್ದ ಕಾರಣ ಗ್ರಾಮ ಪಂಚಾಯಿತಿ ಕ್ಷೇತ್ರಕ್ಕೆ ಬಂದೆ ಎಂದು ಮಾತನ್ನು ಪ್ರಾರಂಭಿಸುತ್ತಾರೆ.

ಸ್ನೇಹಿತರು ಹೆಚ್ಚು ಸಹಾಯ ಮಾಡಿದರು. ಮಹಿಳಾ ಸದಸ್ಯರು ರಾಜಕೀಯಕ್ಕೆ ಬಂದ ನಂತರ ಸದೃಢರಾಗಿದ್ದಾರೆ. ಏನನ್ನೇ ಕೇಳಿದರೂ ದಕ್ಷತೆ-ಕೆಚ್ಚಿನಿಂದ ಕೇಳ್ತಾರೆ. ಕೆಲವು ಬಾರಿ ಗಂಡಂದಿರೂ ಸಹ ಬಂದು ಕೇಳುತ್ತಾರೆ. ಹೆಂಗಸು ಮನೆಯಲ್ಲಿದ್ದರೇನೇ ಸರಿ. ಗಂಡಸು ನಾಲ್ಕಾರು ದಿನ ಮನೆಗೆ ಬರಲಿಲ್ಲವೆಂದರೂ ಏನೂ ಭಯವಿಲ್ಲ. ಆದರೆ ಹೆಂಗಸರು ಹಾಗಲ್ಲ. ಯಾವುದೇ ಕ್ಷೇತ್ರದಲ್ಲಾದರೂ ಯಜಮಾನ ಗಂಡಸಾಗಿದ್ದರೇನೆ ಚೆಂದ ಎನ್ನುತ್ತಾರೆ.

<u>ಸಾರ್ವಜನಿಕರು:</u> ಮಲಿಯೂರು ಗ್ರಾಮದ ಜನರು ಅಭಿವೃದ್ಧಿ ಕಾರ್ಯದ ಬಗ್ಗೆ ಬಹಳ ರೋಷದಿಂದಲೇ ಮಾತನಾಡುತ್ತಾರೆ. ಯಾರೂ ಏನೂ ಕೆಲಸ ಮಾಡಿಲ್ಲ. ತೊಂಬೇಲಿ ನೀರಿಲ್ಲ. ೧೩,೫೦೦ ರೂ. ಬೀದಿ ದೀಪಗಳಿಗೆ ಬಿಲ್ ಆಗಿದೆ. ಆದರೆ ಯಾವುದೇ ಕೆಲಸ ಮಾಡಿಸಿಲ್ಲ ಎನ್ನುತ್ತಾರೆ. ಬೋರ್ ವೆಲ್ ಗೆ ಯಾವುದೋ ಒಂದು ಹಳೇ ನಟ್ ಹಾಕಿಸಿಬಿಟ್ಟು ೫೦೦ ರೂ. ಬಿಲ್ ಹಾಕಿಸಿಕೊಳ್ಳುತ್ತಾರೆ. ಆದರೆ ಇಲ್ಲಿ Village Accounter ಒಳ್ಳೆ ಕೆಲಸ ಮಾಡ್ತಿದ್ದಾರೆ ಎಂದೆಲ್ಲಾ ಹೇಳುವ ಮಾತು ಗ್ರಾಮವನ್ನು ಅವಲೋಕಿಸಿದಾಗ ಶೇ.೯೦ ಭಾಗ ಸರಿ ಎನಿಸುತ್ತದೆ.

ಅತ್ತಹಳ್ಳಿ ಗ್ರಾಮ ಪಂಚಾಯಿತಿಯ ಕೆ.ರಾಮೇಗೌಡ ಎಂಬುವವರು ಗ್ರಾಮದ ಜನರ ಮಾತಿಗೆ ಬೆಲೆಕೊಟ್ಟು ಚುನಾವಣೆಗೆ ಅಭ್ಯರ್ಥಿಯಾದರಂತೆ. ಹಾಗೆಯೇ ಅವರು ಮಹಿಳಾ ಸದಸ್ಯರ ಬಗೆಗೆ ವಿವರಣೆ ನೀಡುತ್ತಾ ಮಹಿಳೆಯರು ಮೀಸಲಾತಿ ಇಲ್ಲದಿದ್ದರೆ ಗ್ರಾಮ ಪಂಚಾಯಿತಿಗಳಿಗೆ ಪ್ರವೇಶಿಸಲು ಸಾಧ್ಯವಾಗುತ್ತಿರಲಿಲ್ಲ. ಹಾಗೂ ಮಹಿಳೆಯರು ಈ ಕ್ಷೇತ್ರಕ್ಕೆ ಬಂದರೆ ಮನೆಗೆಲಸದ ಜೊತೆಗೆ, ಕೂಲಿ, ಮಕ್ಕಳ ಲಾಲನೆ-ಪಾಲನೆ ಮುಂತಾದ ಒತ್ತಡಗಳು ಕಾಡುತ್ತವೆ ಎನ್ನುತ್ತಾರೆ. ಜೊತೆಗೆ ಪರವಾಗಿಲ್ಲ ಮಹಿಳೆಯರು ಚೆನ್ನಾಗಿಯೇ ಕೆಲಸ ಮಾಡುತ್ತಾರೆ ಎನ್ನುವುದಲ್ಲದೆ, ಮಹಿಳೆ ಮುಂದುವರಿಯುತ್ತಿದ್ದಾರೆ ಎಂಬುದೇ ಸಂತೋಷದ ಸಂಗತಿ ಎನ್ನುತ್ತಾರೆ. ಮೀಸಲಾತಿ ಇರದಿದ್ದರೆ ಯಾವ ಪುರುಷನೂ ಕುಟುಂಬದ ಮಹಿಳೆಯನ್ನು ರಾಜಕೀಯಕ್ಕೆ ಪ್ರವೇಶಿಸಲು ಬಿಡುತ್ತಿರಲಿಲ್ಲ ಎಂಬುದು ಇವರ ವಾದವಾಗಿತ್ತು. ನೇರವಾಗಿರದವರು ಹಣ ಹೊಡೆಯುತ್ತಾರೆ ಎನ್ನುವ ಇವರು ಶೌಚಾಲಯ, ಬೀದಿ ದೀಪ, ಡಾಂಬರೀಕರಣದ ಕೆಲಸಗಳನ್ನು ಮಾಡಿಸಬೇಕೆನ್ನುತ್ತಾರೆ. ಮಹಿಳೆಯರು ರಾಜಕೀಯಕ್ಕೆ ಬಂದರೆ ಗೃಹಕೃತ್ಯದ ಜೊತೆಗೆ, ಕುಟುಂಬ ಕಲಹ, ಶಿಕ್ಷಣದ ಸಮಸ್ಯೆಗಳು ಕಾಡುತ್ತವೆ. ಹಾಗೂ ಇವುಗಳನ್ನು ದೂರ ತಳ್ಳಿದರೆ ಮಹಿಳಾ ಸಮುದಾಯ ಅಭಿವೃದ್ಧಿ ಹೊಂದಬಹುದೆನ್ನುತ್ತಾರೆ.

ಅತ್ತಹಳ್ಳಿ ಗ್ರಾಮ ಪಂಚಾಯಿತಿಯ ಸದಸ್ಯೆಯಾಗಿರುವ ಎನ್ .ಆರ್ .ಮಮತರವರು ಚುನಾವಣೆಗೆ ನಿಲ್ಲೋ ಯೋಚನೆಯೇ ಇರಲಿಲ್ಲ. ನಮ್ಮ ಸಂಬಂಧಿಕರು ಹೆಚ್ಚಿರುವ ಕಾರಣ ಗಂಡ ಹಾಗೂ ಗ್ರಾಮದ ಜನರು ನಿಲ್ಲಿಸಿ ಗೆಲ್ಲಿಸಿದ್ದಾರೆ. ನನಗೇನೂ ಇಷ್ಟವಿರಲಿಲ್ಲ. ಬೇರೆಯವರ ಒತ್ತಾಯಕ್ಕೆ ಚುನಾವಣೆಗೆ

ನಿಂತುಕೊಂಡೆ. ಮುಂಚೆ ನನಗೆ ರಾಜಕೀಯದ ಬಗ್ಗೆ ಏನೂ ತಿಳಿದಿರಲಿಲ್ಲ. ಆದರೆ ಈಗ ಅಲ್ಪಮಟ್ಟಿಗೆ ಗ್ರಾಮ ಪಂಚಾಯಿತಿಯ ಕಾರ್ಯಗಳು ತಿಳಿದಿವೆ. ನನಗೆ ಎಲ್ಲೂ ಹೊರಗಡೆ ಹೋಗಲು ಇಷ್ಟವಿಲ್ಲ. ಆದರೆ ಗಂಡನೇ ಧೈರ್ಯ ಹೇಳಿ ಪ್ರೋತ್ಸಾಹ ನೀಡುತ್ತಾರೆ. ಪಂಚಾಯಿತಿ ಸದಸ್ಯರಲ್ಲಿ ನಾನೊಬ್ಬಳೇ ಮಹಿಳಾ ಸದಸ್ಯೆಯಾಗಿದ್ದರೆ ಸಭೆ-ಸಮಾರಂಭಗಳಿಗೆ ಗಂಡ ಕಳಿಸ್ತಾನೂ ಇರಲಿಲ್ಲ. ನಾನೂ ಸಹ ಹೋಗುತ್ತಿರಲಿಲ್ಲ. ಗ್ರಾಮದ ಸಮಸ್ಯೆಗಳ ಬಗೆಗೆ ಗಂಡನೇ ಸ್ಪಂದಿಸುತ್ತಾರೆ. ನಾನು ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದೇ ಇಲ್ಲ. ಮನೆಗೆಲಸವೇ ನನಗೆ ಬೇಕಾದಷ್ಟಿರುತ್ತದೆ. ಗ್ರಾಮಸಭೆಗಳಿದ್ದಾಗ ಮನೆಗೆಲಸ ಹೆಚ್ಚಾಗಿದ್ದರೆ ಹೋಗುವುದೇ ಇಲ್ಲ. ಅಕಸ್ಮಾತ್ ಹೋದರೂ ನಾವು ಬರುವವರೆಗೆ ನಮ್ಮ ಕೆಲಸ ನಮಗಾಗಿ ಕಾಯುತ್ತಿರುತ್ತವೆ. ಇವುಗಳನ್ನು ಒಮ್ಮೆ ಯೋಚಿಸಿದರೆ ಮಹಿಳೆಯರು ಪುರುಷರನ್ನು ಹೊರತಾಗಿ ಕೆಲಸ ಮಾಡಬಹುದೆಂಬ ಯೋಚನೆಯನ್ನು ಮಾಡುತ್ತಿಲ್ಲವೇನೋ ಎಂದೆನಿಸುತ್ತದೆ.

ಅತ್ತಹಳ್ಳಿ ಗ್ರಾಮ ಪಂಚಾಯಿತಿಯ ಮತ್ತೊಬ್ಬ ಸದಸ್ಯರಾದ ಜೆ.ಲೋಕೇಶ್ ಎಂಬುವವರು ಮಹಿಳೆಯರಿಗೆ ಹೆಚ್ಚು ಸಂಕೋಚದ ಸ್ವಭಾವವಿದೆ ಹಾಗೂ ಕುಟುಂಬ ವರ್ಗ ಅವರನ್ನು ಮುಕ್ತವಾಗಿ ಬೆರೆಯಲು ಅವಕಾಶ ಕೊಡುತ್ತಿಲ್ಲ. ಸಮಾಜದ ಬದಲಾದ ಸ್ಥಿತಿ ಇನ್ನೂ ಕೆಲವು ಕುಟುಂಬಗಳನ್ನು ತಲುಪಿಲ್ಲವೆಂಬ ನಿರ್ಧಾರ ಮಾಡಿದಂತೆ ಉತ್ತರಿಸುತ್ತಾರೆ. ಇಂದಿಗೂ ಪುರುಷ ಪ್ರಧಾನ ಸಮಾಜದ ಧೋರಣೆಗಳು ಭಾರತೀಯರಲ್ಲಿ ಹಾಸುಹೊಕ್ಕಾಗಿರುವುದೇ ಎಲ್ಲಾ ಅನರ್ಥಗಳಿಗೂ, ಮಹಿಳೆಯರು ಹಿಂದುಳಿದಿರುವಿಕೆಗೂ ಮುಖ್ಯ ಕಾರಣ ಎಂದು ಪ್ರತಿಪಾದಿಸುತ್ತಾರೆ. ಗ್ರಾಮ ಸಭೆಗಳಿಗೆ ಪುರುಷರೇ ಸ್ವಲ್ಪ ತಡವಾಗಿ ಬರುತ್ತಾರೆ. ಕಾರಣ ಅವರಿಗೆ ಧೈರ್ಯ ಹೆಚ್ಚು. ಏನಾದರೂ ಸಬೂಬು ಹೇಳುವ ಜ್ಞಾನ ಅವರಿಗಿದೆ ಎನ್ನುತ್ತಾರೆ. ಇಲ್ಲಿನ ಮಹಿಳಾ ಸದಸ್ಯರೆಲ್ಲರೂ ಹೊಂದಿಕೊಂಡು ಸಾಮೂಹಿಕವಾಗಿ ಸಂತೋಷವಾಗಿದ್ದಾರೆ. ಇದು ತೃಪ್ತಿ ತಂದಿದೆ ಎನ್ನುತ್ತಾರೆ. ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು ಎನ್ನುವ ಇವರು ಶೇ.೫೦ ಭಾಗ ಮಹಿಳೆಯರು ಅಭಿವೃದ್ಧಿ ಹೊಂದಿದ್ದಾರೆ ಎಂದೇ ಉತ್ತರಿಸುತ್ತಾರೆ.

ಅಧ್ಯಕ್ಷರಾದ ಮಹಾದೇವಮ್ಮ ಗಂಡ ಹೇಳಿದ ಮೇಲೆಯೇ ಚುನಾವಣೆಗೆ ನಿಂತದ್ದು ಎನ್ನುತ್ತಾರೆ. ನಾಲ್ಕು ಜನಕ್ಕೆ ಉಪಕಾರ ಮಾಡ್ಬೇಕು. ನಾವೂ ಓಡಾಡ್ಬೇಕು, ತಿಳಿದುಕೊಳ್ಳಬೇಕೆಂಬ ಆಸೆಯೇ ಉದ್ದೇಶವೆನ್ನುತ್ತಾರೆ. ಮೀಸಲಾತಿ ಇಲ್ಲದಿದ್ದರೆ ರಾಜಕೀಯಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲ. ಅಧ್ಯಕ್ಷರಾದ ನಂತರ ಹೆಚ್ಚಿನ ಗೌರವ ದೊರಕಿದೆ. ಎಲ್ಲರೂ ಅಧ್ಯಕ್ಷರೇ ಎಂದು ಕರೆಯುತ್ತಾರೆ. ಹಾಗೂ ಸಭೆಗಳಿಂದ, ತರಬೇತಿ ಕಾರ್ಯಾಗಾರಗಳಿಂದ ಹೆಚ್ಚು ಜ್ಞಾನ ಬಂದಿದೆ ಎನ್ನುತ್ತಾರೆ. ಮನೆಯಲ್ಲಿ ಸರಿಯಾದ ಕೆಲಸ ಮಾಡದೆ ಸಭೆಗೆ ಹೋಗಿ ಬಂದಾಗ ಗಂಡ ಏನ್ಮಾಡೋದು ನಾನೇ ಮಾಡಿದ ಕೆಲಸ ಸಹಿಸಿಕೊಳ್ಳದೆ

ವಿಧಿಯಿಲ್ಲ ಎನ್ನುತ್ತಾರೆ. ಪಂಚಾಯಿತಿ ವಿಷಯದಲ್ಲಾಗಲೀ ಮನೆ ವಿಷಯದಲ್ಲಾಗಲೀ ಗಂಡನದೇ ಅಂತಿಮ ತೀರ್ಮಾನವಾಗಿರುತ್ತದೆ. ಚಿಕ್ಕ ಮಕ್ಕಳು ಇದ್ದಿದ್ದರೆ ರಾಜಕೀಯಕ್ಕೆ ಹೋಗುತ್ತಿರಲಿಲ್ಲ ಕಾರಣ ಹೆಣ್ಣಾದವಳು ಮೊದಲು ಉತ್ತಮ ತಾಯಿಯಾಗಬೇಕು ಎನ್ನುತ್ತಾರೆ. ಪಂಚಾಯ್ತಿ ಕೆಲಸ, ಮನೆಗೆಲಸ ಎರಡೂ ಒಟ್ಟೊಟ್ಟಿಗೆ ಬಂದಾಗ ತಲೆನೋವು ಎನಿಸುತ್ತದೆ ಮಹಿಳೆಯರು ರಾಜಕೀಯಕ್ಕೆ ಹೆಚ್ಚು ಬಂದರೆ ಒಳ್ಳೆಯದು. ಕಾರಣ ಗಂಡಸರು ಹಣಗಳಿಸುವುದರ ಬಗೆಗೆ ಯೋಚನೆ ಮಾಡುತ್ತಾರೆ. ಆದರೆ ಮಹಿಳೆಯರು Prompt ಆಗಿರ್ತಾರೆ. ಹಾಗೆಯೇ ಪುರುಷ ಸದಸ್ಯರು ಯಾವುದೇ ಕೆಲಸವನ್ನು ಗುಟ್ಟಾಗಿಟ್ಟು ಒಳೊಳಗೇ ಮಾಡುತ್ತಾರೆ. ಆದರೆ ಮಹಿಳೆಯರು ಹಾಗಲ್ಲ. ನನಗೇನೂ ಯಾವುದೇ ಕೆಲಸದಲ್ಲೂ ನಾಚಿಕೆ, ಮುಜುಗರ ಇಲ್ಲ ಎನ್ನುತ್ತಾರೆ. ಮೊದಲಿಗೆ ಸಹಿ ಹಾಕಲು ಕೈ ನಡುಕ ಉಂಟಾಗುತ್ತಿತ್ತು. ಈಗ ಹೊಂದಿಕೊಂಡಿದ್ದೇನೆ. ಪಂಚಾಯಿತಿ ಕೆಲಸವೇ ಇಷ್ಟ ಎನ್ನುತ್ತಾರೆ ಇವರು.

ಮತ್ತೊಬ್ಬ ಸದಸ್ಯರಾದ ಎ.ಎನ್ .ಗೀತಾರವರು ರಾಜಪೂತ ಜನಾಂಗಕ್ಕೆ ಸೇರಿದವರಾಗಿದ್ದು ನನ್ನ ನಡವಳಿಕೆ, ಪ್ರೀತಿ, ನನ್ನ ಮೇಲಿನ ಗೌರವೇ ಗ್ರಾಮಸ್ಥರು ನನ್ನನ್ನು ಈ ಸ್ಥಾನಕ್ಕೆ ತರಲು ಕಾರಣ. ರಾಜಕೀಯ ಅಂದ್ರೇನೇ ಇಷ್ಟ ಇರಲಿಲ್ಲ. ಆದರೆ ನಾಲ್ಕು ಜನ ಹೆಣ್ಣು ಮಕ್ಕಳಿಗೆ ಸಹಾಯ ಮಾಡಬೇಕು ಎಂಬ ಆಸೆಯಿಂದ ಈ ಕ್ಷೇತ್ರಕ್ಕೆ ಬಂದೆ ಎಂದು ಸ್ತ್ರೀ ಪರ ಧೋರಣೆಯ ನೆಲೆಯಿಂದ ತಮ್ಮ ಮಾತನ್ನು ಬಿಚ್ಚಿಡುತ್ತಾರೆ. ನಾನು ವಿವಾಹವಾಗಿಲ್ಲ. ಹೆಣ್ಣು ಮಕ್ಕಳು ಓದುವುದೆಂದರೆ ನನಗಿಷ್ಟ. ಹೆಣ್ಣು ಮಕ್ಕಳು ಮನೆಯಲ್ಲಾದರೂ ಸರಿ ಸ್ವತಹ ದುಡಿಮೆ ಮಾಡಿ ಆರ್ಥಿಕ ಸ್ವಾವಲಂಬಿಗಳಾಗಬೇಕು ಎನ್ನುತ್ತಾರೆ. ಪಂಚಾಯಿತಿ-ಮನೆಗೆಲಸಗಳು ಹೊರೆ ಎನಿಸಿಲ್ಲವೆಂದೂ ಹೇಳುತ್ತಾರೆ.

ಬೀಡನ ಹಳ್ಳಿ ಗ್ರಾಮ ಪಂಚಾಯಿತಿಯ ಸದಸ್ಯೆಯಾದ ಮಹಾದೇವಮ್ಮ ನಮ್ಮ ಜಾತಿಯ ಜನರು ಹೆಚ್ಚು ಇದ್ದಾರೆ ಎಂದು ಹೇಳಿ ಗ್ರಾಮಸ್ಥರು ನನ್ನನ್ನು ಚುನಾವಣೆಗೆ ನಿಲ್ಲಿಸಿದರು. ರಾಜಕೀಯ ಅಂದ್ರೆ ತಿಳಿದಿಲ್ಲ. ಈಗಲೂ ಗೊತ್ತಾಗುವುದಿಲ್ಲ. ನನ್ ದೊಡ್ಡ ಮಗ ಎಲ್ಲವನ್ನೂ ನೋಡಿಕೊಳ್ಳುತ್ತಾನೆ. ನಮ್ಮ ಪಂಚಾಯ್ತಿಯಲ್ಲಿ ನಂಜುಂಡಸ್ವಾಮಿ ಸದಸ್ಯ ಏನು ಹೇಳುತ್ತಾರೋ ಅದೇ ನಡೆಯುತ್ತದೆ. ಅದೇ ರೀತಿ ಅವರು ಚೆನ್ನಾಗಿ ಕೆಲಸವನ್ನೂ ಮಾಡುತ್ತಾರೆ. ಸೊಸೆಯಂದಿರು ಮನೆಗೆಲಸಕ್ಕೆ ಸಹಾಯ ಮಾಡುವುದರಿಂದ ನನಗೆ ಅಷ್ಟೇನೂ ಒತ್ತಡದ ಕೆಲಸಗಳಿಲ್ಲ. ಮೀಸಲಾತಿ ಮಹಿಳೆಯರು ರಾಜಕೀಯಕ್ಕೆ ಬರಲು ಅವಕಾಶ ಮಾಡಿಕೊಟ್ಟಿದೆ. ಸದಸ್ಯರಾದ ಮೇಲೂ ಹಳ್ಳಿ ಜನ ಅಲ್ವಾ ಮಾಮೂಲಿ ಒಂದೇ ರೀತಿ ಮಾತನಾಡಿಸುತ್ತಾರೆ. ಗೌರವ ಕೊಡುತ್ತಾರೆ. ಚೆನ್ನಾಗಿ ಮಾತನಾಡಿಸಿದರೆ ಯಾವಾಗಲಾದರೂ, ಏನಾದರೂ ಕೆಲಸಕ್ಕೆ ಬರ್ತಾರೆ ಅಂತಲೂ ಗೌರವ ಕೊಡುತ್ತಾರೆ. ಇಲ್ಲಿಗೆ ಬಂದ ಮೇಲೆ ಸ್ವಲ್ಪ ತಿಳುವಳಿಕೆ ಬಂದಿದೆ. ಉದಾ : ಮುಂಚೆ ಗ್ರಾಮದ ಕೆಲಸಕ್ಕೆ ಸರ್ಕಾರದಿಂದ ಹಣ ಬರುತ್ತದೆಂದು ತಿಳಿದಿರಲಿಲ್ಲ. ಗೆದ್ದವರು ಮನೆಯಿಂದ ತಂದು ಮಾಡ್ತಾರೆ ಎಂದುಕೊಂಡಿದ್ದೆನು.

ಸಾರ್ವಜನಿಕರು : ಗ್ರಾಮಸ್ಥರು ಹಲವು ಸಮಸ್ಯೆಗಳನ್ನು ಮುಂದಿಡುತ್ತಾರೆ. ಹಾಗೆಯೇ ನಂಜುಂಡ ಶೆಟ್ಟಿ ಚೆನ್ನಾಗಿ ಕೆಲಸ ಮಾಡುತ್ತಾರೆ ಎಂದಾಗ ಅವರು ಯಾರು ಎಂದರೆ ಪಂಚಾಯಿತಿ ಸದಸ್ಯೆ ಲಕ್ಷ್ಮಮ್ಮನ ಗಂಡ ಎನ್ನುತ್ತಾರೆ. ಹೆಂಗಸರು ೧೦೦ ರೂಪಾಯಿಗಾಗಿ ಸಭೆಗೆ ಕರೆದಾಗ ಹೋಗುತ್ತಾರೆ ಬರುತ್ತಾರೆ ಅಷ್ಟೆ. ಹೆಂಗಸರು ಸಂಘಕ್ಕೆ ಸೇರಿ ಸಾಲ ತಂದ್ಕೊಡೋದನ್ನೆ ಹಿಡಿಯೋಕಾಗ್ತಿಲ್ಲ. ಇನ್ನು ರಾಜಕೀಯದಲ್ಲಿ ಮುಂದುವರಿದು ಬಿಟ್ಟರೆ ಅಷ್ಟೇ ನಮ್ಮನ್ನು ಕೋಣೆ ಮನೆಗೆ ಹಾಕಿ ಅವರು ಬೀದಿಯಲ್ಲಿರುತ್ತಾರೆ ಎಂದು ಅಳುಕಿಲ್ಲದೆಯೇ ವಿವರಣೆ ನೀಡುತ್ತಾರೆ. ಇವರಿಗೆ ಮಹಿಳೆ ಅಭಿವೃದ್ಧಿ ಹೊಂದುವುದು ಇಷ್ಟವಿಲ್ಲ.

ಬೀಡನಹಳ್ಳಿಯ ಮತ್ತೊಬ್ಬ ಸದಸ್ಯೆಯಾದ ಮಹದೇವಮ್ಮ ಇವರು ಲಿಂಗಾಯಿತ ಸಮುದಾಯಕ್ಕೆ ಸೇರಿದವರಾಗಿದ್ದು ಗ್ರಾಮಸ್ಥರು ನೀವೇ ನಿಲ್ಲಬೇಕು ಅಂತ ಕೇಳಿಕೊಂಡರು ಅದಕ್ಕಾಗಿ ಚುನಾವಣೆಗೆ ಅಭ್ಯರ್ಥಿಯಾದೆ. ರಾಜ್ಯ, ಸರ್ಕಾರ, ಕೇಂದ್ರ ಸರ್ಕಾರದ ಬಗ್ಗೆ ತಿಳಿದಿಲ್ಲ. ರಾಜಕೀಯದ ಕೌಟುಂಬಿಕ ಹಿನ್ನೆಲೆ ಇದೆ. ಗ್ರಾಮದ ಅಭಿವೃದ್ಧಿಗಾಗಿ ಬಿಸಿಯೂಟಕ್ಕೆ ಅಡಿಗೆ ಮನೆ, ಬೀದಿ ದೀಪ, ರಸ್ತೆ, ಮನೆಗಳಿಗೆ grant ಒದಗಿಸಿಕೊಡಲಾಗಿದೆ. ಮುಖ್ಯವಾಗಿ ದೇವಸ್ಥಾನದಲ್ಲಿ ಒಂದು ಕಲ್ಯಾಣ ಮಂಟಪ ಸ್ಥಾಪಿಸಬೇಕೆಂಬ ಮಹದಾಸೆ ಇದೆ ಎಂದು ನಿಟ್ಟುಸಿರು ಬಿಡುತ್ತಾರೆ.

ಸಾಮಾನ್ಯ ಮಹಿಳೆಯಾಗಿದ್ದುದಕ್ಕಿಂತ ಸದಸ್ಯೆಯಾದ ನಂತರ ಹೆಚ್ಚಿನ ಗೌರವ ಕೊಡುತ್ತಾರೆ. ಇದು ನಾನು ೨ನೇ ಬಾರಿ ಈ ಸ್ಥಾನಕ್ಕೆ ಬಂದಿರುವುದಾಗಿದೆ. ನಮ್ಮನೆಯಲ್ಲಿ ನಾವೇಳಿದ ಹಾಗೆಯೇ ಗಂಡ ಇರೋದ್ರಿಂದ ಯಾವುದೇ ಮನಸ್ತಾಪ ಬರುವುದಿಲ್ಲ ಎಂದು ಉತ್ತರಿಸುತ್ತಾರೆ. ಆದರೂ ಯಾರೇನೇ ಅಂದರೂ ಹೆಣ್ಣಿಗೆ ಕುಟುಂಬದ ಕೆಲಸವೇ ಭೂಷಣ. ಹೊರಗಡೆ ಹೋಗಿ ನಾಲ್ಕಾರು ಜನರ ಹತ್ತಿರ ನಾಲ್ಕಾರು ಮಾತು ಯಾಕೆ ಕೇಳಬೇಕು ಹೇಳಿ ಎಂದು ಬೇಸರ ವ್ಯಕ್ತಪಡಿಸುತ್ತಾರೆ. ಪಂಚಾಯಿತಿ ಕೆಲಸಕ್ಕೆ ನನ್ನ ಮಗ ಸಹಾಯ ಮಾಡ್ತಾನೆ. ದೂರದ ಊರಿನ ಸಭೆಗಳಿಗೆ ಮಗ ಜೊತೆಯಲ್ಲಿ ಬರ್ತಾನೆ. ಕಾರಣ ನನಗೆ ಮೊದಲಿನಿಂದಲೂ ಸ್ವಲ್ಪ ಭಯವಿದೆ. ವಿವಾಹ, ಹಬ್ಬ ಮುಂತಾದ ಕೆಲಸಗಳಿದ್ದರೆ ಸಭೆಗಳಿಗೆ ಹೋಗುವುದಿಲ್ಲ. ಮಹಿಳೆಯರಿಗೆ ಅಷ್ಟು ವಿಚಾರಗಳ ವಿಶಾಲ ದೃಷ್ಟಿ ಇಲ್ಲದ ಕಾರಣ ರಾಜಕೀಯದಲ್ಲಿ ಪುರುಷರ ಸರಿಸಮಾನವಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ ಎನ್ನುತ್ತಾರೆ. ರಾಜಕೀಯದಿಂದ ಸ್ವಲ್ಪ ತಿಳುವಳಿಕೆ ಬಂದಿದೆ. ಉದಾ : ಬ್ಯಾಂಕ್ ವ್ಯವಹಾರ, ಹಣದ ವ್ಯವಹಾರ, ಜನರ ಅಭಿರುಚಿ ತಿಳಿಯುವುದು ಇತ್ಯಾದಿ.

ಮಹಿಳೆಯರು ಚುನಾವಣೆಗೆ ನಿಂತು ಗೆದ್ದ ಮೇಲೆ ಪುರುಷರೂ ಸಮ-ಮಹಿಳೆಯರೂ ಸಮ. ನೀರಿಗೆ ಬಿದ್ದ ಮೇಲೆ ಚಳಿ ಎಂದರೆ ಆಗುತ್ತಾ? ಉನ್ನತಾಧಿಕಾರಿಗಳು ಬಂದರೆ ನಮ್ಮ ಗ್ರಾಮದ ಸಮಸ್ಯೆಗಳನ್ನು ಹೇಳಿಕೊಳ್ಳುತ್ತೇವೆ. ಹೆಂಗಸರಿಗೆ ಮನೆಗೆಲಸವೇ ಸರಿ ಅನ್ನೋ ಕಾಲ ಹೊರಟು

ಹೋಯಿತು. ಗಂಡಸರು ಸರಿಯಿಲ್ಲ ಕುಡಿಯುತ್ತಾರೆ. ಜೂಜಾಡುತ್ತಾರೆ. ಮನೆಗೆ ಸರಿಯಾಗಿ ತಂದು ಹಾಕಲ್ಲ. ಆದ್ದರಿಂದ ಅಧಿಕಾರ ಎಂಬುದು ಹೆಣ್ಣಿನ ಕೈಲಿದ್ರೆ ಕುಟುಂಬ ಚೆನ್ನಾಗಿರುತ್ತದೆ. ಮನೆಗೆಲಸ-ಪಂಚಾಯಿತಿ ಕೆಲಸ ಕಷ್ಟ ಆಗುತ್ತದೆ ಆದರೆ ಸೊಸೆ ಇರುವುದರಿಂದ ಪರವಾಗಿಲ್ಲ ಎನ್ನುತ್ತಾರೆ.

ಬೀಹನ ಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ರತ್ನಮ್ಮರವರು ಪುರುಷ ಸದಸ್ಯರೆಲ್ಲರಿಗಿಂತ ಧೈರ್ಯವಂತ ಮಹಿಳೆಯಾಗಿ ಕಂಡು ಬಂದರು ಸ್ವ ನಿರ್ಧಾರ ತೆಗೆದುಕೊಳ್ಳುವ, ಸದಸ್ಯರೆಲ್ಲರನ್ನೂ ತನ್ನ ಹತೋಟಿಯಲ್ಲಿಟ್ಟುಕೊಂಡಿರುವ ದಿಟ್ಟ ಮಹಿಳೆಯಾಗಿದ್ದಾರೆ. ನೀವು ಹೇಗೆ ಈ ಕ್ಷೇತ್ರಕ್ಕೆ ಬಂದಿರಿ ಎಂಬ ಪ್ರಶ್ನೆಗೆ ಅದೊಂದು ದೊಡ್ಡ ಕಥೆ. ಅದನ್ನು ನೆನೆಸಿಕೊಂಡರೆ ಈಗಲೂ ಬೇಸರವಾಗುತ್ತದೆ ಎಂದು ಮಾತು ಪ್ರಾರಂಭಿಸುತ್ತಾರೆ. ನನ್ನ ಗಂಡನಿಗೆ ರಾಜಕೀಯ ಅಂದ್ರೆ ತುಂಬಾ ಇಷ್ಟ. ನಮ್ಮ ಪರಿಶಿಷ್ಟ ಜಾತಿ ಜನಾಂಗಕ್ಕೆ ಸಹಾಯ ಮಾಡಬೇಕು. ಅವರನ್ನು ಅಭಿವೃದ್ಧಿಪಡಿಸಬೇಕೆಂಬ ಆಸೆ ಅವರಲ್ಲಿತ್ತು. ಆ ಕಾರಣದಿಂದಲೇ ಗ್ರಾಮ ಪಂಚಾಯಿತಿ ಚುನಾವಣೆಗೆ ಎರಡು ಬಾರಿ ನಿಂತು ಸೋತರು. ಜನರೂ ಸಹ ತುಂಬಾ ತೊಂದರೆ ಕೊಟ್ಟರು. ಇದೇ ಕೊರಗಿನಲ್ಲಿ ಅನಾರೋಗ್ಯಕ್ಕೆ ಒಳಗಾಗಿಬಿಟ್ಟರು. ನಂತರ ಮೀಸಲಾತಿ ಮೂಲಕ ನಾನು ಚುನಾವಣೆಗೆ ನಿಂತುಕೊಂಡೆ ಗೆದ್ದಿದ್ದೀನಿ. ಆದರೆ ನನ್ನ ಗಂಡ ನಾನು ಈ ಸ್ಥಾನದಲ್ಲಿರುವುದನ್ನು ನೋಡೋಕೆ ಆಗ್ತಿಲ್ಲ. ಅವರು ನಾನು ಅಧ್ಯಕ್ಷ ಸ್ಥಾನಕ್ಕೆ ಬರುವ ಮೂರು ತಿಂಗಳ ಮುಂಚೆಯೇ ತೀರಿಕೊಂಡರು. ಅಧ್ಯಕ್ಷೆ ಸ್ಥಾನಕ್ಕೆ ಬರುವುದಕ್ಕೂ ಹಲವು ತೊಂದರೆಗಳುಂಟಾದವು. ಹೇಗೂ ಚಿನ್ನ ಕಳೆದುಕೊಂಡಿದ್ದೀನಿ (ಗಂಡ) ಇನ್ನು ಬೆಳ್ಳಿ ಉಳಿದಿದೆ(ಅಧಿಕಾರ) ಅವರ ಆತ್ಮಕ್ಕಾದರೂ ಶಾಂತಿ ಸಿಗಲಿ ಎಂದು ಅಧಿಕಾರ ಬಿಡದೆ ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದೇನೆ. ಜನರು ಕೆಲವರು ಹೊಗಳುತ್ತಾರೆ. ಕೆಲವರು ತೆಗಳುತ್ತಾರೆ. ಅದಕ್ಕೆ ತಲೆಕೆಡಿಸಿಕೊಳ್ಳುವುದಿಲ್ಲ. ಪುರುಷ ಅಧಿಕಾರ ಮಾಡಿ ಅದನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ. ಹೆಂಗಸರಾದರೆ ಭಯದಿಂದ, ಗೌರವ ಉಳಿಸಿಕೊಳ್ಳಬೇಕೆಂದು ಸದುಪಯೋಗಪಡಿಸಿಕೊಳ್ಳುತ್ತಾರೆ. ನನಗೂ ಹೆಚ್ಚು ತಿಳಿಯುವುದಿಲ್ಲ. ಆದರೆ ಒಬ್ಬ ತಿಳಿದಿರುವ ಹುಡುಗ ಇದ್ದಾನೆ ಅವನನ್ನು ಕೇಳಿ ತಿಳಿದುಕೊಂಡು ನಂತರ ವಿಷಯದ ಬಗೆಗೆ ನಿರ್ಣಯ ತೆಗೆದುಕೊಳ್ಳುತ್ತೇನೆ ಎಂದು ಉತ್ತರಿಸುತ್ತಾರೆ.

ಹನುಮನಾಳು ಗ್ರಾಮ ಪಂಚಾಯಿತಿಯ ಸದಸ್ಯೆಯಾದ ಡಿ. ಪದ್ಮಮ್ಮರವರೂ ಸಹ ಎಲ್ಲರ ಮಾತಿನಂತೆ ತನ್ನ ಗಂಡನ ಮಾತಿನಂತೆ.ಚುನಾವಣೆಗೆ ನಿಂತೆ ಎನ್ನುತ್ತಾರೆ. ಗಂಡ ೩೦ ವರ್ಷಗಳಿಂದ ರಾಜಕೀಯದಲ್ಲಿದ್ದಾರೆ. ತುಂಬಾ ರಾಜಕೀಯ ವ್ಯಕ್ತಿಗಳು ಅವರಿಗೆ ಪರಿಚಯವಿದ್ದಾರೆ. ನನಗೂ ಎಲ್ಲರೂ ಹೇಳುವಂತೆ ರಾಜಕೀಯಕ್ಕೆ ಬರುವುದು ಇಷ್ಟವಿರಲಿಲ್ಲ. ಮೀಸಲಾತಿಯಿದ್ದ ಕಾರಣ ಈ ಕ್ಷೇತ್ರಕ್ಕೆ ಬಂದೆ. ಮಹಿಳೆಯರು ರಾಜಕೀಯಕ್ಕೆ ಬಂದರೆ ಏನ್ ಬಂತು ಬಿಡಿ, ವಿದ್ಯಾವಂತರಿಲ್ಲ, ಏನೂ ತಿಳಿದಿಲ್ಲ. ಈ

ಕ್ಷೇತ್ರಕ್ಕೆ ಬಂದ ನಂತರ ಮಹಿಳೆಯರು ಮೂಢಿಯರಾಗಿರಬಾರದು. ಏನಾದರೂ ದುಡಿಮೆ ಮಾಡಬೇಕು ಎಂದೆನಿಸಿತು. ಮಹಿಳೆಯರು ರಾಜಕೀಯಕ್ಕೆ ಬರಬೇಕೆಂದೆನಿಸಿತು. ದೂರದ ಊರಿನ ತರಬೇತಿ, ಸಭೆ, ಕಾರ್ಯಕ್ರಮಗಳಿಗೆ ಜೊತೆಯಲ್ಲಿ ಗಂಡ ಬರುತ್ತಾರೆ. ನನಗೆ ಅಷ್ಟಾಗಿ ತಿಳಿಯದ ಕಾರಣ ನನ್ ಬದಲಾಗಿ ಎಲ್ಲಾ ಕೆಲಸ ಕಾರ್ಯಗಳನ್ನು ಯಜಮಾನ್ರೇ ನೋಡಿಕೊಳ್ಳುತ್ತಾರೆ. ಗ್ರಾಮಕ್ಕೆ ಹಲವು ಸಮಸ್ಯೆಗಳಿವೆ. ಸಾರಿಗೆ ವ್ಯವಸ್ಥೆ, ರಸ್ತೆಗಳು, ನೀರು, ವಿದ್ಯುಚ್ಛಕ್ತಿ ಇತ್ಯಾದಿ ಇವುಗಳ ನಿವಾರಣೆಗೆ ಪ್ರಯತ್ನಿಸುತ್ತಿದ್ದೇವೆ. ಯಾವುದಾದರೂ ಸಮ್ಮೇಳನಕ್ಕೆ, ತರಬೇತಿಗೆ ಬೆಳಿಗ್ಗೆ ಹೋಗಿ ಸಂಜೆ ಬರುವುದಾದರೆ ಹೊಗುತ್ತೇನೆ. ನಾಲ್ಕು-ಐದು ದಿನವಾದರೆ ಹೋಗುವುದೇ ಇಲ್ಲ. ಗ್ರಾಮದ ಸಭೆಗಳಿಗೆ ಹೋಗುವುದು ಹಾಗೂ ಸಹಿ ಹಾಕುವ ಕೆಲಸ ಮಾತ್ರ ನನ್ನದು ಉಳಿದದ್ದನ್ನು ನನ್ನ ಗಂಡ ನೋಡಿಕೊಳ್ಳುತ್ತಾರೆ. ಮಹಿಳೆಯರು ಅಭಿವೃದ್ಧಿ ಆಗುತ್ತಿದ್ದಾರೆ. ಇದುವರೆವಿಗೂ ನಾನು ಪಂಚಾಯ್ತಿಯಲ್ಲಿ ನಿಂತು ಮಾತನಾಡಿಯೇ ಇಲ್ಲ. ಏನನ್ನು ಕೇಳಿಯೂ ಇಲ್ಲ.

ಇದೇ ಹನುಮನಾಳು ಗ್ರಾಮ ಪಂಚಾಯಿತಿಯ ಮತ್ತೊಬ್ಬ ಪುರುಷ ಸದಸ್ಯರಾದ ಜಿ.ಆರ್ . ನಾಗರಾಜುರವರು ಮೊದಲು ಅಕ್ಕಿಗಿರಣಿಯಲ್ಲಿ ಚಾಲಕನಾಗಿದ್ದು ಚುನಾವಣೆಯ ಬಗ್ಗೆ ಏನೂ ಯೋಚನೆಯಿರಲಿಲ್ಲ. ೨೦೦೨ರಲ್ಲಿ ಅವರ ತಂದೆ ಚುನಾವಣೆಗೆ ನಿಂತು ಸೋತಿದ್ದರು. ಹಾಗೂ ಜನರು ಅಧ್ಯಕ್ಷ ಸ್ಥಾನ ಕೊಡಿಸ್ತೀವಿ ಅಂತ ಹೇಳಿ ಮೋಸ ಮಾಡಿದರು. ಅದೇ ವಿಷಯಕ್ಕೆ ತಲೆಕೆಡಿಸಿಕೊಂಡು ಅನಾರೋಗ್ಯಕ್ಕೀಡಾಗಿ ತಂದೆ ತೀರಿಕೊಂಡರು. ತಂದೆ ಮಗನಿಗೆ ರಾಜಕೀಯ ಬೇಡವೆಂದಿದ್ದರೂ ಸ್ನೇಹಿತರ ಒತ್ತಾಯಕ್ಕೆ ಸಿಲುಕಿ ಚುನಾವಣೆಗೆ ನಿಂತು ಜನಪ್ರತಿನಿಧಿಯಾದರು. ಮಹಿಳೆಯರು ರಾಜಕೀಯಕ್ಕೆ ಬರುವುದನ್ನು ಇಷ್ಟವಿಲ್ಲವೆನ್ನುವ ಇವರು ಮೀಸಲಾತಿಯಡಿಯಲ್ಲಿ ನಮ್ಮ ಸಮುದಾಯಕ್ಕೆ ಸ್ಥಾನ ಸಿಕ್ಕಿದರೆ ನನ್ನ ಪತ್ನಿಯನ್ನು ನಿಲ್ಲಿಸಿ ನಾನು ಕೆಲಸ ಮಾಡುತ್ತೇನೆ ಎನ್ನುತ್ತಾರೆ.

ಹನುಮನಾಳು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿರುವ ಇಂದ್ರಮ್ಮ ಏನೇನೂ ತಿಳಿಯದ ಮಹಿಳೆಯಾಗಿದ್ದಾರೆ. ಅವರಿಗೆ ರಾಜಕೀಯ ಎಂಬ ಪದವೂ ಸಹ ತಿಳಿದಿಲ್ಲ. ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾಗಿರುವ ವೆಂಕಟೇಗೌಡ ಎಂಬುವವರ ಮಾತು ಕೇಳಿ ಚುನಾವಣೆಗೆ ನಿಂತಿದ್ದರು. ಇವರ ಕುಟುಂಬದಲ್ಲಿ ಚುನಾವಣೆಗೆ ನಿಂತು ಜನಪ್ರತಿನಿಧಿಯಾಗಿರುವ ಮೊದಲ ವ್ಯಕ್ತಿಯಾಗಿದ್ದಾರೆ. ನನ್ನ ಗಂಡನೇ ಎಲ್ಲಾ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಗಂಡ ಸುಮ್ಮನೆ ಚುನಾವಣೆಗೆ ನಿಂತ್ಕೋ ಅಂತ ಹೇಳಿದರು ಅದಕ್ಕೆ ನಿಂತುಕೊಂಡೆ ಎನ್ನುತ್ತಾರೆ. ಯಾವುದೇ ಸಭೆಗೂ ಇತರ ಸ್ಥಳಗಳಿಗೂ ಲೆಕ್ಕಾ ನೋಡ್ತಾರೆ. ಸೆಕ್ರೇಟರಿ ಚೆಕ್ ಗೆ ಸಹಿ ಹಾಕಿ ಎಂದ ಕಡೆ ಸಹಿ ಹಾಕ್ತೀನಿ. ಗಂಡಸರ ಜೊತೆ ಹೆಚ್ಚು ಮಾತನಾಡುವುದಿಲ್ಲ. ಯಾವುದೇ ಚರ್ಚೆಗೆ ತಲೆ ಹಾಕುವುದಿಲ್ಲ ಎನ್ನುತ್ತಾರೆ. ತುಂಬಾ ಸಾಂಪ್ರದಾಯಿಕ

ವ್ಯವಸ್ಥೆಗಳಡಿಯಲ್ಲಿ ಬದುಕುತ್ತಿದ್ದು ಕೇವಲ ನಾಮಕಾವಸ್ಥೆಗೆ ಮಾತ್ರ ಈ ಮಹಿಳೆ ಇದ್ದಾರೆ ಎಂದೆನಿಸುತ್ತದೆ. ಇತರ ಜಾತಿಯವರು ನಮ್ಮ ಮನೆಗೆ (ST) ಬರುವುದಿಲ್ಲ ಎನ್ನುತ್ತಾರೆ.

ಹನುಮನಾಳು ಗ್ರಾಮ ಪಂಚಾಯಿತಿಯ ಮತ್ತೊಬ್ಬ ಸದಸ್ಯೆಯಾದ ಇವರು ಪುರುಷರು ಹೆಂಗಸರನ್ನು ರಾಜಕೀಯಕ್ಕೆ ಬರೋಕೆ ಬಿಡೋಲ್ಲ. ಪುರುಷರಿಗೆ ಹೆಣ್ಣು ಮನೆಯೊಳಗಿನ ವಸ್ತುವಿನಂತೆ ಆಗಿಬಿಟ್ಟಿದ್ದಾಳೆ ಎನ್ನುತ್ತಾರೆ.

ತುರಗನೂರು ಗ್ರಾಮ ಪಂಚಾಯಿತಿ ಕ್ಷೇತ್ರದಲ್ಲಿ ಪುರುಷ ಸದಸ್ಯರಾಗಿರುವ ಟಿ.ಎಸ್ .ಮಹಾಲಿಂಗು ಎನ್ನುವವರು ಜನರ ಏಳ್ಗೆಯ ಉದ್ದೇಶದಿಂದ ತಾವು ಈ ಕ್ಷೇತ್ರಕ್ಕೆ ಬಂದಿರುವುದಾಗಿ ಹೇಳುತ್ತಾರೆ. ಕುಟುಂಬದ ರಾಜಕೀಯ ಹಿನ್ನೆಲೆ ಅದರ ಪ್ರಸ್ತುತ ಇರುವಿಕೆಗೆ ಕಾರಣವಾಗಿದೆಯಂತೆ. ಶಿಕ್ಷಣವಿಲ್ಲದ ಕಾರಣ ಮಹಿಳಾ ಸದಸ್ಯರು ಏನೂ ಕೆಲಸ ಮಾಡುತ್ತಿಲ್ಲ. ಅಷ್ಟೇ ಯಾಕೆ ಮೀಸಲಾತಿಯ ಅಗತ್ಯವೇ ಇಲ್ಲ ಎಮದು ಕಡ್ಡಿ ಮುರಿದ ಹಾಗೆ ಉತ್ತರಿಸುತ್ತಾರೆ. ಮಹಿಳಾ ಸದಸ್ಯೆಯರು ಸಭೆಗಳಿಗೆ ಬರುತ್ತಾರೆ ಎಲ್ಲರೊಂದಿಗೆ ಮಾತನಾಡುತ್ತಾರೆ. ಅಲ್ಲೇನೂ ಸಮಸ್ಯೆಯಿಲ್ಲ ಎನ್ನುತ್ತಾರೆ. ಮಹಿಳಾ ಸದಸ್ಯರ ಅನ್ಯೋನ್ಯತೆ ತುಂಬಾ ಇಷ್ಟವಾಗುತ್ತದೆ. ಗ್ರಾಮದ ನೈರ್ಮಲ್ಯಕ್ಕೆ ನನ್ನ ಮೊದಲ ಆದ್ಯತೆ ಎನ್ನುತ್ತಾರೆ. ಸರ್ಕಾರದ ಸುವರ್ಣ ಗ್ರಾಮ ಯೋಜನೆಯ ಪರಿಧಿಗೆ ತುರಗನೂರು, ಹನುಮನಾಳು ಹಾಗೂ ಸೀಹಳ್ಳಿ .ಬಿ ಸೇರ್ಪಡೆಯಾಗಿದೆ. ಪ್ರತಿ ಗ್ರಾಮಕ್ಕೆ ೧ ಕೋಟಿ ದೊರೆಯಲಿದ್ದು ಯೋಜನಾ ಕಾರ್ಯ ಮುಂದುವರೆದಿದೆ ಎನ್ನುತ್ತಾರೆ. ವೃದ್ಧರಿಗೆ ಸಹಾಯಧನ ಬರುವ ಹಾಗೆ ಮಾಡಿದ್ದೇವೆ. ಮೀಸಲಾತಿಯಡಿಯಲ್ಲಿ ಮಹಿಳೆಯರು ಅಧ್ಯಕ್ಷರಾದರೆ ಬೇಸರವಾಗುತ್ತದೆ. ನಮ್ಮಲ್ಲಿ ಪುರುಷರೇ ಹೆಚ್ಚು ನಿರ್ಧಾರ ತೆಗೆದುಕೊಳ್ಳುವುದು. ಮಹಿಳೆಯರಿಗೆ ದಿನದಲ್ಲಿ ಹೆಚ್ಚು ಕೆಲಸವಿರುತ್ತದೆಂದು ಒಪ್ಪಿಕೊಳ್ಳುವ ಇವರು ಅದಕ್ಕೆ ಪರ್ಯಾಯವಾಗಿ ಏನನ್ನೂ ಉತ್ತರಿಸುವುದಿಲ್ಲ.

Y.M.ಭೋಜರಾಜ್ ರವರು B.SC ಪದವಿ ಪಡೆದಿದ್ದು ಈ ಗ್ರಾಮ ಪಂಚಾಯಿತಿಯಲ್ಲಿ ಹೆಸರುವಾಸಿಯಾಗಿದ್ದಾರೆ. ರಾಜಕೀಯ ಹಿನ್ನೆಲೆಯುಳ್ಳ ವ್ಯಕ್ತಿಯಾಗಿದ್ದು ೩೦ ವರ್ಷದ ಆಡಳಿತದ ಅನುಭವವಿದೆ ಎನ್ನುತ್ತಾರೆ. ಸಮಸ್ಯೆಗಳು ಇರೋದೇ ಸರ್ಕಾರದಿಂದ Grant ತುಂಬಾ ಕಡಿಮೆ ಬರುತ್ತದೆ. ಗ್ರಾಮದಲ್ಲಿ ಕೆಲಸ ಹೆಚ್ಚಿರುತ್ತದೆ. ಬಡವರಿಗೆ ಮನೆ ನಿರ್ಮಾಣಕ್ಕೂ ಕಡಿಮೆ ಸಂಖ್ಯೆಗೆ ಹಣಕೊಡುವುದರಿಮದ ತೊಡಕುಂಟಾಗುತ್ತಿದೆ. ಹಾಗೂ ಮಹಿಳೆಯರು ಶಿಕ್ಷಣವಂತರಲ್ಲದ ಕಾರಣ ಅಧಿಕಾರವನ್ನು ನಡೆಸುವುದು ಕಷ್ಟವಾಗುತ್ತಿದೆ ಎನ್ನುವ ಇವರು ಅಧಿಕಾರಕ್ಕೆ ಶಿಕ್ಷಣದ ಅಗತ್ಯತೆ ಇಲ್ಲದುದರ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾರೆ. ಆದರೆ ನಮ್ಮ ಅಧ್ಯಕ್ಷರು ಹೆಚ್ಚೆಟ್ಟು ಒತ್ತುತ್ತಾರೆ. ಈ ವಿಚಾರದಲ್ಲಿಯೂ ಬೇಸರವಿದೆ ಎನ್ನುತ್ತಾರೆ. ನಮ್ಮ ಸರಿಸಮಾನಕ್ಕೆ ಮಹಿಳೆಯರು ಬಂದರೆ It will be good ಎನ್ನುತ್ತಾರೆ. ಇವರು

ಮೊದಲು ಹೆಂಗಸು ಉತ್ತಮ ತಾಯಿ ಎನಿಸಿಕೊಳ್ಳಬೇಕು. ನಂತರ ಇನ್ನಾವುದೇ ಕೆಲಸ ಮಾಡಿದರೂ ಸರಿ ಎನ್ನುತ್ತಾರೆ. ತಡವಾಗಿ ಸಭೆ-ಸಮಾರಂಭಗಳಿಗೆ ಬರುವುದರಲ್ಲಿ ಇಬ್ಬರೂ ಸಮಾನರು ೧೦೦ ರೂ. ಕೊಡುವ ಕಾರಣ ಸಭೆಗಳಿಗೆ ಮಹಿಳೆಯರು ತಪ್ಪದೇ ಬರುತ್ತಾರೆ.

ಚೆನ್ನಬಸಮ್ಮ ಎಂಬುವವರು ಲಿಂಗಾಯಿತ ಸಮುದಾಯದಿಂದ ಗ್ರಾಮಪಂಚಾಯಿತಿಗೆ ಆಯ್ಕೆಯಾಗಿದ್ದು ನಾವು ಬೇಡ ಎಂದರೂ ಮನೆಯವರು, ಗ್ರಾಮಸ್ಥರು ಸೇರಿ ನಿಲ್ಲಿಸಿದರು. ಇವರು ಹಲವು ರಾಜಕೀಯ ಧುರೀಣರ ಹೆಸರುಗಳನ್ನು ಹೇಳಿದ್ದು, ಅಲ್ಪ ಪ್ರಮಾಣದ ರಾಜಕೀಯ ಜ್ಞಾನವಿದೆ ಎನ್ನಬಹುದು. ಸಭೆಗಳಿಗೆ ಮನೆಗೆಲಸ ಹೆಚ್ಚಿದ್ದರೆ, ಹಬ್ಬಗಳಿದ್ದರೆ, ಮದುವೆಗಳಿದ್ದಾಗ ಹೋಗಲು ಸಾಧ್ಯವಾಗುವುದಿಲ್ಲ. ೪-೫ ದಿನದ ಕಾರ್ಯಾಗಾರಗಳಿಗೆ ನಾನು ಹೋಗುವುದಿಲ್ಲ. ಒಮ್ಮೆ ಶಿವಮೊಗ್ಗಕ್ಕೆ ಹೋಗಬೇಕೆಂದಾಗ ಗಂಡ ಕಳುಹಿಸಲಿಲ್ಲ. ಸಭೆಗಳಲ್ಲಿ ಎಲ್ಲರೊಟ್ಟಿಗೆ ಕುಳಿತು ಊಟ ಮಾಡುವುದಿಲ್ಲ. ಕಾರಣ ಬೇರೆ ಜಾತಿಯವರಿಗೂ ನಮ್ಮ ದೇವರಿಗೂ ಸರಿಹೊಂದುವುದಿಲ್ಲ. ನಾನು ಡಬ್ಬಿಯಲ್ಲಿ ಊಟ ತೆಗೆದುಕೊಂಡು ಹೋಗುತ್ತೇನೆ. ಗಂಡಸರ ಜೊತೆ ಹೋಗೋದು ಸಹ ನಮ್ಮನೆ ಗಂಡಸರಿಗೆ ಇಷ್ಟವಾಗೊಲ್ಲ ಎನ್ನುತ್ತಾರೆ. ಸದಸ್ಯರಾದ ನಂತರವೂ ಜನರು ಮುಂಚೆ ಹೇಗೆ ಮಾತನಾಡಿಸುತ್ತಿದ್ದರೋ ಹಾಗೆಯೇ ಮಾತನಾಡಿಸುತ್ತಾರೆ. ಅಧ್ಯಕ್ಷರು SC ಆಗಿರೋದ್ರಿಂದ ಅವರ ಮಾತು ಕೇಳೋಕೆ ಇಷ್ಟ ಆಗೊಲ್ಲ. ಅಧ್ಯಕ್ಷರು ನೀನು, ಹೋಗೆ, ಬಾರೆ ಅಂತಾರೆ ಅದೂ ಕೂಡ ಇಷ್ಟ ಆಗೊಲ್ಲ. ಹಲವು ಕಾರ್ಯಾಗಾರಗಳಲ್ಲಿ AIDS, ಮೆದುಳು ಜ್ವರ, ಡೆಂಗ್ಯೂ ಜ್ವರ, ಶಿಕ್ಷಣ, ಆರೋಗ್ಯ ವಿಚಾರಗಳನ್ನು ತಿಳಿಸಿಕೊಟ್ಟ ಕಾರಣ ಜ್ಞಾನದ ವೃದ್ಧಿಯಾಯಿತೆನ್ನಬಹುದು ಎನ್ನುತ್ತಾರೆ.

ಮನೆಗೆಲಸದಲ್ಲಿ ಯಾರೂ ಸಹಾಯ ಮಾಡೋಲ್ಲ. ನಾನೊಬ್ಬಳೇ ಮಹಿಳಾ ಸದಸ್ಯೆಯಿದ್ದು ದೂರದ ಸಭೆಗೆ ಗಂಡ ಹೋಗು ಎಂದಿದ್ದರೂ ನಾನು ಹೋಗುತ್ತಿರಲಿಲ್ಲ ಎನ್ನುವ ಇವರು ಸಂಪ್ರದಾಯ ಉಳಿಸ್ಕೋಬೇಕು ಎಂಬ ಮಾತನ್ನು ಪದೇ ಪದೇ ಹೇಳುತ್ತಿದ್ದರು. ಸಂದರ್ಶನದ ಮಧ್ಯೆ ಅಯ್ಯೋ ನೀರು ಬಂದುಬಿಡುತ್ತೆ ಅಷ್ಟರೊಳಗೆ ಎಲ್ಲಾ ಕೆಲಸವನ್ನು ಮಾಡಿ ಮುಗಿಸಬೇಕೆಂದುಕೊಳ್ಳುತ್ತಿದ್ದರು. ಪಂಚಾಯಿತಿ ವಿಚಾರದ ಬಗ್ಗೆ ನನಗೆ ಯಾರೂ ಏನೂ ಹೇಳಿಕೊಡೊಲ್ಲ. ಅಲ್ಲೀದ್ ಅಲ್ಲೆ - ಇಲ್ಲೀದ್ ಇಲ್ಲೆ ಎನ್ನುತ್ತಾರೆ. ಗಂಡ ಪಂಚಾಯಿತಿಯ ಕಡೆ ತಿರುಗಿಯೂ ನೋಡುವುದಿಲ್ಲ. ಗಂಡಸರು ಹೆಂಗಸರು ಎಲ್ಲರೂ ಸಭೆಗೆ ತಡವಾಗಿಯೇ ಬರುತ್ತಾರೆ. ಉದಾ : ಸ್ವಾತಂತ್ರ ದಿನಾಚರಣೆಯ ದಿನ ಗಂಡಸರು ಯಾರೂ ಬಂದಿರಲಿಲ್ಲ. ಸ್ಕೂಟರ್ ನಲ್ಲಿ ಹೋಗಿ ಹೋಗಿ ಕರೆದುಕೊಂಡು ಬಂದರು. ಇದರ ಮಧ್ಯೆ ಮಗ ಬಂದು ಊಟ ಹಾಕಿಕೊಡಿ ಎಂದ ತಕ್ಷಣ ಎದ್ದು ಹೋಗುತ್ತಿದ್ದರು. ಜಾತೀಯತೆ ಮಾಡ್ತೀವಿ ಎಂದೇ ಹೇಳಿಕೊಳ್ಳುವ ಇವರು ಮನೆಗೆಲಸ - ಪಂಚಾಯಿತಿ ಕೆಲಸ ಎರಡನ್ನೂ ಮಾಡುವುದು ತುಂಬಾ ಕಷ್ಟ

ಎನ್ನುತ್ತಾರೆ. ಮೀಸಲಾತಿಬೇಕು ಆದರೆ ಗಂಡಸರು ನಮ್ಮನ್ನು ಬಿಡಲ್ವಲ್ಲ. ಇದೆಲ್ಲ ನೋಡಿದರೆ ಮಹಿಳೆ ಮನೆಯಲ್ಲಿರುವುದೇ ಸರಿ ಎನ್ನುತ್ತಾರೆ ಇವರು.

ಬಿ. ಸೀಹಳ್ಳಿ ಗ್ರಾಮದ ಪಂಚಾಯಿತಿಯ ನಿಂಗಮ್ಮ ಅಧ್ಯಕ್ಷರಾಗಿದ್ದು, ಏನೂ ತಿಳಿಯದ ಮುಗ್ಧೆಯಂತಿದ್ದಾರೆ. ವೀರಪ್ಪಗೌಡರು ನಮ್ಮನ್ನು ಚುನಾವಣೆಗ ನಿಂತುಕೊಳ್ಳೋಕೆ ಹೇಳಿದರು ಎನ್ನುತ್ತಾರೆ. ನನ್ ಮಗ ಎಲ್ಲಾ ಪಂಚಾಯಿತಿ ವ್ಯವಹಾರವನ್ನು ನನ್ನ ಪರವಾಗಿ ನೋಡಿಕೊಳ್ಳುತ್ತಾನೆ. ಕಂಡೋರು ನಿಲ್ಲಿಸಿದರು. ಕೆಲಸದ ಬಗ್ಗೆ ಅಷ್ಟೇನೂ ತಿಳಿದಿಲ್ಲ. ಆದರೆ ಜನರಿಗೆ ಒಳ್ಳೆಯದಾಗಲಿ ಎನ್ನುತ್ತಾರೆ. ವೀರಪ್ಪಗೌಡರು ಎಲ್ಲಾ ಲೆಕ್ಕವನ್ನೂ ಕೇಳು, ಇಷ್ಟು ದುಡ್ಡು ಎಲ್ಲೆಲ್ಲಿಗೆ ಖರ್ಚು ಮಾಡಿದಿರಿ ಅಂತ ಸದಸ್ಯರನ್ನು ಕೇಳು ಅಂತ ಹೇಳಿಕೊಟ್ಟರೂ ನನಗೆ ಭಯವಿದೆ. ನನ್ ಮಗ ಅವರ ಹತ್ತಿರ ಎಲ್ಲ ದುಡ್ಡನ್ನು ವಸೂಲಿ ಮಾಡ್ಕೋತಾನೆ ಎಂದು ತೋಚಿದ್ದನ್ನು ಹೇಳುತ್ತಾರೆ. ಯಾವಾಗ್ಲೋ ದೂರದ ದೇಶಕ್ಕೆ ಕಾರ್ಯಾಗಾರಕ್ಕೆ ಹಾಕಿದ್ದರು ನಾನು ಹೋಗಲಿಲ್ಲ ಎನ್ನುವಲ್ಲಿ ನಿರಾಸೆ ಎದ್ದು ಕಾಣುತ್ತಿತ್ತು.

ಕಮಲಮ್ಮ ಸದಸ್ಯೆಯಾಗಿದ್ದು ರಾಜಕೀಯದ ಬಗೆಗೆ ಏನೇನೂ ತಿಳಿದಿಲ್ಲ. ಕೂಲಿ ಕೆಲಸ ಮಾಡುವ ಇವರು ಸುನೀತಮ್ಮನ ಮಾತು ಕೇಳಿ ಚುನಾವಣೆಗೆ ನಿಂತುಕೊಂಡರಂತೆ. ನಮ್ ಇಡೀ ಕುಟುಂಬದಲ್ಲಿ ನಾನೇ ಮೊದಲು ರಾಜಕೀಯಕ್ಕೆ ಬಂದಿರುವುದು. ಜನರು ಗೌರವ ಕೊಡುತ್ತಾರೆಯೇ ಎಂಬ ಪ್ರಶ್ನೆಗೆ ಕುಮಾರಸ್ವಾಮಿಯನ್ನೇ ನಿನ್ಯಾವ್ ಲೆಕ್ಕ ಅಂತಾರೆ ಅಂದ್ ಮೇಲೆ ನಾವ್ಯಾವ್ ಲೆಕ್ಕ ಜನಕ್ಕೆ ಬುಡಿ ಎಂದು ಗ್ರಾಮೀಣ ಭಾಷೆಯಲ್ಲೇ ಉತ್ತರಿಸುತ್ತಾರೆ. ಎಲ್ಲಾ ಕೆಲಸವಿದ್ದಾಗ ಯಾಕಪ್ಪ ಬೇಕು ಹೆಂಗಸರಿಗೆ ಈ ರಾಜಕೀಯದ ಕೆಲಸ ಎನಿಸುತ್ತದೆ. ರಾಜಕೀಯಕ್ಕೆ ಹೆಣ್ಣು ಮಕ್ಕಳು ಬರಬೇಕು. ಗಂಡಸರ ಕೈಕೆಳಗೆ ಕೂರಬಾರದು. ನಾವೂ ಏನಾದರೂ ಮಾಡಬೇಕು. ಒಳಗಡೇನೇ ಇರೋ ಹೆಂಗಸರದು ಅದೃಷ್ಟ ಬಿಡಿ. ಗಂಡ ಚೆನ್ನಾಗಿ ನೋಡಿಕೊಳ್ಳುತ್ತಿರುತ್ತಾರೆ. ಗ್ರಾಮದ ಜನರು ಅಧ್ಯಕ್ಷರನ್ನು ನೀವು ಏನು ಮಾಡ್ಲೊಲ್ಲ, ವಿದ್ಯುಚ್ಛಕ್ತಿ ಹಾಕಿಸಿಲ್ಲ ಎಂತಹ ಅಧ್ಯಕ್ಷರಾಗಿದ್ದೀರಿ ನೀವು ಅಂತ ಸುತ್ಕೋತಾರೆ ಎಂದು ಅವರ ದಿನನಿತ್ಯದ ಸ್ಥಿತಿಯನ್ನು ಹೇಳಿಕೊಳ್ಳುತ್ತಾರೆ.

ಕೊಡಗ ಹಳ್ಳಿ ಗ್ರಾಮ ಪಂಚಾಯಿತಿ ಕ್ಷೇತ್ರದಲ್ಲಿ ಸದಸ್ಯೆಯಾಗಿರುವ ಎಮ್ .ಗಾಯತ್ರಿರವರು, ಗಂಡ ರಾಜಕೀಯದಲ್ಲಿ ಇದ್ದಿದ್ದರಿಂದ ಆಸಕ್ತಿ ಬಂತು ಎಂದು ಹೇಳುತ್ತಾರೆ. ಗೃಹಿಣಿಯಾಗಿದ್ದಾಗ ಸಿಗುತ್ತಿದ್ದಕ್ಕಿಂತ ಹೆಚ್ಚಿನ ಗೌರವ ದೊರೆಯುತ್ತಿದೆ. ಮನೆಗೆಲಸ ಸುಲಭ ಎನಿಸುತ್ತದೆ. ಗಂಡಸರ ಜೊತೆ ಕೆಲಸ ಮಾಡೋಕೆ ನಾಚಿಕೆ, ಮುಜುಗರ ಇದೆ. ಆದರೆ ಉನ್ನತಾಧಿಕಾರಿಗಳು ಕೈ ಕುಲುಕಿದರೆ ನಾವೂ ಕುಲುಕುತ್ತೇವೆ.

ಅಧ್ಯಕ್ಷರಾಗಿರುವ ಪ್ರಭಾಮಣಿಯವರು ಇದು ೩ನೇ ಬಾರಿ ಚುನಾವಣೆಯಲ್ಲಿ ನಿಂತು

ಜನಪ್ರತಿನಿಧಿಯಾಗಿರುತ್ತಾರೆ. ರಾಜಕೀಯದಲ್ಲಿ ಹಲವು ವಿಷಯಗಳನ್ನು ತಿಳಿದಿದ್ದು ಸಂದರ್ಶನಕ್ಕೆ ಹೋದಾಗ ಅಧ್ಯಕ್ಷರು ಯಾರು ಎಂದರೆ ಗಂಡನು ತಾನೇ ಅಧ್ಯಕ್ಷರು ಏನಾಗಬೇಕಿತ್ತು ಎಂಬುದನ್ನು ನೆನಪು ಮಾಡಿಕೊಂಡರೆ ಮಹಿಳೆ ರಾಜಕೀಯದಲ್ಲಿ ನಾಮಮಾತ್ರವಾಗಿದ್ದಾಳೆ ಎಂದೆನಿಸುತ್ತದೆ. ಅಧ್ಯಕ್ಷರು ಊರಿನ ಮುಖಂಡರೇ ನನಗೆ ಸ್ಫೂರ್ತಿ ಯಾವುದೇ ರಾಜಕೀಯ ಹಿನ್ನೆಲೆಯಿರಲಿಲ್ಲ. ಮೀಸಲಾತಿ ಇರದಿದ್ದರೂ ನಾನು ರಾಜಕೀಯಕ್ಕೆ ಪ್ರವೇಶ ಮಾಡುತ್ತಿದ್ದೆ ಎಂದು ಹೇಳುವ ಬನ್ನೂರು ಹೋಬಳಿಯ ಗ್ರಾಮ ಪಂಚಾಯಿತಿಯ ಪ್ರಪ್ರಥಮ ವ್ಯಕ್ತಿ ಎನಿಸುತ್ತಾರೆ. ಮನೆಗೆಲಸದಲ್ಲಿ ಗಂಡ, ಮಗಳು ಸಹಾಯ ಮಾಡುತ್ತಾರೆ. ಮೊದಲೇ ಹೇಳಿದಂತೆ ಇವರು ನಾಮಕಾವಸ್ಥೆಯಾಗಿದ್ದು ಕೆಲವೊಮ್ಮೆ ಗಂಡನೇ ಅಧ್ಯಕ್ಷರೂ ಆಗಿಬಿಡುತ್ತಾರೆ. ಮಹಿಳೆಯರಿಗೆ ರಾಜಕೀಯಕ್ಕೆ ಹೋಗಲು ಉಂಟಾಗುವ ಸಮಸ್ಯೆಯೆಂದರೆ ಮೊದಲನೆಯದಾಗಿ ಮನೆಗೆಲಸ ಎರಡನೆಯದಾಗಿ ಜನಬೆಂಬಲದ ಸಮಸ್ಯೆ, ನ್ಯಾಯಬೆಲೆ ಅಂಗಡಿಯಿಂದ ಕಾರ್ಡ್ ಇಲ್ಲದಿರುವವರಿಗೂ ಸಹಾಯ ಮಾಡುತ್ತಿದ್ದೇವೆ ಎನ್ನುತ್ತಾರೆ. ಗಂಡ-ಹೆಂಡತಿಯರಲ್ಲಿ ಸಾಮರಸ್ಯವಿದ್ದರೂ ಮಹಿಳೆಗೆ ಅಧಿಕಾರ ನೀಡುವಲ್ಲಿ ಪುರುಷ ಪ್ರಧಾನ ಮೌಲ್ಯದ ಧೋರಣೆ ಕೆಲಸ ಮಾಡುತ್ತಿದೆ ಎನ್ನಬಹುದು.

ಅಧ್ಯಾಯ ೬

ಸ್ತ್ರೀ ವಾದಿ ವಿಶ್ಲೇಷಣೆ

೬

ಸ್ತ್ರೀವಾದಿ ವಿಶ್ಲೇಷಣೆ

ವಿಶ್ಲೇಷಣೆ ಸಮಾಜ ಸಂಶೋಧನೆಯಲ್ಲಿ ತುಂಬಾ ಮಹತ್ವದ ಹಂತ ಇದೊಂದು ಬಗೆಯಲ್ಲಿ ಮರದೊಳಗಿನ ತಿರುಳಿನಂತೆ ಕೆಲಸ ಮಾಡುತ್ತದೆ. ತಿರುಳು ಗಟ್ಟಿಯಾಗಿದ್ದರೆ ಮರ ಗಟ್ಟಿಯಾಗಿದೆ ಎನ್ನುವ ತೀರ್ಮಾನಕ್ಕೆ ಬರಬಹುದು. ಇದೇ ರೀತಿಯಲ್ಲಿ ವಿಶ್ಲೇಷಣೆ ಪರಿಪೂರ್ಣವಾಗಿದ್ದರೆ ಪ್ರಬಂಧ ಗಟ್ಟಿಯಾಗಿದೆ ಎನ್ನುವ ತೀರ್ಮಾನಕ್ಕೆ ಬರಬಹುದು. ಹಲವು ಶಿಸ್ತುಗಳ ಸಂಶೋಧನೆಯ ತಾತ್ವಿಕ ಹಿನ್ನೆಲೆ, ಮಾಹಿತಿ ಸಂಗ್ರಹ ವಿಧಾನ ಇತ್ಯಾದಿಗಳಲ್ಲಿ ತಕ್ಕಮಟ್ಟಿನ ಹೋಲಿಕೆ ಇದೆ. ಅದೇ ರೀತಿಯಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸುವಾಗ ಅನುಸರಿಸಬೇಕಾದ ನಿಯಮದಲ್ಲೂ ಸಾಕಷ್ಟು ಸಾಮ್ಯತೆ ಇದೆ.

ಸಂಶೋಧನೆ ಎಂದರೆ ಜ್ಞಾನ ವಲಯವು ಹೊಸ ದಿಕ್ಕುಗಳತ್ತ ವಿಸ್ತರಿಸಿಕೊಳ್ಳುವ ಚಿಂತನಾ ವಿಧಾನವಾಗಿದೆ. ಶಿಸ್ತಿನ ಅಧ್ಯಯನವಾಗಿದೆ ಇಂತಹ ಆವಿಷ್ಕಾರದ ಫಲಿತಗಳು ಮಾನವಿಕಗಳಲ್ಲಿ ಅಮೂರ್ತವಾಗಿರುತ್ತವೆ. ಹಾಗಾಗಿ ಇವುಗಳಿಗೆ ಅನುಭವ ಪ್ರಮಾಣಗಳೇ ಅಂತಿಮ ಸಾಕ್ಷಿ ಪುರಾವೆಗಳಾಗಿವೆ. ಮಹಿಳಾ ಅಧ್ಯಯನ ಕೇಂದ್ರಿತ ಸಂಶೋಧನೆಗಳು ಬದುಕನ್ನು ಗ್ರಹಿಸುವ ಚಿಂತನೆಗಳಾಗಬೇಕು. ವ್ಯಕ್ತಿ ನಿಷ್ಠತೆಗೆ ಒಂದು ಹಂತದವರೆಗೆ ಹೆಚ್ಚು ಪ್ರಾಮುಖ್ಯತೆ ನೀಡಿ ಅನುಭವಗಳ ಮಾಹಿತಿ ಸಂಗ್ರಹ ಮಾಡುವ ವೈಧಾನಿಕತೆಯನ್ನು ಮಹಿಳಾ ಅಧ್ಯಯನದ ಸಂಶೋಧಕರು ಅಳವಡಿಸಿಕೊಳ್ಳಬೇಕಾಗಿದೆ. ಇವೆಲ್ಲವುಗಳ ಚಿಂತನೆಗಳಡಿಯಲ್ಲಿ ನನ್ನ ಅಧ್ಯಯನದ ವಿಶ್ಲೇಷಣೆ ನಡೆಯುತ್ತದೆ. ಪ್ರತಿಯೊಂದು ಮಾದರಿಯನ್ನು ಮಹಿಳಾ ಬದುಕಿನ ವಾಸ್ತವದ ವಿವರಗಳ ಹಿನ್ನೆಲೆಗಳಲ್ಲೇ ಗ್ರಹಿಸಿ, ಅಧ್ಯಯಿಸಿ ವಿಶ್ಲೇಷಣೆಗೆ ಒಳಪಡಿಸಲಾಗುತ್ತಿದೆ.

ಮಹಿಳಾ ಬದುಕಿಗೆ ಸಂಬಂಧಿಸಿದಂತೆ ಪ್ರಚಲಿತ ಜ್ಞಾನ ವಲಯಗಳು ಚಿಂತನೆಗಳನ್ನು ಮಂಡಿಸುತ್ತಾ ಬಂದಿವೆ. ಈ ಎಲ್ಲಾ ಚಿಂತನೆಗಳು ಪುರುಷ ಕೇಂದ್ರಿತವಾಗಿದ್ದು, ಮಹಿಳೆಯನ್ನು ಪೂರಕವಾಗುವಲ್ಲಿ ಬಳಸಿಕೊಂಡು, ಉಳಿದೆಡೆ ಅನ್ಯವಾಗಿ ಪರಿಗಣಿಸಿವೆ. ಪುರುಷ ಚಿಂತನೆ ಸ್ತ್ರೀ ಬದುಕನ್ನು ವ್ಯಾಖ್ಯಾನಿಸಲಾರದೆಂಬ ಮಾತು ಸತ್ಯವಾಗಿದೆ. ಆದ ಕಾರಣ ಸಂಗ್ರಹಿಸಿದ ಮಾಹಿತಿಯನ್ನು ಸ್ತ್ರೀ-ವಾದಿ ಸಂಶೋಧನೆಯ ವಿಶ್ಲೇಷಣಾ ವಿಧಾನಗಳಾದ ಪರೀಕ್ಷಾತ್ಮಕ ವಿಶ್ಲೇಷಣೆ, ಅನುಭವಾತ್ಮಕ ವಿಶ್ಲೇಷಣೆ, ಸಾಂಸ್ಕೃತಿಕ ಸಂದರ್ಭ, ಮೌಖಿಕ ದಾಖಲೆಗಳು, ಗುಣಾತ್ಮಕ ವಿಶ್ಲೇಷಣೆ, ಸಹಭಾಗಿತ್ವ ಸಂಶೋಧನಾ ವಿಧಾನ, ಬಹುವೈವಿಧ್ಯದ ವಿಶ್ಲೇಷಣೆಗಳ ಹಿನ್ನೆಲೆಯಲ್ಲಿ ವಿವರಿಸಬೇಕು.

ಪ್ರಖ್ಯಾತ ಸಮಾಜ ವಿಜ್ಞಾನಿ ವಿಲ್ ಹೆಲ್ಮ್ ಡಿಲ್ಟ್ ಹೇಳುವಂತೆ ಅಧ್ಯಯನ ನಡೆಸುವ ವಿದ್ವಾಂಸರು ತಾವು ಅಧ್ಯಯನ ನಡೆಸುತ್ತಿರುವ ವಿಷಯದ ಬಗ್ಗೆ ಎಷ್ಟೇ ವಸ್ತುನಿಷ್ಠವಾಗಿದ್ದೇವೆಂದು ಹೇಳಿಕೊಂಡರೂ ಅವರು ಬದುಕನ್ನು, ಸಮಾಜವನ್ನು ನೋಡುವ, ಪರಿಭಾವಿಸಿಕೊಳ್ಳುವ ದೃಷ್ಟಿಕೋನವು ಅವರ ಅಧ್ಯಯನವನ್ನು ಪ್ರಭಾವಿಸುತ್ತಿರುತ್ತದೆ. ಅಧ್ಯಯನ ಮತ್ತು ಅನುಭವ ಎರಡನ್ನೂ ಸಂಯೋಜಿಸಿ ಇಲ್ಲಿ ಅಧ್ಯಯನ ವಿಷಯದ ಜೊತೆ ಅನುಸಂಧಾನ ನಡೆಸಲು ಪ್ರಯತ್ನಿಸಲಾಗಿದೆ. ಸಂಗ್ರಹಿಸಿದ ಮಾಹಿತಿಯನ್ನು ವಸ್ತುನಿಷ್ಠವಾಗಿ ಮತ್ತು ಮೌಲ್ಯದ ನಿರಪೇಕ್ಷವಾಗಿ ಇಲ್ಲಿ ಬಳಸಿಲ್ಲ. ಅವುಗಳ ಮೂಲದಲ್ಲಿರುವ ಮೌಲ್ಯಗಳನ್ನು, ಅವುಗಳ ಅರ್ಥವ್ಯಾಪ್ತಿಯನ್ನು ಅವು ಪ್ರತಿನಿಧಿಸುವ ಹಿತಾಸಕ್ತಿಗಳನ್ನು ಇಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ. ಉದಾಹರಣೆಗೆ : "ಗ್ರಾಮ ಸಭೆಗೆ ನಾವು ಬಂದರೆ ಮಹಿಳೆಯರು ಯಾರೂ ಬರುವುದಿಲ್ಲ" ಎಂಬ ಗ್ರಾಮ ಪಂಚಾಯತಿ ಸದಸ್ಯರ ಅಭಿಪ್ರಾಯವನ್ನು ಕೇವಲ ಅಭಿಪ್ರಾಯವೆಂದು ಪರಿಗಣಿಸುವ ಬದಲಾಗಿ ಸದರಿ ಅಭಿಪ್ರಾಯ ರೂಪುಗೊಳ್ಳಲು ಕಾರಣವಾದ ಸಾಮಾಜಿಕ-ಸಾಂಸ್ಕೃತಿಕ ಸನ್ನಿವೇಶಗಳನ್ನು, ಆ ಅಭಿಪ್ರಾಯದ ಬಹುಮುಖಿ ಅರ್ಥವನ್ನು ಹಿಡಿದಿಡಲು ಇಲ್ಲಿ ಪ್ರಯತ್ನಿಸಲಾಗುತ್ತದೆ. ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಕ್ಷೇತ್ರ ಕಾರ್ಯದ ಸಮಯದಲ್ಲಿ ಮಾಹಿತಿ ಸಂಗ್ರಹದ ಸಂದರ್ಭದಲ್ಲಿ, ಅನೌಪಚಾರಿಕವಾಗಿ ನಡೆದ ಸಂಭಾಷಣೆ - ಸಂವಾದ - ಚರ್ಚೆಗಳಲ್ಲಿ ಅಧ್ಯಯನ ನಡೆಸುವಾಗ ಪಡೆದ ಅನುಭವಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ.

ದೊರಕಿರುವ ಮಾಹಿತಿಯನ್ನು ಅಭ್ಯಸಿಸಿ ಮಹಿಳಾ ಅಧ್ಯಯನದ ಪರಿಕಲ್ಪನೆಯ ಸಂಗತಿಗಳನ್ನು ನೆನಪಿನಲ್ಲಿಟ್ಟುಕೊಂಡು ಮಹಿಳಾ ಸಂಬಂಧಿ ವಿಷಯಗಳನ್ನು ಚರ್ಚಿಸುವುದು ಒಳಿತು, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಹಿಳೆಯರು ಸದಸ್ಯರುಗಳಾಗಿ ಹೇಗೆ ಕಾರ್ಯ ನಿರ್ವಹಿಸುತ್ತಿದ್ದಾರೆ. ರಾಜಕೀಯದಲ್ಲಿ ಮಹಿಳೆಯರಿಗುಂಟಾಗುವ ಸಮಸ್ಯೆಗಳೇನು, ಸಮಾಜದ ದೃಷ್ಟಿ ಹೇಗಿದೆ?. ಸಾರ್ವಜನಿಕರು ಮಹಿಳಾ ಪ್ರತಿನಿಧಿಗಳ ಬಗಗೆ ಯಾವ ಅಭಿಪ್ರಾಯವಿದೆ. ಜನಪ್ರತಿನಿಧಿಗಳು ತಮ್ಮ ಬಗೆಗೆ ಏನು ಹೇಳಿಕೊಳ್ಳುತ್ತಾರೆ?, ಅಧಿಕಾರ, ಅಭಿವೃದ್ಧಿ, ಸ್ಥಾನಮಾನದ ವಿಚಾರವಾಗಿ ಮಹಿಳಾ ಜನಪ್ರತಿನಿಧಿಗಳ ಅಭಿಪ್ರಾಯವೇನು ಎಂಬುದನ್ನು ವಿಶ್ಲೇಷಿಸಲಾಗಿದೆ.

ಶೇ.೯೦ ಭಾಗ ಮಹಿಳಾ ಜನಪ್ರತಿನಿಧಿಗಳು ನಮ್ಮೆಜಮಾನ್ರು ಹೇಳಿದ್ದರಿಂದ ಅಷ್ಟೇ ಚುನಾವಣೆಗೆ ನಿಂತುಕೊಂಡದ್ದು ಎಂಬ ಉತ್ತರವನ್ನೇ ನೀಡುತ್ತಾರೆ. ಅದರೆ ಆ ಮಹಿಳೆಯರು ಗಂಡ ಹೇಳಿದ ಹಾಗೆ ಕೇಳಿದ್ದೇವೆ ಎಂಬ ಸಂತೃಪ್ತಿಯಲ್ಲಿದ್ದಾರೆ ಹಾಗೂ ಗಂಡನಿಗೆ ಬದ್ಧರಾಗಿದ್ದೇವೆ ಎಂಬ ಸಂತೋಷದಲ್ಲಿದ್ದಾರೆ. ಅವರು ಇಷ್ಟೇ ಮಹಿಳೆಯರ ಬದುಕು, ಯಾರಿಗೂ ಸಿಗದ ಅವಕಾಶವನ್ನು ಪತಿಯು ನಮಗೆ ಕೊಡಿಸಿದ್ದಾರೆ ಎಂಬ ಸಂಗತಿಯ ಹಿನ್ನೆಲೆಯಲ್ಲಿ ಮಾತನಾಡುತ್ತಾರೆ. ಹಾಗೂ ಸಮಾಜವೂ ಕೂಡ ಮಹಿಳಾ ಜನಪ್ರತಿನಿಧಿಗಳು ಅದೇ ಯೋಚನೆಯನ್ನು ಮಾಡುವಂತೆ ಮಾನಸಿಕವಾಗಿ ಭದ್ರಗೊಳಿಸಿದೆ ಎಂಬುದೂ ಸಹ ಪುರುಷ ಪ್ರಾಧಾನ್ಯ ಕಲ್ಪನೆಯನ್ನು ಎತ್ತಿ ಹಿಡಿಯುತ್ತದೆ. ಅಂತೆಯೇ ಇಲ್ಲಿ ಗಂಡನ ಸ್ಥಾನವನ್ನು ಮಾವನೋ, ರಾಜಕೀಯದಲ್ಲಿನ ಇತರ ಪುರುಷ ವರ್ಗವೋ ತುಂಬುತ್ತದೆಯೇ ವಿನಃ ಅಲ್ಲಿ ಮಹಿಳೆಗೆ ಕಿಂಚಿತ್ತೂ

ಸ್ಥಳವಿಲ್ಲ. ಕಾರಣ ಏನೇ ಇದ್ದರೂ ಪುರುಷ ತನ್ನ ಹೆಸರನ್ನು ಮಹಿಳೆಯರ ಮೂಲಕವೂ ಹೇಳಿಸಿಕೊಳ್ಳುವ ಹಂಬಲ ಹೊಂದಿರಬಹುದೆನ್ನಿಸುತ್ತದೆ. ಅಂತೆಯೇ ಇದರಿಂದ ತಿಳಿಯುವ ವಿಷಯವೆಂದರೆ ಸಮಾಜವು ಮಹಿಳೆಯರನ್ನು ಗಂಡನ ಮಾತನ್ನು ಮೀರಿ ಹೋಗದ ಗೃಹಿಣಿಯರು ನಾವು ಎಂದು ಸಮರ್ಥಿಸಿಕೊಳ್ಳುವ ಹಾಗೆ ಮಾಡಿರುವುದು.

ಬನ್ನೂರು ಹೋಬಳಿ ವ್ಯಾಪ್ತಿಗೆ ಸೇರುವ ಗ್ರಾಮ ಪಂಚಾಯ್ತಿ ಕ್ಷೇತ್ರಗಳಲ್ಲಿನ ಮಹಿಳಾ ಸದಸ್ಯರಿಗೆ ಜಿಲ್ಲಾ, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಬಗ್ಗೆ ಹಾಗೂ ರಾಜಕೀಯದ ಬಗೆಗೆ ಅಷ್ಟೇನೂ ಮಾಹಿತಿಗಳು ತಿಳಿದಿಲ್ಲ. ಶೇ.೮೦ ಭಾಗದ ಮಹಿಳಾ ಜನಪ್ರತಿನಿಧಿಗಳಿಗೆ ಗ್ರಾಮ ಪಂಚಾಯಿತಿಯ ಕಾರ್ಯ, ಲಕ್ಷಣಗಳೇನೆಂಬುದು ಸಹ ತಿಳಿದಿಲ್ಲ. ಆದರೆ ಪುರುಷ ಸದಸ್ಯರಿಗೆ ಹಲವು ರಾಜಕೀಯ ಸಂಗತಿಗಳು, ಆಡಳಿತ ಸಂಗತಿಗಳು ತಿಳಿದಿವೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಮಹಿಳೆಯರೊಟ್ಟಿಗೆ ಪುರುಷರೂ ಪಂಚಾಯಿತಿ ಕಾರ್ಯಗಳಲ್ಲಿ ತೊಡಗುತ್ತಿರುವುದರಿಂದ ಪುರುಷ ಸದಸ್ಯರ ಸಮುದಾಯ ಮಹಿಳಾ ಜನಪ್ರತಿನಿಧಿಗಳಿಗೆ ರಾಜಕೀಯದ ಮಾರ್ಗದರ್ಶನ ಮಾಡಬಹುದು. ಆದರೆ ಹಾಗಾಗುತ್ತಿಲ್ಲ. ಕಾರಣ ಮಹಿಳೆ ರಾಜಕೀಯದ ಬಾಗಿಲಿನ ಕದವನ್ನು ತಟ್ಟುತ್ತಿದ್ದರೂ ಸಹ ಮಹಿಳೆಗೇಕೆ ರಾಜಕೀಯದ ಉಸಾಬರಿ ಎಂಬ ಸಾಂಪ್ರದಾಯಿಕ ಮಾತು ಪ್ರಸ್ತುತವೂ ಸರ್ವಸಮ್ಮತವಾಗಿರುವುದಾಗಿದೆ.

ಗ್ರಾಮ ಪಂಚಾಯಿತಿಯ ಮಹಿಳಾ ಜನಪ್ರತಿನಿಧಿಗಳಿಗೆ ಜಿಲ್ಲಾ, ತಾಲ್ಲೂಕು, ಹೋಬಳಿ ಮಟ್ಟದ ರಾಜಕೀಯ ವ್ಯಕ್ತಿಗಳು ತಿಳಿದಿದ್ದು ರಾಜ್ಯ ಹಾಗೂ ಕೇಂದ್ರ ಮಟ್ಟದ ರಾಜಕೀಯ ವ್ಯಕ್ತಿಗಳ ಬಗ್ಗೆ ತಿಳಿದಿಲ್ಲ. ತಿಳಿಯದಿರಲು ಆಕೆ ಮಾತ್ರವೇ ಕಾರಣವಾಗಿರದೆ ಆಕೆ ದಿನನಿತ್ಯ ಮಾಡಬೇಕಾದ ದ್ವಿಪಾತ್ರ-ತ್ರಿಪಾತ್ರಗಳ ಒತ್ತಡವೂ ಸಹ ಹೆಚ್ಚಾಗಿದೆ. ಮನೆಯೊಳಗೆ, ಹೊರಗೆ, ದನಕರುಗಳ ಸಾಕಾಣಿಕೆ ಮುಂತಾದ ಕೆಲಸಗಳು ಮಹಿಳೆಯರನ್ನು ರಾಜಕೀಯದ ಅರಿವಿನ ಕಡೆಗೆ ಗಮನಹರಿಸಲು ಸಾಧ್ಯವಾಗುತ್ತಿಲ್ಲ. ಆದರೆ ಪುರುಷರು ಏಕಕಾಲದಲ್ಲಿ ಒಂದೇ ಕೆಲಸದ ಕಡೆ ಗಮನಕೊಡುತ್ತಾರೆ. ಹಾಗೂ ಸಂದರ್ಶನದ ಅವಧಿಯಲ್ಲಿ ಮಹಿಳೆಯರೆಲ್ಲರೂ ಮನೆಗೆಲಸವನ್ನು ಮಾಡುವ ತರಾತುರಿಯಲ್ಲಿದ್ದರೆ, ಪುರುಷರು ರಸ್ತೆಬದಿಯಲ್ಲಿ ಸ್ನೇಹಿತರೊಡನೆ ಮಾತುಕತೆಗೆ ನಿಂತಿರುವುದು ಕಂಡುಬಂದಿತು. ಪುರುಷ ಸದಸ್ಯರ ಎಲ್ಲಿ ಎಂದು ಕೇಳಿದಾಗ ಸ್ನೇಹಿತರೊಡನೆ ರಸ್ತೆ ಬದಿಯಲ್ಲಿ ಮಾತನಾಡುತ್ತಿರಬಹುದು ಎಂದು ಬಹಳ ಸಂತೋಷದಿಂದ ಹೇಳುವುದನ್ನು ನೋಡಿದರೆ ಪುರುಷರು ಆ ಕೆಲಸಕ್ಕೆ ಸೂಕ್ತರು ಎಂದೇ ಮಹಿಳೆಯರು ಒಪ್ಪಿಕೊಂಡಂತಿದೆ. ಇವುಗಳನ್ನು ಗಮನಿಸಿದಾಗ ಮಹಿಳಾ ಜನಪ್ರತಿನಿಧಿಗಳು ಹೇಗೆ ತಾನೇ ರಾಜಕೀಯದ ಕಡೆ ಗಮನ ಹರಿಸಲು ಸಾಧ್ಯ. ಹಾಗೂ ಕುಟುಂಬದ ಪೂರ್ಣ ಕೆಲಸದಿಂದ ಮುಕ್ತಿ ಪಡೆಯಲು ಸಾಧ್ಯ ಎಂಬುದು ಮನದಟ್ಟಾಗುತ್ತದೆ. ಇದಕ್ಕೆ ಸಮಾಜದ ಧ್ಯೇಯವಾಕ್ಯಗಳು, ಪುರುಷರ ಮನಃಸ್ಥಿತಿಗಳು ಬದಲಾಗಬೇಕು. ಹಾಗೂ ಬದಲಾವಣೆಯನ್ನು ಒಪ್ಪಿಕೊಳ್ಳುವ ಸಾಮಾಜಿಕ ವ್ಯವಸ್ಥೆ ಬೇಕಾಗಿದೆ.

ಸಂದರ್ಶನದ ಅವಧಿಯಲ್ಲಿ ಪುರುಷ ಸದಸ್ಯರು ಮಹಿಳಾ ಪರವಾಗಿಯೂ ಹಾಗೂ ವಿರುದ್ಧವಾಗಿಯೂ ಅನೇಕ ಸಂಗತಿಗಳನ್ನು ಹೇಳಿದ್ದಾರೆ. ಮಹಿಳಾ ಸದಸ್ಯರು ಸಭೆಗಳ ದಿನಗಳಲ್ಲಿ ಮಾತ್ರ ತಪ್ಪದೇ ೧೦೦

ರೂ.ಗಳಿಗಾಗಿ ಹಾಜರಾಗುತ್ತಾರೆ. ಉಳಿದ ದಿನಗಳಲ್ಲಿ ಮಹಿಳಾ ಸದಸ್ಯರಿಗೆ ಗ್ರಾಮ ಪಂಚಾಯಿತಿ ಎಲ್ಲಿದೆ ಎಂಬುದೇ ತಿಳಿದಿರುವುದಿಲ್ಲ ಎಂದು ಅನಿಸುತ್ತಾರೆ. ಮಹಿಳಾ ಸದಸ್ಯರೂ ಸಭೆಗಳಿದ್ದಾಗ, ಹೇಳಿ ಕಳುಹಿಸಿದಾಗ ಹೋಗುತ್ತೇವೆ ಎಂದು ಒಪ್ಪಿಕೊಳ್ಳುತ್ತಾರೆ ನಿಜ. ಆದರೆ ಆ ಮಾತಿನಲ್ಲಿ ಹಲವು ಸತ್ಯಾಂಶಗಳು ಎದ್ದು ಕಾಣುತ್ತವೆ. ಅವುಗಳೆಂದರೆ ಕುಟುಂಬದ ಸದಸ್ಯರು ಪ್ರತೀ ದಿನ ಹೋಗಲು ಬಿಡುವುದಿಲ್ಲ. ಆ ದಿನ ಹೋಗಲೇಬೇಕಾದ ಪರಿಸ್ಥಿತಿಯೂ ಇರುವ ಕಾರಣ ಹೋಗುತ್ತಾರೆ. ಹಾಗೂ ಮನೆಗೆಲಸಗಳು ಅವರನ್ನು ಆವರಿಸಿಕೊಂಡಿರುವ ಕಾರಣ ಬಿಡುವೇ ಇರುವುದಿಲ್ಲ. ಪುರುಷರು ದಿನವೂ ಹೋಗುತ್ತಾರೆ. ಅವರಿಗೆ ಮನೆಗೆಲಸ, ದನಕರುಗಳ ಬಗ್ಗೆ, ಮಕ್ಕಳ ಬಗ್ಗೆ ಅಷ್ಟೇನೂ ಕಾಳಜಿ ಇರುವುದಿಲ್ಲ. ಆದರೆ ನಾವಿಲ್ಲಿ ಒಂದು ವಿಚಾರವನ್ನು ಗಮನಿಸಬಹುದು ಮಹಿಳೆಯರು ಆ ಕೆಲಸಗಳನ್ನು ನಿರ್ವಹಿಸುತ್ತಿರುವುದರಿಂದಲೇ ಪುರುಷರು ಆರಾಮವಾಗಿರುವುದಾಗಿದೆ.

ಕೆಲವು ಮಹಿಳಾ ಸದಸ್ಯರಲ್ಲಿ ಆತ್ಮವಿಶ್ವಾಸ, ಛಲ, ಧೈರ್ಯವಿದ್ದು, ಪಂಚಾಯಿತಿ ವಿಚಾರದಲ್ಲಿ ಅದನ್ನು ವ್ಯಕ್ತಪಡಿಸುತ್ತಾರೆ. ಆದರಿದು ಎಲ್ಲಾ ಸಮಯದಲ್ಲೂ ಇದ್ದಂತೆ ಕಂಡುಬರಲಿಲ್ಲ. ಹೆಚ್ಚಿನ ಮಹಿಳೆಯರು ಪುರುಷ ಸದಸ್ಯರನ್ನು ಕಂಡರೆ ಹೆದರುತ್ತಾರೆ. ಅವರು ಹೇಳಿದ್ದಕ್ಕೆ ತಲೆ ಅಲ್ಲಾಡಿಸುತ್ತಾರೆ. ಅವರು ಹೇಳಿದ ಹಾಗೆಯೇ ಮಾಡುತ್ತಾರೆ. ಮನೆಯಲ್ಲಿಯೂ ಸಹ ಗಂಡನ ಮಾತಿಗೆ, ಮಾವನ ಮಾತಿಗೆ ವಿರುದ್ಧವಾಗಿ ನಡೆಯುವುದಿಲ್ಲ. ಕಾರಣ ೫ ವರ್ಷಗಳ ನಂತರ ಮತ್ತೆ ಅವರು ಅದೇ ಹಳೆಯ ಗೃಹಿಣಿಯಾಗಬೇಕಾಗಿರುವುದರಿಂದ ಹಾಗೂ ಪುರುಷನೇ ಪ್ರಪಂಚದ ಮೊದಲ ವ್ಯಕ್ತಿ ಎಂಬ ಒಪ್ಪಿತ ನಿರ್ಣಯವನ್ನು ಮಹಿಳೆಯರಲ್ಲಿ ತುಂಬಿರುವುದರಿಂದ. ಚುನಾವಣೆಗೆ ಅಭ್ಯರ್ಥಿಯಾಗಿಸುವಾಗಲೇ ಮಹಿಳೆಯು ಸದಸ್ಯೆಯಾಗಿ ಹೇಗಿರಬೇಕು ಎಂಬುದನ್ನು ಪುರುಷ ಸಮಾಜ ಹೇಳಿಕೊಟ್ಟಿರುತ್ತದೆ. ಅದಕ್ಕಾಗಿಯೇ ಕೆಲವು ಸದಸ್ಯರು ನಾವು ಇಲ್ಲಿಗೆ ಹೇಗೆ ಬಂದೆವೋ ಹಾಗೆಯೇ ಮನೆಗೆ ಹೋಗಿಬಿಟ್ಟರೆ ಸಾಕು ಎಂದು ವ್ಯಥೆಯಿಂದ ಹೇಳುತ್ತಾರೆ.

ಮಹಿಳೆಯರಿಗೆ ರಾಜಕೀಯದಲ್ಲಿ ಈ ಮೇಲ್ಕಂಡ ವಿಷಯಗಳು ಸಮಸ್ಯೆಯಾಗಿದ್ದು, ಅನಕ್ಷರತೆ, ಮೂಢನಂಬಿಕೆ, ಆರ್ಥಿಕವಾಗಿ ಸ್ವಾವಲಂಬಿಗಳಲ್ಲದಿರುವುದು, ರಾಜಕೀಯ ಮಾಹಿತಿಗಳು ದೊರೆಯದೇ ಇರುವುದು, ಪುರುಷರು ಮಾನಸಿಕವಾಗಿ ಹಿಂಸೆ ನೀಡುವುದು, ಗ್ರಾಮಸ್ಥರು ಮಹಿಳಾ ಸದಸ್ಯರನ್ನು ಹೆಚ್ಚು ಟಾರ್ಗೆಟ್ ಮಾಡಿ ಮಾತನಾಡುವುದು ಮುಂತಾದವೂ ಕೂಡ ಅವರ ಸಮಸ್ಯೆಗಳೆಂದು ಗುರುತು ಮಾಡಬಹುದು. ಕೆಲವು ಸ್ಥಳಗಳಲ್ಲಿ ಮೀಸಲಾತಿಯಿಂದಲೇ ಸಂಬಂಧಿಕರಲ್ಲಿ ಘರ್ಷಣೆಗಳುಂಟಾಗಿದ್ದು, ಕುಟುಂಬದ ವ್ಯಕ್ತಿಯನ್ನು ಅಭ್ಯರ್ಥಿಯನ್ನಾಗಿಸುವಲ್ಲಿ ಮನಸ್ತಾಪಗಳು ತಲೆದೋರಿವೆ. ಉದಾಹರಣೆಗೆ ಬೀಡನಹಳ್ಳಿ ಗ್ರಾಮ ಪಂಚಾಯಿತಿ ಕ್ಷೇತ್ರದಲ್ಲಿ ಮಹದೇವಮ್ಮ ಹಾಗೂ ಅವರ ಮಗಳ ಅತ್ತೆ ಇಬ್ಬರೂ ಚುನಾವಣೆಗೆ ನಿಂತುಕೊಂಡ ಕಾರಣ ಇಂದಿಗೂ ಮಗಳು ಅಳಿಯ ತಮ್ಮೊಂದಿಗೆ ಮಾತನಾಡುವುದಿಲ್ಲ ಎಂದು ಕಣ್ಣೀರು ಹಾಕುತ್ತಾರೆ. ನೋಡಿ ಹೇಗೆ ರಾಜಕೀಯ ಎಂಬುದು ತಾಯಿ-ಮಗಳನ್ನು ಬೇರೆ ಮಾಡಿತು ಎನ್ನುತ್ತಾ, ಮಹಿಳೆಯರು ರಾಜಕೀಯಕ್ಕೆ ಬರಬಾರದು ಎಂಬ ನಿರ್ಣಯಕ್ಕೆ ಬರುತ್ತಾರೆ.

ಮಹಿಳಾ ಸದಸ್ಯರನ್ನು ಪ್ರಶ್ನೆ ಮಾಡುವಾಗ ಇತರ ಪುರುಷರು ಹಾಗೂ ಆಕೆಯ ಪತಿಯು ಹಲವು ಬಾರಿ ಉತ್ತರಿಸುತ್ತಿರುತ್ತಾರೆ. ಯಾವ ಪ್ರಶ್ನೆಗೆ ಪತ್ನಿಯಿಂದ ಉತ್ತರಿಸಲು ಸಾಧ್ಯವಿಲ್ಲ ಎಂದು ತಿಳಿದಾಗ ಹಾಗೂ ಎಲ್ಲಿ ಏನೇನೋ ಉತ್ತರ ಕೊಟ್ಟು ಸಿಕ್ಕಿಹಾಕಿಸಿ ಬಿಡುತ್ತಾರೋ ಎಂಬ ಭಯವಿದ್ದಾಗ ಉತ್ತರಗಳು ಪುರುಷ ಕಡೆಯಿಂದ ಬರುತ್ತಿದ್ದವು. ಇದನ್ನು ಮೀರಿ ಮಹಿಳಾ ಸದಸ್ಯೆ ಏನಾದರೂ ಸತ್ಯಾಂಶದ ಉತ್ತರ ನೀಡುತ್ತಿದ್ದರೆ ಎದುರಿಗಿರುವ ಪುರುಷರು ಕೆಂಗಣ್ಣಿನಿಂದ ದುರುಗುಟ್ಟಿ ನೋಡುತ್ತಿದ್ದ ಘಟನೆಗಳೂ ಅವಲೋಕನಕ್ಕೆ ಸಿಲುಕಿದವು. ಒಂದು ಹೆಣ್ಣು ರಾಜಕೀಯಕ್ಕೆ ಬಂದಿದ್ದಾಳೆ ಎಂದು ಸಂತೋಷ ವ್ಯಕ್ತಪಡಿಸಬೇಕೇ ಅಥವಾ ರಾಜಕೀಯದಲ್ಲೂ ಮಹಿಳೆ ಪುರುಷರ ಆಟದ ಬೊಂಬೆಯಾಗಿದ್ದಾಳೆಂದು ದುಃಖಿಸಬೇಕೆ ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಮಹಿಳೆ ಎಲ್ಲಿಯವರೆಗೆ ಆರ್ಥಿಕವಾಗಿ ಸ್ವಾವಲಂಬಿಯಾಗಲಾರಳೋ ಅಲ್ಲಿಯವರೆಗೆ ಎಲ್ಲಾ ರಂಗಗಳಲ್ಲಿಯೂ ಅವಳು ಪುರುಷರ ಅಧೀನವಾಗಿಯೇ ಉಳಿಯಬೇಕಾಗುತ್ತದೆ. ಉದಾಹರಣೆಗೆ ಮಹಿಳಾ ಸದಸ್ಯೆಯೊಬ್ಬರನ್ನು ನೀವು ಏಕೆ ಧೈರ್ಯವಾಗಿ ನಿಂತು ಮಾತಾನಾಡಬಾರದು ಎಂದು ಪ್ರಶ್ನಿಸಿದ್ದಕ್ಕೆ ಅವರು ಅಯ್ಯೋ ಇದೆಲ್ಲ ಎಷ್ಟು ದಿನ ಬಿಡೆ ತಾಯಿ ಇದ್ ಬಿಟ್ ಮೇಲೆ ಅದೇ ಗಂಡನ ಮಾತ್ ತಾನೇ ಕೇಳಬೇಕು. ದಿನದ್ ಸುಖಕ್ಕೆ ವರ್ಷದ ಕೂಳನ್ನು ನಾಶಮಾಡಿಕೊಳ್ಳೋಕಾಗುತ್ತಾ ಎಂದು ಉತ್ತರಿಸಿದರು.

ಬನ್ನೂರು ಹೋಬಳಿಯ ಗ್ರಾಮ ಪಂಚಾಯಿತಿಗಳಲ್ಲಿ ಮಹಿಳಾ ಅಧ್ಯಕ್ಷರುಗಳೇ ಅತ್ಯಧಿಕವಾಗಿ ಕಂಡುಬಂದಿದ್ದು, ಎಷ್ಟೋ ಅಧ್ಯಕ್ಷರುಗಳು ಸದಸ್ಯರ ಹೆಸರುಗಳನ್ನು ಹೇಳುವಾಗ ಮಹಿಳಾ ಸದಸ್ಯರ ಬದಲಾಗಿ ಅವರ ಗಂಡಂದಿರ ಹೆಸರನ್ನು ಹೇಳುತ್ತಿದ್ದ ಪ್ರಸಂಗ ನೋಡಿ ಒಂದು ಕ್ಷಣ ಆತಂಕವಾಯಿತು. ಅಷ್ಟೇ ಏಕೆ ಸಾರ್ವಜನಿಕರೂ ಸಹ ಮಹಿಳಾ ಸದಸ್ಯರ ಹೆಸರು ಬದಲಾಗಿ ಆಕೆಯ ಗಂಡನ ಹೆಸರನ್ನು ಹೇಳುತ್ತಾರೆ. ಬೀಡನ ಹಳ್ಳಿ ಗ್ರಾಮದಲ್ಲಿ ಸಾರ್ವಜನಿಕರನ್ನುದ್ದೇಶಿಸಿ ನಿಮ್ಮ ಪಂಚಾಯಿತಿ ಕ್ಷೇತ್ರದಲ್ಲಿ ಯಾರು ಚೆನ್ನಾಗಿ ಕಲಸ ಮಾಡುತ್ತಾರೆ ಎಂಬ ಪ್ರಶ್ನೆಗೆ ಮಹಿಳಾ ಸದಸ್ಯೆಯ ಗಂಡನ ಹೆಸರನ್ನು ಹೇಳಿದರು. ಅಂತಹವರಾರು ನಿಮ್ಮ ಕ್ಷೇತ್ರದಲ್ಲಿ ಚುನಾವಣೆಯಲ್ಲಿ ನಿಂತು ಗೆದ್ದಿಲ್ಲವಲ್ಲ ಎಂದಾಗ ಒಬ್ಬರಿಗೊಬ್ಬರು ಪಿಸುಗುಟ್ಟಿ ಮಾತನಾಡಿಕೊಂಡು ಹೋ ಚುನಾವಣೆಗೆ ನಿಂತಿದ್ದವರು ಆತನ ಪತ್ನಿ ಎನ್ನುತ್ತಾರೆ. ಹೀಗೆಂದ ಮಾತ್ರಕ್ಕೆ ಆ ಮಹಿಳಾ ಸದಸ್ಯೆಗೆ ಗಂಡನಷ್ಟು ಸರಿ ಸಮಾನವಾಗಿ ಕೆಲಸ ಮಾಡಿಸಲು ಸಾಧ್ಯವಿಲ್ಲ ಎಂದಲ್ಲ, ಆಕೆಯನ್ನು ಸಮಾಜ ಹೊರ ಪ್ರಪಂಚದಲ್ಲಿ ಹೆಸರು ಮಾಡಲು, ಕೆಲಸ ಮಾಡಲು ಬಿಡುತ್ತಿಲ್ಲ ಎಂದರ್ಥ.

ಹಾಗೆಯೇ ಕೊಡಗಹಳ್ಳಿ ಗ್ರಾಮದಲ್ಲಿ ಪ್ರಭಾಮಣಿ ಎಂಬುವವರು ಅಧ್ಯಕ್ಷರಾಗಿದ್ದು ಅವರಾ ಮನೆಯ ಹತ್ತಿರವೇ ನಿಂತುಕೊಂಡು ಇಲ್ಲಿ ಅಧ್ಯಕ್ಷರು ಯಾರು ಎಂದು ಕೇಳಿದಾಗ ಸಾರ್ವಜನಿಕರು ಪಕ್ಕದಲ್ಲೇ ನಿಂತಿದ್ದ ಆಕೆಯ ಗಂಡನನ್ನು ತೋರಿಸಿ ಇವರೇ ಅಧ್ಯಕ್ಷರು ಎಂದರು. ಅಷ್ಟೇ ಏಕೆ ಗಂಡನೂ ಸಹ ನಾನೇ ಅಧ್ಯಕ್ಷ ಏನಾಗಬೇಕು ಹೇಳಿ ಎನ್ನುತ್ತಾರೆ. ಪ್ರಭಾಮಣಿ... ಎಂದಾಗ ಜನರು ಹೋ ಅವರಾ! ಇವರ ಪತ್ನಿ. ಹೆಸರಿಗಷ್ಟೇ ಅವರು ಅಧ್ಯಕ್ಷರು. ಎಲ್ಲಾ ಕೆಲಸ ನೋಡಿಕೊಳ್ಳೋದು ಇವರೇ ಎನ್ನುತ್ತಾರೆ ಸಾರ್ವಜನಿಕರು. ಮಹಿಳಾ ಸದಸ್ಯೆಯರಲ್ಲಿ ತಾವೇ ಕೆಲಸ ನಿರ್ವಹಿಸುವ ಸಾಮರ್ಥ್ಯವಿದ್ದರೂ ಸಹ ಅದು

ಸಾಧ್ಯವಾಗುತ್ತಿಲ್ಲ. ಒಂದು ಮಾತಿನಂತೆ ಪ್ರತೀ ಪುರುಷನ ಸಾಧನೆಯ ಹಿಂದೆ ಒಬ್ಬ ಹೆಣ್ಣಿರುತ್ತಾಳೆ ಎನ್ನುತ್ತಾರೆ ಆದರೆ ಮಹಿಳೆಯರ ವಿಷಯವಾಗಿ ರಾಜಕೀಯದಲ್ಲಿ ಪ್ರತಿ ಮಹಿಳೆಯರ ಮುಂದೆ ಒಬ್ಬ ಪುರುಷನಿರುತ್ತಾನೆ ಎಂದು ಗಮನಿಸಬಹುದು.

ಮಹಿಳೆಯರು ಮೀಸಲಾತಿ ಇಲ್ಲದಿದ್ದರೆ ರಾಜಕೀಯಕ್ಕೆ ಬರಲು ಸಾಧ್ಯವಿರುತ್ತಿರಲಿಲ್ಲ ಎಂಬುದಕ್ಕೆ ಶೇ.೧೦೦ರಷ್ಟು ಉತ್ತರ ಲಭಿಸಿದೆ. ಮಹಿಳಾ ಸದಸ್ಯರು, ಪುರುಷ ಸದಸ್ಯರು, ಸಾರ್ವಜನಿಕರು ಮುಂತಾದವರೆಲ್ಲರ ಅಭಿಪ್ರಾಯದವೂ ಇದೇ ಆಗಿದೆ. ಮೀಸಲಾತಿ ಇದ್ದ ಕಾರಣವೇ ತಾವು ತಮ್ಮ ಪತ್ನಿಯರನ್ನು ಚುನಾವಣೆಗೆ ನಿಲ್ಲಿಸಿದೆವು ಎಂದು ಹೇಳುವ ಪುರುಷರು ಇಲ್ಲದಿದ್ದ ಪಕ್ಷದಲ್ಲಿ ತಾವೇ ಚುನಾವಣಗೆ ನಿಲ್ಲುತ್ತಿದ್ದೆವು ಎನ್ನುತ್ತಾರೆ. ಕಾರಣ ಮಹಿಳೆಗೆ ರಾಜಕೀಯ ಸರಿಬರುವುದೂ ಇಲ್ಲ. ಚೆನ್ನಾಗಿ ಕಾಣುವುದೂ ಇಲ್ಲ. ಅವರು ಕುಟುಂಬಕ್ಕೆ ಮೀಸಲು. ನಾವು ಹೇಗೆ ಕುಟುಂಬದ ಕೆಲಸಕ್ಕೆ ತಲೆ ಹಾಕುವುದಿಲ್ಲವೋ ಹಾಗೆಯೇ ಮಹಿಳೆಯರು ರಾಜಕೀಯದ ವಿಷಯಕ್ಕೆ ತಲೆಹಾಕಬಾರದು ಎಂದು ಪುರುಷವಾದಿಗಳು ವಾದಿಸುತ್ತಾರೆ. ಮಹಿಳೆಯರು ಪುರುಷರಷ್ಟೇ ಸಮಾನರು ಎಂದು ಘಂಟಾಘೋಷವಾಗಿ ಹೇಳುವ Y.M.ಭೋಜರಾಜ ಎಂಬುವವರೂ ಸಹ ಕೊನೆಯಲ್ಲಿ ಮಹಿಳೆಯರು ಏನೆಲ್ಲಾ ಆಗುವುದಕ್ಕೆ ಮೊದಲು ಉತ್ತಮ ತಾಯಿಯಾಗಬೇಕು. ಉಳಿದವೆಲ್ಲ ಮುಂದಿನ ಭಾಗದಲ್ಲಿ ಬರುತ್ತವೆ ಎನ್ನುತ್ತಾರೆ. ಏಕೆ ಈ ಸಮಾಜ, ಮಹಿಳೆಯರಿಂದ ಕೇವಲ ಕೌಟುಂಬಿಕ ನೆಲೆಯ ಕೆಲಸಗಳನ್ನೇ ನಿರೀಕ್ಷಿಸುತ್ತದೆಯೋ ತಿಳಿದಿಲ್ಲ. ಆದರೂ ಇಲ್ಲಿ ಸಾಮಾಜೀಕರಣ ಸಾಕಷ್ಟು ಪ್ರಭಾವ ಬೀರಿದೆ ಎಂಬುದು ಗಮನಾರ್ಹ. ಸಮಾಜ ಎಂದರೆ ಪುರುಷನನ್ನೇ ಮೊದಲು ನೆನಪು ಮಾಡುವಂತೆ ಸಾಮಾಜೀಕರಣ ತನ್ನ ಕೆಲಸವನ್ನು ಮುಂದುವರಿಸಿದೆ. ಹೀಗಿರುವಾಗ ಸಮಾಜದ ನಿರೀಕ್ಷೆಗೆ ತಕ್ಕಂತೆ ಹೆಣ್ಣು ಮಕ್ಕಳನ್ನು ಸಾಮಾಜೀಕರಣಗೊಳಿಸಲಾಗುತ್ತಿದೆ. ನಿರೀಕ್ಷೆಗಳು ಪುರುಷ ಪರವಾಗಿಯೇ ರೂಪುಗೊಳ್ಳುವುದರಲ್ಲಿ ಸಂಶಯವಿಲ್ಲ. ಹಾಗಾದರೆ ಈ ನಿರೀಕ್ಷೆಗಳು ಏನಿರಬಹುದು ಎಂದು ಪ್ರಶ್ನೆ ಹಾಕಿಕೊಂಡಾಗ ಮಹಿಳೆಯರು ಪುರುಷರ ಹಿಂದೆ ಇರಬೇಕು ಎಂಬ ಉತ್ತರವೇ ದೊರೆಯುತ್ತದೆ.

ಮಹಿಳೆಯರು ಗ್ರಾಮ ಪಂಚಾಯಿತಿಯ ಹಂತದ ರಾಜಕಾರಣಕ್ಕೆ ಪ್ರವೇಶಿಸಿದ್ದರಿಂದ ಸ್ಥಾನಮಾನದಲ್ಲಿ ಅಲ್ಪ ಪ್ರಮಾಣದ ಏರಿಕೆ ಕಂಡುಬಂದಿದ್ದಂತೂ ನಿಜ. ಪುರುಷರು ತನಗಂತೂ ಅಧ್ಯಕ್ಷ ಸ್ಥಾನ, ಸದಸ್ಯ ಸ್ಥಾನ ದೊರೆಯಲಿಲ್ಲ. ಪತ್ನಿಗೆ ದೊರಕಿರುವ ಸ್ಥಾನದ ಕೆಲಸವನ್ನಾದರೂ ಮಾಡಿ ತಾನು ಹೆಸರು ಮಾಡಬೇಕೆಂಬ ಹಂಬಲದಲ್ಲಿದ್ದರೆಂದು ಸಂದರ್ಶನದ ಸಮಯದಲ್ಲಿ ನನ್ನ ಗಮನಕ್ಕೆ ಬರುತ್ತಿತ್ತು. ಹೊರ ಪ್ರಪಂಚಕ್ಕೆ ಮಹಿಳೆಯರು ರಾಜಕೀಯ ಪ್ರವೇಶದ ಮೂಲಕ ಕಾಲಿಟ್ಟಿದ್ದರಿಂದ ಅವರಲ್ಲಿ ಮಾತನಾಡುವ ಚೈತನ್ಯ ಬಂದಿದೆ. ವ್ಯಾವಹಾರಿಕ ಜ್ಞಾನ ಬಂದಿದೆ. ಜನರ ಮಧ್ಯೆ ಕುಳಿತು ಮಾತನ್ನು ಆಲಿಸುವ, ಚರ್ಚಿಸುವ, ತಮ್ಮ ನಿರ್ಧಾರವನ್ನು ಹೇಳಿಕೊಳ್ಳುವಷ್ಟು ಧೈರ್ಯ ಬಂದಿದೆ. ಗ್ರಾಮದ ಜನರು ವಿಶೇಷವಾಗಿ, ಗೌರವದಿಂದ ಮಹಿಳೆಯರನ್ನು ಮಾತನಾಡಿಸುತ್ತಾರೆ. ಒಳ್ಳೆ ಕೆಲಸ ಮಾಡುವಾಗ ಬೆನ್ನು ತಟ್ಟುತ್ತಾರೆ ಪ್ರೋತ್ಸಾಹ ನೀಡುತ್ತಾರೆ.

ಜಾತಿಯ ವಿಚಾರವಾಗಿ, ಮಹಿಳೆಯರು ತುಂಬಾ Consious ಆಗಿದ್ದು, ಕೆಲವು ಮೇಲ್ಜಾತಿಯ ಸದಸ್ಯೆಯರು ಸಭೆ-ಸಮಾರಂಭಗಳಿಗೆ ಊಟದ ಡಬ್ಬಿಯನ್ನೂ ಕೊಂಡ್ಯೊಯುತ್ತಾರೆ. ಕಾರಣ ಎಲ್ಲಾ ಜಾತಿಯ ಸಮುದಾಯದವರೂ ಅಲ್ಲಿರುತ್ತಾರೆ. ಅವರೊಟ್ಟಿಗೆ ಕುಳಿತು ಊಟ ಮಾಡುವುದು ನಮ್ಮ ದೇವರಿಗೆ ಇಷ್ಟವಾಗುವುದಿಲ್ಲ ಎಂಬುದಾಗಿದೆ. ಇನ್ನೂ ಕಲವು ಲಿಂಗಾಯಿತ ಸಮುದಾಯದ ಮಹಿಳೆಯರು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಪಂಚಾಯತಿ ಸದಸ್ಯರ ಮನೆಗೆ ಹೋಗುತ್ತಾರೆ. ಆದರೆ ಊಟ-ತಿಂಡಿಗಳನ್ನೇನೂ ಸೇವಿಸುವುದಿಲ್ಲ ಎಂದು ಹೇಳಿಕೊಳ್ಳುತ್ತಾರೆ. ಜಾತೀಯತೆ ಎಂಬುದು ಈ ಭಾಗದಲ್ಲಿ ಕೇ.೯೮ರಷ್ಟಿದ್ದು, ಪುರುಷರೂ ಸಹ ಇದಕ್ಕೆ ಹೊರತಾಗಿಲ್ಲ ಎಂದು ತಿಳಿಯಬಹುದು. ಜಾತಿಯಿಂದಲೇ ರಾಜಕಾರಣ ನಡೆಯುತ್ತದೆ. ಮೀಸಲಾತಿಯ ಕಾರಣವಾಗಿ ಜಾತಿಯೊಳಗಡೆಯೇ ಸಂಬಂಧಗಳು ಶಿಥಿಲಗೊಳ್ಳುತ್ತಿವೆ. ಆದರೆ ಮೀಸಲಾತಿಯ ಉದ್ದೇಶವೇ ಬೇರೆಯಾಗಿದ್ದು, ಮಹಿಳೆಯರು ರಾಜಕೀಯದಲ್ಲಿ ಅಭ್ಯರ್ಥಿಗಳಾಗಿ ಭಾಗವಹಿಸಲಿ, ಸಮಾನತೆಯೆಡೆಗೆ ಸಾಗಲಿ ಎಂಬುದಾಗಿದೆ. ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಗಳು ಎಲ್ಲಿ ಸಹಿ ಹಾಕು ಎನ್ನುತ್ತಾರೋ ಅಲ್ಲಿ ಹಾಕುತ್ತೇವೆ ಎಂದು ಹೇಳುವ ಮಹಿಳಾ ಸದಸ್ಯೆಯರು, ಅಧ್ಯಕ್ಷರು ಲೆಕ್ಕಾಚಾರವನ್ನೂ ಕೇಳದ ಮೃದು ಧೋರಣೆಯುಳ್ಳವರಾಗಿದ್ದಾರೆ. ಆದರೆ ಈ ಮೃದು ಧೋರಣೆಯೇ ಅವರ ಧೈರ್ಯ, ಶಕ್ತಿ, ಅಭಿವೃದ್ಧಿಯನ್ನು ನಶಿಸಿ ಹಾಕುತ್ತಿದೆ. ಎಲ್ಲಿ ಹೇಗಿದ್ದರೆ ಚೆಂದ ಎಂಬುದು ಪುರುಷರಿಗಷ್ಟೇ ಅನ್ವಯವಾಗುತ್ತಿದೆಯೇ ವಿನಃ ಮಹಿಳೆಯರಿಗೆ ಇದು ಸಾಧ್ಯವಾಗುತ್ತಿಲ್ಲ. ಆದರೂ ರತ್ನಮ್ಮ ಎಂಬ ಬೀಡನಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮಾತ್ರ ಇದರಿಂದ ಹೊರತಾಗಿದ್ದಾರೆ. ತಮ್ಮ ಅಧಿಕಾರವನ್ನು ತಾವೇ ಚಲಾಯಿಸುತ್ತಿದ್ದು, ಮಹಿಳಾ ಸದಸ್ಯರಿಗೆ ಮಾದರಿಯಾಗಿದ್ದಾರೆ. ಆದರೆ ತಿಳಿಯದ ಒಂದು ವಿಷಯವೆಂದರೆ ಗಂಡ ಬದುಕಿದ್ದಿದ್ದರೆ ಅವರು ಗಂಡನ ಮಾತಿಗೆ ಮನ್ನಣೆ ಕೊಡುತ್ತಿದ್ದರೋ ಏನೋ.

ಪುರುಷರ ನೆರವು ಬೇಡವೆಂತಲೂ ಹೇಳಲು ಸಾಧ್ಯವಿಲ್ಲ. ಕಾರಣ ಅವರು ಹೆಚ್ಚು ಕಾಲ ರಾಜಕೀಯದಲ್ಲಿದ್ದವರು. ಆದರ ಬಗ್ಗೆ ತಿಳಿದವರು. ಆದರೆ ಒತ್ತಾಯ ಪೂರ್ವಕವಾಗಿ ಮಹಿಳೆಯರನ್ನು ಹಿಡಿದಿಡಬಾರದಷ್ಟೆ. ಕೆಲವು ಮಹಿಳಾ ಸದಸ್ಯರು ಎಷ್ಟು ಬೇಗ ಈ ಸ್ಥಾನದಿಂದ ಕೆಳಗಿಳಿದರೆ ಸಾಕು ಎಂದು ಹೇಳಿಕೊಳ್ಳುತ್ತಾರೆ. ಮನೆಗೆಲಸ, ಪಂಚಾಯಿತಿ ಕೆಲಸ, ಸಾರ್ವಜನಿಕರ ಒತ್ತಡ, ಇವುಗಳಿಂದ ಮುಕ್ತಿ ಬೇಕು ಎಂದು ಮಹಿಳಾ ಸದಸ್ಯರು ನೋವಿನಿಂದ ಹೇಳುತ್ತಾರೆ. ಗಂಡನ ಮಾತನ್ನು ಕೇಳುವುದು ಎಷ್ಟೋ ಮಹಿಳಾ ಸದಸ್ಯರಿಗೆ ಇಷ್ಟವಿಲ್ಲ. ಆದರೂ ಕೇಳದೆ ವಿಧಿಯಿಲ್ಲದಂತಾಗಿದೆ. ಸಭೆಗಳಿಗೆ ಹೋದರೆ, ಪಂಚಾಯಿತಿಗಳಿಗೆ ಹೋದರೆ ಗಂಡ .ಹೆಂಡತಿಯ ಹಿಂದೆಯೇ ಇರುತ್ತಾರೆ. ಇದು ಮಹಿಳೆಯರ ಮಹಿಳೆಯರ ಬಗೆಗಿನ ಕಾಳಜಿಯಾಗಿರದೆ ಆಕೆಯನ್ನು ನಾನೇ ನಿಯಂತ್ರಿಸುತ್ತಿರುವವನು ಎಂದು ಹೇಳುವ ಪುರುಷಾಧಿಕಾರದ ಪರಾಕಾಷ್ಠೆಯಾಗಿದೆ. ಮಹಿಳೆಯರು ಹೇಳಬಹುದು, ತಾನೊಬ್ಬಳೇ ಹೋಗುವುದು ಕಷ್ಟ. ಸರಿಯಾಗಿ ಮಾತಾನಾಡಲು ಬರುವುದಿಲ್ಲ ರಾಜಕೀಯದ ಬಗ್ಗೆ ಏನೂ ತಿಳಿದಿಲ್ಲ ಎಂದು. ಆದರೆ ಪುರುಷರು ಮೊದಲಿಗೆ ರಾಜಕೀಯಕ್ಕೆ ಪ್ರವೇಶ ಮಾಡಿದಾಗ ಅವರಿಗೂ ಸಹ ಇದಾವುದೂ ತಿಳಿದಿರಲಿಲ್ಲ.

ನಂತರದ ಹಂತದಲ್ಲಿ ತಿಳಿದುಕೊಳ್ಳುತ್ತಾ ಬಂದದ್ದು. ಹಾಗೆಯೇ ಮಹಿಳೆಯೂ ಸಹ ಅದನ್ನೆಲ್ಲಾ ತಿಳಿದುಕೊಳ್ಳಲು ಕಾಲಾವಕಾಶ ಬೇಕಾಗುತ್ತದೆ. ಆದರೆ ಮಹಿಳೆಯರ ಅಧಿಕಾರವನ್ನು ಪುರುಷರು ಚಲಾಯಿಸುವುದು ಸ್ಪಷ್ಟವೆನಿಸುವುದಿಲ್ಲ. ಅವರಿಗೆ ಮಾರ್ಗದರ್ಶನವನ್ನಷ್ಟೇ ಕೊಡಬೇಕು. ಎಷ್ಟೋ ಬಾರಿ ಮಹಿಳೆಯನ್ನು ಸಂದರ್ಶಿಸುವಾಗ ಪುರುಷರು ಮಧ್ಯೆ ಮಾತನಾಡುತ್ತಿದ್ದರು. ಹಾಗೂ ಕಲವು ವಿಷಯಗಳನ್ನು ಸಮರ್ಥಿಸಿಕೊಳ್ಳುತ್ತಿದ್ದರು. ಅದು ಮಹಿಳೆಯರ ಕೆಲಸದ ಮಧ್ಯೆ ನಾವು ಹೋಗುವುದಿಲ್ಲ ಎಂದು ಕೆಲವರು ಹೇಳಿಕೊಳ್ಳುತ್ತಾರೆ.

ಪುರುಷರಿಗೆ ಕಾಡದ ಹಲವು ಸಮಸ್ಯೆಗಳು ಮಹಿಳಾ ಸದಸ್ಯರಿಗೆ ಸಮಸ್ಯೆಗಳಾಗಿವೆ. ಸಾರ್ವಜನಿಕರು ಹೆಣ್ಣೆಂಗಸು ಏನು ತಾನೇ ಕೆಲಸ ಮಾಡ್ತಾಳೆ ಎನ್ನುವಾಗ ಮಹಿಳಾ ಜನಪ್ರತಿನಿಧಿಗಳಿಗೆ ಬೇಸರವಾಗುವುದು ಸಹಜವೇ ಆಗಿದೆ. ಗ್ರಾಮಸ್ಥರು ಗ್ರಾಮೀಣ ಸಮಸ್ಯೆಗಳ ಬಗ್ಗೆ ಬೇಕೆಂತಲೇ ಮಹಿಳಾ ಸದಸ್ಯೆಯರನ್ನು ಕೇಳುತ್ತಾರಂತೆ. ಕುಟುಂಬದ ಸದಸ್ಯರು ಕೆಲವೊಮ್ಮೆ ಓಹೊಹೊಹೊ ಪಂಚಾಯಿತಿ ಕಟ್ಟೆ ಮೆಟ್ಟಿಲು ಅತ್ತುಬಿಟ್ಟಿವ್ನಿ ಅಂತ ಇಷ್ಟು ಮಾತ್ನಾಡ್ತೀಯಾ ಎಂದು ಮಾತನಾಡುವಾಗ ಮಹಿಳೆಯರ ಮನಸ್ಸಿಗೆ ನೋವಾಗುವುದು ಸಹಜ. ಎದುರು ಮಾತನಾಡಿದಳು ಎಂಬ ಕಾರಣಕ್ಕಾಗಿ ತವರು ಮನೆಗೆ ಕಳುಹಿಸಿದ ಘಟನೆಯೂ ಒಂದು ಗ್ರಾಮಪಂಚಾಯಿತಿ ಕ್ಷೇತ್ರದಲ್ಲಿ ನಡೆದಿದೆ. ಇಂತಹ ಸಮಸ್ಯೆಗಳು ಭಾವನೆಗಳಿಗೆ ನೇರವಾಗಿ ಘಾಸಿ ಮಾಡುತ್ತವೆ. ಸೂಕ್ಷ್ಮ ಎನಿಸಿದರೂ ದಿನಗಟ್ಟಲೇ ವರ್ಷಗಳವರೆಗೆ ಮನಸ್ಸಿನಲ್ಲೇ ಖಿನ್ನತೆಗೊಳಗಾಗುವಷ್ಟು ನೋವುಂಟು ಮಾಡುತ್ತದೆ. ಒಬ್ಬ ಪುರುಷನನ್ನು ಮಾತನಾಡಿಸಬೇಕೆಂದರೂ ಹತ್ತಾರು ಬಾರಿ ಯೋಚಿಸಿ ಮಾತನಾಡಬೇಕಾದ ಪರಿಸ್ಥಿತಿ ಒದಗಿದೆ. ಆದರೆ ಪುರುಷರು ಮಹಿಳೆಯನ್ನು ಬೇಕೆಂದಾಗ ಬೇಕಾದ ಹಾಗೆ ಮಾತನಾಡಿಸುತ್ತಾರೆ. ಇದು ಮಹಿಳೆ ಮತ್ತು ಪುರುಷರ ನಡುವೆ ಇರುವ ಸಮಸ್ಯೆಯ ವ್ಯತ್ಯಾಸ ಮಹಿಳೆಯರು ರಾಜಕೀಯಕ್ಕೆ ಬಂದರೂ ಪುರುಷರು ಸುಮ್ಮನಿದ್ದಾರೆ. ಕಾರಣ ಯಾರು ಬಂದರೂ ಅಧಿಕಾರ ನಡೆಸುವುದು ನಾವೇ ತಾನೇ ಎಂಬ ಅಭಿಪ್ರಾಯ ಎಂಬುದನ್ನು ಸಂದರ್ಶನದ ಸಮಯದಲ್ಲಿ ಶೇ.೯೦ ಭಾಗ ಪುರುಷರು ಒಪ್ಪಿಕೊಂಡಿದ್ದಾರೆ.

ಮಹಿಳೆಯರು ಚುನಾವಣೆಗಿರಲಿ ಇತರ ಏನೇ ಕೆಲಸ ಮಾಡಿದರೂ ಗಂಡನನ್ನೋ ಅಥವಾ ಕುಟುಂಬದ ಹಿರಿಯ ಪುರುಷರನ್ನು ಕೇಳಲೇಬೇಕು. ಆದರೆ ಯಾವ ಪುರುಷರೂ ಸಹ ಮಹಿಳೆಯನ್ನು ಒಂದು ಮಾತೂ ಕೇಳದೆ ಮುಂದುವರಿಯುತ್ತಾರೆ. ಅಷ್ಟೇ ಏಕೆ ಕೇಳದೆಯೇ ಮಹಿಳೆಯನ್ನು ಚುನಾವಣೆಗೆ ಅಭ್ಯರ್ಥಿಯಾಗಿಸಿದ್ದಾರೆ ಎಂದರೆ ಮಹಿಳೆಯರ ಅಭಿಪ್ರಾಯಗಳಿಗೆ, ಆಸೆ-ಆಕಾಂಕ್ಷೆಗಳಿಗೆ ಪುರುಷ ಸಮುದಾಯ ಮನ್ನಣೆ ನೀಡುತ್ತಿಲ್ಲ ಎಂದರ್ಥ. ಅವರಿಗೆ ಅವರ ಇರುವಿಕೆಯನ್ನು ಭದ್ರಪಡಿಸಿಕೊಳ್ಳುವ ತವಕದಲ್ಲಿ ಮಹಿಳೆಯರನ್ನು ಕಡೆಗಣಿಸುತ್ತಿದ್ದಾರೆ. ಅವರ ಭಾವನೆಗಳನ್ನು ಕೊಲ್ಲುತ್ತಿದ್ದಾರೆ. ಈ ಕ್ಷೇತ್ರದಲ್ಲಿ ಪುರುಷರು ಮಹಿಳೆಯರ ಮೇಲೆ ಮಾನಸಿಕ ದೌರ್ಜನ್ಯವೆಸಗುತ್ತಿದ್ದಾರೆ. ಇವುಗಳ ನಿರ್ಮೂಲನೆಯಾಗಲು ಮಹಿಳೆಯರ ಯೋಚನೆ ಪುರುಷ ಸಂಸ್ಕೃತಿ ಧೋರಣೆಗಳಿಂದ ಹೊರತಾಗಿರಬೇಕು. ಸಭೆಗಳಿಗೆ ದೂರದ ಊರಿಗೆ ಹೋದಾಗ ಪುರುಷರು ಮಹಿಳೆಯರ ಸಾಲಿನ ಕುರ್ಚಿಗಳಲ್ಲಿ ಕುಳಿತಿರುತ್ತಾರೆ.

ಆದರೆ ಮಹಿಳೆಯರು ಪುರುಷರ ಸಾಲಿನಲ್ಲಿ ಕುರ್ಚಿ ಖಾಲಿ ಇದ್ದರೆ ಅವುಗಳನ್ನು ಮಹಿಳೆಯರ ಸಾಲಿಗೆ ಹಾಕಿಕೊಂಡು ಕುಳಿತುಕೊಳ್ಳುತ್ತಾರಂತೆ. ಇದನ್ನು ಸ್ತ್ರೀವಾದಿ ಸ್ಥಾನದಲ್ಲಿ ನಿಂತು ಯೋಚಿಸಿದರೆ ಮಹಿಳೆಯರನ್ನು ಸಮಾಜ, ಸಾಮಾಜಿಕ ಪರಿಸರ, ಶೀಲ, ಪಾತಿವ್ರತ್ಯದ ವ್ಯಾಪ್ತಿಯಲ್ಲಿ ಸಿಲುಕಿಸಿ ಬಿಟ್ಟಿದೆ.

ಆದರೂ ಮಹಿಳಾ ಜನಪ್ರತಿನಿಧಿಗಳು ಬಡವರಿಗೆ ಮನೆಕಟ್ಟಿಕೊಳ್ಳಲು ಹಣ ಒದಗಿಸಿಕೊಡುವ, ಚರಂಡಿಗಳನ್ನು ವ್ಯವಸ್ಥಿತಗೊಳಿಸುವ, ವಿದ್ಯುತ್ ದೀಪ ಸರಿಪಡಿಸುವ, ರಸ್ತೆ ದುರಸ್ತೀಕರಣ ಮಾಡಿಸುವ ಹಾಗೂ ಗ್ರಾಮದ ನೈರ್ಮಲ್ಯದ ಬಗೆಗೂ ಕೂಡ ಅಪಾರ ಕಾಳಜಿಯುಳ್ಳವರಾಗಿದ್ದು, ಸಾಧ್ಯವಾದಷ್ಟು ಕೆಲಸಗಳನ್ನು ಮಾಡಿಸಿದ್ದಾರೆ. ಮಹಿಳಾ ಜನಪ್ರತಿನಿಧಿಗಳಿಗೆ ಇಂತಹ ಕೆಲಸಗಳಲ್ಲಿ ಆಸಕ್ತಿ ಇದ್ದರೂ ಸಹ ಕುಟುಂಬದ ಸದಸ್ಯರು ಅವರನ್ನು ಹೊರಹೋಗಲು ಬಿಡುವುದಿಲ್ಲ. ಗ್ರಾಮಸ್ಥರೂ ಸಹ ಮಹಿಳೆಯರು ಹೊರಗಡೆ ಬಂದು ಸುತ್ತಾಡಿದರೆ ಬೀದಿ ಬಸವಿ ಎಂಬ ಹಣೆಪಟ್ಟಿ ಹಚ್ಚುತ್ತಾರೆ ಎಂಬ ಭಯವೂ ಅವರಲ್ಲಿದೆ.ಹಾಗೂ ಇವುಗಳೆಲ್ಲದಕ್ಕಿಂತ ಹೆಚ್ಚಾಗಿ ಪತಿಯಾದವರು ಅವಳ ಕಲಸವನ್ನು ತಾವೇ ಮಾಡುವುದಾಗಿ ಮುಂದೆ ಬರುತ್ತಾರೆ.

೯ ಗ್ರಾಮಪಂಚಾಯಿತಿಗಳಲ್ಲಿ ಎಲ್ಲೂ ಸಹ ಮಹಿಳೆಯರು ಕಾರ್ಯಾಲಯಗಳಲ್ಲಿ ಸಂದರ್ಶನಕ್ಕೆ ಸಿಗಲಿಲ್ಲ. ಅವರನ್ನು ಸಂದರ್ಶಿಸಲು ಅವರ ಮನೆಗಳಿಗೇ ತೆರಳಬೇಕಾಯಿತು. ಕಾರ್ಯಾಲಯಗಳಲ್ಲಿ ಪುರುಷ ಸದಸ್ಯರು, ಮಹಿಳಾ ಸದಸ್ಯರ ಗಂಡಂದಿರು ಮಾತ್ರವೇ ಇರುತ್ತಿದ್ದರು. ಈ ಅಂಶವನ್ನು ಕೆಲವು ಛಾಯಾಚಿತ್ರಗಳ ಮೂಲಕ ದೃಢಪಡಿಸಿಕೊಳ್ಳಬಹುದು. (ಸಂಪ್ರಬಂಧದ ಕೊನೆಯಲ್ಲಿ ಕಾಣಬಹುದು) ಈ ಸಂಗತಿಯನ್ನು ಗಮನಿಸಿದರೆ ಮಹಿಳೆಯರನ್ನು ಮನೆಗೆಲಸಗಳು ಆವರಿಸಿಕೊಂಡಿದ್ದು, ಗ್ರಾಮಪಂಚಾಯಿತಿಗಳಿಗೆ ಭೇಟಿ ನೀಡಲು ಸಾಧ್ಯವಾಗದ ಕಾರಣ ತಿಳಿದು ಬಂದರೂ, ಅವರ ಪರವಾಗಿ ಕುಟುಂಬದ ಪುರುಷರು ಅಧಿಕಾರ ನಿರ್ವಹಿಸುತ್ತಿದ್ದಾರೆ ಎಂಬುದೂ ತಿಳಿದು ಬರುತ್ತದೆ.

ಶಿಕ್ಷಣ ಪಡೆದ ಕೆಲವು ಪುರುಷ ಸದಸ್ಯರು ಮಹಿಳೆಯರು ರಾಜಕೀಯಕ್ಕೆ ಬರುವುದನ್ನು ಇಷ್ಟಪಡುತ್ತಾರೆ. ಆದರೆ ರಾಜಕೀಯ ಶಿಕ್ಷಣ ಅವರಲ್ಲಿರಬೇಕು ಎಂಬುದು ಇವರ ವಾದ. ಎಷ್ಟೋ ಪುರುಷರೂ ಸಹ ರಾಜಕೀಯ ಶಿಕ್ಷಣವಿಲ್ಲದವರಿದ್ದಾರೆ. ಅವರ ಬಗೆಗೆ ಯಾರೂ ತಕರಾರು ಮಾಡುವುದಿಲ್ಲ. ಪುರುಷ ಸದಸ್ಯರು, ಸಾರ್ವಜನಿಕರು ಅಷ್ಟೇ ಏಕೆ ಮಹಿಳಾ ಸದಸ್ಯರೂ ಕುಟುಂಬದ ಕೆಲಸಗಳೇ ಮಹಿಳೆಯರಿಗೆ ಸೂಕ್ತ ಕೆಲಸಗಳು ಎಂದು ಹೇಳುತ್ತಾರೆ. ಆದರೆ ಮಹಿಳಾ ಸದಸ್ಯರ ಭಾವನೆಗಳು ಈ ವಿಷಯದಲ್ಲಿ ಬೇರೆಯಾಗಿಯೇ ಕಂಡುಬಂದಿತು. ಬರೀ ಮಾತಲ್ಲಿ ಮಾತ್ರವೇ ಹಾಂಗೆಂದರೂ ಅವರಿಗೂ ಗುರುತಿಸಿಕೊಳ್ಳುವ, ಹೆಸರು ಮಾಡುವ, ಪುರುಷರಿಗೆ ಸಮಾನವಾಗಿ ಬದುಕುವ, ಕಾಳಜಿಯನ್ನು ಹೊಂದಿದ್ದಾರೆ. ಆದರೆ ಪ್ರಸ್ತುತ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬನೆಗೊಳ್ಳದ ಕಾರಣ ಯಾರಿಗೂ ಸವಾಲಾಗಿ ನಿಲ್ಲುವ ಸ್ಥೈರ್ಯವಿಲ್ಲದಾಗಿದೆ. ಮನಸ್ಸಿಗೆ ಬಂದಿರುವ ಮಾತನ್ನು ಹೊರಹಾಕಲಾಗದೆ ಒಳಗೇ ಬಚ್ಚಿಟ್ಟು ನೋವನ್ನನುಭವಿಸುವ ಮಹಿಳೆಯರ ಅಂತರ್ಯ ಬಹಳ ಕಠಿಣವಾಗಿದೆ. ಪುರುಷ ಪ್ರಧಾನ ಸಮಾಜದ ಕಟ್ಟುಪಾಡುಗಳು ಮಹಿಳೆಯರ ಮಾತನ್ನು, ಆಸೆ-ಆಕಾಂಕ್ಷೆಗಳನ್ನು, ಧೈರ್ಯ,

ಕಾರ್ಯದಕ್ಷತೆಗಳೆಲ್ಲವನ್ನು ಬಚ್ಚಿಡುವಂತೆ ಮಾಡಿದೆ. ಮಹಿಳಾ ಜನಪ್ರತಿನಿಧಿಗಳು ಏನನ್ನಾದರೂ ಧೈರ್ಯವಾಗಿ ಕೇಳಿದಾಗ ಖುಷಿಯಾಗುತ್ತದೆ ಎಂದು ಹೇಳುವ ಪುರುಷ ಸದಸ್ಯರು ಕಾಣದ ಕೈಯಂತೆ ಹಿಂದಕ್ಕೆ ಎಳೆಯುತ್ತಿದ್ದಾರೆ ಎಂಬುದು ಹಲವು ಸಂಗತಿಗಳಿಂದ ಮನದಟ್ಟಾಗುತ್ತದೆ. ಉದಾಹರಣೆಗೆ ನಂಜುಂಡಸ್ವಾಮಿ ಎಂಬ ಹೆಗ್ಗೂರು ಗ್ರಾಮ ಪಂಚಾಯಿತಿಯ ಸದಸ್ಯರು ಮಹಿಳೆ ರಾಜಕೀಯಕ್ಕೆ ಬರಬೇಕು. ಕಾರಣ ಮೀಸಲಾತಿ ಇರುವುದರಿಂದ ಎನ್ನುತ್ತಾರೆ. ಹಾಗೆಯೇ ನಿಮ್ಮ ಪತ್ನಿಯನ್ನು ಅವಕಾಶ ಲಭ್ಯವಾದರೆ ಚುನಾವಣೆಗೆ ಅಭ್ಯರ್ಥಿಯಾಗಿಸುತ್ತೀರಾ ಎಂಬ ಪ್ರಶ್ನೆಗೆ ಖಂಡಿತ ಇಲ್ಲ, ಎಲ್ಲ ಹೆಂಗಸರಂತೆ ನನ್ನ ಪತ್ನಿ ಬೀದಿಗೆ ಬರುವುದು ಇಷ್ಟವಿಲ್ಲವೆನ್ನುತ್ತಾರೆ. ಹಾಗೆಯೇ ಮೀಸಲಾತಿಯನ್ನು ಸರ್ಕಾರವೇ ಒದಗಿಸಿರುವುದರಿಂದ ಮಹಿಳೆಯರು ಈ ಕ್ಷೇತ್ರಕ್ಕೆ ಬರಬಹುದು. ಇಲ್ಲದಿದ್ದಲ್ಲಿ ಪೈಪೋಟಿ ಮಾಡಿಕೊಂಡು ಬರುವುದು ದೂರದ ಮಾತು ಎನ್ನುತ್ತಾರೆ.

ಒಂದೆಡೆ ಹೊಗಳುವ, ಮತ್ತೊಂದೆಡೆ ಮಹಿಳೆಯರ ಅಧಿಕಾರತ್ವವನ್ನು ತಿರಸ್ಕರಿಸುವ ಎರಡೂ ಕೆಲಸಗಳು ನಡೆಯುತ್ತಿದ್ದು, ಹೊಗಳುವ ಕೆಲಸ ನಡೆಯುತ್ತಿರುವುದು ತಿರಸ್ಕರಿಸಿದಾಗ ಯಾವುದೇ ವೈಮನಸ್ಸು ಬರದಿರಲೆಂಬುದೇ ಆಗಿದೆ. ಇಷ್ಟು ದೂರದ ಯೋಚನೆ ಮಾಡಿ ಪುರುಷ ವರ್ಗ ಮಹಿಳೆಯರನ್ನು ಹೇಗೆ ತಮ್ಮ ಹಿಡಿತದಲ್ಲಿಟ್ಟುಕೊಳ್ಳಬೇಕು ಎಂದು ಯೋಜನೆ ಹಾಕಿಕೊಂಡಿರುವುದು ಪುರುಷ ಪ್ರಾಧಾನ್ಯತೆ ಸಮಾಜದ ಮುಂದುವರಿಕೆಯ ಆಶಯವನ್ನು ವ್ಯಕ್ತಪಡಿಸುತ್ತದೆ.

ಮಹಿಳೆಯರ ಉನ್ನತಿಗೆ ಜನಪ್ರತಿನಿಧಿಗಳು ಹೊಸ ಯೋಜನೆಯನ್ನೇನೂ ಹಮ್ಮಿಕೊಂಡಿಲ್ಲ. ಆದರೂ ಸ್ವಸಹಾಯ ಸಂಘಗಳಿಗೆ ಬ್ಯಾಂಕುಗಳ ಮೂಲಕ ಹಣವನ್ನೊದಗಿಸಿಕೊಡುವ ಕಾರ್ಯ ನಡೆಯುತ್ತಿದ್ದು ಇದು ಮಹಿಳೆಯರ ಅಭಿವೃದ್ಧಿಯ ಆಶಯವನ್ನು ಹೊಂದಿರದೆ ಓಟಿನ ಬ್ಯಾಂಕನ್ನಾಗಿ ಪರಿವರ್ತಿಸುವ ಒಳ ರಾಜಕೀಯವಷ್ಟೇ ಆಗಿದೆ. ಮಹಿಳೆಯರು ಸಭೆಗಳಿಗೆ ತಡವಾಗಿ ಬಂದರೆ ಪುರುಷ ಸದಸ್ಯರು ಅವರ ಬಗ್ಗೆ ಪಿಸುಗುಡುವುದು, ಹೊಸ ಸೀರೆಯನ್ನುಟ್ಟುಕೊಂಡರೆ, ಚಿನ್ನದ ಒಡವೆಯನ್ನು ಹಾಕಿಕೊಂಡರೆ ಎಷ್ಟು ದುಡ್ಡು ಲಪಟಾಯಿಸಿದಳೋ ಏನೋ ಎಂದು ಗೊಣಗಿಕೊಳ್ಳುವುದು ಮಹಿಳಾ ಸದಸ್ಯೆಯರ ಮನಸ್ಸನ್ನು ಘಾಸಿಗೊಳಿಸುತ್ತದೆ. ಆದರೆ ಈ ಸಮಸ್ಯೆಗಳು ಪುರುಷ ಸದಸ್ಯರಿಗೆ ಒದಗಿ ಬಂದಿಲ್ಲ. ಹಾಗೂ ಮಹಿಳೆಯರು ಸಭೆಗೆ ಬಂದು ಗ್ರಾಮದ ಅಭಿವೃದ್ಧಿಯ ಚರ್ಚೆ ಮಾಡುವುದರ ಬದಲು ಅಭರಣಗಳು, ಮನೆಗೆ ಸಂಬಂಧಿಸಿದ ವಿಷಯಗಳು, ಇತರ ಗ್ರಾಮದ ಮಹಿಳೆಯರ ಬಗ್ಗೆ ಮಾತನಾಡುತ್ತಾ ಕುಳಿತುಕೊಳ್ಳುತ್ತಾರೆ ಎಂದು ಪುರುಷ ಸದಸ್ಯರು ದೂಷಿಸುತ್ತಾರೆ. ಆದರೆ ನಿಜಾಂಶ ಬೇರೆಯದಾಗಿಯೇ ನಮ್ಮ ಗಮನಕ್ಕೆ ಬರುತ್ತದೆ. ಮಹಿಳಾ ಜನಪ್ರತಿನಿಧಿಗಳನ್ನು ಸಂದರ್ಶಿಸಬೇಕೆಂದು ಪುರುಷ ಸದಸ್ಯರನ್ನು ಕೇಳಿದಾಗ ಅವರು ಅಯ್ಯೋ ಅವರನ್ನೇನು ಕೇಳ್ತೀರ, ಅವರಿಗೇನು ತಿಳಿದಿದೆ ಅಂತ ಸಂದರ್ಶನ ಮಾಡ್ತೀರ? ಬೇಕು ಎಂದಾಗ ಬೇಕೆಂದಲ್ಲಿಗೆ ಹೆಬ್ಬೆಟ್ಟು ಇಡ್ತಾರೆ ಅಷ್ಟೆ ಎಂದು ಸಲೀಸಾಗಿ ಹೇಳ್ತಾರೆ. ಒಟ್ಟಾರೆ ಮಹಿಳೆ ಹೆಸರು ಎಲ್ಲೂ ಕೇಳಬರಬಾರದು ಎಂಬುದೇ ಸಮಾಜದ ಕಲ್ಪನೆಯಾಗಿದೆ.

ಮಹಿಳೆಯರು ಮನೆಯಲ್ಲೂ ಮೂಕ ಎತ್ತಿನಂತೆ ದುಡಿದು, ಹೊಲ-ಗದ್ದೆಗಳಲ್ಲೂ ದುಡಿದು, ಪಂಚಾಯ್ತಿ ವ್ಯವಹಾರಕ್ಕೂ ಕಾಲಿಟ್ಟಿದ್ದಾಳೆಂದರೆ ಯಾವುದೇ ಪುರುಷರೂ ಬಾಯಿಗೆ ಬೆರಳಿಟ್ಟುಕೊಳ್ಳಬೇಕಾದ ವಿಷಯ. ಎಷ್ಟೋ ಮಹಿಳೆಯರು ಸಂದರ್ಶನಕ್ಕೆ ಹೋದಾಗ ಕೂಲಿಗೆ ಹೋಗಿರುವುದನ್ನು ಕೇಳಿದಾಗ ಮಹಿಳೆ ಎಲ್ಲಾ ಕೆಲಸಕ್ಕೂ ಸಲ್ಲುತ್ತಾಳೆ ಎಂಬುದು ಅರ್ಥವಾಗುತ್ತದೆ. ಹೀಗೆ ದ್ವಿಪಾತ್ರದ ಕೆಲಸ - ತ್ರಿಪಾತ್ರದ ಕೆಲಸಗಳಲ್ಲಿ ಮಹಿಳೆ ತೊಡಗಿಕೊಂಡಿದ್ದು, ಅವಳ ಬಿಡುವಿಲ್ಲದ ಕೆಲಸದ ಹೊರೆ ಆಕೆಯನ್ನು ಪಂಚಾಯಿತಿ ಕೆಲಸಕ್ಕ ಅಂಟಿಕೊಳ್ಳಲು ಬಿಡುತ್ತಿಲ್ಲ. ಮಲಿಯೂರು ಗ್ರಾಮದ ಚಿಕ್ಕಸ್ವಾಮಿ ಮಹಿಳೆಯರ ವಿಚಾರವಾಗಿ ಹೀಗೆನ್ನುತ್ತಾರೆ. ಗಂಡಸಿದ್ದಾಗ ದರ್ಪ ತೋರಿಸ್ತಾರೆ. ಪಕ್ಕದಲ್ಲಿ ಕೂತ್ಕೋತಾರೆ. ಆದರೆ ಅದನ್ನೆಲ್ಲಾ ಕೇಳೋಕಾಗಲ್ಲ, ಕಾರಣ ಸರ್ಕಾರವೇ ಅವರಿಗೆ ಅವಕಾಶ ಕೊಟ್ಟಿದೆಯಲ್ಲ ಎಂದು ಬೇಸರ ವ್ಯಕ್ತಪಡಿಸುತ್ತಾರೆ. ಅದೇ ರೀತಿ ಮನೆಯಲ್ಲಿ ಸರಿಯಿರುವ ವಿಚಾರವನ್ನೇ ಮಹಿಳೆ ಜೋರಾಗಿ ಗಂಡನೆದುರು ಮಾತನಾಡಬಾರದು ಎಂದು ತಮ್ಮ ಅನಿಸಿಕೆಯನ್ನು ಹೇಳುತ್ತಾರೆ. ಹಾಗೆಯೇ ಅವಕಾಶ ಸಿಕ್ಕಿದರೆ ನನ್ ಹೆಂಡ್ತೀನ ಚುನಾವಣೆಗೆ ನಿಲ್ಲಿಸ್ತೀನಿ, ರಾಜಕೀಯದ ಬಗ್ಗೆ ಏನೂ ತಿಳಿಯದಿದ್ರೂ ಕೂತಿದ್ ಬರ್ಲಿ. ಈಗ ಎಲ್ಲರೂ ಮಾಡ್ತಿರೋದು ಅದನ್ನೇ ತಾನೆ ಎಂದು ದ್ವೇಷ ಭಾವನೆಯಿಂದ ಹೇಳುತ್ತಾರೆ. ತಿಳಿಯದ ವಿಷಯವನ್ನು ವ್ಯಕ್ತಿಗಳಿಗೆ ತಿಳಿಸಿ ಹೇಳಿಕೊಡುವ ಬದಲು ಮಹಿಳೆಯರನ್ನು ಇದ್ದ ಹಾಗೆಯೇ ಇರಿಸುವ ಕಾರ್ಯವನ್ನು ಪುರುಷ ವರ್ಗ ಕೈಗೊಳ್ಳುತ್ತಿದೆ. ಒಟ್ಟಾರೆ ಮಹಿಳೆಯರು ತಮ್ಮ ಸಮಾನರಾಗಿ ಬರಬಾರದು. ತಮ್ಮ ಹಿಂದೆಯೇ ಸೇವಕರಂತೆ ಇರಬೇಕೆಂದು ಹಲವರ ಅಭಿಪ್ರಾಯವಾಗಿದೆ.

ಹೆಣ್ಣಿಗೆ ಮನೆಯೇ ಭೂಷಣ, ಹೊರ ಕ್ಷೇತ್ರದಲ್ಲಿ ಕೆಲಸ ಮಾಡುವುದು ಅವಳಿಗೆ ಆಗದ ಕೆಲಸ ಎಂದು ವಾದಕ್ಕಿಳಿಯುವ ಪುರುಷ ಸದಸ್ಯರು ಮಹಿಳೆಯರನ್ನು ಕೇವಲವಾಗಿ ನೋಡುವಂತೆ ಕಾಣಿಸುತ್ತದೆ. ಆದರೆ ಮಹಿಳೆಯರು ಸಾಕಷ್ಟು ಸಮರ್ಥರಿದ್ದಾರೆ. ಅದರ ಉಪಯೋಗಕ್ಕೆ ಸಮಾಜದ ಕೆಲವು ವರ್ಗಗಳು ತೊಡಕಾಗಿವೆ. ಕುಟುಂಬದ ಕೆಲವು ನಿಗದಿತ ಕೆಲಸಗಳು ಅಡ್ಡಿಯಾಗಿವೆ. ಚುನಾಯಿತಗೊಂಡ ನಂತರ ಸರ್ಕಾರ ರಾಜಕೀಯ ತರಬೇತಿಗಳನ್ನು ಹಮ್ಮಿಕೊಳ್ಳುತ್ತದೆ. ಆ ಕಾರ್ಯಕ್ರಮದಲ್ಲಿ ಸಕಾರಾತ್ಮಕ ವಿಷಯಗಳನ್ನು ಮನದಟ್ಟು ಮಾಡಿದರೂ ಸಹ ಮಹಿಳೆಯರು ನಿರ್ಧಾರ ಕೈಗೊಳ್ಳುವಲ್ಲಿ ಹಿಂದೇಟು ಹಾಕುತ್ತಾರೆ. ಕಾರಣ ಹುಟ್ಟಿದಾಗಿನಿಂದ ಬಂದ ಹಾದಿಯನ್ನು ಒಂದು ತರಬೇತಿ ಕಾರ್ಯಾಗಾರದಿಂದ ಬಿಡುವುದು ಸಾಧ್ಯವಾಗದ ಮಾತು. ಎಷ್ಟೋ ಮಹಿಳಾ ಸದಸ್ಯೆಯರು ಸ್ವನಿರ್ಧಾರ ತೆಗೆದುಕೊಂಡರೂ ಪುರುಷರು ಅದನ್ನು ಬದಲಿಸುತ್ತಾರೆ ಇಲ್ಲವಾದಲ್ಲಿ ತೆಗೆದುಬಿಡುತ್ತಾರೆ.

ಸಂದರ್ಶನಕ್ಕೆ ಮಹಿಳೆಯರು ಉತ್ತರಿಸುವ ಸಮಯದಲ್ಲಿ ಗಂಡ ಏನಾದರೂ ಪ್ರವೇಶ ಮಾಡಿದರೆ ಧ್ವನಿಯನ್ನು ಕಡಿಮೆ ಮಾಡಿಬಿಡುತ್ತಿದ್ದರು. ಹಾಗೂ ಮಹಿಳೆಯರನ್ನು ಹೆದರಿಸಿ ಇರಿಸಿರುವ ವಿಚಾರವೂ ಗಮನಕ್ಕೆ ಬಂದಿತು. ಸಾಮಾಜ ಎಂಬುದೇ ಹಾಗೆ. ಯಾರು ಯಾರನ್ನೂ ಮುಂದುವರೆಯಲು ಬಿಡುವುದಿಲ್ಲ. ಕೆಳವರ್ಗರದವರನ್ನು ಮೇಲ್ವರ್ಗದವರು, ಬಡವರನ್ನು ಶ್ರೀಮಂತರು, ಮಹಿಳೆಯರನ್ನು ಪುರುಷರು ಯಾವಾಗಲೂ ಹತೋಟಿಯಲ್ಲಿಟ್ಟುಕೊಂಡಿರುತ್ತಾರೆ. ಇತರರು ಮುಂದುವರಿದರೆ ತಮ್ಮ

ಸ್ಥಾನವನ್ನು ಬಿಟ್ಟುಕೊಡಬೇಕಾದ ಸ್ಥಿತಿ ಬಂದೊದಗುತ್ತದೆಂಬ ಕಾರಣಕ್ಕಾಗಿ ಈ ವ್ಯವಸ್ಥೆ ನೆಲೆಗೊಂಡಿದೆ. ಬೆರಳೆಣಿಕೆಯಷ್ಟು ಜನರು ಮಾತ್ರ ಇವುಗಳನ್ನು ಎದುರಿಸಿ ತಮ್ಮ ಸ್ಥಾನಮಾನವನ್ನು ಬದಲಿಸಿಕೊಳ್ಳುತ್ತಾರೆ. ಇಲ್ಲವಾದಲ್ಲಿ ಇವರು ವ್ಯವಸ್ಥೆಯೊಳಗೆ ಸಿಲುಕಿ ಜೀವನವನ್ನು ಕತ್ತಲು ಮಾಡಿಕೊಳ್ಳುತ್ತಾರೆ. ಮಹಿಳೆಯರು ಕುಟುಂಬದ ಸದಸ್ಯರೊಡನೆ ದ್ವೇಷ ಕಟ್ಟಿಕೊಂಡರೆ ಅವರ ಬಾಳೂ ಸಹ ಕತ್ತಲೆಯಲ್ಲೇ ಕಳೆಯಬೇಕಾಗುತ್ತದೆ. ಕಾರಣ ಹೊರಗೆ ಬದುಕಲು ಶಿಕ್ಷಣವಿರುವುದಿಲ್ಲ. ಉದ್ಯೋಗದ ಸಮಸ್ಯೆಯ ಜೊತೆಗೆ ಸಮಾಜವೂ ನ್ಯಾಯದ ದೃಷ್ಟಿಯಿಂದ ನೋಡುವುದಿಲ್ಲ. ಆದ ಕಾರಣ ಮಹಿಳೆಯರು ಶಿಕ್ಷಣ, ಉದ್ಯೋಗ, ತಂತ್ರಜ್ಞಾನಗಳ ಬಗೆಗೆ ಅರಿತು ಹೆಜ್ಜೆ ಇಡುವುದು ಒಳಿತು. ಸಮಾಜದಲ್ಲಿ ಪುರುಷರು ಮಾತ್ರ ಹೆಣ್ಣಿಲ್ಲದೆ ಬದುಕಬಹುದು. ಹೆಣ್ಣಾದವಳು ಬದುಕಲು ಸಾಧ್ಯವಿಲ್ಲ ಎಂಬ ಮಾತನ್ನೇ ಪುನರುಚ್ಚರಿಸುತ್ತಾ ಬಂದಿದೆ. ಅದಕ್ಕೆ ತಕ್ಕಂತೆ ಹೆಣ್ಣನ್ನು ಅಧೀನದಲ್ಲಿಯೇ ಬದುಕು ಸಾಗಿಸುವಂತೆ ಮಾಡಿದೆ. ಇವುಗಳ ನಿವಾರಣೆಗೆ ಎಂಬಂತೆ ಸರ್ಕಾರವು ಸ್ಥಳೀಯ ರಾಜಕೀಯದಲ್ಲಿ ಮೀಸಲಾತಿ ನೀಡಿ ಅಧಿಕಾರಕ್ಕೆ ಬರಲು ಅವಕಾಶ ನೀಡಿರುವಾಗ ಮಹಿಳೆಯರು ಅದನ್ನು ಸದುಪಯೋಗಪಡಿಸಿಕೊಂಡು ತಮ್ಮನ್ನು ಅಧೀನ ನೆಲೆಯಿಂದ ಮುಖ್ಯ ನೆಲೆಗೆ ಬರುವಂತೆ ಮಾಡಿಕೊಳ್ಳಲು ಪ್ರಯತ್ನಿಸಬೇಕಾಗಿದೆ. ಈ ನಡುವೆ ಹಲವು ಸಮಸ್ಯೆಗಳು ಬರುವುದು ಸಹಜ. ಆದರೆ ಅವುಗಳೆಲ್ಲವನ್ನು ದಿಟ್ಟವಾಗಿ ಎದುರಿಸಿದಲ್ಲಿ ಮುಂಬರುವ ಮಹಿಳಾ ಸಂಕುಲ ಸಮಾನತೆಯಡಿಯಲ್ಲಿ ಬದುಕಲು ಸಾಧ್ಯ. ಎಷ್ಟು ಕಾಲದವರೆಗೆ ಮಹಿಳೆಯರು ಪುರುಷರ ಜ್ಞಾನದ, ಆರ್ಥಿಕತೆಯ, ಅಧಿಕಾರದ ಎಲ್ಲೆಯೊಳಗೆ ಬದುಕು ಸಾಗಿಸಬೇಕು. ಅವರಿಗೂ ಸ್ವಚ್ಛಂದವಾದ ಬದುಕಿದೆ, ಅವರದೇ ಆದ ಭಾವನೆಗಳಿವೆ, ಉತ್ತಮ ಯೋಚನೆಯ ಮನಸ್ಸಿದೆ, ನಿಶ್ಕಲ್ಮಷವಾದ ಪ್ರೀತಿ-ಸ್ನೇಹವಿದೆ. ಇವುಗಳನ್ನು ಸಮಾಜದ ಎಲ್ಲೆಡೆ ಬಿತ್ತುವುದರಿಂದ ಇಡೀ ಸಮಾಜ ಆರೋಗ್ಯಕರ ವಾತಾವರಣದಲ್ಲಿ ನೆಲೆಸಬಹುದು. ಬದಲಾದ ಸ್ಥಿತಿಯು ಪೀಳಿಗೆಯಿಂದ ಪೀಳಿಗೆಗೆ ವಿಸ್ತರಿಸಿ ಜೀವನ ಸುಸ್ಥಿತಿಗೊಳ್ಳುತ್ತದೆ. ದ್ವೇಷ ಮರೆಯಾಗುತ್ತದೆ. ಜೀವನ ಉಲ್ಲಾಸದೊಳಗೆ ಬೆರೆತು ನಗುತ್ತದೆ.

ಕೆಲವು ಮಹಿಳೆಯರು ಜನಪ್ರತಿನಿಧಿಗಳಾಗಿ ಸಂತೋಷದಿಂದಿದ್ದೇವೆ. ಅಲ್ಲಿ ಯಾವುದೇ ಕೆಲಸದ ಒತ್ತಡಗಳಿರುವುದಿಲ್ಲ. ಮುಂಚೆ ಗೃಹಿಣಿಯಾಗಿ ಹೇಗಿದ್ದೆವೋ ಈಗಲೂ ಹಾಗೆಯೇ ಇದ್ದೇವೆ. ಹೆಚ್ಚು ಕೆಲಸ ಎಂದು ಅನಿಸುವುದೇ ಇಲ್ಲ ಎನ್ನುತ್ತಾರೆ. ಆದರೆ ಕಾರಣ ಹುಡುಕಿದಾಗ ಅವರ ಕೆಲಸಗಳನ್ನೆಲ್ಲಾ ಮನೆಯ ಹಿರಿಯ ಪುರುಷರು ಇಲ್ಲವೇ ಪತಿಯು ಮಾಡುತ್ತಿರುವುದು ಕಂಡುಬರುತ್ತದೆ. ಮಹಿಳೆಯರು ಪತಿಯು ತನ್ನ ಕೆಲಸವನ್ನು ಮಾಡಿಕೊಡುತ್ತಿದ್ದಾರಲ್ಲಾ ಎಂಬ ಭ್ರಮೆಯೊಳಗೆ ಬೆರೆತು ಅಧಿಕಾರದ ಬಗ್ಗೆ, ನಿರ್ಧಾರ ಕೈಗೊಳ್ಳುವಿಕೆಯ ಬಗ್ಗೆ, ಸಮಾನತೆ, ಸ್ವತಂತ್ರ್ಯದ ಬಗ್ಗೆ, ಯೋಚಿಸುತ್ತಲೂ ಇಲ್ಲ. ಇನ್ನು ಕೆಲವರು ಎಲ್ಲವನ್ನೂ ನಮ್ಮ ಯಜಮಾನರೇ ಮಾಡುತ್ತಾರೆ. ನಮಗೆ ಮಾಡಲು ಬಿಡುವುದಿಲ್ಲ ಎಂದು ಬೇಸರವನ್ನು ವ್ಯಕ್ತಪಡಿಸುತ್ತಾರೆ.

ಮಹಿಳೆಯರಿಗೆ ಯಾವುದು ಅಸಾಧ್ಯ? ಈಗಿರುವ ನಿರುತ್ತೇಜಕ ಪರಿಸರದ ಪ್ರಭಾವದಿಂದಾಗಿ ಮಹಿಳೆಯರು ಅಬಲೆಯರು ಎಂಬ ಭಾವನೆ ಮೂಡಿದೆ. ಗಂಡಿನಲ್ಲಿರುವ ಅಹಂ ಮಹಿಳೆಯರಿಗೆ

ಅಡ್ಡಗಾಲಾಗಿದೆ. ಮಹಿಳೆಯರು ಪುರುಷರಷ್ಟು ಭ್ರಷ್ಟಾಚಾರಿಗಳಾಗಲಾರರು. ಅವರು ಹೆಚ್ಚು ಸಂಖ್ಯೆಯಲ್ಲಿ ರಾಜಕೀಯಕ್ಕೆ ಬಂದರೆ ಹಲವು ಸುಧಾರಣೆಗಳಾಗುತ್ತವೆ. ಇಂದಿನ ರಾಜಕೀಯ ಪುರುಷ ಪ್ರಧಾನವಾಗಿದೆ ಮಹಿಳೆಯರು ಇಲ್ಲಿ ಅಲ್ಪಸಂಖ್ಯಾತರಾಗಿದ್ದಾರೆ. ಈ ರಾಜ್ಯದಲ್ಲಿ ಶೇ.೩೩ ಮೀಸಲಾತಿ ಇರುವುದರಿಂದಾಗಿ ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ ಮಹಿಳೆಯು ಭಾಗವಹಿಸುವಂತಾಗಿದೆ. ಹಾಗೆಯೇ ಇವರು ಪುರುಷ ಸದಸ್ಯರಿಗಿಂತ ಹೆಚ್ಚಾಗಿ ಗ್ರಾಮೀಣ ಜನರ, ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದಾರೆ. ಅಲ್ಲದೆ ಹಲವು ಕಡೆಗಳಲ್ಲಿ ಸಾರ್ವಜನಿಕ ಕ್ಷೇತ್ರಗಳಲ್ಲಿ ತಮ್ಮ ದಕ್ಷತೆಯನ್ನು ಪ್ರದರ್ಶಿಸಿದ್ದಾರೆ. ರಾಜಕೀಯದಲ್ಲಿ ಅಲ್ಪಸಂಖ್ಯಾತರಾಗಿರುವುದರಿಂದ ಅವರದು ರಾಜಕೀಯವಾಗಿ ಕ್ಷೀಣದನಿಯಾಗಿದೆ. ಅವರ ಅಭಿಪ್ರಾಯಗಳಿಗೆ, ನ್ಯಾಯಯುತ ಬೇಡಿಕೆಗಳಿಗೆ ಮನ್ನಣೆ ಇಲ್ಲವಾಗಿದೆ. ಆದ್ದರಿಂದ ಅವರಿಗೆ ಎಲ್ಲಾ ಹಂತದಲ್ಲೂ ರಾಜಕೀಯ ಮೀಸಲಾತಿಯ ಅಗತ್ಯವಿದೆ. ಸ್ವತಂತ್ರ ಭಾರತದಲ್ಲಿ ಪ್ರಜಾಪ್ರಭುತ್ವ ಮಹಿಳೆಯರ ದಮನದ ಮತ್ತು ಪುರುಷರ ಮೇಲುಗೈನ ಸಂಪ್ರದಾಯ ಹೊಂದಿದೆ. ರಾಜಕೀಯದಲ್ಲಿ ಮಹಿಳೆಯರ ಪಾಲು ಅತೀ ಕಡಿಮೆ. ಮಹಿಳೆಯರ ರಾಜಕೀಯ ಸಶಕ್ತೀಕರಣದ ಕಲ್ಪನೆ ಇದುವರೆಗೂ ಕಾರ್ಯರೂಪಕ್ಕಿಳಿದಿಲ್ಲ ಎನ್ನಬಹುದು.

ಸ್ತ್ರೀ ಮತ್ತು ಪುರುಷರ ನಡುವಣ ಜೈವಿಕ ವ್ಯತ್ಯಾಸಗಳನ್ನೇ ಮುಂದಿಟ್ಟುಕೊಂಡು ಈ ವ್ಯತ್ಯಾಸಗಳು ಅವರ ಸಾಮರ್ಥ್ಯ ಮತ್ತು ಶಕ್ತಿಗಳಲ್ಲೂ ಭಿನ್ನತೆಯನ್ನು ತರುತ್ತವೆ ಎನ್ನುವ ಒಂದು ವಾದ ಪುರುಷ ಪ್ರಧಾನ ಮೌಲ್ಯಗಳನ್ನಾಧರಿಸಿದ ಒಂದು ಸಾಂಸ್ಕೃತಿಕ ಕಟ್ಟು ಕಥನವಷ್ಟೆ. ಇದೇ ಅರ್ಥಹೀನ ವಾದವನ್ನು ಮುಂದಿಟ್ಟುಕೊಂಡು ಸಮಾಜದ ಉಳಿವು ಹಾಗೂ ಅಭಿವೃದ್ಧಿಗೆ ಮಹಿಳೆಯರು ನೀಡುತ್ತಾ ಬಂದಿರುವ ಕೊಡುಗೆಗಳನ್ನು ಅಲಕ್ಷ್ಯ ಮಾಡಿ ಅವರನ್ನು ಎರಡನೆ ದರ್ಜೆಯ ಪ್ರಜೆಗಳಂತೆ ನಡೆಸಿಕೊಂಡು ಬರಲಾಗುತ್ತಿದೆ. ಅವರ ಸಾಮರ್ಥ್ಯವನ್ನು ಕುರಿತಂತೆ ಇಲ್ಲ-ಸಲ್ಲದ ಅನುಮಾನಗಳನ್ನು ಸೃಷ್ಟಿಸಿ ಮಹಿಳೆಯರಿಗೆ ಅಧಿಕಾವನ್ನು ನಿಭಾಯಿಸುವ ಶಕ್ತಿಯಿಲ್ಲ ಎನ್ನುವ ಮಿಥ್ಯೆಯನ್ನು ಹರಡುತ್ತಾ, ಈ ಪುರುಷ ಪ್ರಧಾನ ವ್ಯವಸ್ಥೆ ತನ್ನ ಪಟ್ಟಭದ್ರ ಹಿತಾಸಕ್ತಿಗಳನ್ನು ಉಳಿಸಿಕೊಂಡೇ ಬರುತ್ತಿದೆ. ಶತಮಾನಗಳ ಇತಿಹಾಸವನ್ನು ಹೊಂದಿರುವ ಲಿಂಗ ಅಸಮಾನತೆಯಿಂದ ರಾಜಕೀಯ ಲಾಭವನ್ನು ಪಡೆಯುತ್ತಾ ಬಂದಿರುವ ಪುರುಷ ರಾಜಕಾರಣಿಗಳು ಇದ್ದಕ್ಕಿದ್ದಂತೆ ಮಹಿಳೆಯರು ತಮ್ಮನ್ನು ಪ್ರಶ್ನಿಸಿ, ಪ್ರತಿಭಟಿಸುವ ಪರಿಸ್ಥಿತಿಯನ್ನು ಎದುರಿಸಲು ತಯಾರಿಲ್ಲ. ಈ ಕಾರಣವಾಗೆಯೇ ಲೋಕಸಭೆ-ರಾಜ್ಯಸಭೆಯ ಮೀಸಲಾತಿಯನ್ನು ಮುಂದೂಡುತ್ತಾ ಬಂದಿರುವುದಾಗಿದೆ.

ಹಿಂದಿನಂತೆ ಒಂದೇ ಗುರಿ, ಏಕ ಶತ್ರು, ಏಕನಾಯಕತ್ವ ಇಂದಿಲ್ಲ. ಅಧಿಕಾರದ ಆಸೆ, ಅನಾರೋಗ್ಯಕರ ಸ್ಪರ್ಧೆ, ಕುಟಿಲತೆ, ಹಣಬಲ, ತೋಳ್ಬಲಗಳ ಬೀಡಾದ ರಾಜಕೀಯ ಮಹಿಳೆಯರನ್ನು ಹಿಮ್ಮೆಟ್ಟಿಸಲು ಯತ್ನಿಸುತ್ತಿವೆ. ಆದರೆ ಇಂತಹ ಪ್ರತಿಕೂಲ ಪರಿಸರದಲ್ಲೂ ದಿನೇ-ದಿನೇ ಬೆಳೆಯುತ್ತಿರುವ ಮಹಿಳೆಯರು ಸಾಮಾಜಿಕ ಬದಲಾವಣೆಯ ಅಲೆಯನ್ನು ಎಬ್ಬಿಸಿದ್ದಾರೆ. ಅನಕ್ಷರಸ್ಥರು, ಅಜ್ಞಾನಿಗಳು,

ಅಬಲೆಯರು ಎಂಬೆಲ್ಲ ಟೀಕೆಗಳಿಗೆ ಉತ್ತರವಾಗಿ ತಮ್ಮ ಹಳ್ಳಿಗಳನ್ನು ಅಕ್ಷರದ ಕಡೆಗೆ, ಜ್ಞಾನದ ಕಡೆಗೆ ಸದೃಢತೆಯ ಕಡೆಗೆ ಕೊಂಡೊಯ್ಯುತ್ತಿದ್ದಾರೆ.

ಈಗ ಚುನಾಯಿತರಾಗುವ ಮಹಿಳೆಯರಿಗೆ ಸಿದ್ಧ ಮಾದರಿಗಳಲ್ಲಿ ಅವರಿಗೆ ಅವರೇ ಮಾದರಿಗಳಾಗಬೇಕು. ತಮ್ಮ ತಾಯಂದಿರಾಗಲೀ, ಅಜ್ಜಿಯರಾಗಲೀ ಅಧಿಕಾರದ ಸ್ಥಾನಗಳಲ್ಲಿ ಇದ್ದವರಲ್ಲ. ಹೀಗಾಗಿ ತಮ್ಮದೇ ಕುಟುಂಬದವರಿಂದ, ಸಮಾಜದಿಂದ ಹಾಗೂ ಮಾಧ್ಯಮಗಳಿಂದ ಈ ಮಹಿಳೆಯರು ಸಾಕಷ್ಟು ಟೀಕೆ, ಮೂದಲಿಕೆಗಳನ್ನು ಎದುರಿಸಬೇಕಾಗುತ್ತದೆ ಎಂದು ಹಿರಿಯ ಪತ್ರಕರ್ತೆಯಾದ ಮೃಣಾಲ್ ಪಾಂಡೆರವರು ಹೇಳಿದ್ದಾರೆ. ಸಂವಿಧಾನದ ೭೩ನೇ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾಯಿತರಾಗಿ ಬಂದಾಗ ಮೃಣಾಲ್ ಪಾಂಡೆ ಈ ಮಾತು ಹೇಳಿದರು. ಇದು ಸಂಪೂರ್ಣ ಸತ್ಯವೂ ಹೌದು. ಮೃಣಾಲ್ ಪಾಂಡೆ ಹೇಳಿದಂತೆ ಪಂಚಾಯತ್ ಸಂಸ್ಥೆಗಳಿಗೆ ಆಯ್ಕೆಯಾದ ಮಹಿಳೆಯರು ಕುಟುಂಬದ ಸದಸ್ಯರಿಂದ, ನೆಂಟರಿಂದ ಸುತ್ತಮುತ್ತಲಿನ ಸಮಾಜದಿಂದ, ರಾಜಕೀಯ ಎದುರಾಳಿಗಳಿಂದ, ಇವೆಲ್ಲವನ್ನೂ ವೈಭವೀಕರಿಸುವ ಪತ್ರಿಕೆಗಳಿಂದ ಟೀಕೆಗಳ ಮಹಾಪೂರವನ್ನೇ ಎದುರಿಸಬೇಕಾಗಿದೆ.

ನಮ್ಮದು ಹಳ್ಳಿಗಳ ದೇಶ. ಹಳ್ಳಿಗಳಲ್ಲಿ ಮಹಿಳೆಯರು ಇಂದಿಗೂ ದ್ವಿತೀಯ ದರ್ಜೆಯ ಪ್ರಜೆಗಳೇ. ಸದಾ ತಲೆಮೇಲೆ ಸೆರಗು ಹೊದ್ದು, ಮನೆಯ ನಾಲ್ಕು ಗೋಡೆಗಳ ನಡು ಬಂಧಿಯಾದವರು. ಅಪರಿಚಿತರು ಮನೆಯ ಅಂಗಳಕ್ಕೆ ಬಂದರೂ, ಮಹಿಳೆಯರು ಮುಖ ಮರೆಮಾಚಿ ಒಳಮನೆಯಲ್ಲಿ ಸೇರಬೇಕು. ಕುಟುಂಬದ ಜನರ ನಡುವೆ ಇದ್ದಾಗಲೂ ಗಂಡಸರ ಎದುರು ಇವರು ಕುಳಿತುಕೊಳ್ಳುವಂತಿಲ್ಲ. ದನಿ ತೆಗೆದು ಮಾತನಾಡುವಂತಿಲ್ಲ. ಖುಷಿಯಾದರೆ ಮನತುಂಬಿ ನಗುವಂತಿಲ್ಲ. ತಲೆ ಎತ್ತಿ ಓಡಾಡುವಂತಿಲ್ಲ. ಇಂತಹ ಸಾಮಾಜಿಕ ಪರಿಸರದಿಂದ ಬಂದ ಮಹಿಳೆಯರು ಒಮ್ಮೆಲೇ ಏಕಾಂಗಿಯಾಗಿ ನಿಂತು ತನ್ನ ಜವಾಬ್ದಾರಿ ನಿರ್ವಹಿಸುವುದು ವಾಸ್ತವವಾಗಿ ಅಸಾಧ್ಯ. ಆದ್ದರಿಂದ ಇಂತಹ ಮಹಿಳೆಯರಿಗೆ ಕುಟುಂಬದ ಪುರುಷರ ನೆರವು ಅಗತ್ಯವಾಗಿತ್ತು. ಸಭೆಗೆ ಹೋಗಿ ಬರಲು ಜೊತೆ ಬೇಕಾಯ್ತು. ಇಂತಹ ಅನೇಕ ಹಸಿ ವಿಮರ್ಶೆಗಳಿಂದಾಗಿ ಒಟ್ಟು ಸಾಮಾಜಿಕ ಪ್ರಕ್ರಿಯೆಯಾಗಿ ಮೂಡಿ ಬರಬೇಕಾಗಿದ್ದ ಬದಲಾವಣೆಯ ಚಳುವಳಿ ಕೇವಲ ಮಹಿಳೆಯರದಾಗಿ ಬಿಂಬಿತಗೊಂಡಿತು. ಒಟ್ಟು ರಾಜಕೀಯ ವಾಹಿನಿಯಲ್ಲಿ ಮಹಿಳೆಯರನ್ನೂ ಸಮಭಾಗಿಗಳಾಗಿಸಬೇಕಿದ್ದ ಮೀಸಲಾತಿಯ ಪ್ರಯತ್ನ ಮಹಿಳೆಯರನ್ನು ಮತ್ತಷ್ಟು ಪ್ರತ್ಯೇಕಿಸಿತು. ಇಷ್ಟಾದರೂ ಮೀಸಲಾತಿಯನ್ನು ಅರ್ಥಪೂರ್ಣಗೊಳಿಸಲು ದೊರೆತ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಲು ಅಸಂಖ್ಯಾತ ಮಹಿಳೆಯರು ಯತ್ನಿಸಿದ್ದಾರೆ ಹಾಗೂ ಸಫಲರಾಗಿದ್ದಾರೆ. ಕುಟುಂಬದ ಸಮಾಜದ ಸಹಕಾರ ದೊರೆತಿರುವ ಮಹಿಳೆಯರು ಸ್ವಸಾಮರ್ಥ್ಯದಿಂದ ಮೇಲೆ ಬಂದಿರುವವರು, ಅಪೂರ್ವ ಸಂಘಟನಾ ಶಕ್ತಿ ಹೊಂದಿರುವವರು. ಚುನಾಯಿತರಾದ ಮೇಲೆ ಎಲ್ಲವನ್ನೂ ಕಲಿತು ಇತರರಿಂತ ಮುಂದೆ ಬಂದವರು. ಪಂಚಾಯತಿಗಳಲ್ಲಿ ಆದ್ಯತೆಗಳ ಪಟ್ಟಿಯನ್ನೇ ಬದಲಾಯಿಸಿದರು. ಹಳ್ಳಿಗಳಲ್ಲಿ ಬದಲಾವಣೆಯ ಸಣ್ಣ ಅಲೆಯನ್ನೇ ಹುಟ್ಟು ಹಾಕಿದವರೂ ನಮ್ಮ ನಡುವೆ ಇದ್ದಾರೆ.

ಪಂಚಾಯತ್ ಸಂಸ್ಥೆಗಳಲ್ಲಿ, ಅದರಲ್ಲೂ ಪ್ರಮುಖವಾಗಿ ಗ್ರಾಮ ಪಂಚಾಯತ್ ಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯಿಂದ ಅನೇಕ ಬದಲಾವಣೆಗಳು ಸುಧಾರಣೆಗಳು ಆಗಿವೆ. ಈ ಬದಲಾವಣೆಗಳನ್ನು ಹಲವು ಹಂತಗಳಲ್ಲಿ ಗುರುತಿಸುವ ಅಗತ್ಯವಿದೆ. ವೈಯಕ್ತಿಕ ನೆಲೆಯಲ್ಲಿ ಚುನಾಯಿತರಾದ ಮಹಿಳೆಯರು ಆತ್ಮಸ್ಥೈರ್ಯವನ್ನು ಬೆಳೆಸಿಕೊಂಡಿದ್ದಾರೆ. ಮನೆಯ ಆವರಣದಿಂದ ಹೊರಬಂದು ಸಮಾಜದ ಎಲ್ಲ ವರ್ಗಗಳೊಂದಿಗೆ ಮಿಳಿತಗೊಂಡಂತೆಲ್ಲಾ ಅವರ ಅರಿವಿನ ಮಟ್ಟ ಹೆಚ್ಚಿದೆ.

ಹೆಚ್ಚಿದ ಮಾಹಿತಿ ಸಂಗ್ರಹಣೆ, ಅವರ ಬೌದ್ಧಿಕ ಪ್ರಗತಿಗೆ ನೆರವಾಗಿದೆ. ಒಬ್ಬ ಪುರುಷ ಅಕ್ಷರಸ್ಥನಾದರೆ ಅದು ಒಬ್ಬ ವ್ಯಕ್ತಿ ಮಾತ್ರ ಅಕ್ಷರಸ್ಥನಾದಂತೆ, ಅದೇ ಒಬ್ಬ ಹೆಣ್ಣು ಮಗಳು ಅಕ್ಷರಸ್ಥಳಾದರೆ ಒಂದು ಕುಟುಂಬ ಅಕ್ಷರ ಜ್ಞಾನದ ಕಡೆಗೆ ಸಾಗುತ್ತದೆ ಎನ್ನುವ ಹೇಳಿಕೆಯಂತೆ ಅನೇಕ ಚುನಾಯಿತ ಮಹಿಳೆಯರು ತಾವು ಪಡೆದುಕೊಂಡ ಅರಿವನ್ನು, ಆತ್ಮಸ್ಥೈರ್ಯವನ್ನು ಇಡೀ ಕುಟುಂಬಕ್ಕೆ ಧಾರೆ ಎರೆದಿದ್ದಾರೆ. ಅವರ ಮನೆಯ ಮಕ್ಕಳು ಶಾಲೆಯ ಹಾದಿ ಹಿಡಿದಿದ್ದಾರೆ. ಆರೋಗ್ಯ ಮತ್ತು ನೈರ್ಮಲ್ಯದ ಪಾಠಗಳನ್ನು ಊರಿಗೆ ಕಲಿಸುವ ಮೊದಲು ತಮ್ಮ ಮನೆಯಲ್ಲಿ ಆಚರಣೆಗೆ ತಂದಿದ್ದಾರೆ. ತಾವು ಕಲಿತು ಬಂದ ಅನುಭವಗಳನ್ನು ಮನೆ ಮಂದಿಯೊಂದಿಗೆಲ್ಲ ಹಂಚಿಕೊಂಡು ಅವರುಗಳ ಅರಿವಿನ ವಿಸ್ತಾರಕ್ಕೂ ನಾಂದಿ ಹಾಡಿದ್ದಾರೆ. ಹೊಸ್ತಿಲು ದಾಟಿದ ಹೆಣ್ಣು ಎಂಬ ಅನಾದರಕ್ಕೆ ತುತ್ತಾಗುತ್ತಿದ್ದ ಹೆಣ್ಣು ಮಕ್ಕಳು ಹೊಸ್ತಿಲಿನ ಹೊರಗಿರುವ ಅಪಾರ ಸಾಧ್ಯತೆಗಳನ್ನು ಹೊಸ್ತಿಲಿನ ಒಳ ಜಗತ್ತಿಗೂ ಪರಿಚಯಿಸುತ್ತಿದ್ದಾರೆ. ಈ ರೀತಿ ಎರಡು ಲೋಕಗಳ ನಡುವೆ ಸೇತುವೆಯಂತಿರುವುದರಿಂದ ನೆರೆಹೊರೆಯವರೂ ಈ ಹೊಸತನ್ನು ತಮ್ಮದಾಗಿಸಿಕೊಳ್ಳುತ್ತಿದ್ದಾರೆ. ತಮ್ಮ ಬೇಡಿಕೆಗಳ ಈಡೇರಿಕೆಯ ನೆಪದಲ್ಲಿ ಈ ಹೆಣ್ಣು ಮಕ್ಕಳ ಸಂಪರ್ಕಕ್ಕೆ ಬರುವ ನೆರೆ-ಹೊರೆಯವರು ಬರುಬರುತ್ತಾ ಈ ಸದಸ್ಯೆಯರ ಬೆಂಬಲಿಗರಾಗಿ ಬದಲಾಗುತ್ತಿದ್ದಾರೆ. ಈ ಸಹಚರ್ಯ ಅವರ ವೈಯಕ್ತಿಕ ಬದುಕಿನಲ್ಲೂ ನಿಧಾನಗತಿಯ ಬದಲಾವಣೆಗಳನ್ನು ತರುತ್ತಿದೆ.

ಇನ್ನು ಪಂಚಾಯತ್ ಸಭೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯು ಸಭೆಗೆ ಗಾಂಭೀರ್ಯ ತಂದುಕೊಟ್ಟಿದೆ. ಕಾಡುಹರಟೆ, ಗಾಸಿಪ್ ಗಳು, ಬಹಿರಂಗ ಅವ್ಯವಹಾರಗಳಿಗೆ ತಕ್ಕ ಮಟ್ಟಿಗೆ ಕಡಿವಾಣ ಬಿದ್ದಿದೆ. ಹಲವು ಅಧ್ಯಯನಗಳು ಬಹಿರಂಗ ಪಡಿಸಿರುವಂತೆ, ಪಂಚಾಯತ್ ಸಭೆಗಳಲ್ಲಿ ಮೊದಲಿದ್ದ ಅಶ್ಲೀಲ ಪದಗಳ ಬಳಕೆ ಕಡಿಮೆಯಾಗುತ್ತಿದೆ. ಹೆಣ್ಣು ಮಕ್ಕಳನ್ನು ಕುರಿತು ಮಾತನಾಡುವಾಗ ಹಗುರವಾಗಿ ವರ್ತಿಸದೆ ಎಚ್ಚರಿಕೆ ವಹಿಸುತ್ತಿದ್ದಾರೆ. ಪಶ್ಚಿಮ ಬಂಗಾಳದ ಕುಲ್ಪಿಕೋರಿ ಮಹಿಳಾ ಪಂಚಾಯತ್ ನ ಕಾರ್ಯದರ್ಶಿ ಖೋಗೇಂದ್ರನಾಥ್ ಮೊಹತೊ ಹೇಳುತ್ತಾರೆ. 'ಈ ಹಿಂದೆ ನಾನು ಕೆಲಸ ಮಾಡುತ್ತಿದ್ದ ಪಂಚಾಯತ್ ಗಳಲ್ಲೆಲ್ಲ ಗಂಡಸರು ತಮ್ಮ ಸಿಗರೇಟ್, ಪಾನ್, ಬೀಡಾಗಳ ವೈಯಕ್ತಿಕ ಖರ್ಚನ್ನೂ ಪಂಚಾಯತ್ ಲೆಕ್ಕಕ್ಕೇ ಸೇರಿಸುತ್ತಿದ್ದರು. ಆದರೆ ಇಲ್ಲಿನ ಮಹಿಳೆಯರು ಹಣದ ವಿಷಯದಲ್ಲಿ ತುಂಬಾ ಅಚ್ಚುಕಟ್ಟು ಹಾಗೂ ಕೆಲಸದಲ್ಲಿ ನಿಷ್ಠಾವಂತರು.'' ಇದು ಪ್ರಸ್ತುತವೂ ನಿಜಸಂಗತಿಯಾಗಿದೆ.

``ಪಂಚಾಯತ್ ಸಂಸ್ಥೆಗಳಲ್ಲಿ ಮಹಿಳೆಯರ ಹೆಚ್ಚಿನ ಪಾಲ್ಗೊಳ್ಳುವಿಕೆಯಿಂದಾಗಿ ಗ್ರಾಮಗಳ ಆದ್ಯತೆ ಪಟ್ಟಿಯಲ್ಲಿ ಗಮನಾರ್ಹ ಬದಲಾವಣೆಗಳಾಗಿವೆ. ಆಡಳಿತಾತ್ಮಕ ಪ್ರಕ್ರಿಯೆಗಳು ಚುರುಕುಗೊಂಡಿವೆ ಹಾಗೂ ಪಂಚಾಯತ್ ಕಛೇರಿಗಳ ಕಾರ್ಯ ವೈಖರಿಯೇ ಬದಲಾಗಿದೆ'' ಎನ್ನುತ್ತಾರೆ. ಈ ಕುರಿತು ವ್ಯಾಪಕ ಅಧ್ಯಯನ ಮಾಡಿರುವ ಒರಿಸ್ಸಾದ ಸ್ನೇಹಲತಾ ಪಾಂಡೆ ಹೇಳುವುದೇನೆಂದರೆ, ಈ ವಿಚಾರಗಳು ನನ್ನ ಅಧ್ಯಯನದಲ್ಲಿ ಅಷ್ಟಾಗಿ ಕಂಡುಬರಲಿಲ್ಲ. ಮಹಿಳೆಯರಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಯೋಚನೆಯನ್ನು ಬರದ ಹಾಗೆ ಪುರುಷ ವರ್ಗ ಹಿಡಿದಿಟ್ಟುಕೊಂಡಿದ್ದಾರೆ. ತಮ್ಮ ಗ್ರಾಮದ ಅಭಿವೃದ್ಧಿಗೆ ಏನೇನು ಕೆಲಸಗಳಾಗಬೇಕು ಎಂಬ ಯೋಜನೆಯ ಪಟ್ಟಿಯಲ್ಲಿ ಮಹಿಳಾ ಸದಸ್ಯರ ಆದ್ಯತೆಗಳಿಗೂ ಪುರುಷ ಸದಸ್ಯರ ಆದ್ಯತೆಗಳಿಗೂ ಸಾಕಷ್ಟು ಅಂತರವಿದೆ. ಯಾವುದೇ ಪಂಚಾಯತ್ ನ ಮಹಿಳಾ ಸದಸ್ಯರ ಆದ್ಯತೆಗಳು, ಕುಡಿಯುವ ನೀರಿನ ಸೌಲಭ್ಯ, ಮಕ್ಕಳಿಗೆ ಶಾಲೆ, ದುಡಿಯುವ ಅವಕಾಶಗಳ ಹೆಚ್ಚಳ, ಊರಿಗೆ ರಸ್ತೆ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಕುಟುಂಬ ಶಸ್ತ್ರ ಚಿಕಿತ್ಸಾ ಶಿಬಿರಗಳು, ಬಡವರಿಗೆ ಭೂಮಿ ಮತ್ತು ಮನೆ ವಿತರಣೆಯಾಗಿರುತ್ತವೆ.

ಅದೇನೇ ಇದ್ದರೂ ಅದಕ್ಕಿಂತ ಹೆಚ್ಚಾಗಿ ಪಂಚಾಯತ್ ಸಂಸ್ಥೆಗಳಿಗೆ ಆಯ್ಕೆಯಾಗಿ ಬಂದ ಮಹಿಳೆಯರಿಗೆ ಅತ್ಯಂತ ಜರೂರಾಗಿದ್ದ ತರಬೇತಿ ಹಾಗೂ ಮಾರ್ಗದರ್ಶನಗಳು ಸಿಗದೇ ಹೋಯಿತು. ಕರ್ನಾಟಕ ಚುನಾಯಿತ ಸದಸ್ಯೆಯರಿಗೆ ತರಬೇತಿ ನೀಡುವಲ್ಲಿ ಪ್ರಥಮ ಹೆಜ್ಜೆ ಇಟ್ಟಿತಾದರೂ ಅದರ ಕೇಂದ್ರೀಕೃತ ಸ್ವರೂಪ ಹಾಗೂ ಸ್ಥಗಿತತೆಯಿಂದಾಗಿ ಮಹಿಳೆಯರಿಗೆ ಅಗತ್ಯವಿದ್ದಷ್ಟು ನೆರವು ದೊರಕಲಿಲ್ಲ. ಪ್ರತೀ ವರ್ಷ ತಾಲ್ಲೂಕು ಜಿಲ್ಲಾ ಹಾಗೂ ವಿಭಾಗ ಮಟ್ಟಗಳಲ್ಲಿ ನಿರಂತರ ತರಬೇತಿ ಒದಗಿಸಬೇಕೆಂಬ ಮಹಿಳೆಯರ ಬೇಡಿಕೆ ಈಡೇರಲಿಲ್ಲ. ಹೀಗಾಗಿ ಆಡಳಿತದ ಸ್ವರೂಪ, ರಾಜಕೀಯ, ತಂತ್ರಗಾರಿಕೆ, ಪಂಚಾಯತ್‌ಗಳ ಅಧಿಕಾರ ವ್ಯಾಪ್ತಿ, ಪಂಚಾಯಿತ್ ಸದಸ್ಯೆಯರಾಗಿ ಅವರಿಗಿರುವ ಸಾಧ್ಯತೆಗಳು-ಅವಕಾಶಗಳು ಇತ್ಯಾದಿಗಳ ಬಗ್ಗೆ ಈ ಮಹಿಳೆಯರಿಗೆ ಪೂರ್ಣವಾದ ಜ್ಞಾನ ದೊರಕದೇ ಹೋಯಿತು. ಇದಕ್ಕೆ ಕಿರೀಟವಿಟ್ಟಂತೆ ಸಹೋದ್ಯೋಗಿ ಪುರುಷರ ನಡವಳಿಕೆಗಳು ಹಾಗೂ ಸಮಾಜದ ಒಟ್ಟು ಸ್ಥಾಪಿತ ಮೌಲ್ಯಗಳು ಅವರು ಒಂದು ಹೆಜ್ಜೆ ಮುಂದೆ ಇಟ್ಟರೆ ಎರಡು ಹೆಜ್ಜೆ ಹಿಂದಕ್ಕೆ ಎಳೆದವು. ಆಸ್ತಿ ಹಾಗೂ ಅಧಿಕಾರದ ಮೇಲಿನ ಹಿಡಿತವನ್ನು ಯಾರೊಂದಿಗೂ ಹಂಚಿಕೊಳ್ಳಲು ಇಚ್ಛಿಸದ ಪುರುಷ ಪ್ರಧಾನ ವ್ಯವಸ್ಥೆ ಚುನಾಯಿತ ಮಹಿಳೆಯರನ್ನು ಸಮಾನರೆಂದು ಪರಿಗಣಿಸಲಿಲ್ಲ. ಸಭೆಗಳಲ್ಲಿ ಅವರ ಮಾತುಗಳಿಗೆ ಅಪಹಾಸ್ಯ ಮಾಡಿ ನಗುವುದು, ಮಹಿಳೆಯರಿಗೆ ಸಂಬಂಧಿಸಿದ ಯಾವುದೇ ವಿಷಯವನ್ನು ಲಘುವಾಗಿ ಪರಿಗಣಿಸುವುದು ಮುಂತಾದ ನಡವಳಿಕೆಗಳ ಮೂಲಕ ಮಹಿಳೆಯರು ಸಕ್ರಿಯವಾಗದಂತೆ ಮಾಡಲಾಗಿದೆ.

ಹೆಣ್ಣು ಎಂಬ ಕಾರಣಕ್ಕಾಗಿಯೇ ಅವಳು ರಾಜಕೀಯಕ್ಕೆ ಸಂಬಂಧಿಸಿದ ಕೆಲಸಗಳನ್ನು ಮಾಡಲಾಗುವುದಿಲ್ಲವೆಂದು ಸಮಾಜಕ್ಕೆ ನಂಬಿಸಲಾಗಿದೆ. ಮಹಿಳೆಯರನ್ನು ಮೀಸಲಾತಿ ಇರುವ ಕಾರಣ ಅಧಿಕಾರ ಸ್ಥಾನದಲ್ಲಿ ಕೇವಲ ಸಾಧನವಾಗಿ ಕೂರಿಸಿದ್ದಾರೆ. ಆದರೆ ಕಾರ್ಯ ನಿರ್ವಹಿಸುವ ವ್ಯಕ್ತಿಯಾಗಿ ಆಕೆಯನ್ನು ಪರಿಗಣಿಸಿಲ್ಲ. ಮಹಿಳೆಗೆ ದೊರಕುವ ಅವಕಾಶಗಳೇ ವಿಭಿನ್ನ ಪರಿಸ್ಥಿತಿಯಲ್ಲಿ, ನೆಲೆಯಲ್ಲಿ

ಉದ್ಭವಗೊಂಡಿರುತ್ತವೆ. ಪುರುಷ ವ್ಯವಸ್ಥೆಯ ಬಗ್ಗೆ ನಕಾರಾತ್ಮಕವಾಗಿ ಧೋರಣೆಗಳನ್ನು ಬಿಂಬಿಸಲು ಸಾಧ್ಯವಾಗುವುದಿಲ್ಲ. ಕಾರಣ ಅವರ ಸ್ಥಾನ ಆ ವೇಳೆಗಾಗಲೇ ಅಲುಗಾಡುತ್ತಿರುತ್ತದೆ. ಈ ಕಾರಣದಿಂದಲೇ ಮಹಿಳೆಯರೇ ಪಿತೃ ಪ್ರಧಾನ ವ್ಯವಸ್ಥೆಯನ್ನು ಮುಂದುವರಿಸುತ್ತಿರುವಂತಾಗಿದೆ. ಇವುಗಳನ್ನು ಪರಿಶೀಲಿಸಿದಾಗ ನಮಗೆ ತಿಳಿಯುವ ಮುಖ್ಯ ಅಂಶವೆಂದರೆ ಮಹಿಳಾ ಜನಪ್ರತಿನಿಧಿಗಳು ಅಧಿಕಾರವಿದ್ದರೂ ಕೇವಲ ವ್ಯಕ್ತಿಯಾಗಿಯೇ ಉಳಿಯುತ್ತಾರೆ. ಜನಪ್ರತಿನಿಧಿಗಳಿಗಿರಬೇಕಾದ ಅಧಿಕಾರವಿಲ್ಲದ ಕಾರಣ ಅವರು ಜನಪ್ರತಿನಿಧಿಗಳೆನಿಸುವುದೇ ಇಲ್ಲ.

ಕೊನೇಪಕ್ಷ ಶೇ.೫೦ರಷ್ಟು ಮೀಸಲಾತಿ ಇದ್ದರೂ ಸಹ ಅಧಿಕಾರವನ್ನು ನಿರ್ವಹಿಸಲು ಪೂರಕವಾಗುವಷ್ಟು ಶಕ್ತಿ ದೊರೆಯಬಹುದು. ಹಾಗೂ ಸಂಖ್ಯೆ ಹೆಚ್ಚಾದಷ್ಟು ಅವರ ಕಡೆಗಿನ ಬೆಂಬಲ ಹೆಚ್ಚಾಗುತ್ತದೆ. ಹೀಗಾಗದಿದ್ದರೆ ಸ್ಥಾನ ಭದ್ರಪಡಿಸಿಕೊಳ್ಳುವುದೇ ಮಹಿಳೆಯರ ರಾಜಕೀಯ ಸವಾಲು-ಸಾಧನೆಯಾಗಿಬಿಡುತ್ತದೆ. ಎಷ್ಟೋ ಬಾರಿ ಮಹಿಳೆಯರು ತಮ್ಮ ಸ್ಥಾನ ಭದ್ರಪಡಿಸಿಕೊಳ್ಳಲು ಪುರುಷರನ್ನು ಓಲೈಸಿಕೊಳ್ಳಬೇಕಾಗುತ್ತದೆ. ಆದ ಕಾರಣ ಮಹಿಳೆಯರು ರಾಜಕೀಯ ಕ್ಷೇತ್ರದಲ್ಲಿ ದುರ್ಬಲರಾಗಿದ್ದಾರೆ ನಿಜ. ಆದರೆ ಹಾಗಾಗಲು ಕಾರಣಗಳೇನು? ಇದರ ಹಿಂದೆ ಇರುವ ಪವಾಡಗಳೇನು? ಎಂಬುದು ಮೇಲಿನ ಕೆಲವು ಅಂಶಗಳಿಂದ ದೊರೆಯುತ್ತದೆ. ಗಂಡು ಪ್ರಪಂಚ ಅದಕ್ಕೆ ಬೇಕಾದ ಹಾಗೆ ನೀತಿ-ನಿಯಮ, ಕಾರ್ಯಗಳು, ಅಧಿಕಾರವನ್ನು ರೂಪಿಸಿಕೊಂಡುಬಿಟ್ಟಿದೆ. ಕೆಲವು ಧೈರ್ಯವಂತ, ಸಾಹಸೀ ಜನಪ್ರತಿನಿಧಿಗಳು ಸಂದರ್ಶನದ ಸಮಯದಲ್ಲಿ ದೊರೆತರಾದರೂ, (ಉದಾ : ಬೀಡನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ರತ್ನಮ್ಮ) ಅಲ್ಲಿ ಅಧಿಕಾರ, ಧೈರ್ಯ, ನಿರ್ಧಾರ ಕೈಗೊಳ್ಳುವಿಕೆ ಸಂಗತಿ ಕಂಡುಬರುವುದು ಆ ಮನೆಯಲ್ಲಿ ಗಂಡು ದಿಕ್ಕಿಲ್ಲದ ಕಾರಣ ಎನ್ನಬಹುದು. ಅಲ್ಲಿಯೂ ಪುರುಷರು ಯಾರಾದರೂ ಇದ್ದರೆ ಆಕೆಯೂ ಅವರ ಕೈಗೊಂಬೆಯಾಗಿರುತ್ತಿದ್ದಳು. ಈ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಆರ್ಥಿಕ ವಿಚಾರವಾಗಿ, ರಾಜಕೀಯ ವಿಚಾರವಾಗಿ ಅಧಿಕಾರಕ್ಕೆ ಬಂದಿದ್ದಾಳೆಂದರೆ ಅಲ್ಲಿ ಗಂಡು ದಿಕ್ಕಿಲ್ಲದ ಕಾರಣವೇ ಪ್ರಮುಖವಾಗಿರುತ್ತದೆ. ಉದಾಹರಣೆಗೆ, ಇಂದಿರಾಗಾಂಧಿ, ರಾಣಿಯರು ಯುದ್ಧಭೂಮಿಗೆ ತೆರಳಿದ್ದು.

ಸಂಸ್ಕೃತಿಯನ್ನು ಕಾಪಾಡುವವಳು ಮಹಿಳೆಯೇ ಆದರೂ, ಸಂಸ್ಥಾಪಕಿ ಅವಳಲ್ಲ ಎಂಬ ಮಾತು ನೂರಕ್ಕೆ ನೂರು ಸತ್ಯ ಎನಿಸುತ್ತದೆ. ಗಂಡಿಗೆ ಜನ್ಮ ನೀಡಿದ್ದು, ಬೆಳೆಸಿದ್ದು ಹೆಣ್ಣೇ ಆದರೂ ಅಧಿಕಾರ ಚಲಾಯಿಸುವುದು ಗಂಡಿನ ಸ್ವತ್ತಾಗಿ ಬಿಟ್ಟಿದೆ. ಪಂಚಾಯಿತಿ ಮಟ್ಟದಲ್ಲೇ ಅಲ್ಲದಿದ್ದರೂ ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರು ಒಂದಿಬ್ಬರು ಪುರುಷರನ್ನು ತಮ್ಮೆಡೆಗೆ ಸೆಳೆಯದಿದ್ದರೆ ಏನೂ ಕೆಲಸ ಸಾಧ್ಯವಿಲ್ಲ ಎಂದು ಸಾಮಾಜೀಕರಣವೇ ಮಹಿಳೆಯರ ಮನಸ್ಸಿನಲ್ಲಿ ತುಂಬಿಬಿಟ್ಟಿದೆ. ತನ್ನ ದೇಹ ಸೌಂದರ್ಯ, ಲೈಂಗಿಕತೆಯಿಂದ ಮಾತ್ರವೇ ಪುರುಷರನ್ನು ಓಲೈಸಲು ಸಾಧ್ಯ ಎಂಬುದು ಪ್ರಸ್ತುತ ಗಂಡು ವ್ಯವಸ್ಥೆಯಲ್ಲಿ ಸತ್ಯವೆನಿಸಿದೆ. ಇವುಗಳ ಹೊರತಾಗಿ ಮಹಿಳೆ ಕೆಲಸ ಮಾಡಲು ಶಕ್ತವಾಗಿದ್ದರೂ ಅದರ ತರಬೇತಿಯನ್ನು ನೀಡಿರುವುದಿಲ್ಲ. ಪುರುಷರು ಮಹಿಳೆಯರಿಂದ ಸೌಮ್ಯ ಗುಣಗಳನ್ನು, ಸ್ವಭಾವವನ್ನು

ನಿರೀಕ್ಷಿಸುತ್ತಾರೆ. ಅಲ್ಲಿ ಏನೇ ವ್ಯತ್ಯಾಸವಾದರೂ ಮಹಿಳೆಯರ ಬಗೆಗೆ ಇಲ್ಲಸಲ್ಲದ ವಿಷಯಗಳನ್ನು ಊರಿನಲ್ಲಿ ಹಬ್ಬಿಸಿಬಿಡುತ್ತಾರೆ. ಸಾಮಾಜೀಕರಣ ಹೆಣ್ಣನ್ನು ಗೌರವದ ಪ್ರತೀಕವಾಗಿ ನೋಡುವ ಕಾರಣ ಅದನ್ನು ಸಹಿಸಲಾರದ ಮಹಿಳೆಯರು ಅಧಿಕಾರ ಸ್ಥಾನದಿಂದ ಕಳಗಿಳಿದುಬಿಡುತ್ತಾರೆ. ಪುರುಷರು ಮಹಿಳೆಯರನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಬೇಕಾದ ಎಲ್ಲಾ ತರಬೇತಿಯನ್ನು ಸಾಮಾಜೀಕರಣ ಕಲಿಸಿಕೊಟ್ಟಿರುತ್ತದೆ.

ಸಮಾನತೆ ಕಲ್ಪನೆ ಪುರುಷರಲ್ಲಿ ಮೂಡದ ಹೊರತು, ಗಂಡು ವ್ಯವಸ್ಥೆಯ ಧೋರಣೆಗಳು ನಶಿಸದ ಹೊರತು, ಸಾಮಾಜೀಕರಣದ ಘಟ್ಟಗಳು ಬದಲಾಗದ ಹೊರತು ಮಹಿಳೆಯರು ರಾಜಕೀಯದಲ್ಲಷ್ಟೇ ಅಲ್ಲ, ಯಾವುದೇ ಕ್ಷೇತ್ರದಲ್ಲೂ ನಿರಾಳತೆಯಿಂದ ಕೆಲಸ ಮಾಡಲು ಸಾಧ್ಯವಿಲ್ಲ. ಸ್ವನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ.

ಪ್ರಾಕ್‌ಕಲ್ಪನೆಯ ಫಲಿತಗಳು

ಪ್ರಾಕ್‌ಕಲ್ಪನೆ ಎಂಬುದು ಮೇಲ್ನೋಟಕ್ಕೆ ಕಾಣಸಿಗುವ ಅಂಶಗಳನ್ನು ಮೊದಲಿಗೆ ಆಧರಿಸಿದ್ದರೂ ಸಹ ನಂತರದ ಸಂಶೋಧನೆಯಿಂದ ಫಲಿತಾಂಶಗಳು ಏನೆಂಬುದು ತಿಳಿದುಬರುತ್ತದೆ. ಪ್ರಾಕ್ ಕಲ್ಪನೆಯ ಸತ್ಯಾಸತ್ಯತೆಗಳನ್ನು ಗುರುತಿಸಲು ಸಂದರ್ಶನ, ಅವಲೋಕನ, ಪ್ರಶ್ನಾವಳಿ, ಪ್ರಕರಣ ಅಧ್ಯಯನಗಳು ಸಹಕಾರಿಯಾಗುತ್ತವೆ. ಇವುಗಳ ಹೊರತಾಗಿ ಪ್ರಸ್ತುತ ಪರಿಸ್ಥಿತಿಯ ಸಂಶೋಧನೆ ಅಸಾಧ್ಯ. ಒಂದು ರೀತಿಯಲ್ಲಿ ಪ್ರಾಕ್‌ಕಲ್ಪನೆಗಳು ಸಂಶೋಧಕರನ್ನು ಹುಡುಕಾಟದ ಕ್ರಿಯೆಗೆ ತೊಡಗುವಂತೆ ಮಾಡುತ್ತವೆ. ವಾಸ್ತು ವಿಷಯಕ್ಕೆ ಸಂಬಂಧಿಸಿದಂತೆ ಕ್ಷೇತ್ರ ಅಧ್ಯಯನ ಕೈಗೊಳ್ಳುವ ಮುಂಚಿತವಾಗಿ ಮೇಲ್ನೋಟಕ್ಕೆ ಕಾಣಸಿಗುವ ಹಲವು ಅಂಶಗಳನ್ನು ಆಧಾರವಾಗಿಟ್ಟುಕೊಂಡು ಊಹಾ ಕಲ್ಪನೆಗಳನ್ನು ರಚಿಸಿಕೊಂಡಿರಲಾಗುತ್ತದೆ. ಒಂದು ವಸ್ತುವನ್ನು ನೋಡಿದ ತಕ್ಷಣ ಯಾವುದೇ ವ್ಯಕ್ತಿಗೂ ಕಲ್ಪನೆ ಮೂಡುವುದು ಸಹಜ. ಆದರೆ ಅದನ್ನು ಕೆಲವರು ವ್ಯಕ್ತಪಡಿಸುತ್ತಾರೆ. ಕೆಲವರು ಚರ್ಚಿಸುತ್ತಾರೆ. ಮತ್ತೆ ಕೆಲವರು ಸಂಶೋಧನಾ ಕಾರ್ಯಕ್ಕಿಳಿಯುತ್ತಾರೆ ಹಾಗೂ ಹಲವರು ಕಲ್ಪಿಸಿದ್ದನ್ನು ಹೇಳಿಕೊಳ್ಳಲಾಗದೇ ತಟಸ್ಥರಾಗಿರುತ್ತಾರೆ.

ಈ ಅಧ್ಯಯನದ ವಸ್ತು ವಿಷಯವಾದ ಗ್ರಾಮಪಂಚಾಯಿತಿ ವ್ಯವಸ್ಥೆಯಲ್ಲಿ ಮಹಿಳಾ ಸಮುದಾಯದ ಭಾಗವಹಿಸುವಿಕೆಯ ಪ್ರಾಕ್ ಕಲ್ಪನೆಯ ಫಲಿತಗಳು ವಿಭಿನ್ನವಾಗಿ ಮೂಡಿಬಂದಿದೆ. ಕೆಲವು ಊಹೆಗೆ ನಿಲುಕುವ ಉತ್ತರಗಳಾದರೆ ಮತ್ತೆ ಕೆಲವು ಕಲ್ಪನೆಗೆ ವಿರುದ್ಧವಾಗಿಯೇ ಕಾಣಸಿಗುತ್ತವೆ. ಗ್ರಾಮಪಂಚಾಯಿತಿಗಳಲ್ಲಿ ಮಹಿಳೆಯರು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳಲು ಸಾಮಾಜಿಕ-ಸಾಂಸ್ಕೃತಿಕ ಅಂಶಗಳು ಹಾಗೂ ಪುರುಷ ಪ್ರಧಾನ ಧೋರಣೆಗಳು ಅಡ್ಡಿಯಾಗಿರಬಹುದು ಎಂಬ ಕಲ್ಪನೆಯು ಕ್ಷೇತ್ರ ಕಾರ್ಯದ ಅವಧಿಯಲ್ಲಿ ಸರಿ ಎನಿಸಿದರೂ ಬೆರಳೆಣಿಕೆಯಷ್ಟು ಮಹಿಳೆಯರು ಸ್ವತಃ ನಿರ್ಧಾರ ಕೈಗೊಂಡಿದ್ದಾರೆ. ಉದಾಹರಣೆಗೆ ರತ್ನಮ್ಮ ಎಂಬ ಬೀಡನಹಳ್ಳಿ ಗ್ರಾಮಪಂಚಾಯಿತಿ ಅಧ್ಯಕ್ಷೆ. ಇವರು ನಿರ್ಧಾರ ಕೈಗೊಂಡರೂ ಪುರುಷರ ಮಾತುಗಳು ಪ್ರಭಾವ ಬೀರುತ್ತವೆ ಎಂಬುದನ್ನು ಅವಲೋಕಿಸಲಾಯಿತು. ಮಹಿಳೆಯರು ಮನೆಯಲ್ಲಿ

ಕುಳಿತು ಏನು ಮಾಡಬೇಕು ಎಂದು ಪುರುಷ ಸಮುದಾಯ ಹೇಳಿದರೂ ಸಹ ಅರ್ಥಿಕವಾಗಿ ಹಿಂದುಳಿದಿರುವ ಕಾರಣ ಶಿಕ್ಷಣದ ಅರಿವಿಲ್ಲದಿರುವ ಕಾರಣ ಸಹಾಯ ಯಾಚಿಸುತ್ತಿದ್ದಾರೆ. ಸರಿಯಾದ ರೀತಿಯಲ್ಲಿ ಮಹಿಳೆಯರಿಗೆ ಪಂಚಾಯತ್ ವ್ಯವಸ್ಥೆಯ ಬಗೆಗೆ ತರಬೇತಿ ನೀಡುತ್ತಿಲ್ಲ. ಅಭಿವೃದ್ಧಿಯ ಬಗ್ಗೆ ಹಲವು ಸಂಗತಿಗಳನ್ನು ಹೇಳಿರುವ ಪಂಚಾಯತ್ ಮಹಿಳಾ ಸದಸ್ಯರು ಅಭಿವೃದ್ಧಿ ಕಾರ್ಯಕ್ರಮ ಕೈಗೊಳ್ಳಲು ಪುರುಷ ಸದಸ್ಯರು ಬಿಡುತ್ತಿಲ್ಲ. ಸಂಬಂಧಿಕರು, ಸುತ್ತಮುತ್ತಲ ಜನರು, ಕುಟುಂಬದ ಸದಸ್ಯರು ಅವರ ನಿರ್ಧಾರಕ್ಕೆ ಅಡ್ಡಗಾಲು ಹಾಕುತ್ತಿದ್ದಾರೆ. ಮನೆಗೆಲಸಗಳ ನಡುವೆ ಈ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂದೂ ಸಹ ವಿವರಣೆ ನೀಡುತ್ತಾರೆ. ಅರ್ಧಕ್ಕೆ ನಿಲ್ಲಿಸಿ ಹೋದ ಮನೆನೆಗಸಗಳು ಮಹಿಳೆ ಪಂಚಾಯಿತಿ ಸಭೆಗೆ ಹೋಗಿ ಹಿಂದುರುಗಿ ಬರುವವರೆಗೂ ಅವರಿಗಾಗಿ ಕಾಯುತ್ತಿರುತ್ತವೆ. ಮಡಿ, ಮೈಲಿಗೆ ಕಲ್ಪನೆಗಳು ಅಗಾಧವಾಗಿದ್ದು, ಮಹಿಳೆಯರ ಮೇಲೆ ಅವುಗಳನ್ನು ಹೇರಲ್ಪಟ್ಟಿದ್ದಾರೆ. ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ಹೆಣ್ಣಿನ ಕರ್ತವ್ಯವೆಂದು ಪರಿಗಣಿಸಿದ್ದು, ಅದರ ಕಾರ್ಯವನ್ನು ಅವಳು ಮುಂದುವರಿಸಿದ್ದಾಳೆ. ಆದರೆ ಸಂಸ್ಕೃತಿಯನ್ನು ಉಳಿಸುವ ಕಾರ್ಯ ಮಾಡುತ್ತಿದ್ದರೂ ಅದಓಬರ ಸಂಸ್ಥಾಪಕಿ ಮಹಿಳೆಯಾಗಲು ಸಾಧ್ಯವಾಗಿಲ್ಲ. ಹಾಗೆಯೇ ಅಧಿಕಾರದ ವಿಷಯಕ್ಕೆ ಬಂದಾಗ ಮಡಿ, ಮೈಲಿಗೆ, ಸಂಸ್ಕೃತಿಗಳು ಅವಳ ಸಬಲೀಕರಣಕ್ಕೆ ತೊಡಕಾಗಿವೆ. ಪುರುಷ ವ್ಯಕ್ತಿಗಳೇ ಮಹಿಳೆಯನ್ನು ಆ ಸ್ಥಾನಕ್ಕೆ ಬರುವಂತೆ ಮಾಡಿದಾಗ ಅವರ ವಿರುದ್ಧವೇ ಮಹಿಳೆ ದನಿ ಎತ್ತಲು ಹೇಗೆ ಸಾಧ್ಯ. ಮೀಸಲಾತಿಯ ಕಾರಣವಾಗಿ ಸಮಾಜ, ಸಂಸ್ಕೃತಿ ಮಹಿಳೆಗೆ ರಾಜಕೀಯದ ಅಧಿಕಾರಕ್ಕೆ ಹೋಗಲು ಬೆನ್ನೆಲುಬಾಗಿದೆ. ಇದರ ಹಿಂದೆ ಅವರ ಸಮಾನತೆ, ಸ್ವಾತಂತ್ರ್ಯದ ಆಶಯವಿರಲಾರದು. ಅಭಿವೃದ್ಧಿಗೆ ಸಂಬಂಧಿಸಿದಂತೆ ಮಹಿಳಾ ಸದಸ್ಯರು ನಿರ್ಧಾರ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಕಾರಣ ಅವರಲ್ಲಿರುವ ಹಿಂಜರಿತ ಹಾಗೂ ಹಿಂಜರಿತಕ್ಕೆ ಪ್ರೇರಣೆ ನೀಡುತ್ತಿರುವ ಸಮಾಜ, ಪುರುಷ ಪ್ರಧಾನ ಧೋರಣೆ, ಸಾಮಾಜೀಕರಣದ ಅಂಶಗಳಾಗಿವೆ.

ಮಹಿಳೆಯರು ಸ್ಥಳೀಯ ಸ್ವಯಂ ಆಡಳಿತ ಪದ್ಧತಿಯಲ್ಲಿ 1/3ಭಾಗ ಮೀಸಲಾತಿ ಪಡೆದು ಸಾಧನೆಯ ಹೆಜ್ಜೆ ಹಾಕುವುದರ ಜೊತೆಗೆ ಹಲವು ರಾಜಕೀಯ ಸಮಸ್ಯೆಗಳನ್ನು ಎದುರಿಸುತ್ತಿರಬಹುದು ಎಂಬ ಪ್ರಾಕ್ ಕಲ್ಪನೆಯು ದೊರೆಯುತ್ತಿರುವ ಅಂಶಗಳಿಂದ ಸಾಬೀತಾಗಿದೆ. ಸಾಧನೆಯ ಕೆಲವು ಹೆಜ್ಜೆಗಳನ್ನು ವಿಶ್ಲೇಷಣೆಯಲ್ಲಿ ವಿವರಿಸಲಾಗಿದೆ ಹಾಗೂ ಆ ಹೆಜ್ಜೆಗಳನ್ನು ಇಡುವಲ್ಲಿ ಉಂಟಾಗುವ ಸಮಸ್ಯೆಗಳೂ ಅತ್ಯಧಿಕವಾಗಿಯೇ ಕಂಡುಬಂದವು.

ಮಹಿಳಾ ಜನಪ್ರತಿನಿಧಿಗಳು ಪುರುಷ ಸದಸ್ಯರಿಂದ ಸಮಸ್ಯೆಗಳಿಗೆ ಒಳಗಾಗುತ್ತಿರಬಹುದು ಎಂಬ ಪ್ರಾಕ್ ಕಲ್ಪನೆಯು ಸಾಬೀತಾಗಿದ್ದು, ಕೆಲವು ಮಹಿಳಾ ಸದಸ್ಯರು ಇದರಿಂದ ಮುಕ್ತರಾಗಿದ್ದ ಪ್ರಕರಣಗಳೂ ದೊರಕಿವೆ. ಪುರುಷ ಸದಸ್ಯರಿಗಿಂತ ಹೆಚ್ಚಾಗಿ ಸಾರ್ವಜನಿಕ ಸಮುದಾಯ.ಹಾಗೂಹೆಣ್ಣು ಎಂಬ ಕಾರಣಕ್ಕಾಗಿಯೇ ಎದುರಾಗುವ ಹಲವು ಸಮಸ್ಯೆಗಳಿಗೆ ಒಳಗಾಗಿದ್ದ ಪ್ರಸಂಗಗಳೇ ಕಂಡುಬಂದವು. ಹೆಣ್ಣಿಗೆ ಸುತ್ತುವ ಕೆಲಸ, ಕಷ್ಟದ ಕೆಲಸ, ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸುವ ಕೆಲಸ, ಸಮಸ್ಯೆಗಳ ನಿವಾರಣೆಯ ಕೆಲಸಗಳು ಸಾಧ್ಯವಿಲ್ಲವೆಂದೇ ಅವಳನ್ನು ಸಾಮಾಜೀಕರಣಗೊಳಿಸಿರುವುದರಿಂದ ಹಲವು ಸಮಸ್ಯೆಗಳಿಗೆ ಒಳಗಾಗಿದ್ದಾರೆ ಹಾಗೂ ಗಂಡು ಸಮುದಾಯವೇ ಮಹಿಳೆಯ ಆ ಅಧಿಕಾರಕ್ಕೆ ಕಾರಣಕರ್ತರಾಗಿರುವುದರಿಂದ ಅವಳ ಅಂತರ್ಯಕ್ಕೆ,

ಮನಸ್ಸಿಗೆ ಮಾಡಬೇಕೆನಿಸಿದ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗದೇ ಆಂತರಿಕವಾಗಿಯೂ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಮತ್ತೊಂದು ಬಹುಮುಖ್ಯ ಪ್ರಾಕ್ ಕಲ್ಪನೆಯಿಂದ ಮಹಿಳಾ ಜನಪ್ರತಿನಿಧಿಗಳು ಕಾರ್ಯನಿರ್ವಹಿಸುವಲ್ಲಿ ಅವರ ಕುಟುಂಬದ ಪುರುಷ ಸಮುದಾಯ ಅಧಿಕಾರ ಚಲಾಯಿಸುತ್ತಿರಬಹುದು ಎಂಬುದೂ ಕೂಡಾ ಶೇ.100ರಷ್ಟು ಸಾಬೀತಾಗಿದೆ. ಇದಕ್ಕೆ ಕಾರಣಗಳು ಹಲವಾರಿದ್ದರೂ ಪ್ರಸ್ತುತ ಗ್ರಾಮಪಂಚಾಯಿತಿಗೆ ಆಯ್ಕೆಗೊಂಡ ಮಹಿಳಾ ಸದಸ್ಯರು ಅಧಿಕಾರ ಚಲಾಯಿಸಲು ಕುಟುಂಬದ ಪುರುಷ ಸದಸ್ಯರ ನೆರವನ್ನು ಪಡೆಯುತ್ತಿದ್ದಾರೆನ್ನಬಹುದು.

ಪುರುಷ ಜನಪ್ರತಿನಿಧಿಗಳಿಗಿಂತ ಭಿನ್ನವಾದ ಸಮಸ್ಯೆಗಳನ್ನು ಮಹಿಳಾ ಜನಪ್ರತಿನಿಧಿಗಳು ಎದುರಿಸುತ್ತಿದ್ದಾರೆ. ಪುರುಷರಿಗೆ ಅಧಿಕಾರಕ್ಕೆ ಬರುವುದು, ಅಧಿಕಾರ ಚಲಾಯಿಸುವುದು, ಅಲ್ಲೇ ನೆಲೆ ನಿಲ್ಲುವುದು, ಸಾರ್ವಜನಿಕರು ಇದ್ಯಾವುದೂ ಸಮಸ್ಯೆಗಳೆನಿಸಿಲ್ಲ. ಆದರೆ ಮಹಿಳೆಯರಿಗೆ ಇವುಗಳೆಲ್ಲವೂ ದೊಡ್ಡ ಸವಾಲೇ ಆಗಿದೆ.

ಉಪ ಸಂಹಾರ

ಉಪಸಂಹಾರ

ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ ಮಹಿಳಾ ಸಮುದಾಯದ ಭಾಗವಹಿಸುವಿಕೆ-ಬನ್ನೂರು ಹೋಬಳಿಯ ಗ್ರಾಮಪಂಚಾಯಿತಿ ಕ್ಷೇತ್ರಗಳು ಎಂಬುದು ವಸ್ತು ವಿಷಯವಾಗಿದ್ದು, ಉದ್ದೇಶಗಳಲ್ಲೊಂದಾದ ಮಹಿಳಾ ಜನಪ್ರತಿನಿಧಿಗಳನ್ನು ಕುರಿತು ಮಾಹಿತಿಯನ್ನು ಕಲೆ ಹಾಕಲಾಗಿದೆ ಹಾಗೂ ಉದ್ದೇಶಗಳಿಗೆ ತಕ್ಕಂತೆ ಅಧ್ಯಯನ ಕೈಗೊಂಡಿದ್ದು, ಪ್ರಾಕ್‌ಕಲ್ಪನೆಗಳನ್ನು ಅಧ್ಯಯನಕ್ಕೊಳಪಡಿಸಿ ಸತ್ಯಾಸತ್ಯತೆಗಳನ್ನು ಗುರುತಿಸಲಾಗಿದೆ. ವಿಶ್ಲೇಷಣೆಯೂ ಸಹ ಇವುಗಳ ನೆಲೆಯಲ್ಲೇ ಮಾಡಿದ್ದು, ಸ್ತ್ರೀವಾದಿ ವಿಶ್ಲೇಷಣಾ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಮಹಿಳೆಯರು ರಾಜಕೀಯಕ್ಕೆ ಪ್ರವೇಶ ಮಾಡಿದ ಬಗ್ಗೆ ಹಂತಹಂತವಾಗಿ ಮೀಸಲಾತಿ ಪಡೆದು ಗ್ರಾಮಪಂಚಾಯಿತಿಯಲ್ಲಿ ಜನಪ್ರತಿನಿಧಿಗಳಾಗಿ ಸೇವೆ ಸಲ್ಲಿಸುತ್ತಿರುವ ಹಾಗೂ ಸಮಸ್ಯೆಗಳನ್ನೆದುರಿಸುತ್ತಿರುವ ರೀತಿಯನ್ನು ಈ ಅಧ್ಯಯನದಲ್ಲಿ ಚರ್ಚೆಗೊಳಪಡಿಸಲಾಗಿದೆ. ಕ್ಷೇತ್ರ ವ್ಯಾಪ್ತಿಗೆ ಸಂಬಂಧಿಸಿದಂತೆ ದೊರೆತ ಮಾಹಿತಿಗಳನ್ನಷ್ಟೇ ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ಇದನ್ನುಳಿದಂತೆಯೂ ಹಲವು ಉದ್ದೇಶಗಳನ್ನಿಟ್ಟುಕೊಂಡು ಅಧ್ಯಯನ ಮಾಡುವ ಸಾಧ್ಯತೆಗಳೂ ಇವೆ.

ಇತ್ತೀಚಿನ ದಿನಗಳಲ್ಲಿ ಜನಪ್ರತಿನಿಧಿಗಳು ಮತ್ತು ಅಧಿಕಾರ ವರ್ಗದ ಮಧ್ಯೆ ತಾತ್ವಿಕ ಸೌಹಾರ್ದ ಸಂಬಂಧವಿರುವುದು ಮಾತ್ರವಲ್ಲ, ಜನಪ್ರತಿನಿಧಿಗಳೊಳಗೂ ಸ್ಥಾನಮಾನದ ಕುರಿತಂತೆ ತಾರತಮ್ಯವಿದೆ. ಮಹಿಳಾ ಜನಪ್ರತಿನಿಧಿಗಳು ಅಧಿಕಾರವಿದ್ದರೂ ಪರಿಣಾಮಕಾರಿಯಾಗಿ ಅದನ್ನು ಬಳಸಿಕೊಳ್ಳುತ್ತಿಲ್ಲ ಎಂಬುದು ದೃಷ್ಟಿಗೆ ನಿಲುಕುವ ಸಂಗತಿಯಾದರೂ ವಿಶ್ಲೇಷಣೆಯ ಹಂತದಲ್ಲಿ ಅದಕ್ಕೆ ಕಾರಣಗಳೇನೆಂಬುದನ್ನು ಗುರುತಿಸುವ ಕ್ರಿಯೆ ಜರುಗಿದೆ. ವಿಕೇಂದ್ರೀಕರಣ ಪದ್ಧತಿಯಿಂದಾಗಿ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಗಳು ಶಾಸನಾತ್ಮಕವಾಗಿ ಅಸ್ತಿತ್ವಕ್ಕೆ ಬಂದವು. 73, 74ನೇ ತಿದ್ದುಪಡಿಯ ನಂತರ ಮಹಿಳೆಯರು 1/3ಭಾಗ ಮೀಸಲಾತಿಯನ್ನು ಸ್ಥಳೀಯ ಮಟ್ಟದ ರಾಜಕೀಯ ಕ್ಷೇತ್ರದಲ್ಲಿ ಪಡೆಯುವಂತಾಗಿದ್ದು, ಹೆಮ್ಮೆಯ ವಿಷಯವಾದರೂ ಅಲ್ಲಿನ ಮಹಿಳೆಯರ ಅಧಿಕಾರದ ಶೋಚನೀಯ ಸ್ಥಿತಿ ಮುಂದುವರಿದಿದೆ. ಬೆರಳೆಣಿಕೆಯಷ್ಟು ಮಹಿಳಾ ಜನಪ್ರತಿನಿಧಿಗಳು ಶೇ.50ರಷ್ಟು ಅಧಿಕಾರ ಚಲಾಯಿಸುತ್ತಿರಬಹುದೆಂದು ಸಂದರ್ಶನ ಹಾಗೂ ವಿಶ್ಲೇಷಣೆಯ ಹಂತದಲ್ಲಿ ತಿಳಿದುಬಂದರೂ ಸಹ ಅದಕ್ಕೆ ಮಹಿಳೆಯರು ದಿಟ್ಟ ಸಾಹಸವನ್ನೇ ಮಾಡಿದ ಪ್ರಸಂಗಗಳನ್ನು ವಿಷಾದದಿಂದಲೇ ಬಯಲು ಮಾಡಿದ್ದಾರೆ. ಹೆಣ್ಣು ಸಮಾನತೆಯೆಡೆಗೆ ಸಾಗುವುದಕ್ಕೆ ಇಡೀ ಸಮಾಜದ ವಿರೋಧವಿದೆ. ಈ ವಿರೋಧತ್ವದ ಹಿಂದೆ ಸಾಮಾಜೀಕರಣ, ಮೂಢನಂಬಿಕೆಗಳು, ಸಂಪ್ರದಾಯಗಳು, ಪುರುಷ ಪ್ರಧಾನ ಧೋರಣೆಗಳು, ಪಿತೃಪ್ರಧಾನ ಮೌಲ್ಯಗಳು ಸಾಕಷ್ಟು ಕೆಲಸ ಮಾಡುತ್ತಿವೆ. ದೊಡ್ಡವರು ಹೇಗೆ ಚಿಕ್ಕವರು ತಮ್ಮ ಹಿಡಿತದಲ್ಲಿರಬೇಕೆಂದು ಬಯಸುತ್ತಾರೋ ಹಾಗೆಯೇ ಪುರುಷ ಸಮುದಾಯ ಮಹಿಳಾ ಸಮುದಾಯವನ್ನು ಹಿಡಿದಿಡುವ ಪ್ರಯತ್ನದಲ್ಲಿ ಮುಂದುವರಿದಿದೆ. ಇದಕ್ಕೆ ಪೂರಕವೆಂಬಂತೆ ಪ್ರಕೃತಿ ನಿಯಮ, ದೈವೇಚ್ಛೆ ಎಂಬ ಹಲವು ಕಟ್ಟುಕಥೆಗಳನ್ನು ಹರಡಿ ಮಹಿಳೆಯರನ್ನು ಮೂಕಪ್ರಾಣಿಗಳಂತೆ ವ್ಯವಸ್ಥಿತಗೊಳಿಸಿದ್ದಾರೆ. ಜಾತಿ,

ಲಿಂಗ ವ್ಯವಸ್ಥೆ, ಅಂತಸ್ತು, ಅಧಿಕಾರ, ಸ್ಥಾನಮಾನದಲ್ಲಿ ಸಕಾರಾತ್ಮಕ ಬದಲಾವಣೆಗಳಾಗುವವರೆಗೂ ಸ್ತ್ರೀ-ಪುರುಷರ ಸಮಾನತೆ ಅಸಾಧ್ಯ. ರಾಜಕೀಯದಲ್ಲಿನ ಮಹಿಳಾ ಮೀಸಲಾತಿಯ ಸ್ಥಾನಗಳನ್ನು ಭದ್ರಪಡಿಸಲು ಮಹಿಳಾ ಜನಪ್ರತಿನಿಧಿಗಳಿಗೆ, ರಾಜಕೀಯ ತರಬೇತಿ, ಶಿಕ್ಷಣ, ಅಭಿವೃದ್ಧಿಯ ಮಜಲುಗಳು, ಸಬಲೀಕರಣದ ಹಾದಿಯ ಬಗೆಗೆ ಮಾಹಿತಿ ಒದಗಿಸಿಕೊಡುವುದು ಬಹುಮುಖ್ಯವಾಗಿದೆ. ಮಹಿಳಾ ಪರ ಚಿಂತನೆಗಳು ಅಧಿಕಾರ ವರ್ಗದವರಲ್ಲಿ ನೀತಿ ನಿರೂಪಕರಲ್ಲಿ ಪುರುಷ ಸಮುದಾಯದವರಲ್ಲಿ ಮೈಗೂಡದ ಹೊರತು ಯಾವುದೇ ಕ್ಷೇತ್ರದಲ್ಲಿ ಮಹಿಳೆಯರ ಉನ್ನತಿ ಸಾಧ್ಯವಿಲ್ಲ. ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಜೀವಿಸುತ್ತಿರುವವರು ಮಹಿಳೆಯರ ಪರಿಸ್ಥಿತಿಯ ಸ್ಥಾನಗಳಲ್ಲಿ ನಿಂತು ಪರಿಸ್ಥಿತಿಯನ್ನು ಅನುಭವಿಸಿ ಯೋಚನೆ ಕೈಗೊಳ್ಳುವುದು ಒಳಿತು.

ಅನುಬಂಧಗಳು

ಪರಾಮರ್ಶನ ಗ್ರಂಥಗಳು

* ಅಚಲ ದ್ವೈಮಾಸಿಕ ಪತ್ರಿಕೆ 1997 ಮಾರ್ಚ್, ಪ್ರಕಾಶಕರು:ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು
* ಅಚಲ ದ್ವೈಮಾಸಿಕ ಪತ್ರಿಕೆ 1998 ನವೆಂಬರ್, ಪ್ರಕಾಶಕರು: ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು
* ಮಹಿಳೆ ಕಾನೂನು ಮತ್ತು ರಾಜಕಾರಣ, ಗೀತಾ ಕೃಷ್ಣಮೂರ್ತಿ, ಪ್ರಸಾರಾಂಗ ಪಬ್ಲಿಕೇಷನ್, ಕನ್ನಡ ವಿವಿ, ಹಂಪಿ 2001
* ವಿಕೇಂದ್ರೀಕರಣ ಮತ್ತು ಗ್ರಾಮಪಂಚಾಯತ್, ಎ. ಶ್ರೀಧರ್, ಪ್ರಸಾರಾಂಗ ಪಬ್ಲಿಕೇಷನ್, ಕನ್ನಡ ವಿವಿ, ಹಂಪಿ 2002
* ಗ್ರಾಮೀಣ ಅಭಿವೃದ್ಧಿ ಮತ್ತು ವಿಕೇಂದ್ರೀಕರಣ-ರಾಜಕೀಯ ವೈಫಲ್ಯದ ಒಂದು ಸಂಕಥನ. ಡಾ.ಟಿ.ಆರ್.ಚಂದ್ರಶೇಖರ್, ಪ್ರಸಾರಾಂಗ ಪ್ರಕಾಶನ, ಕನ್ನಡ ವಿವಿ, ಹಂಪಿ 2004
* ಪಂಚಾಯತ್‌ರಾಜ್ ಇನ್ ಕರ್ನಾಟಕ ಟುಡೆ :ಇಟ್ಸ್ ನ್ಯಾಷನಲ್ ಡೈಮೆನ್‌ಶನ್, ನ್ಯೂಡೆಲ್ಲಿ, ಕನ್ಸೆಪ್ಟ್ ಪಬ್ಲಿಷಿಂಗ್ ಹೌಸ್, 1986
* ಜಾರ್ಜ್ ಮ್ಯಾಥ್ಯೂ, ಪಂಚಾಯತ್‌ರಾಜ್ ಫ್ರಮ್ ಲೆಜಿಸ್ಲೇಷನ್ ಟು ಮೂವ್‌ಮೆಂಟ್, ನ್ಯೂಡೆಲ್ಲಿ, ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪನಿ 1996
* ಎ.ಶ್ರೀಧರ "ಗ್ರಾಮಸಭೆ:ತತ್ವ ಮತ್ತ ಆಚರಣೆ" ಲೇಖನ:ಟಿ.ಆರ್.ಚಂದ್ರಶೇಖರ್ (ಸಂಪಾದನೆ) ವಿಕೇಂದ್ರೀಕರಣ, ತತ್ವ ಮತ್ತು ಆಚರಣೆ, ವಿದ್ಯಾರಣ್ಯ, ಕನ್ನಡ ವಿವಿ, ಹಂಪಿ 2000
* ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ 1993, ಕರ್ನಾಟಕ ಸರ್ಕಾರ, ಬೆಂಗಳೂರು
* ಪಳನಿತುರೈ ಜಿ. ಗ್ರಾಸ್‌ರೂಟ್ ಡೆಮಾಕ್ರಸಿ ಇನ್ ಇಂಡಿಯನ್ ಸೊಸೈಟಿ, ನ್ಯೂಡೆಲ್ಲಿ, ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪನಿ 2000
* ಜಿ.ವಿ.ಜೋಷಿ, "ಗ್ರಾಮ ಸಭಾ ಇನ್ ಕರ್ನಾಟಕ : ಎ ನಾನ್ ಸ್ಟಾರ್ಟರ್" ಕುರುಕ್ಷೇತ್ರ, ಏಪ್ರಿಲ್ 1995
* ಬಿ.ಎಸ್.ಭಾರ್ಗವ ಮತ್ತು ಜೋಸ್ ಸಿ. ರಾಫೆಲ್ "ವರ್ಕಿಂಗ್ ಆಫ್ ಗ್ರಾಮ ಸಭಾಸ್ ಇನ್ ಕರ್ನಾಟಕ :ಎ ಸ್ಟಡಿ ಎಟ್ ಮೈಕ್ರೋಲೆವೆಲ್" Janral of Rural Development, ಸಂಚಿಕೆವಿ 13,ಏಪ್ರಿಲ್-ಜೂನ್ 1994
* ಎಂ.ಎಸ್.ಜಾನ್ ಅಂಡ್ ಜೋಸ್ ಚೌತುಕುಲಂ, "ಡಿಸೆಂಟ್ರಲೈಸ್ಡ್ ಪ್ಲಾನಿಂಗ್ ಅಂಡ್ ಪಂಚಾಯತ್ಸ್ ಇನ್ ಕೇರಳ" ಕುರುಕ್ಷೇತ್ರ, ಸಂಚಿಕೆ 47 ಸೆಪ್ಟೆಂಬರ್ 1999

* ಡಾ.ಮಹಿಪಾಲ್ " ಪಂಚಾಯತ್ಸ್ ಅಂಡ್ ಹ್ಯೂಮನ್ ರೈಟ್ಸ್"ಕುರುಕ್ಷೇತ್ರ ಆಗಸ್ಟ್ 2000
* ಟಿ.ಆರ್.ಚಂದ್ರಶೇಖರ್ 2002 'ವಿಕೇಂದ್ರೀಕರಣ ಹಾಗೂ ಅಭಿವೃದ್ಧಿ :ಕರ್ನಾಟಕದ ಅನುಭವಗಳು' ಹೊಸತು ವಿಶೇಷ ಸಂಚಿಕೆ
* Iraac thoms with Richard W.Frank 2000, Local democracy and development : people's compaign for decentralized planning in Kerala, left word, New Delhi.
* ಡಾ.ಕೆ.ರವೀಂದ್ರನಾಥ (ಸಂಪಾದಕ), ಅಧ್ಯಯನದ ವಿಧಿವಿಧಾನಗಳು:ಪ್ರಸಾರಾಂಗ ಪಬ್ಲಿಕೇಷನ್, ಕನ್ನಡ ವಿವಿ, ಹಂಪಿ 2008
* ಎಂ.ಚಂದ್ರಪೂಜಾರಿ, ಸಂಶೋಧನಾ ಜವಾಬ್ದಾರಿ, ಪ್ರಸಾರಾಂಗ ಪಬ್ಲಿಕೇಷನ್, ಹಂಪಿ 2008
* ಎಂ.ಚಂದ್ರ ಪೂಜಾರಿ, ಸಮಾಜದ ಸಂಶೋಧನೆ, ಪ್ರಸಾರಾಂಗ ಪಬ್ಲಿಕೇಷನ್ 2005

ಪ್ರಶ್ನಾವಳಿ

ಗ್ರಾಮಪಂಚಾಯಿತಿ ವ್ಯವಸ್ಥೆಯಲ್ಲಿ ಮಹಿಳಾ ಸಮುದಾಯದ ಭಾಗವಹಿಸುವಿಕೆ

ಬನ್ನೂರು ಹೋಬಳಿಯ ಗ್ರಾಮ ಪಂಚಾಯಿತಿ ಕ್ಷೇತ್ರಗಳು

ಹೆಸರು

ವಯಸ್ಸು

ವಿದ್ಯಾರ್ಹತೆ

ಜಾತಿ

ವೈವಾಹಿಕ ಸ್ಥಾನಮಾನ

I ಮಹಿಳಾ ಸದಸ್ಯರಿಗೆ ಪ್ರಶ್ನಾವಳಿ

1. ಗ್ರಾಮ ಪಂಚಾಯಿತಿ ಚುನಾವಣೆಗೆ ಅಭ್ಯರ್ಥಿಯಾಗಿ ನಿಲ್ಲಲು ನಿಮಗೆ ಸ್ಫೂರ್ತಿ ಯಾರು? ಏನು?
   a) ನಿಮಗೆ ಯಾವ ರಾಜಕೀಯ ವ್ಯಕ್ತಿ ಕಂಡರೆ ತುಂಬಾ ಇಷ್ಟ
   b) ನಿಮ್ಮ ಕುಟುಂಬದಲ್ಲಿ ಈ ಮುಂಚೆ ಯಾರಾದರೂ ಅಭ್ಯರ್ಥಿಯಾಗಿದ್ದರೇ?
2. ಈ ಕ್ಷೇತ್ರಕ್ಕೆ ಬರಬೇಕೆಂಬುದರ ಉದ್ದೇಶವೇನು?
   a) ಮೀಸಲಾತಿ ನೀವು ಈ ಕ್ಷೇತ್ರಕ್ಕೆ ಬರಲು ಸಹಾಯಕವಾಗಿದೆಯೇ?
   b) ರಾಜಕೀಯ ಕ್ಷೇತ್ರದ ಬಗ್ಗೆ ನಿಮಗೆ ಏನೇನು ತಿಳಿದಿದೆ?
   c) ನೀವು ಸದಸ್ಯರು ಅಥವಾ ಅಧ್ಯಕ್ಷರಾದ ನಂತರ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಂಡಿದ್ದೀರಾ?
3. ಸದಸ್ಯರಾದ ನಂತರ ನಿಮ್ಮ ಸ್ಥಾನಮಾನದಲ್ಲುಂಟಾದ ಬದಲಾವಣೆ ಏನು?
   a) ಗ್ರಾಮದ ಜನರು ನೀವು ಸದಸ್ಯರಾಗುವುದಕ್ಕಿಂತ ಮುಂಚೆ ಹಾಗೂ ಪ್ರಸ್ತುತ ಹೇಗೆ ಮಾತನಾಡಿಸುತ್ತಾರೆ?
   b) ನಿಮ್ಮ ಕುಟುಂಬದಲ್ಲಿ ಮನಸ್ತಾಪ ಬಂದರೆ ಯಾವ ವಿಷಯಕ್ಕೆ ಬರುತ್ತದೆ?
4. ಸದಸ್ಯರಾದ ನಂತರ ಕುಟುಂಬ ಹಾಗೂ ಗ್ರಾಮಪಂಚಾಯಿತಿಯ ಕಾರ್ಯಗಳೆರಡನ್ನೂ ಹೇಗೆ ನಿಭಾಯಿಸುತ್ತಿರುವಿರಿ?
   a) ಮನೆಗೆಲಸದಲ್ಲಿ ನಿಮಗೆ ಯಾರು ಸಹಾಯ ಮಾಡುತ್ತಾರೆ?
   b) ಕಛೇರಿ ಕೆಲಸದಲ್ಲಿ ಯಾರು ಸಹಾಯ ಮಾಡುತ್ತಾರೆ?
   c) ಎಂದಾದರೂ ಮನೆಗೆಲಸದ ಒತ್ತಡದಿಂದಾಗಿ ಪಂಚಾಯಿತಿಗೆ ತಡವಾಗಿ ಹೋಗಿದ್ದೀರಾ?

d) ಪಂಚಾಯಿತಿಯಿಂದ ತಡವಾಗಿ ಮನೆಗೆ ಬಂದಾಗ ಮನೆಗೆಲಸ ಯಾರು ಮಾಡುತ್ತಾರೆ?

5. ನೀವು ಇಲ್ಲಿಯವರೆಗೆ ಗ್ರಾಮದ ಅಭಿವೃದ್ಧಿಗಾಗಿ ಕೈಗೊಂಡಿರುವ ಚಟುವಟಿಕೆಗಳು ಯಾವುವು?

a) ಸಾರ್ವಜನಿಕರನ್ನು ಕೇಳುವುದು

b) ಅವಲೋಕಿಸುವುದು (ಬಂದ ಉತ್ತರವನ್ನು)

6. ಮಹಿಳಾಭಿವೃದ್ಧಿಗೆ ಯಾವುದಾದರೂ ಕಾರ್ಯಕ್ರಮ ಹಮ್ಮಿಕೊಂಡಿದ್ದೀರಾ?

a) ಸಾರ್ವಜನಿಕರನ್ನು ಸಂದರ್ಶಿಸುವುದು

b) ಅವಲೋಕಿಸುವುದು (ಹೇಳಿಕೆಗಳನ್ನು)

7. ಗ್ರಾಮಪಂಚಾಯಿತಿ ಸಭೆಗಳಿಗೆ ಪಾಲ್ಗೊಳ್ಳಲು ಯಾವ ಯಾವ ಸಮಸ್ಯೆಗಳಿವೆ?

a) ಕುಟುಂಬದ ಯಾವ ಯಾವ ಕೆಲಸಗಳು ಅಡ್ಡಿಯುಂಟು ಮಾಡುತ್ತವೆ?

b) ಕುಟುಂಬದ ಕೆಲಸದ ಜೊತೆಗೆ ಕೃಷಿ ಕೆಲಸವನ್ನು ಮಾಡುತ್ತೀರಾ?

8. ಗ್ರಾಮಸಭೆಗಳಲ್ಲಿ ನಿಮ್ಮ ನಿರ್ಧಾರಗಳಿಗೆ ಮನ್ನಣೆ ದೊರಕುತ್ತದೆಯೇ? ಪುರುಷರು ಬೆಂಬಲ ನೀಡುತ್ತಾರೆಯೇ?

9. ದೂರದ ಊರಿಗೆ ಸಭೆ ಸಮಾರಂಭಗಳಿಗೆ ಹೋಗಲು ತೊಡಕುಂಟಾಗುತ್ತದೆಯೇ?

a) ದೂರದ ಊರಿಗೆ ನಿಮ್ಮ ಜೊತೆ ಯಾರನ್ನು ಕರೆದೊಯ್ಯುತ್ತೀರಾ?

b) ಪುರುಷ ಸದಸ್ಯರ ಜೊತೆ ದೂರದ ಊರಿಗೆ ಹೋಗಲು ಕುಟುಂಬದವರು ಏನೆನ್ನುತ್ತಾರೆ?

c) ವಿವಿಧ ಜಾತಿಯವರ ಜೊತೆ ಹೋಗುವುದರ ಬಗ್ಗೆ ಅನಿಸಿಕೆ ಏನು?

10. ಸಭೆ ಸಮಾರಂಭಗಳಲ್ಲಿ ಸದಸ್ಯರ ಜೊತೆ ಕುಳಿತು ಊಟ ಮಾಡ್ತೀರಾ?

a) ಸಭೆ ಸಮಾರಂಭಗಳಿಗೆ ಊಟದ ಡಬ್ಬಿಯನ್ನು ಕೊಂಡೊಯ್ಯುತ್ತೀರಾ?

11. ಈ ಕ್ಷೇತ್ರದಲ್ಲಿ ಮಹಿಳೆಯರಿಗೆ ಉಂಟಾಗುವ (ಇರುವ) ಸಮಸ್ಯೆಗಳಾವುವು?

a) ಸಾರ್ವಜನಿಕರನ್ನು ಸಂದರ್ಶಿಸುವುದು

b) ಕುಟುಂಬದವರನ್ನು ಸಂದರ್ಶಿಸುವುದು

12. ಯಾವ ಕೆಲಸಗಳಿಂದಾಗಿ ನಿಮಗೆ ತಲೆನೋವು ಬರುತ್ತದೆ? ಹಿಂಸೆಯಾಗುತ್ತದೆ? ಒತ್ತಡ ಉಂಟಾಗುತ್ತದೆ?

13. ರಾಜಕೀಯ ಮಹಿಳಾ ಮೀಸಲಾತಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

a) ಮಹಿಳೆಯರು ರಾಜಕೀಯದಲ್ಲಿ ಪಾಲ್ಗೊಳ್ಳಲು ಇರುವ ಅನುಕೂಲಗಳು ಯಾವುವು?

14. ಪುರುಷ ಸದಸ್ಯರ ಜೊತೆ ಕುಳಿತು ಅಭಿವೃದ್ಧಿಯ ವಿಚಾರವಾಗಿ ಚರ್ಚೆ ಮಾಡುತ್ತೀರಾ?

a) ನಿರ್ಧಾರ ಕೈಗೊಂಡಾಗ ಗ್ರಾಮದ ಜನರು ಕುಟುಂಬದ ಸದಸ್ಯರು ಏನೆನ್ನುತ್ತಾರೆ?

b) ಪುರುಷರ ಜೊತೆ ಕೆಲಸ ನಿರ್ವಹಿಸಲು ಮುಜುಗರ, ನಾಚಿಕೆ ಭಾವನೆ ಉಂಟಾಗುತ್ತದೆಯೇ?

15. ನಿಮ್ಮ ಕುಟುಂಬದಲ್ಲಿ ಯಾವುದೇ ವಿಷಯವಾಗಿ ನಿರ್ಧಾರ ಕೈಗೊಳ್ಳುವವರು ಯಾರು?

a) ಯಾವುದೇ ಕೆಲಸಕ್ಕೂ ಯಾರ ಸಲಹೆಯನ್ನು ಕೇಳುತ್ತೀರಾ?

b) ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳುವಲ್ಲಿ ಕುಟುಂಬ ವರ್ಗದವರು ಸಹಾಯ ಮಾಡುತ್ತಾರೆಯೇ? ಯಾರು ಹೆಚ್ಚು ಸಹಾಯ ಮಾಡುತ್ತಾರೆ?

16. ಸಾರ್ವಜನಿಕರು ನಿಮ್ಮ ಕೆಲಸ ಕಾರ್ಯಗಳ ವಿಷಯವಾಗಿ ಏನೆನ್ನುತ್ತಾರೆ?

a) ಸಾರ್ವಜನಿಕರನ್ನು ಸಂದರ್ಶಿಸುವುದು

17. ಈ ಸ್ಥಾನಕ್ಕೆ ಬಂದ ನಂತರ ನಿಮ್ಮ ತಿಳುವಳಿಕೆಯ ಮಟ್ಟದಲ್ಲಿ ಏರಿಕೆ ಉಂಟಾಗಿದೆಯೋ ಹೇಗೆ?

a) ರಾಜಕೀಯ ವಿಷಯದಲ್ಲಿ ಈ ಹಿಂದೆ ಆಸಕ್ತಿ ಇತ್ತೇ?

b) ಈ ಮುಂಚೆ ಬ್ಯಾಂಕುಗಳು, ಸಭೆಗಳು, ದೂರದ ಸ್ಥಳಗಳಿಗೆ ಹೋಗಿದ್ದೀರಾ?

c) ಹೊರಗಿನ ಜನರ ಜೊತೆ ಮಾತನಾಡುದ್ದೀರಾ?

18. ರಾಜಕೀಯದ ಉಸಾಬರಿ ಮಹಿಳೆಗೇಕೆ? ಅವಳು ಕುಟುಂಬದ ಕೆಲಸಕ್ಕೆ ಮಾತ್ರ ಮೀಸಲು ಎಂಬ ವಾಕ್ಯದ ವಿಚಾರವಾಗಿ ನಿಮ್ಮ ಅಭಿಪ್ರಾಯವೇನು?

a) ನಿಮಗೆ ಕುಟುಂಬದ ಕೆಲಸ ಇಷ್ಟವೋ ಅಥವಾ ಪಂಚಾಯಿತಿಯ ಕೆಲಸವೋ?

b) ಯಾವ ಕೆಲಸ ತುಂಬಾ ಸುಲಭ

c) ಪುರುಷರಿಗೆ ಯಾವ ಕೆಲಸ ಸರಿ ಹೊಂದುತ್ತದೆ? ಮಹಿಳೆಯರಿಗೆ ಯಾವ ಕೆಲಸ ಸರಿ ಹೊಂದುತ್ತದೆ?

19. ಪುರುಷ ಸದಸ್ಯರ ಯಾವ ಕೆಲಸದಿಂದ ನಿಮಗೆ ಬೇಸರ, ನೋವು ಉಂಟಾಗುತ್ತದೆ?

a) ಪುರುಷರು ನಿಮ್ಮ ಮಾತನ್ನು ಆಲಿಸುತ್ತಾರೆಯೇ?

b) ನಿಮ್ಮ ನಿರ್ಧಾರಗಳನ್ನು ಯಾರು ಒಪ್ಪುತ್ತಾರೆ-ಬದಲಿಸುತ್ತಾರೆ?

20. ಪುರುಷ ಸದಸ್ಯರ ಯಾವ ಕೆಲಸ ನಿಮಗೆ ಮೆಚ್ಚುಗೆಯಾಗುತ್ತದೆ?

a) ನಿಮ್ಮ ಮಾತುಗಳಿಗೆ ಯಾರು ಪೂರಕವಾಗಿ ಮಾತನಾಡುತ್ತಾರೆ?

21. ನಿಮ್ಮ ಜೀವನ ಸಾರ್ಥಕವಾಯಿತು ಎನಿಸುವುದು ಯಾವಾಗ?

II ಪುರುಷ ಸದಸ್ಯರಿಗೆ ಪ್ರಶ್ನಾವಳಿ

1. ಮಹಿಳೆಯರು ಈ ಕ್ಷೇತ್ರಕ್ಕೆ ಬಂದರೆ ತುಂಬಾ ಸಮಸ್ಯೆಗಳಿವೆ ಎನಿಸುತ್ತದೆಯೇ? ಮಹಿಳೆಯರಿಗೆ ಯಾವ ಸಮಸ್ಯೆಗಳಿವೆ- ಪುರುಷರಿಗೆ ಯಾವ ಸಮಸ್ಯೆಗಳಿವೆ?

2. ಮಹಿಳೆಯರು ಗ್ರಾಮಪಂಚಾಯಿತಿ ಕ್ಷೇತ್ರಕ್ಕೆ ಕಾಲಿಡಲು ಇರುವ ಸವಲತ್ತುಗಳಾವುವು?

3. ಮಹಿಳೆಯರು ನಿಮ್ಮ ಜೊತೆ ಕೆಲಸ ಮಾಡುವುದು ನಿಮಗಿಷ್ಟವೇ?

a) ಮಹಿಳೆಯರಿಗೆ ಹೊಂದಾಣಿಕೆಯಾಗುವ ಕೆಲಸ ಯಾವುದು?

b) ಮಹಿಳೆಯರು ರಾಜಕೀಯ ಕ್ಷೇತ್ರದ ಕೆಲಸವನ್ನು ಹೇಗೆ ಮಾಡುತ್ತಾರೆ?

4. ಮಹಿಳಾ ಸದಸ್ಯರ ಯಾವ ಕೆಲಸ ನಿಮಗೆ ತೃಪ್ತಿ ತರುತ್ತದೆ?

5. ಸಭೆ-ಸಮಾರಂಭಗಳಿಗೆ ಯಾರು ತಡವಾಗಿ ಬರುತ್ತಾರೆ?

a) ಕುಟುಂಬದ ಕೆಲಸಗಳು ಯಾರಿಗೆ ಹೆಚ್ಚಿರುತ್ತದೆ?

b) ದಿನದ ಕೆಲಸಕಾರ್ಯಗಳನ್ನು ಕೇಳುವುದು?

6. ಮಹಿಳಾ ಮೀಸಲಾತಿಯ ಅಗತ್ಯತೆಯ ಬಗ್ಗೆ ತಿಳಿಸಿ

a) ಮಹಿಳೆಯರು ಸ್ವ ಸಾಮರ್ಥ್ಯದಿಂದ ರಾಜಕೀಯಕ್ಕೆ ಬರುತ್ತಾರೆಯೇ?

b) ಮಹಿಳೆಯರು ಮನೆಯಲ್ಲಿದ್ದರೇನೆ ಭೂಷಣ ಎಂಬ ಮಾತಿನ ಬಗ್ಗೆ ನಿಮ್ಮ ಅಭಿಪ್ರಾಯ

c) ಮೀಸಲಾತಿಯಡಿಯಲ್ಲಿ ನಿಮ್ಮ ಪತ್ನಿಯನ್ನೋ ಅಥವಾ ಕುಟುಂಬದ ಮಹಿಳೆಯನ್ನು ಚುನಾವಣೆಗ ಅಭ್ಯರ್ಥಿಯನ್ನಾಗಿಸುತ್ತೀರಾ?

7. ಗ್ರಾಮದ ಅಭಿವೃದ್ಧಿಗೆ ಹಲವು ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಯಾರು ಹೆಚ್ಚಿನ ಪಾತ್ರ ವಹಿಸುತ್ತಾರೆ?

8. ಮಹಿಳೆಯರು ತೆಗೆದುಕೊಳ್ಳುವ ನಿರ್ಧಾರಗಳ ಬಗ್ಗೆ ತಿಳಿಸಿ?

a) ತಿದ್ದುತ್ತೀರಾ?

b) ಬದಲಿಸುತ್ತೀರಾ?

c) ಒಪ್ಪುತ್ತೀರಾ?

9. ಮಹಿಳಾಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ವಿವರಣೆ ನೀಡಿ

a) ಹೊಸ ಯೋಜನೆಗಳಿಗೆ ನಿಮ್ಮ ಸಹಕಾರವೇನು?

b) ಮಹಿಳೆಯರು ಅಭಿವೃದ್ಧಿ ಹೊಂದಿದ್ದಾರೆಯೇ?

III ಕುಟುಂಬದ ಸದಸ್ಯರಿಗೆ ಪ್ರಶ್ನಾವಳಿ

1. ದೂರದ ಊರಿನ ಸಭೆ/ಸಮಾರಂಭಗಳಿಗೆ ಹೋಗುವಾಗ ಮಹಿಳೆಯ ಜೊತೆ ಯಾರು ಹೋಗುತ್ತಾರೆ?

a) ಪುರುಷರು ಹೋಗುತ್ತಾರೆ

b) ಮಹಿಳೆಯರು ಹೋಗುತ್ತಾರೆ

2. ಕುಟುಂಬಕ್ಕೆ ಸಂಬಂಧಿಸಿದ ವಿಷಯಗಳನ್ನು ಯಾರು ನಿರ್ಧಾರ ಮಾಡುತ್ತಾರೆ?

a) ನೀವು ನಿಮಗನ್ನಿಸಿದ್ದನ್ನು ಪ್ರಸ್ತುತಪಡಿಸುತ್ತೀರಾ?

3. ಸಭೆ, ಸಮಾರಂಭಗಳಿಗೆ ವಿವಿಧ ಜಾತಿ, ಧರ್ಮದವರ ಜೊತೆ ಹಾಗೂ ಪುರುಷರ ಜೊತೆ ಹೋಗುವುದರ ಬಗ್ಗೆ ನಿಮ್ಮ ಅನಿಸಿಕೆ ಏನು?

4. ಸಭೆ ಸಮಾರಂಭಗಳಿಗೆ ಹೋದಾಗ ಮನೆಗೆಲಸ ಯಾರು ಮಾಡುತ್ತಾರೆ?

a) ಅವರ ಮನೆಗೆಲಸದ ಬಗ್ಗೆ ವಿವರಣೆ ನೀಡಿ

5. ಕುಟುಂಬದ ಮಹಿಳೆ ಗ್ರಾ.ಪಂ. ಸದಸ್ಯೆಯಾದ್ದರಿಂದ ಕುಟುಂಬದ ಸ್ಥಾನಮಾನದಲ್ಲುಂಟಾದ ಬದಲಾವಣೆಯ ಬಗ್ಗೆ ತಿಳಿಸಿಕೊಡಿ

6 ಮಹಿಳೆ ರಾಜಕೀಯದಲ್ಲಿ ತೊಡಗುತ್ತಿರುವುದರಿಂದ ಕುಟುಂಬಕ್ಕೆ ಏನೇನು ತೊಂದರೆಯುಂಟಾಗಿದೆ?




ಪಂಚಾಯಿತಿ ಕಾರ್ಯಾಲಯ ಹನುಮನಾಳು











ಗ್ರಾಮ ಪಂಚಾಯಿತಿ










